ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ಮತ್ತು ಪೊಲೀಸ್ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಅನ್ಯ ರಾಜ್ಯಗಳಲ್ಲಿ ಪೊಲೀಸ್ ಕಾನ್ಸ್‌ಟೇಬಲ್‌ಗಳು ಧರಿಸುತ್ತಿರುವ ಟೋಪಿಗಳ ಮಾದರಿಯನ್ನು ಸಿಎಂ ವೀಕ್ಷಿಸಿ, ಧರಿಸಿದರು. ಈ ವೇಳೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಹಾಗೂ ಪೊಲೀಸ್ ಮಹಾನಿರ್ದೇಶಕ ಡಾ.ಸಲೀಂ ಇದ್ದರು

ದುಬೈಯಲ್ಲಿ ಮನೆ ಖರೀದಿಸುವ ಅವಕಾಶ!
ಇಂದು ಮತ್ತು ನಾಳೆ
ತಾಜ್ ವೆಸ್ಟೆಂಡ್
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
ಸಮಯ: ಬೆಳಗ್ಗೆ 10:00 ರಿಂದ ಸಂಜೆ 7:00 ರವರೆಗೆ
ಹೂಡಿಕೆ ಮಾಡಿ ಮಾರಾಟ ಮಾಡಿ
ಲಾಭ ದೊರಕಿಸಿಕೊಡುವ ಭರವಸೆ!
PARVA GROUP
+91 9742117707
PARVA REALTY
ಹೂಡಿಕೆದಾರರಿಗೆ ನೀಡುತ್ತಿರುವ
ಬೆಸ್ಟ್ ಆಫರ್
ನಗರದಲ್ಲಿ ನಡೆಯಲಿರುವ ವಿಶಿಷ್ಟ ದುಬೈ ಪ್ರಾಪರ್ಟಿ ಎಕ್ಸ್‌ಪೋ ಗೆ ಪರ್ವ ರಿಯಲ್ ಎಸ್ಟೇಟ್ ಎಲ್ ಎಲ್ ಸಿ ದುಬೈಯ VIP ಇನ್ವೆಸ್ಟರ್ ಗೆಸ್ಟ್ ಆಗಿ ಬರಲು ಸ್ಪೆಷಲ್ ಆಫರ್ ಗಳನ್ನು ನೀಡಲಾಗಿದೆ. ಎರಡು ದಶಕಗಳ ತಮ್ಮ ರಿಯಲ್ ಎಸ್ಟೇಟ್ ಹೂಡಿಕೆ ಮತ್ತು ಅನುಭವಗಳನ್ನು ವಿಶೇಷ ಗ್ರಾಹಕರಿಗೆ ತಲುಪಿಸಲು ಉತ್ಸುಕರಾಗಿರುವ ಪರ್ವ ಗ್ರೂಪ್ ಇದೀಗ ಈ ಎರಡು ದಿನಗಳ ಈವೆಂಟ್ ನಲ್ಲಿ ಅದ್ಭುತವಾದ ಆಫರ್‌ಗಳನ್ನು ನೀಡಲು ಸಿದ್ಧವಾಗಿದೆ.
1. ದಂಪತಿಗಳಿಗೆ ದುಬೈಗೆ ರಿಟರ್ನ್ ಏರ್ ಟಿಕೆಟ್
2. ದುಬೈ ವೀಸಾ ಮತ್ತು 3 ರಾತ್ರಿಗಳ ವಾಸ್ತವ್ಯ
3. ಸ್ಪಾಟ್ ಬುಕಿಂಗ್ ಮಾಡಿದಲ್ಲಿ 10 ಗ್ರಾಂ ಚಿನ್ನ
4. ಉಚಿತವಾಗಿ ದುಬೈ ಗೋಲ್ಡನ್ ವೀಸಾ ನೀಡಿಕೆ
5. ಗ್ಯಾರಂಟೀಡ್ ಬಯ್ ಬ್ಯಾಕ್
6. ಆಕರ್ಷಕ ಪ್ರಿ-ಲಾಂಚ್ ಯೋಜನೆಗಳು
7. ಮಾರುಕಟ್ಟೆಯಲ್ಲಿ ಇನ್ನೆಲ್ಲೂ ಲಭ್ಯವಿರದ ಯೋಜನೆಗಳು
8. ಶೇ.200% ಬೈ-ಬ್ಯಾಕ್ ಜತೆಗೆ ಸ್ಥಿರವಾದ ಬಡ್ಡಿದರ
9. ವಿದೇಶಿ ಹೂಡಿಕೆಯ ಬಗ್ಗೆ ತಜ್ಞರ ಸಲಹೆ
10. ಸ್ಥಳೀಯ ಕನ್ಸಲ್ಟೆಂಟ್ ಗಳಿಂದ ಬೆಂಬಲ

ಸೊಂಪಾದ ಪುಟಗಳು

ಪ್ಯಾಲೆಸ್ತೀನಿಯರ ನರಮೇಧ ನಡೆಸಿದ್ದ ಪಾಕಿಸ್ತಾನ
ವೀಕೆಂಡ್ ವಿತ್ ಮೋಹನ್ ಮೋಹನ್ ವಿಶ್ವ 6

ಎಳನೀರೆಂಬ ಭುವಿಯ ಅಮೃತ- ಇದರಿಂದಲೂ ತೊಂದರೆ ತಪ್ಪಿದ್ದಲ್ಲ!
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಡಾ.ಸಾಧನಶ್ರೀ 7

ದಾರಿದೀಪೋಕ್ತಿ

ನಿಮ್ಮ ಸಂಗಾತಿ ನೀವು ಬಯಸುವ ಶಾಂತ ಪರಿಸರವಾಗಿರಬೇಕೇ ಹೊರತು ಅದೊಂದು ಯುದ್ಧಭೂಮಿಯಾಗಬಾರದು. ನಮ್ಮ ಜತೆಗಿರುವವರು ನೆಮ್ಮದಿ, ಸಂತಸವನು ನೀಡಬೇಕೇ ಹೊರತು ಅವರೇ ನೆಮ್ಮದಿ ಕೆಡಿಸುವವರಾಗಬಾರದು. ಅಂಥ ಸಂಗಾತಿಯನ್ನು ಆರಿಸುವುದು ಜಾಣತನ.

ವಕ್ರತುಂಡೋಕ್ತಿ

ಅಕ್ಕಪಕ್ಕದವರು ಮತ್ತು ಸಂಬಂಧಿಕರಿದ್ದರೆ, ಯಾರ ಮನೆಗೂ ಸಿಸಿಟಿವಿ ಬೇಕಿಲ್ಲ.

ಜಗನ್ನಾಥನ ರಥೋತ್ಸವದ ವೇಳೆ ನೂಕುನುಗ್ಗಲು: 600ಕ್ಕೂ ಹೆಚ್ಚು ಮಂದಿ ಅಸ್ವಸ್ಥ

ಪುರಿಯಲ್ಲಿ ಕಾಲ್ತುಳಿತ 40 ಮಂದಿ ಗಂಭೀರ

ಭುವನೇಶ್ವರ: ಒಡಿಶಾದ ಪುರಿಯಲ್ಲಿ ನಡೆಯುತ್ತಿದ್ದ ವಿಶ್ವವಿಖ್ಯಾತ ಜಗನ್ನಾಥ ರಥಯಾತ್ರೆ ವೇಳೆ ಕಾಲ್ತುಳಿತ ಸಂಭವಿಸಿದ್ದು, 600ಕ್ಕೂ ಹೆಚ್ಚು ಭಕ್ತರು ಅಸ್ವಸ್ಥಗೊಂಡಿದ್ದಾರೆ. 40ಕ್ಕೂ ಹೆಚ್ಚು ಭಕ್ತರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.

ಜಗನ್ನಾಥ ದೇವರು ಮತ್ತು ಅವರ ಅಣ್ಣ ಬಲಭದ್ರ ಮತ್ತು ತಂಗಿ ದೇವಿ ಸುಭದ್ರಾ ದೇವಿಯ ರಥಯಾತ್ರೆಯ ಸಂದರ್ಭದಲ್ಲಿ ಜನದಟ್ಟಣೆ ಹೆಚ್ಚಾಗಿದ್ದರಿಂದ ಕಾಲ್ತುಳಿತ ಸಂಭವಿಸಿದ್ದು, 600ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ. ಅಸ್ವಸ್ಥ ಭಕ್ತರನ್ನು ಸ್ಥಳೀಯ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಅಂಬುಲೆನ್ಸ್‌ಗಳು ರಥಯಾತ್ರೆ ಸ್ಥಳಕ್ಕೆ ತಲುಪಿವೆ. ಸಂತ್ರಸ್ತರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದವರಿಗೂ ಅಗತ್ಯ ವೈದ್ಯಕೀಯ ನೆರವು ನೀಡಲಾಗಿದೆ.

ಬಲಭದ್ರನ ತಾಳಧ್ವಜ ರಥ ಎಳೆಯುವ ವೇಳೆ ವಿಳಂಬವಾಗಿತ್ತು. ಇದರಿಂದ ರಥಯಾತ್ರೆ ಮಾರ್ಗದ ತಿರುವಿನಲ್ಲಿ ಬಹಳಷ್ಟು ಭಾರೀ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಈ ವೇಳೆ ರಥ ನಿಂತಿದ್ದರಿಂದ ಕಾಲ್ತುಳಿತ ಸಂಭವಿಸಿತು ಎಂದು ಹೇಳಲಾಗುತ್ತಿದೆ.

ಈ ಸಂಬಂಧ ಪ್ರತಿಕ್ರಿಯಿಸಿರುವ ಒಡಿಶಾ ಸಚಿವ ಮುಖೇಶ್ ಮಹಾಲಿಂಗ , ಕಾಲ್ತುಳಿತ ಘಟನೆ ನಿಜಕ್ಕೂ ಆಘಾತಕಾರಿಯಾಗಿದೆ. ರಕ್ಷಣಾ ತಂಡವು ಕೂಡಲೇ ನೆರವಿಗೆ ಧಾವಿಸಿ ಸಂತ್ರಸ್ತರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳದಲ್ಲಿ ಆರೋಗ್ಯ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ನೀರು ಮತ್ತು ಗ್ಲೂಕೋಸ್‌ಗೆ ವ್ಯವಸ್ಥೆ ಮಾಡಲಾಗಿದೆ. ಆಸ್ಪತ್ರೆಗೆ ಭೇಟಿ ನೀಡಿ ಭಕ್ತರ ಆರೋಗ್ಯ ವಿಚಾರಿಸುತ್ತೇನೆ ಎಂದು ತಿಳಿಸಿದ್ದಾರೆ.

148ನೇ ಐತಿಹಾಸಿಕ ರಥಯಾತ್ರೆ

ಅಹಮದಾಬಾದ್‌ನಲ್ಲಿ ನಡೆಯುವ ರಥಯಾತ್ರೆ ಅದೊಂದು ಐತಿಹಾಸಿಕ ಹಿಂದೂ ಹಬ್ಬ. 1878ರಿಂದಲೂ ಪ್ರತಿವರ್ಷ ರಥೋತ್ಸವ ಜರುಗುತ್ತಿದೆ. ಜಗನ್ನಾಥ ದೇವಸ್ಥಾನವು ಆಷಾಢ ಸುಧ್ ಬಿಜ್‌ನಂದು ರಥಯಾತ್ರೆ ಮೆರವಣಿಗೆಯನ್ನು ಆಯೋಜಿಸುತ್ತದೆ. ಈ ಹಬ್ಬದಂದು ಜಗನ್ನಾಥ, ಬಲರಾಮ ಮತ್ತು ಸುಭದ್ರ ದೇವಿಯನ್ನು ಪೂಜಿಸಲಾಗುತ್ತದೆ. ಇದು 148ನೇ ಜಗನ್ನಾಥ ರಥಯಾತ್ರೆ ಆಗಿದೆ.



ಅಪ್ಪ-ಮಗ ಸೇರಿ ಹಸುವಿನ ಕಳೇಬರಕ್ಕೆ ವಿಷ ಬೆರೆಸಿದ ಆರೋಪ

ಹುಲಿ ಹತ್ಯೆ: ಆರು ಆರೋಪಿಗಳ ಸೆರೆ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಲಿಗಳ ಸಾವಿಗೆ ವಿಷಪ್ರಾಶನವೇ ಕಾರಣ ಎನ್ನುವುದು ಮರಣೋತ್ತರ ಪರೀಕ್ಷೆಯಲ್ಲಿ ದೃಢವಾಗಿದೆ.

ಚಾಮರಾಜನಗರ ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ.ಹೀರಾಲಾಲ್ ಮಾತನಾಡಿ, ಕಿಡಿಗೇಡಿಗಳು ಸತ್ತ ಹಸುವಿನ ಕಳೇಬರದಲ್ಲಿ ವಿಷವಿಕ್ಕಿ ತಾಯಿ ಹಾಗೂ 4 ಮರಿ ಹುಲಿಗಳನ್ನು ಕೊಂದಿದ್ದಾರೆ. 6 ಜನರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಹುಲಿ ದಾಳಿಯಿಂದ ಕೋಪಗೊಂಡ ಮಾಲೀಕ ಕಳ್ಳಬ್ಬೆದೊಡ್ಡಿ ಗ್ರಾಮದ ಶಿವಣ್ಣ ಹಸುವಿನ ಕಳೆಬರಕ್ಕೆ ವಿಷ ಸಿಂಪಡಣೆ ಮಾಡಿದ್ದ. ಈ ಕೃತ್ಯದಲ್ಲಿ ಶಿವಣ್ಣನ ಮಗನೂ ಭಾಗಿಯಾಗಿದ್ದ ಎನ್ನಲಾಗಿದೆ. ವಿಷ ಸಿಂಪಡಿಸಿದ್ದ ಕಳೇಬರವನ್ನು ತಿಂದು ಹುಲಿಗಳು ಸಾವನ್ನಪ್ಪಿವೆ. ಆರೋಪಿ ಶಿವಣ್ಣನನ್ನು ವಶಕ್ಕೆ ಪಡೆಯುತ್ತಿದ್ದಂತೆ ಮಗ ಪರಾರಿಯಾಗಿದ್ದಾನೆ. ಶಿವಣ್ಣ ಜತೆಗೆ ಅದೇ ಗ್ರಾಮದ ಐವರನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.

ಹುಲಿಗಳ ಹಾಗೂ ಹಸುವಿನ ಅಂಗಾಂಗಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಹುಲಿಗಳ ದೇಹ ಸೇರಿರುವ ವಿಷ ಯಾವುದು, ಪ್ರಮಾಣ ಎಷ್ಟು ಎಂಬ ಮಾಹಿತಿ ವರದಿ ಬಂದ ಬಳಿಕ ತಿಳಿಯಲಿದೆ. ತಾಯಿ ಹುಲಿಗೆ 10 ವರ್ಷ, ಮರಿಗಳಿಗೆ 8 ರಿಂದ 10 ತಿಂಗಳಾಗಿದ್ದು ಮೂರು ದಿನಗಳ ಹಿಂದೆಯೇ ಮೃತಪಟ್ಟಿವೆ. ಹುಲಿ ಬೇಟೆಯಾಡಿದ ನಂತರ ಹಸುವಿನ ಕಳೇಬರಕ್ಕೆ ವಿಷ ಹಾಕಲಾಯಿತೇ ಅಥವಾ ವಿಷಪ್ರಾಶನವಾದ ಹಸುವನ್ನು ಕಾಡಿನೊಳಗೆ ಇರಿಸಲಾಗಿತ್ತೇ ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದರು.

ಅಂತ್ಯಕ್ರಿಯೆ

ಎನ್‌ಟಿಸಿ ನಿಯಮಾನುಸಾರ 5 ಹುಲಿಗಳ ಮರಣೋತ್ತರ ಪರೀಕ್ಷೆ ನಡೆಸಿದ ಅರಣ್ಯಾಧಿಕಾರಿಗಳು ಸ್ಥಳದಲ್ಲೇ ಅಂತ್ಯಕ್ರಿಯೆ ನಡೆಸಿದ್ದಾರೆ. 1 ತಾಯಿ ಹುಲಿ ಇನ್ನುಳಿದ ನಾಲ್ಕು ಮರಿಗಳನ್ನ ಸಾಮೂಹಿಕವಾಗಿ ಅಂತ್ಯಕ್ರಿಯೆ ಮಾಡಲಾಗಿದೆ. ಹುಲಿಗಳ ಪಕ್ಕದಲ್ಲೇ ಸತ್ತು ಬಿದ್ದಿದ್ದ ಹಸುವನ್ನು ಸಹ ಪ್ರತ್ಯೇಕವಾಗಿ ಅಂತ್ಯಕ್ರಿಯೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಇಂದು ಪರ್ವ ಗ್ರೂಪ್ ಎಕ್ಸ್‌ಪೋ

ಬೆಂಗಳೂರು: ವಿಶ್ವದ ಅತಿ ಸುರಕ್ಷಿತ ತಾಣ ಎನಿಸಿರುವ ದುಬೈನಲ್ಲಿ ಹೂಡಿಕೆ ಮಾಡಬೇಕು ಎನ್ನುವ ಅನೇಕರ ಕನಸನ್ನು ನನಸು ಮಾಡಿಸಲು ಪರ್ವ ಗ್ರೂಪ್ ಮುಂದಾಗಿದೆ. ಇದರ ಭಾಗವಾಗಿ ಅತ್ಯಾಕರ್ಷಕ ಆಫರ್‌ಗಳೊಂದಿಗೆ ಎರಡು ದಿನದ ಎಕ್ಸ್‌ಪೋ ಬೆಂಗಳೂರಿನ ತಾಜ್‌ವೆಸ್ಟ್ ಎಂಡ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

PARVA REALTY

ಕನ್ನಡಿಗರೇ ಕಟ್ಟಿರುವ ಪರ್ವ ಗ್ರೂಪ್ ದುಬೈನಲ್ಲಿ ಗೃಹ ಅಥವಾ ವಾಣಿಜ್ಯ ಕಟ್ಟಡ ಖರೀದಿಸುವವರಿಗೆ ಅನುಕೂಲವಾಗಲಿ ಎನ್ನುವ ಕಾರಣಕ್ಕೆ ಶನಿವಾರ ಹಾಗೂ ಭಾನುವಾರ ಎರಡು ದಿನಗಳ ಕಾಲ ತಾಜ್ ವೆಸ್ಟ್ ಎಂಡ್‌ನಲ್ಲಿ ಎಕ್ಸ್‌ಪೋ ಹಮ್ಮಿಕೊಂಡಿದೆ. ಈ ದಿನಗಳಲ್ಲಿ ಹೂಡಿಕೆ ಮಾಡಿದರೆ, ಅತ್ಯಾಕರ್ಷಕ ರಿಯಾಯಿತಿ ಹಾಗೂ ಬಹುಮಾನಗಳನ್ನು ನೀಡಲು ಸಂಸ್ಥೆ ತೀರ್ಮಾನಿಸಿದೆ.

GOVERNMENT OF KARNATAKA
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬ್ರ್ಯಾಂಡ್ ಬೆಂಗಳೂರು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

ನಿಮ್ಮ ಆಸ್ತಿ ನಿಮ್ಮ ಸುರಕ್ಷತೆ
ನಿಮ್ಮ ಸ್ವತ್ತಿನ ಸುಭದ್ರತೆಗೆ ಇಂದೇ ಮಾಡಿಸಿ ಇ-ಖಾತಾ
Your property is your safety.
Create an e-Khata today to secure your assets.

ಇ-ಖಾತಾ ಮೇಳ
E-Khata Mela
ದಿನಾಂಕ:
29.06.2025, ಭಾನುವಾರ
Date: 29.06.2025, Sunday
ಸಮಯ:
ಬೆಳಗ್ಗೆ 8.00 ರಿಂದ
ಮಧ್ಯಾಹ್ನ 2.00 ಗಂಟೆ
Time: 8.00 a.m. to 2.00 p.m.
ಸ್ಥಳ:
ಸಹಕಾರ ನಗರ ಮೈದಾನ
Place: Sahakaranagar Ground

ಅಗತ್ಯ ದಾಖಲಾತಿಗಳು:
Required Documents:
- ನೋಂದಾಯಿತ ಆಸ್ತಿ ಪತ್ರ
- ಎಸ್‌ಎಎಸ್ ಆಸ್ತಿ ತೆರಿಗೆ ರಶೀದಿ
- ಬೆಸ್ಕಾಂ ಮೀಟರ್ ಸಂಖ್ಯೆ
- ಆಸ್ತಿಯ ಜಿಪಿಎಸ್ ಮತ್ತು ಫೋಟೋ
- ಆಧಾರ್ ಕಾರ್ಡ್ ಪ್ರತಿ
- ಇ.ಸಿ ♦ ಖಾತಾ

ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡರವರು ಇ-ಖಾತಾ ಪಾವತಿ ಯೋಜನೆ ಕುರಿತು ಸಭೆ ನಡೆಸುತ್ತಿರುವುದು

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ 10 kg
ಗೃಹಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ ₹2000
ಯುವನಿಧಿ ₹3000 ₹1500
ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಅಪಘಾತ: ಏರೋನಾಟಿಕಲ್ ಎಂಜಿನಿಯರ್ ಸಾವು

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದು ಯುವತಿ ಸಾವನ್ನಪ್ಪಿದ ಘಟನೆ ಬಾಗಲೂರು ರಸ್ತೆಯ ಕೆಐಎಡಿಬಿ ಜಂಕ್ಷನ್‌ನಲ್ಲಿ ನಡೆದಿದೆ. ನಂದಿನಿ (24) ಮೃತ ಯುವತಿ. ನೆಲಮಂಗಲದ ಹುಸ್ಕೂರು ಗ್ರಾಮದ ನಂದಿನಿ ಏರೋನಾಟಿಕಲ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಕೆಲಸದ ಸೇರಿದ ಬಳಿಕ ಬಾಗಲೂರಿನ ಪಿಜಿಯಲ್ಲಿ ವಾಸವಾಗಿದ್ದರು. ಗುರುವಾರ ಸಂಜೆ 6:30ಕ್ಕೆ ಕೆಲಸ ಮುಗಿಸಿ ದ್ವಿಚಕ್ರ ವಾಹನದಲ್ಲಿ ಪಿಜಿಗೆ ಹಿಂದಿರುಗುವಾಗ ಫಾರ್ಚೂನರ್ ಕಾರು ಗುದ್ದಿದೆ. ಅಪಘಾತದ ರಭಸಕ್ಕೆ ನಂದಿನಿ ತಲೆ ಮತ್ತು ಕಾಲಿಗೆ ತೀವ್ರ ಪೆಟ್ಟಾಗಿದೆ. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ತೀವ್ರ ರಕ್ತಸ್ರಾವವಾಗಿ ನಂದಿನಿ ಸಾವನ್ನಪ್ಪಿದ್ದಾರೆ. ಚಿಕ್ಕಜಾಲ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಕಲ್ಲೆಸೆದ ಕಡೆಯಲ್ಲಾ ವಕ್ಫ್ ಆಸ್ತಿ : ಮಾಜಿ ಸಿಎಂ ವಿರುದ್ಧ ಸವಣೂರು, ಶಿಗ್ಗಾವಿ ಠಾಣೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳು ವಜಾ

ಕೋಮು ಕೆರಳಿಸುವ ಕೇಸ್‌ಗಳಿಂದ ಬೊಮ್ಮಾಯಿ ಮುಕ್ತ



ಬೆಂಗಳೂರು: ವಕ್ಫ್ ಆಸ್ತಿ ವಿಚಾರವಾಗಿ ಎದ್ದಿದ್ದ ವಿವಾದದ ಹಿನ್ನೆಲೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಹಾಗೂ ನಿರ್ದಿಷ್ಟ ಸಮುದಾಯ ಕೆರಳಿಸುವ ರೀತಿಯಲ್ಲಿ ಭಾಷಣ ಮಾಡಿದ ಆರೋಪದ ಸಂಬಂಧ ಹಾವೇರಿ ಜಿಲ್ಲೆಯ ಸವಣೂರು ಮತ್ತು ಶಿಗ್ಗಾವಿ ಠಾಣೆಗಳಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಪ್ರತ್ಯೇಕವಾಗಿ ದಾಖಲಾಗಿದ್ದ ಎರಡು ಕೋಮು ದ್ವೇಷ ಆರೋಪದ ಪ್ರಕರಣವನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಬಿಎನ್‌ಎಸ್ ಸೆಕ್ಷನ್ 196(1)(ಎ) ಅಡಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಬಸವರಾಜ ಬೊಮ್ಮಾಯಿ ಅವರು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿತು. ಬೊಮ್ಮಾಯಿ ಪ್ರತಿನಿಧಿಸಿದ್ದ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ಅವರು ಎಸೆದ ಕಲ್ಲು ಬೀಳುವೆಡೆಯೆಲ್ಲಾ ವಕ್ಫ್ ಆಸ್ತಿ ಇದೆ ಎಂದಷ್ಟೇ ಬೊಮ್ಮಾಯಿ ಹೇಳಿದ್ದಾರೆ. ಬಾಲ ಬಿಚ್ಚಿದರೆ ಎಂಬ ಹೇಳಿಕೆಯನ್ನು ಬೊಮ್ಮಾಯಿ ನೀಡಿಲ್ಲ. ಅವರು ಮಾಜಿ ಸಿಎಂ ಆಗಿದ್ದು, ಪ್ರಕರಣಗಳನ್ನು ಹೀಗೆ ಮುಂದುವರಿಸುವುದು ಸರಿಯಲ್ಲ ಎಂದರು.

ಹೆಚ್ಚುವರಿ ವಿಶೇಷ ಸರಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು ದೂರಿನಲ್ಲಿ ಅಪರಾಧದ ಅಂಶಗಳಿವೆ. ಹೀಗಾಗಿ, ಈ ಹಂತದಲ್ಲಿ ನ್ಯಾಯಾಲಯವು ಮಧ್ಯಪ್ರವೇಶ ಮಾಡಬಾರದು ಎಂದು ಕೋರಿದರು. ವಾದ-ಪ್ರತಿವಾದ ಆಲಿಸಿದ ಪೀಠವು 'ಕಲ್ಲೆಸೆದ ಕಡೆಯಲ್ಲಾ ವಕ್ಫ್ ಆಸ್ತಿ' ಎಂದು ಬೊಮ್ಮಾಯಿ ಹೇಳಿರುವುದನ್ನು ಬಿಟ್ಟರೆ ಅವರ ವಿರುದ್ಧದ ಅಪರಾಧವಾಗುವಂಥ ಯಾವುದೇ ಅಂಶಗಳಿಲ್ಲ. ಹೀಗಾಗಿ, ಬೊಮ್ಮಾಯಿ ವಿರುದ್ಧ ಕಾನೂನು ಪ್ರಕ್ರಿಯೆ ಮುಂದುವರಿಸುವುದು ಕಾನೂನಿನ ದುರ್ಬಳಕೆಯಾಗಲಿದೆ ಎಂದು ಪ್ರಕರಣ ವಜಾಗೊಳಿಸಿ ಆದೇಶಿಸಿತು.

ಶಿಗ್ಗಾವಿಯಲ್ಲಿ ದಾಖಲಾಗಿರುವ ಮತ್ತೊಂದು ಪ್ರಕರಣದಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಮತ್ತು ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿಕೆ ನೀಡಿದ್ದಾರೆ. ಆದರೆ, ಬೊಮ್ಮಾಯಿ ವಿರುದ್ಧ ಯಾವುದೇ ಆರೋಪವಿಲ್ಲ ಎಂದು ನಾವದಗಿ ಹೇಳಿದರು. ಆಗ ಪೀಠವು ಕಲ್ಲು ಹಾಕಿದರೆ ವಕ್ಫ್ ಆಸ್ತಿ ಅಂತ ಇಲ್ಲಿ ಇಲ್ಲ ಎಂದು ಲಘು ದಾಟಿಯಲ್ಲಿ ಹೇಳಿತು. ಮುಂದುವರಿದು, ಬೊಮ್ಮಾಯಿ ಅವರು ಪ್ರಚೋದನಕಾರಿ ಹೇಳಿಕೆ ನೀಡಿರುವುದು ದೂರಿನಲ್ಲಿ ಇಲ್ಲ ಎಂದು ಪ್ರಕರಣ ರದ್ದುಪಡಿಸಿತು.

ಬೊಮ್ಮಾಯಿ ಪರ ವಕೀಲರ ವಾದ

- 'ಕಲ್ಲೆಸೆದ ಕಡೆಯಲ್ಲಾ ವಕ್ಫ್ ಆಸ್ತಿ' ಹೇಳಿಕೆ ಅಪರಾಧ ಆಗುವ ಅಂಶವಲ್ಲ
- ಬೊಮ್ಮಾಯಿ ಅವರು ಪ್ರಚೋದನಕಾರಿ ಹೇಳಿಕೆ ನೀಡಿರುವುದು ದೂರಿನಲ್ಲಿ ಇಲ್ಲ
- ಕಾನೂನು ಪ್ರಕ್ರಿಯೆ ಮುಂದುವರಿಸುವುದು ಕಾನೂನಿನ ದುರ್ಬಳಕೆ ಎಂದ ವಕೀಲರು

ಏನಿದು ಪ್ರಕರಣ?

ವಕ್ಫ್ ಆಸ್ತಿ ವಿಚಾರವಾಗಿ ಸಂಸದ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ಅರವಿಂದ್ ಬೆಲ್ಲದ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಮತ್ತು ಮಾಜಿ ಶಾಸಕ ಅರುಣ್‌ಕುಮಾರ್ ಪೂಜಾರ್ ಅವರು ನವೆಂಬರ್ 4ರಂದು ಸವಣೂರಿನ ಭರಮದೇವರ ಸರ್ಕಲ್ ಬಳಿ ಪ್ರಚೋದನಕಾರಿ ಭಾಷಣ ಮಾಡಿದ್ದರು ಎಂದು ಆರೋಪಿಸಲಾಗಿತ್ತು.

ಐದು ಬೀದಿ ನಾಯಿಗಳ ಸಾವು

ಬೆಂಗಳೂರು: ಕೆ.ಆರ್.ಪುರಂನ ಭಟ್ಟರಹಳ್ಳಿಯಲ್ಲಿ ಐದು ಬೀದಿ ನಾಯಿಗಳು ರಕ್ತ ವಾಂತಿ ಮಾಡಿಕೊಂಡು ಮೃತಪಟ್ಟಿದ್ದು, ಕಿಡಿಗೇಡಿಗಳು ವಿಷ ಹಾಕಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಆರು ನಾಯಿಗಳ ಪೈಕಿ ಐದು ಸಾವಿಗೀಡಾಗಿವೆ. ನಾಯಿಗಳು ಒದ್ದಾಡಿ ಪ್ರಾಣಬಿಡುವ ದೃಶ್ಯ ಸಿಸಿಟಿವಿ ಗುರುವಾರ ರಾತ್ರಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ಬಿಬಿಎಂಪಿ ಅಧಿಕಾರಿಗಳು ಕೆ.ಆರ್. ಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಮೃತ ನಾಯಿಗಳ ರಕ್ತದ ಮಾದರಿ ರವಾನೆ ಮಾಡಲಾಗಿದೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

THIS IS A PUBLIC ANNOUNCEMENT FOR INFORMATION PURPOSES ONLY AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES NOR IS IT A PROSPECTUS ANNOUNCEMENT. **NOT FOR RELEASE, PUBLICATION OR DISTRIBUTION, DIRECTLY OR INDIRECTLY, OUTSIDE INDIA.** INITIAL PUBLIC OFFERING OF EQUITY SHARES ON THE MAIN BOARD OF THE BSE LIMITED ("**BSE**") AND NATIONAL STOCK EXCHANGE OF INDIA LIMITED ("**NSE**", AND TOGETHER WITH "**BSE**", THE "**STOCK EXCHANGES**") IN COMPLIANCE WITH CHAPTER II OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("**SEBI ICDR REGULATIONS**")

PUBLIC ANNOUNCEMENT

(Please scan this QR Code to view the DRHP)

wakefit

WAKEFIT INNOVATIONS LIMITED

Our Company was incorporated as 'Wakefit Innovations Private Limited' at Bengaluru, Karnataka as a private limited company under the Companies Act, 2013, pursuant to a certificate of incorporation dated March 1, 2016, issued by the Registrar of Companies, Karnataka at Bengaluru **("RoC")**. Subsequently, our Company was converted from a private limited company to a public limited company and the name of our Company changed from 'Wakefit Innovations Private Limited' to 'Wakefit Innovations Limited' pursuant to a Shareholders' resolution dated June 5, 2025 and a fresh certificate of incorporation dated June 16, 2025 was issued by the RoC. For further details, see *"History and Certain Corporate Matters – Brief History of our Company"* on page 224 of the draft red herring prospectus dated June 26, 2025 (**"DRHP"**).

Registered and Corporate Office: Umiya Emporium, 97-99, 2nd and 4th Floor, Adugodi, Tavarekere, Opp. Forum Mall, Hosur Road, Bengaluru - 560 029, Karnataka, India.
Tel: 080 6733 5544; **Website:** www.wakefit.co; **Contact person:** Surbhi Sharma, Company Secretary and Compliance Officer; **E-mail:** investorscompliance@wakefit.co;
Corporate Identity Number: U52590KA2016PLC086582

OUR PROMOTERS: ANKIT GARG AND CHAITANYA RAMALINGEGOWDA

INITIAL PUBLIC OFFERING OF UP TO [●] EQUITY SHARES OF FACE VALUE OF ₹1 EACH ("EQUITY SHARES") OF WAKEFIT INNOVATIONS LIMITED ("COMPANY") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("OFFER PRICE") AGGREGATING UP TO ₹[●] MILLION COMPRISING A FRESH ISSUE OF UP TO [●] EQUITY SHARES OF FACE VALUE OF ₹1 EACH AGGREGATING UP TO ₹4,682.21 MILLION BY OUR COMPANY ("FRESH ISSUE") AND AN OFFER FOR SALE OF UP TO 58,399,085 EQUITY SHARES OF FACE VALUE OF ₹1 EACH AGGREGATING UP TO ₹[●] MILLION BY THE SELLING SHAREHOLDERS, CONSISTING OF UP TO 7,729,488, EQUITY SHARES OF FACE VALUE OF ₹1 EACH AGGREGATING UP TO ₹[●] MILLION BY ANKIT GARG, UP TO 4,452,185 EQUITY SHARES OF FACE VALUE OF ₹1 EACH AGGREGATING UP TO ₹[●] MILLION BY CHAITANYA RAMALINGEGOWDA (COLLECTIVELY "THE PROMOTER SELLING SHAREHOLDERS"), UP TO 719,364 EQUITY SHARES AGGREGATING UP TO ₹[●] MILLION BY NITIKA GOEL, UP TO 25,061,428 EQUITY SHARES AGGREGATING UP TO ₹[●] MILLION BY PEAK XV PARTNERS INVESTMENTS VI, UP TO 169,800 EQUITY SHARES AGGREGATING UP TO ₹[●] MILLION BY REDWOOD TRUST, UP TO 10,193,506 EQUITY SHARES AGGREGATING UP TO ₹[●] MILLION BY VERLINVEST S.A., UP TO 826,300 EQUITY SHARES AGGREGATING UP TO ₹[●] MILLION BY SAI GLOBAL INDIA FUND I, LLP, UP TO 5,455,909 EQUITY SHARES AGGREGATING UP TO ₹[●] MILLION BY INVESTCORP GROWTH EQUITY FUND, UP TO 726,245 EQUITY SHARES AGGREGATING UP TO ₹[●] MILLION BY INVESTCORP GROWTH OPPORTUNITY FUND, AND UP TO 3,064,860 EQUITY SHARES AGGREGATING UP TO ₹[●] MILLION BY PARAMARK KB FUND I (COLLECTIVELY THE "OTHER SELLING SHAREHOLDERS") (THE PROMOTER SELLING SHAREHOLDERS AND THE OTHER SELLING SHAREHOLDERS, COLLECTIVELY REFFERED TO AS THE "SELLING SHAREHOLDERS" AND SUCH EQUITY SHARES SO OFFERED BY THE SELLING SHAREHOLDERS, THE "OFFERED SHARES" AND SUCH OFFER, THE "OFFER FOR SALE" AND TOGETHER WITH THE FRESH ISSUE, THE "OFFER".

OUR COMPANY, IN CONSULTATION WITH THE BOOK RUNNING LEAD MANAGERS, MAY CONSIDER A PRE-IPO PLACEMENT AGGREGATING UP TO ₹*936.44 MILLION*, AT ITS DISCRETION, PRIOR TO FILING OF THE RED HERRING PROSPECTUS. THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BOOK RUNNING LEAD MANAGERS. IF THE PRE-IPO PLACEMENT IS COMPLETED, THE AMOUNT RAISED PURSUANT TO THE PRE-IPO PLACEMENT WILL BE REDUCED FROM THE FRESH ISSUE, SUBJECT TO COMPLIANCE WITH RULE 19(2)(B) OF THE SCRR. THE PRE-IPO PLACEMENT, IF UNDERTAKEN, SHALL NOT EXCEED 20% OF THE SIZE OF THE FRESH ISSUE. PRIOR TO THE COMPLETION OF THE OFFER, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, PRIOR TO ALLOTMENT PURSUANT TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE OFFER, OR THE OFFER MAY BE SUCCESSFUL AND WILL RESULT INTO LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS TO THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND THE PROSPECTUS.

THIS OFFER INCLUDES A RESERVATION OF UP TO [●] EQUITY SHARES OF FACE VALUE ₹1 EACH (CONSTITUTING UP TO [●]% OF THE POST-OFFER PAID-UP EQUITY SHARE CAPITAL) FOR SUBSCRIPTION BY ELIGIBLE EMPLOYEES (THE "EMPLOYEE RESERVATION PORTION") AND NET OFFER OF UP TO [●] EQUITY SHARES OF FACE VALUE ₹1 EACH. THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●]% AND [●]%, RESPECTIVELY, OF THE POST-OFFER PAID-UP EQUITY SHARE CAPITAL OF OUR COMPANY

THE FACE VALUE OF EQUITY SHARES IS ₹1 EACH. THE OFFER PRICE IS [●] TIMES THE FACE VALUE OF THE EQUITY SHARES. THE PRICE BAND, AND THE MINIMUM BID LOT SHALL BE DECIDED BY OUR COMPANY, IN CONSULTATION WITH THE BRLMS AND WILL BE ADVERTISED IN ALL EDITIONS OF [●], AN ENGLISH NATIONAL DAILY NEWSPAPER, ALL EDITIONS OF [●], A HINDI NATIONAL DAILY NEWSPAPER AND THE [●] EDITION OF [●], A KANNADA DAILY NEWSPAPER (KANNADA BEING THE REGIONAL LANGUAGE OF KARNATAKA, WHERE OUR REGISTERED AND CORPORATE OFFICE IS LOCATED), EACH WITH WIDE CIRCULATION, AT LEAST TWO WORKING DAYS PRIOR TO THE BID/ OFFER OPENING DATE AND SHALL BE MADE AVAILABLE TO THE STOCK EXCHANGES FOR THE PURPOSE OF UPLOADING ON THEIR RESPECTIVE WEBSITES IN ACCORDANCE WITH THE SEBI ICDR REGULATIONS.

In case of any revision in the Price Band, the Bid/ Offer Period will be extended by at least three additional Working Days after such revision in the Price Band, subject to the Bid/ Offer Period not exceeding 10 Working Days. In cases of force majeure, banking strike or similar unforeseen circumstances, our Company may, in consultation with the BRLMs, for reasons to be recorded in writing, extend the Bid/ Offer Period for a minimum of one Working Day, subject to the Bid/ Offer Period not exceeding 10 Working Days. Any revision in the Price Band and the revised Bid/ Offer Period, if applicable, shall be widely disseminated by notification to the Stock Exchanges, by issuing a public notice, and also by indicating the change on the respective websites of the BRLMs and at the terminals of the Syndicate Members and by intimation to the Self-Certified Syndicate Banks **("SCSBs")**, other Designated Intermediaries and the Sponsor Bank(s), as applicable.

This is an Offer in terms of Rule 19(2)(b) of the SCRR read with Regulation 31 of the SEBI ICDR Regulations. This Offer is being made through the Book Building Process in compliance with Regulation 6(2) of the SEBI ICDR Regulations wherein not less than 75% of the Net Offer shall be available for allocation on a proportionate basis to Qualified Institutional Buyers (**"QIBs"** and such portion the **"QIB Portion"**) provided that our Company in consultation with the BRLMs, may allocate up to 60% of the QIB Portion to Anchor Investors on a discretionary basis in accordance with the SEBI ICDR Regulations (**"Anchor Investor Portion"**), of which one-third shall be reserved for domestic Mutual Funds, subject to valid Bids being received from domestic Mutual Funds at or above the Anchor Investor Allocation Price, in accordance with the SEBI ICDR Regulations. In the event of under-subscription or non-allocation in the Anchor Investor Portion, the balance Equity Shares shall be added to the Net QIB Portion. Further, 5% of the Net QIB Portion shall be available for allocation on a proportionate basis to Mutual Funds only and the remainder of the Net QIB Portion shall be available for allocation on a proportionate basis to all QIBs (other than Anchor Investors) including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining QIB Portion for proportionate allocation to QIBs. Further, not more than 15% of the Net Offer shall be available for allocation to NIBs of which (a) one-third portion shall be reserved for Bidders with application size of more than ₹0.20 million and up to ₹1.00 million; and (b) two-thirds of the portion shall be reserved for Bidders with application size of more than ₹1.00 million, provided that the unsubscribed portion in either of such sub-categories may be allocated to Bidders in other sub-category of the NIBs in accordance with SEBI ICDR Regulations and not more than 10% of the Net Offer shall be available for allocation to Retail Individual Bidders **("RIB")** in accordance with the SEBI ICDR Regulations, subject to valid Bids being received from them at or above the Offer Price. Further, Equity Shares will be allocated on a proportionate basis to Eligible Employees applying under the Employee Reservation Portion, subject to valid Bids received from them at or above the Offer Price. All Bidders (except Anchor Investors) are required to mandatorily utilise the Application Supported by Blocked Amount **("ASBA")** process by providing details of their respective ASBA accounts and UPI ID (in case of UPI Bidders *(defined herein)* using the UPI Mechanism), in which case the corresponding Bid Amounts will be blocked by the SCSBs or under the UPI Mechanism, as applicable to participate in the Offer. Anchor Investors are not permitted to participate in the Anchor Investor Portion of the Offer through the ASBA process. For details, see *"Offer Procedure"* on page 401 of the DRHP.

This public announcement is being made in compliance with the provisions of Regulation 26(2) of the SEBI ICDR Regulations to inform the public that our Company is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares pursuant to the Offer and has filed the DRHP dated June 26, 2025 with the Securities and Exchange Board of India (**"SEBI"**) and with the Stock Exchanges on June 27, 2025. Pursuant to Regulation 26(1) of the SEBI ICDR Regulations, the DRHP filed with SEBI shall be made public for comments, if any, for a period of at least 21 days from the date of publication of this public announcement, by hosting it on the website of SEBI at www.sebi.gov.in, on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of our Company at www.wakefit.co and the website of the BRLMs, i.e. Axis Capital Limited, IIFL Capital Services Limited *(formerly known as IIFL Securities Limited)* and Nomura Financial Advisory and Securities (India) Private Limited at www.axiscapital.co.in, www.iiflcap.com and http://www.nomuraholdings.com/company/group/asia/india/index.html, respectively. Our Company hereby invites the public to give their comments on the DRHP filed with SEBI, with respect to disclosures made in the DRHP. The members of the public are requested to send a copy of the comments to SEBI, to the Company Secretary and Compliance Officer of our Company and/or the BRLMs at their respective addresses mentioned herein. All comments must be received by SEBI and/or our Company and/or the Company Secretary and Compliance Officer of our Company and/or the BRLMs in relation to the Offer on or before 5.00 p.m. on the 21st day from the date of publication of this public announcement.

Investments in equity and equity-related securities involve a degree of risk and Bidders should not invest any funds in the Offer unless they can afford to take the risk of losing their entire investment. Bidders are advised to read the risk factors carefully before taking an investment decision in the Offer. For taking an investment decision, Bidders must rely on their own examination of our Company and the Offer, including the risks involved. The Equity Shares in the Offer have not been recommended or approved by SEBI, nor does SEBI guarantee the accuracy or adequacy of the contents of the Draft Red Herring Prospectus. Specific attention of the Bidders is invited to *"Risk Factors"* on page 33 of the DRHP.

Any decision to invest in the Equity Shares described in the DRHP may only be taken after a Red Herring Prospectus ("**RHP**") has been filed with the RoC and must be made solely on the basis of such RHP as there may be material changes in the RHP from the DRHP. The Equity Shares, when offered through the RHP, are proposed to be listed on the Stock Exchanges.

For details of the history of share capital of our Company, the names of the signatories to the Memorandum of Association and the number of shares of our Company subscribed by them, please see the section titled *"Capital Structure"* on page 82 of the DRHP. The liability of the members of our Company is limited. For details of the main objects of our Company as contained in the Memorandum of Association, please see the section titled *"History and Certain Corporate Matters"* on page 224 of the DRHP.

BOOK RUNNING LEAD MANAGERS TO THE OFFER			REGISTRAR TO THE OFFER
AXIS CAPITAL	IIFL CAPITAL	NOMURA	MUFG MUFG Intime
Axis Capital Limited 1st Floor, Axis House, P.B. Marg, Worli Mumbai - 400 025, Maharashtra, India **Tel:** +91 22 4325 2183 **E-mail:** wakefit.ipo@axiscap.in **Website:** www.axiscapital.co.in **Investor Grievance E-mail:** complaints@axiscap.in **Contact Person:** Simran Gadh / Jigar Jain **SEBI Registration No:** INM000012029	**IIFL Capital Services Limited** ***(formerly known as IIFL Securities Limited)*** 24th Floor, One Lodha Place Senapati Bapat Marg, Lower Parel (West) Mumbai - 400 013, Maharashtra, India **Tel:** +91 22 4646 4728 **E-mail:** wakefit.ipo@iiflcap.com **Website:** www.iiflcap.com **Investor Grievance E-mail:** ig.ib@iiflcap.com **Contact Person:** Dhruv Bhavsar / Pawan Kumar Jain **SEBI Registration No:** INM000010940	**Nomura Financial Advisory and Securities (India) Private Limited** Ceejay House, Level 11, Plot F, Shivsagar Estate, Dr. Annie Besant Road, Worli, Mumbai - 400 018 Maharashtra, India **Tel:** +91 22 4037 4037 **E-mail:** wakefitipo@nomura.com **Website:** http://www.nomuraholdings.com/company/group/asia/india/index.html **Investor Grievance E-mail:** investorgrievances-in@nomura.com **Contact Person:** Vishal Kanjani / Kshitij Thakur **SEBI Registration No.:** INM000011419	**MUFG Intime India Private Limited** ***(Formerly Link Intime India Private Limited)*** C-101, 1st Floor, 247 Park, L.B.S. Marg, Vikhroli West, Mumbai - 400 083, Maharashtra, India **Tel:** +91 91 810 811 4949 **E-mail:** wakefitinnovations.ipo@in.mpms.mufg.com **Website:** https://.in.mpms.mufg.com/ **Investor Grievance E-mail:** wakefitinnovations.ipo@in.mpms.mufg.com **Contact Person:** Shanti Gopalkrishnan **SEBI Registration No:** INR000004058

All capitalised terms used herein and not specifically defined shall have the same meaning as ascribed to them in the DRHP.

For **WAKEFIT INNOVATIONS LIMITED**
On behalf of the Board of Directors
Sd/-
Surbhi Sharma
Company Secretary and Compliance Officer

Place: Bengaluru, Karnataka
Date: June 27, 2025

WAKEFIT INNOVATIONS LIMITED is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares and has filed the DRHP dated June 26, 2025 with SEBI and the Stock Exchanges on June 27, 2025. The DRHP is available on the website of SEBI at www.sebi.gov.in, as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.wakefit.co and on the websites of the Book Running Lead Managers ("**BRLMs**"), i.e. Axis Capital Limited, IIFL Capital Services Limited *(formerly known as IIFL Securities Limited)* and Nomura Financial Advisory and Securities (India) Private Limited at www.axiscapital.co.in, www.iiflcap.com and http://www.nomuraholdings.com/company/group/asia/india/index.html respectively. Any potential investors should note that investment in equity shares involves a high degree of risk and for details relating to such risk, see *"Risk Factors"* on page 33 of the DRHP filed with SEBI and the details set out in the RHP, when filed. Potential Bidders should not rely on the DRHP filed with SEBI and the Stock Exchanges for making any investment decision.

The Equity Shares offered in the Offer have not been and will not be registered under the U.S. Securities Act of 1933, as amended ("**U.S. Securities Act**"), or any state securities laws in the United States, and unless so registered may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, such Equity Shares are being offered and sold (i) outside of the United States in offshore transactions in reliance on Regulation S under the U.S. Securities Act and the applicable laws of the jurisdiction where those offers and sales occur; and (ii) within the United States to "qualified institutional buyers" (as defined in Rule 144A under the U.S. Securities Act), pursuant to the private placement exemption set out in Section 4(a) of the U.S. Securities Act.

Adfactors 215/25

ಅರ್ಜಿ ವಿಚಾರಣೆ ಜುಲೈ 2ಕ್ಕೆ ನಡೆಸಲಿರುವ ಹೈಕೋರ್ಟ್

ಪ್ರಜ್ವಲ್ ಜಾಮೀನು ಮತ್ತೆ ಮುಂದೂಡಿಕೆ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ವಿರುದ್ಧದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಜಾಮೀನು ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಜುಲೈ 2ಕ್ಕೆ ಮುಂದೂಡಿದೆ.

ಮನೆಕೆಲಸದಾಕೆಯ ಮೇಲಿನ ಆರೋಪಿತ ಅತ್ಯಾಚಾರ ಪ್ರಕರಣದಲ್ಲಿ ಎರಡನೇ ಬಾರಿಗೆ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರ ಏಕಸದಸ್ಯಪೀಠವು ಶುಕ್ರವಾರ ವಿಚಾರಣೆಗೆ ಒಳಪಡಿಸಿತ್ತು.

ರಾಜ್ಯ ಸರಕಾರದ ಪರವಾಗಿ ವಾದಿಸಿದ್ದ ವಿಶೇಷ ಸರಕಾರಿ ಅಭಿಯೋಜಕ ಪ್ರೊ.ರವಿವರ್ಮ ಕುಮಾರ್, ಸಾಮಾನ್ಯವಾಗಿ ವಿಚಾರಣಾಧೀನ ಕೈದಿಗಳು ಮೊದಲು ತಾಲೂಕು ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಬೇಕು. ನಂತರ ಮಾತ್ರ ಹೈಕೋರ್ಟ್‌ಗೆ ಬರಲು ಅವಕಾಶವಿದೆ. ಆದರೆ, ಪ್ರಜ್ವಲ್ ರೇವಣ್ಣ ನೇರವಾಗಿ ಹೈಕೋರ್ಟ್‌ಗೆ ಏಕೆ ಬಂದಿದ್ದಾರೆ ? ಇಲ್ಲಿ ಯಾವುದೇ ವಿಶೇಷ ಕಾರಣಗಳಿಲ್ಲ. ಹೀಗಾಗಿ, ಈ ಅರ್ಜಿ ವಜಾ ಮಾಡಬೇಕು ಎಂದು ವಾದಿಸಿದರು. ಪರಿಸ್ಥಿತಿ ಬದಲಾಗಿದೆ ಎಂದು ತೋರಿಸಲು ಅರ್ಜಿದಾರರು ವಿಚಾರಣಾಧೀನ ನ್ಯಾಯಾಲಯಕ್ಕೆ ಹೋಗಬೇಕೇ? ಎಂದು ನ್ಯಾಯಮೂರ್ತಿಗಳು ಪ್ರಶ್ನಿಸಿದರು. ಇದಕ್ಕೆ ಪ್ರೊ.ರವಿವರ್ಮ ಕುಮಾರ್, ಪರಿಸ್ಥಿತಿ ಬದಲಾಗಿದೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಪ್ರಜ್ವಲ್ ಅವರ ನಡತೆ ಗಮನಿಸಿದರೆ, ಜಾಮೀನು ನೀಡುವುದು ಸೂಕ್ತವಲ್ಲ. ಪ್ರಕರಣ ದಾಖಲಾದ ನಂತರ ಅವರು ದೇಶವನ್ನೇ ತೊರೆದಿದ್ದರು. ವಿಳಂಬಕ್ಕೆ ಅವರೇ ಕಾರಣ ಎಂದು ಉತ್ತರ ನೀಡಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ರಾಜ್ಯದಲ್ಲಿ 2 ದಿನ ಭಾರೀ ಮಳೆ ಸಾಧ್ಯತೆ

ಬೆಂಗಳೂರು: ಮಲೆನಾಡು ಹಾಗೂ ಕರಾವಳಿ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ವರುಣನ ಆರ್ಭಟ ಮುಂದುವರಿದಿದ್ದು, ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕೊಡಗು ಜಿಲ್ಲೆಗೆ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಹಾಸನ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಬೆಳಗಾವಿ, ಕಲಬುರಗಿ, ಬೀದರ್ ಜಿಲ್ಲೆಗೆ ಯೆಲ್ಲೋ ಅಲರ್ಟ್ ಇದೆ.

ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ: ಕಾವೇರಿ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿದ್ದು, ಜಲಾಶಯಗಳ ಒಳಹರಿವು ಹೆಚ್ಚಾಗಲಿದೆ. ಜೋರು ಗಾಳಿ ಬೀಸುತ್ತಿರುವ ಕಾರಣ ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಮಳೆ ಮುನ್ಸೂಚನೆ: ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಚಾಮರಾಜನಗರ, ದಾವಣಗೆರೆ, ಮಂಡ್ಯ, ಮೈಸೂರು, ರಾಮನಗರ, ತುಮಕೂರು, ವಿಜಯನಗರ ಹಾಗೂ ಚಿತ್ರದುರ್ಗದಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

PUBLIC NOTICE

LOST

I, **Bimolchandra Ningombam,** have lost my original sale deed dated 30-11-2015, Document No. 3933/2015-16, situated at Parappana Agrahara Village, Begur Hobli, Bangalore South Taluk, Survey No. 68/ 2A4 (Old Sy No.68/2) Flat bearing No.007, (Super Built-up Area 1280 sqft), SRO Jayanagar (BTM Layout), Bangalore, on 15-06-2025 between Kaggadaspur to RMZ (Complaint Registered) Finder Please Contact:
Bimolchandra Ningombam
Ph.9886479412

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 160/2025

ಅರ್ಜಿದಾರರು: ಶ್ರೀ ಸೋಮಾನಾಯ್ಕ ಬಿನ್ ಲೇಟ್ ಬಾಲುನಾಯ್ಕ, ವಯಸ್ಸು 57 ವರ್ಷ ವಿಳಾಸ: ಕರಡಿದೊಡ್ಡಿ ಗ್ರಾಮ ತೇರುಬೀದಿ ಅಂಚೆ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ. 2. ಗ್ರಾಮ ಲೆಕ್ಕಾಧಿಕಾರಿಗಳು, ತೇರುಬೀದಿ ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1,7 ಮತ್ತು 16ನೇ ಅರ್ಜಿದಾರರ ತಾಯಿ, 8ನೇ ಅರ್ಜಿದಾರರ ಅತ್ತೆ, 1 ರಿಂದ 5 ಮತ್ತು 9 ರಿಂದ 15ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ಮುದ್ದಮ್ಮ ಕೋಂ ಲೇಟ್ ಲಚ್ಮಾ ನಾಯ್ಕ ನಾಯ್ಕರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಕರಡಿದೊಡ್ಡಿ ಗ್ರಾಮದಲ್ಲಿ ದಿನಾಂಕ 28/03/2004 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 02/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2025ರ ಜೂನ್ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ಎಸ್.ಸ್ವಾಮಿ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 19.06.2025

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 169/2025

ಅರ್ಜಿದಾರರು: ಶ್ರೀ ಸೋಮಾನಾಯ್ಕ ಬಿನ್ ಲೇಟ್ ಬಾಲುನಾಯ್ಕ, ವಯಸ್ಸು 57 ವರ್ಷ ವಿಳಾಸ: ಕರಡಿದೊಡ್ಡಿ ಗ್ರಾಮ ತೇರುಬೀದಿ ಅಂಚೆ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ. 2. ಗ್ರಾಮ ಲೆಕ್ಕಾಧಿಕಾರಿಗಳು, ತೇರುಬೀದಿ ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1,7 ಮತ್ತು 16ನೇ ಅರ್ಜಿದಾರರ ತಂದೆ, 8ನೇ ಅರ್ಜಿದಾರರ ಮಾವ, 1 ರಿಂದ 5 ಮತ್ತು 9 ರಿಂದ 15ನೇ ಅರ್ಜಿದಾರರ ತಾತನವರಾದ ಶ್ರೀ ಲಚ್ಮಾ ನಾಯ್ಕ ಬಿನ್ ಲೇಟ್ ಸಕ್ರಿಯಾ ನಾಯ್ಕರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಕರಡಿದೊಡ್ಡಿ ಗ್ರಾಮದಲ್ಲಿ ದಿನಾಂಕ 09/04/2000 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 02/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.

2025ರ ಜೂನ್ 26ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಕೆ.ಎಸ್.ಸ್ವಾಮಿ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 19.06.2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 292/2025

ಅರ್ಜಿದಾರರು: 1. ಶ್ರೀಮತಿ ಕಾಳಮ್ಮ ಕೋಂ ಲೇಟ್ ಹನುಮಂತಪ್ಪ ವಯಸ್ಸು 68 ವರ್ಷ ವಾಸ: ಬಿಳಿಗನಕುಪ್ಪೆ ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅತ್ತೆಯವರಾದ ಶ್ರೀಮತಿ ವೆಂಕಟಲಕ್ಷ್ಮಮ್ಮ ಕೋಂ ಲೇಟ್ ಹನುಮಬೋವಿ ರವರು ದಿನಾಂಕ: 04.10.1985 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಬಿಳಿಗನಕುಪ್ಪೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 07/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 26ನೇ ಜೂನ್ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/06/2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 294/2025

ಅರ್ಜಿದಾರರು: 1. ಶ್ರೀಮತಿ ಕಾಳಮ್ಮ ಕೋಂ ಲೇಟ್ ಹನುಮಂತಪ್ಪ ವಯಸ್ಸು 68 ವರ್ಷ ವಾಸ: ಬಿಳಿಗನಕುಪ್ಪೆ ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ಕೆಂಚಮ್ಮ ಕೋಂ ಲೇಟ್ ಕುಳ್ಳವೆಂಕಟಬೋವಿ @ ವೆಂಕಟಬೋವಿ ರವರು ದಿನಾಂಕ: 08/04/1960 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಬಿಳಿಗನಕುಪ್ಪೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 07/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 26ನೇ ಜೂನ್ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/06/2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 290/2025

ಅರ್ಜಿದಾರರು: 1. ಶ್ರೀಮತಿ ಕಾಳಮ್ಮ ಕೋಂ ಲೇಟ್ ಹನುಮಂತಪ್ಪ ವಯಸ್ಸು 68 ವರ್ಷ ವಾಸ: ಬಿಳಿಗನಕುಪ್ಪೆ ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾತನವರಾದ ಶ್ರೀ ಕುಳ್ಳವೆಂಕಟಬೋವಿ @ ವೆಂಕಟಬೋವಿ ಬಿನ್ ಲೇಟ್ ಕೆಂಚಾಬೋವಿ ರವರು ದಿನಾಂಕ: 02/06/1952 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಬಿಳಿಗನಕುಪ್ಪೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 07/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 26ನೇ ಜೂನ್ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/06/2025

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 296/2025

ಅರ್ಜಿದಾರರು: 1. ಶ್ರೀಮತಿ ಕಾಳಮ್ಮ ಕೋಂ ಲೇಟ್ ಹನುಮಂತಪ್ಪ ವಯಸ್ಸು 68 ವರ್ಷ ವಾಸ: ಬಿಳಿಗನಕುಪ್ಪೆ ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.

ವಿರುದ್ಧ

ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಮತ್ತು ಇತರರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಮಾವನವರಾದ ಶ್ರೀ ಹನುಮಂತಬೋವಿ ಬಿನ್ ಲೇಟ್ ಕುಳ್ಳವೆಂಕಟಬೋವಿ @ ವೆಂಕಟಬೋವಿ ರವರು ದಿನಾಂಕ: 06/02/1975 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಬಿಳಿಗನಕುಪ್ಪೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 07/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

ದಿನಾಂಕ 26ನೇ ಜೂನ್ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಎಸ್.ಆರ್.ಶಶಿಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 23/06/2025

ಸಮಾಚಾರ ಸಣ್ಣದಲ್ಲ

ಹಣ್ಣು ಕದಿಯಲು ಬಂದು ಮುಖಭಂಗ

ಬೆಂಗಳೂರು: ವ್ಯಕ್ತಿಯೊಬ್ಬ ಹಲಸಿನ ಹಣ್ಣು ಕದಿಯಲು ಬಂದು ಪೇಚಿಗೆ ಸಿಲುಕಿ ನಂತರ ಮೇಲಿಂದ ಬಿದ್ದು ಗಾಯಗೊಂಡಿದ್ದಾನೆ. ತಮಿಳುನಾಡು ಮೂಲದ ಶಕ್ತಿವೇಲು(37) ಗಾಯ ಗೊಂಡವನು. ನಗರ ಪೊಲೀಸ್ ಕಚೇರಿ ಸಮೀಪದ ಅಲಿ ಅಸ್ಗರ್ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ನ ಆವರಣದಲ್ಲಿ ಹಲಸಿನ ಹಣ್ಣು ಕದಿಯಲು ಶಕ್ತಿವೇಲು ಸುಮಾರು 20 ಅಡಿ ಇರುವ ಎತ್ತರದ ಮರವೇರಿದ್ದಾನೆ. ಈ ವೇಳೆ ಸರಿಯಾಗಿ ಗ್ರಿಪ್ ಸಿಗದೆ ಮರದ ರೆಂಬೆ ಹಿಡಿದು ನೇತಾಡಿದ್ದಾನೆ. ಇದನ್ನು ಕಂಡ ಸ್ಥಳೀಯರು ವಿಧಾನಸೌಧ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಆತ ನೇತಾಡುತ್ತಿದ್ದ ಮರದ ಕೆಳಗೆ ಟಾರ್ಪಲ್ ಮಾದರಿಯ ವಸ್ತು ಹಿಡಿದು ರಕ್ಷಿಸಲು ಯತ್ನಿಸಿದ್ದು, ಕೊನೆಗೂ ಆತ ಕೆಳಗೆ ಬಿದ್ದು ಗಾಯಗೊಂಡಿದ್ದು ಆತನನ್ನು ಆಸ್ಪತ್ರೆ ದಾಖಲಿಸಲಾಗಿದ್ದು ಆತನ ಬೆನ್ನಿಗೆ ಪೆಟ್ಟು ಬಿದ್ದಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂದು ವಿಧಾನ ಸೌಧ ಠಾಣೆ ಪೊಲೀಸರು ತಿಳಿಸಿದ್ದಾರೆ

ಕಾಂಗ್ರೆಸ್‌ನ ಬೆಳವಣಿಗೆ ಗೊತ್ತಿಲ್ಲ: ಎಚ್‌ಡಿಕೆ

ಬೆಂಗಳೂರು: ಕಾಂಗ್ರೆಸ್ ಪಕ್ಷದಲ್ಲಿ ಏನು ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಆದರೆ, ಕ್ರಾಂತಿ ಆಗುತ್ತಾ ಮುಖ್ಯಮಂತ್ರಿಗಳ ಆಪ್ತರೇ ಹೇಳಿದ್ದಾರೆ. ಅದನ್ನಷ್ಟೇ ಮಾಧ್ಯಮಗಳಲ್ಲಿ ಗಮನಿಸಿದ್ದೇನೆ ಎಂದು ಕೇಂದ್ರ ಸಚಿವ

ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಕೆ.ಎನ್. ರಾಜಣ್ಣ ಅವರು ಸೆಪ್ಟೆಂಬರ್ ತಿಂಗಳಲ್ಲಿ ಬದಲಾವಣೆ ಆಗುತ್ತದೆ, ಕ್ರಾಂತಿ ನಡೆಯುತ್ತದೆ ಎಂದು ಹೇಳಿದ್ದಾರೆ. ಅದು ಕ್ರಾಂತಿಯೋ ಏನೋ ನನಗೆ ಗೊತ್ತಿಲ್ಲ. ಅದು ಏನು ಎಂಬುದನ್ನು ರಾಜಣ್ಣ ಅಥವಾ ಸಿಎಂ ಅವರೇ ಹೇಳಬೇಕು. ಅವರ ಪಕ್ಷದ ಬೆಳವಣಿಗೆ ಬಗ್ಗೆ ನನಗೆ ಹೇಗೆ ಗೊತ್ತಾಗಲಿದೆ? ಅಶೋಕ್ ದೆಹಲಿಯ ನನ್ನ ಮನೆಗೆ ಅಶೋಕ್ ಬಂದಿದ್ದರು. ನಾವು ಅವರು ಅಣ್ಣತಮ್ಮಂದಿರು. ರಾಜಕೀಯವಾಗಿ ಯಾವುದೇ ಚರ್ಚೆಯಾಗಿಲ್ಲ ಎಂದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜ್ಯಾದ್ಯಂತ ಥಿಯೇಟರ್‌ಗಳಲ್ಲಿ ತೆರೆಕಂಡ 'ತಿಮ್ಮನ ಮೊಟ್ಟೆಗಳು' ಚಲನಚಿತ್ರ

ಸುದ್ದಿ

ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ

ಕೆಂಪೇಗೌಡರು ಸಮ ಸಮಾಜದ ಹರಿಕಾರರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಂಪೇಗೌಡರು ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣದ ದೂರದೃಷ್ಟಿಯ ಮುತ್ಸದ್ದಿ ನಾಯಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಬಿಎಂಪಿ ಹಾಗೂ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಇವರ ವತಿಯಿಂದ ಬಾಬು ಜಗಜೀವನ ರಾಮ್ ಭವನ ದಲ್ಲಿ ಆಯೋಜಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ನಗರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯಲು ಕೆಂಪೇಗೌಡರೇ ಮೂಲ ಕಾರಣ. ವಿಶ್ವಮಟ್ಟದಲ್ಲಿ ಬೆಂಗಳೂರು ಅತಿವೇಗದಲ್ಲಿ ಬೆಳೆಯುತ್ತಿರುವ ನಗರ. ಎಲ್ಲ ಜನರನ್ನೊಳಗೊಂಡ ಅಭಿವೃದ್ಧಿಗೊಳಿಸುವ, ಎಲ್ಲ ಸಮುದಾಯಗಳಿಗೂ ನ್ಯಾಯ ಒದಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಕೈಗೊಂಡಿದ್ದರು. ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣವೇ ನಮ್ಮ ಸಂವಿಧಾನದ ಆಶಯ. 500 ವರ್ಷಗಳ ಹಿಂದೆಯೇ ನಾಡಪ್ರಭು ಕೆಂಪೇಗೌಡರು ಎಲ್ಲರನ್ನೊಳಗೊಂಡ ಸಮಾಜ ನಿರ್ಮಿಸುವ ದೂರದೃಷ್ಟಿಯನ್ನು ಹೊಂದಿದ್ದ ಮುತ್ಸದ್ದಿ ನಾಯಕರಾಗಿದ್ದರು. ವೃತ್ತಿಯಾಧಾರಿತ ಪೇಟೆಗಳನ್ನು ನಿರ್ಮಿಸಿ, ಬೆಂಗಳೂರನ್ನು ವಾಣಿಜ್ಯ ಕೇಂದ್ರವಾಗಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ನೀಡಲಾಗುವ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾದ ಭಾರತೀಯ ವಿಜ್ಞಾನ ಸಂಸ್ಥೆಯ ಕೌಶಾಲ್ ವರ್ಮಾ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವ್ಯವಸ್ಥಾಪಕ ನಿರ್ದೇಶಕರಾದ ಹರಿ ಮರಾರ್, ಮೈಸೂರು ಸ್ಯಾಂಡಲ್ ಸೋಪ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕರಾದ ಪ್ರಶಾಂತ್ ಪಿ. ಕೆ. ಎಂ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಸಚಿವರಾದ ಕೃಷ್ಣಬೈರೇಗೌಡ, ಶಿವರಾಜ್ ತಂಗಡಗಿ, ಕೆ. ಎಚ್. ಮುನಿಯಪ್ಪ, ಎಚ್.ಸಿ ಮಹದೇವಪ್ಪ, ಸುತ್ತೂರು ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀಗಳಾದ ಡಾ. ನಿರ್ಮಲಾನಂದ ಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಬಮುಲ್ ಅಧ್ಯಕ್ಷರಾದ ಡಿ. ಕೆ . ಸುರೇಶ್, ಬಿಡಿಎ ಅಧ್ಯಕ್ಷರಾದ ಎನ್. ಎ ಹ್ಯಾರಿಸ್ ಸೇರಿ ಹಲವರಿದ್ದರು.

ನಾಡಪ್ರಭು ಕೆಂಪೇಗೌಡರ 516 ನೇ ಜಯಂತಿ ಅಂಗವಾಗಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪ್ರತಿಮೆಗೆ ಶುಕ್ರವಾರ ಪುಷ್ಪನಮನ ಸಲ್ಲಿಸಿದರು. ಈ ವೇಳೆ ನಿರ್ಮಲಾನಂದನಾಥ ಸ್ವಾಮೀಜಿ ಇದ್ದರು.

ಸುಮನಹಳ್ಳಿ ಬಳಿ ನೀಡಿರುವ ಐದು ಎಕರೆ ಜಾಗದಲ್ಲಿ ಕೆಂಪೇಗೌಡ ಭವನ ನಿರ್ಮಾಣಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ಆದಿಚುಂಚನಗಿರಿ ಮಠದ ಶ್ರೀಗಳಾದ ನಿರ್ಮಲಾ ನಂದನಾಥ ಸ್ವಾಮೀಜಿ, ಸಚಿವ ಶಿವರಾಜ್ ತಂಗಡಗಿ, ಬಮೂಲ್ ಅಧ್ಯಕ್ಷ, ಡಿ.ಕೆ. ಸುರೇಶ್, ಸ್ಫಟಿಕಕಪುರಿ ಮಠದ ಶ್ರೀ ನಂಜಾವಧೂತ ಸ್ವಾಮೀಜಿಗಳು, ಶಾಸಕರಾದ ಬಾಲಕೃಷ್ಣ ಸೇರಿ ಹಲವರಿದ್ದರು.

ಹುಟ್ಟಿದ್ದು ಒಕ್ಕಲಿಗರಾಗಿ, ಬದುಕಿದ್ದು ವಿಶ್ವಮಾನವರಾಗಿ: ಡಿಸಿಎಂ

ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಮಾತನಾಡಿ, ಹುಟ್ಟಿದಾಗ ಭೂಮಿ ಮೇಲಿರುತ್ತೇವೆ. ಸತ್ತಾಗ ಭೂಮಿ ಕೆಳಗಿರುತ್ತೇವೆ. ಆದರೆ ನಮ್ಮ ಸಾಧನೆಗಳು ಮೇಲಿರುತ್ತವೆ. ಅದೇ ರೀತಿ ಕೆಂಪೇಗೌಡರ ಸಾಧನೆಗಳು ಶಾಶ್ವತ. ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗರಾಗಿ ಆದರೆ ಬದುಕು ನಡೆಸಿದ್ದು, ಸಮಾಜಕ್ಕೆ ಸಂದೇಶ ನೀಡಿದ್ದು ವಿಶ್ವಮಾನವರಾಗಿ ಎಂದು ಹೇಳಿದರು. ಒಕ್ಕಲಿಗರಿಗೆ ಒಂದು ಸಂದೇಶ ನೀಡಲು ಬಯಸುತ್ತೇನೆ. ನಾವುಗಳು ಯಾರೂ ಸಹ ಇಂತಹದ್ದೇ ಜಾತಿಯಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡು ಹುಟ್ಟುವುದಿಲ್ಲ. ರಾಜಕೀಯದಲ್ಲಿ ಧರ್ಮ ಇರಬೇಕೆ ಹೊರತು, ಧರ್ಮದಲ್ಲಿ ರಾಜಕೀಯ ಇರಬಾರದು ಎನ್ನುವ ಮಾತನ್ನು ಮರೆಯಬಾರದು. ಕೆಂಪೇಗೌಡರು ಎಲ್ಲಾ ಸಮುದಾಯಕ್ಕೆ ಸೇರಿದವರು. ಇವರು ನಾಡಿನ ಆಸ್ತಿ, ಎಲ್ಲಾ ಸಮಾಜದ ಆಸ್ತಿ ಎಂದು ಹೇಳಿದರು.

ಬೆಂಗಳೂರು ನಗರದ ಅಭಿವೃದ್ಧಿ ತುಂಬಾ ಸರಳವಾದ ಕೆಲಸವಲ್ಲ. ಇಲ್ಲಿನ ಜನಸಂಖ್ಯೆ, ವಾಹನಗಳ ಸಂಖ್ಯೆ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಹೊಸ ರೂಪ ನೀಡಬೇಕು ಎಂದು ನಾನು ಸಚಿವನಾದ ದಿನದಿಂದ ಪ್ರಯತ್ನ ಮಾಡುತ್ತಿದ್ದೇನೆ. ಸುಮಾರು 40 ಕಿಲೋ ಮೀಟರ್ ನಷ್ಟು ಟನಲ್ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದು, 17 ಸಾವಿರ ಕೋಟಿ ವೆಚ್ಚದಲ್ಲಿ ಟೆಂಡರ್‌ಗೆ ಸಿದ್ಧತೆ ಮಾಡುತ್ತಿದ್ದೇವೆ. 118 ಕಿ.ಮೀ ಮೇಲ್ಸೇತುವೆ ನಿರ್ಮಾಣಕ್ಕೆ ತೀರ್ಮಾನ ಮಾಡಿದ್ದೇವೆ. ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಸುಮಾರು 1 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ನಾವು ಸಿದ್ಧತೆ ಮಾಡಿಕೊಂಡಿದ್ದೇವೆ. ಬೆಂಗಳೂರು ವಿವಿ ವ್ಯಾಪ್ತಿಯಲ್ಲಿ 100 ಕೋಟಿ ವೆಚ್ಚದಲ್ಲಿ ಸಂಶೋಧನಾ ಕೇಂದ್ರ ಕೂಡ ನಿರ್ಮಾಣ ಮಾಡಲಾಗುತ್ತಿದೆ. ಕೆಂಪೇಗೌಡರ ಹೆಸರಿನಲ್ಲಿ ಭವ್ಯ ಕಟ್ಟಡ ನಿರ್ಮಾಣಕ್ಕೆ ಜಿಬಿಸಿಯಿಂದ 100 ಕೋಟಿ ಮೀಸಲಿಟ್ಟಿದ್ದೇವೆ ಎಂದರು.

ಜಯಂತಿಗಳನ್ನು ಆಚರಣೆಗೆ ತಂದಿದ್ದು ನಾವು

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಟ್ಟಿದ್ದು ನಮ್ಮ ಸರಕಾರ. ಸರಕಾರದ ವತಿಯಿಂದ 33 ಜಯಂತಿಗಳನ್ನು ಆಚರಿಸಲಾಗುತ್ತಿದ್ದು, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಜಯಂತಿಗಳನ್ನು ನಮ್ಮ ಸರಕಾರ ಜಾರಿಗೆ ತಂದಿರುವ ಬಗ್ಗೆ ಅಭಿಮಾನ, ಗೌರವವಿದೆ. ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ಕೃಷ್ಣ ಜಯಂತಿ, ಮಹಾವೀರ ಜಯಂತಿ, ವಾಮನ ಜಯಂತಿ ಸೇರಿದಂತೆ ಮುಖ್ಯವಾದ ಜಯಂತಿಗಳ ಆಚರಣೆಯನ್ನು ಜಾರಿಗೆ ತಂದಿದ್ದು ನಮ್ಮ ಸರಕಾರ. ಕೆಂಪೇಗೌಡರ ಆಡಳಿತ ಜನಪರವಾಗಿದ್ದು, ಅವರನ್ನು ನೆನೆದು ಸ್ಫೂರ್ತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ಕೆಂಪೇಗೌಡರ ಬಗ್ಗೆ ಅಗಾಧ ಗೌರವವನ್ನು ಇಟ್ಟುಕೊಂಡಿದ್ದು, ಅವರ ಆಡಳಿತದ ವೈಖರಿ ನಮ್ಮೆಲ್ಲರಿಗೂ ಸ್ಫೂರ್ತಿ. ಎಲಾ ಜಾತಿಗಳಿಗೂ ಸಾಮಾಜಿಕ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

> ಹಂಪಿ ಬಹಳ ಪ್ರವರ್ಧಮಾನಕ್ಕೆ ಬಂದಿದ್ದ ಕಾಲದಲ್ಲಿ ಪ್ರೇರಣೆ ಪಡೆದು ಬೆಂಗಳೂರನ್ನು ಅಭಿವೃದ್ಧಿಪಡಿಸುವ ಉದ್ದೇಶ ಕೆಂಪೇಗೌಡರಿಗಿತ್ತು. ಆದ್ದರಿಂದ ಬೆಂಗಳೂರು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ, ಸ್ಟಾರ್ಟ್ ಅಪ್ ರಾಜಧಾನಿ , ಶೈಕ್ಷಣಿಕ ಹಾಗೂ ಆರೋಗ್ಯ ಕೇಂದ್ರವಾಗಿದ್ದರೆ ಅದಕ್ಕೆ ಈ ನಗರದ ಅಡಿಪಾಯ ಹಾಕಿದ ಕೆಂಪೇಗೌಡರು ಕಾರಣ. ಇನ್ನಷ್ಟು ಅಭಿವೃದ್ಧಿ ಮಾಡುವುದು ನಮ್ಮ ಕರ್ತವ್ಯ.
>
> ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೆಂಪೇಗೌಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತು

ಬ್ರ್ಯಾಂಡ್ ಬೆಂಗಳೂರಿಗೆ ಕೆಂಪೇಗೌಡ ಪರಿಕಲ್ಪನೆಯೇ ಅಡಿಪಾಯ

ಬೆಂಗಳೂರು: ಕೆಂಪೇಗೌಡ ಅವರು ಹಾಕಿಕೊಟ್ಟ ಅಡಿಪಾಯದ ಮೇಲೆ ನಾವು ಬ್ರ್ಯಾಂಡ್ ಬೆಂಗಳೂರು ಮಾಡುವ ಪರಿಕಲ್ಪನೆಯಿದೆ. ನಾವೆಲ್ಲರೂ ಸೇರಿ, ಬಲಿಷ್ಠ ಬೆಂಗಳೂರು, ಶಾಂತಿಯ ಬೆಂಗಳೂರು, ಗ್ರೀನ್ ಬೆಂಗಳೂರು, ಸುರಕ್ಷಿತ ಬೆಂಗಳೂರು ನಿರ್ಮಿಸೋಣ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಡಾ. ರಾಜಕುಮಾರ್ ಸಭಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 516ನೇ ಜಯಂತ್ಯುತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರಿಗೆ ಸೇವೆ ಮಾಡಿದ ಗಣ್ಯರನ್ನು ಗುರುತಿಸಿ ಅವರಿಗೆ ಅಭಿನಂದನೆ ಸಲ್ಲಿಸಿದ್ದೇವೆ. ಮನುಷ್ಯನ ಹುಟ್ಟು ಆಕಸ್ಮಿಕ ಸಾವು ಅನಿವಾರ್ಯ, ಜನನ ಉಚಿತ ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯೆ ನಾವು ಏನು ಸಾಧನೆ ಮಾಡುತ್ತೇವೆ ಎಂಬುದು ಬಹಳ ಮುಖ್ಯ ಎಂದು ಹೇಳಿದರು.

ಕೆಂಪೇಗೌಡರು ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಿದ್ದೇವೆ. ಅವರು ಎಲ್ಲಾ ವರ್ಗದವರಿಗೆ ಆದ್ಯತೆ ನೀಡಿ ಅನೇಕ ಪೇಟೆ ರಚಿಸಿದರು. ಇದು ಅವರ ದೂರದೃಷ್ಟಿಗೆ ಸಾಕ್ಷಿ. ರಾಜ್ಯ, ದೇಶ, ವಿದೇಶದ ಜನ ಈ ನಗರದಲ್ಲಿ ಈಗ ವಾಸಿಸುತ್ತಿದ್ದಾರೆ. ಬೆಂಗಳೂರನ್ನು ಸ್ವಚ್ಛ ಮಾಡುವವರಿಂದ ಹಿಡಿದು ಈ ನಗರಕ್ಕೆ ಸೇವೆ ಸಲ್ಲಿಸಿದ ಅನೇಕ ಹಿರಿಯರಿಗೆ ಕೆಂಪೇಗೌಡರ ಹೆಸರಿನಲ್ಲಿ ಪ್ರಶಸ್ತಿ ನೀಡಿ ಗೌರವಿಸುತ್ತಿದ್ದೇವೆ. ಕಲೆ, ಮಾಧ್ಯಮ, ವೈದ್ಯಕೀಯ, ವಿಜ್ಞಾನ, ಕೈಗಾರಿಕೆ ಸೇರಿದಂತೆ ಎಲ್ಲಾ ರಂಗದ ಸಾಧಕರಿಗೆ ಈ ಪ್ರಶಸ್ತಿ ನೀಡಿದ್ದೇವೆ ಎಂದು ತಿಳಿಸಿದರು.

ಜನ ನಮಗೆ 140 ಸಂಖ್ಯಾಬಲದ ಸರಕಾರ ನೀಡಿದ್ದಾರೆ. ಜನರಿಗಾಗಿ ಪ್ರಾಮಾಣಿಕ ಸೇವೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ಸುರಂಗ ರಸ್ತೆಗೆ 37 ಸಾವಿರ ಕೋಟಿ, ಮೇಲ್ಸೇತುವೆಗೆ 17 ಸಾವಿರ ಕೋಟಿ, ಸ್ವಚ್ಛತೆಗೆ 15 ಸಾವಿರ ಕೋಟಿ ಸೇರಿದಂತೆ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ 1 ಲಕ್ಷ ಕೋಟಿ ಮೊತ್ತದ ಯೋಜನೆ ರೂಪಿಸಿದ್ದೇವೆ. ಇದೇ ವೇಳೆ ಪ್ರವಾಸೋದ್ಯಮ ಆಕರ್ಷಿಸಲು ಸ್ಕೈಡೆಕ್ ನಿರ್ಮಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ತಾಂತ್ರಿಕವಾಗಿ ಸಾಧ್ಯತೆ ನೋಡಿಕೊಂಡು ಇದರ ಜಾಗ ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು.

ಡಾ.ರಾಜಕುಮಾರ್ ಸಭಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 516ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

> ಯೋಗಿ ಎಂದು ಕರೆಸಿಕೊಳ್ಳುವುದಕ್ಕಿಂತ, ಉಪಯೋಗಿ ಎಂದು ಕರೆಸಿಕೊಳ್ಳುವುದು ಲೇಸು. ನಾವು ಯಾರನ್ನು ಮೆಚ್ಚಿಸದಿದ್ದರೂ ನಮ್ಮ ಆತ್ಮಸಾಕ್ಷಿ ಮೆಚ್ಚುವಂತಹ ಕೆಲಸ ಮಾಡಿದರೆ ಸಾಕು. ಇಲ್ಲಿ ಪ್ರಶಸ್ತಿಗೆ ಭಾಜನರಾದ ಎಲ್ಲರಿಗೂ ಅಭಿನಂದನೆಗಳು. ಪ್ರಶಸ್ತಿ ಪುರಸ್ಕೃತರು ಹಾಗೂ ಅವರ ಕುಟುಂಬದವರ ಮುಖದಲ್ಲಿ ನಾನು ಬಹಳ ಸಂತೋಷ ಕಂಡಿದ್ದೇನೆ. ನಿಮ್ಮ ಸೇವೆಯನ್ನು ನಾವು ಎಂದೂ ಮರೆಯುವುದಿಲ್ಲ.
>
> -ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯ ಅಂಗವಾಗಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಅವರು ಶುಕ್ರವಾರ ಮೇಖ್ರಿ ವೃತ್ತದ ಗಡಿಗೋಪುರದಲ್ಲಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪುರಜ್ಯೋತಿ ಬೆಳಗಿಸಿದರು. ಈ ವೇಳೆ ಮಾಜಿ ಸಚಿವ ಡಾ.ಅಶ್ವತ್ಥನಾರಾಯಣ ಮತ್ತು ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

ದಲಿತರ ಭೂಮಿ ತೆರವಿಗೆ ಹುನ್ನಾರ

ಬೆಂಗಳೂರು: ಮಹದೇವಪುರ ಕ್ಷೇತ್ರದ ಬಿದರಹಳ್ಳಿ ಹೋಬಳಿಯ ಕಾಡುಗೋಡಿ ಬಳಿ ದಲಿತರನ್ನು ಒಕ್ಕಲೆಬ್ಬಿಸಿ ಮೌಲ್ಯಯುತ ಜಮೀನು ಕಿತ್ತುಕೊಂಡು ಬಂಡವಾಳ ಮಾಡಿಕೊ ಳ್ಳಲು ಹುನ್ನಾರ ನಡೆದಿದೆ ಎಂದು ರಾಜ್ಯ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದೆ ಇದು ಅರಣ್ಯ ಭೂಮಿ ಇದ್ದಿರಬಹುದು. ಒಮ್ಮೆ ಅದನ್ನು ಕಂದಾಯ ಭೂಮಿ ಎಂದು ಕೊಟ್ಟ ಮೇಲೆ ಕಂದಾಯ ಇಲಾಖೆ ಅದನ್ನು ವಿತರಿಸಿದೆ. ರೈಲ್ವೆ, ಕೆಐಎಡಿಬಿಗೂ ಜಾಗ ಕೊಟ್ಟಿದ್ದಾರೆ. ಕಂದಾಯ ಇಲಾಖೆ ಸಚಿವರು, ಕೈಗಾರಿಕಾ ಸಚಿವರು, ಅರಣ್ಯ ಸಚಿವರ ಸಮ್ಮುಖದಲ್ಲಿ ಮುಖ್ಯಮಂತ್ರಿಗಳು ಪಟ್ಟಾದಾರರ ಸಭೆ ಕರೆದು ಅರಣ್ಯ ಇಲಾಖೆ ಕಾರ್ಯಾಚರಣೆ ತಕ್ಷಣ ನಿಲ್ಲಿಸಬೇಕು. ಸರಕಾರವು ಮಾಫಿಯ ಪರ ಇದೆಯೇ ಅಥವಾ ದಲಿತರ ಪರ ಇದೆಯೇ ಎಂಬ ಬಗ್ಗೆ ನಿಲುವು ಪ್ರಕಟಿಸಬೇಕು ಎಂದರು.

ಪರಿಸರದೊಂದಿಗೆ ಅಭಿವೃದ್ಧಿಗೆ ಬದ್ಧ: ಡಾ.ಜಯಕರ

ಬೆಂಗಳೂರು: ಜ್ಞಾನಭಾರತಿಯಲ್ಲಿ ವಿದ್ಯಾರ್ಥಿ ಕೇಂದ್ರಿತ ಅಭಿವೃದ್ಧಿಗೆ ಬೆಂಗಳೂರು ವಿಶ್ವವಿದ್ಯಾಲಯ ಬದ್ಧವಾಗಿದ್ದು, ಪರಿಸರ ಪ್ರಜ್ಞೆ ಮತ್ತು ಕಾಳಜಿಯೊಂದಿಗೆ ಕಾನೂನಾತ್ಮಕವಾಗಿ ಸರಕಾರದ ಎಲ್ಲಾ ನಿಯಮಾವಳಿಗಳನ್ನು ಪಾಲಿಸಿಕೊಂಡು ಶೈಕ್ಷಣಿಕ ಭವನ ಮತ್ತು ಸಂಶೋಧನಾ ಭವನ ನಿರ್ಮಿಸುವುದಾಗಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಜಯಕರ ಎಸ್.ಎಂ ಸ್ಪಷ್ಟಪಡಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಶಿಕ್ಷಣದ ಪರಿಕಲ್ಪನೆ ಬದಲಾಗುತ್ತಿದೆ. ಸಂಶೋಧನೆಗಳಿಗೆ ಆದ್ಯತೆ ನೀಡಬೇಕು ಸಂಶೋಧನೆಗಳ ಗುಣಮಟ್ಟ ಹೆಚ್ಚಿಸಬೇಕಾಗಿದೆ. ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯ ಮತ್ತು ಗುಣಮಟ್ಟದ ಕಟ್ಟಡ ಸಂಶೋಧನಾ ವಿಭಾಗಗಳನ್ನು ನಿರ್ಮಿಸಬೇಕಾದ ಜವಾಬ್ದಾರಿ ವಿಶ್ವವಿದ್ಯಾಲಯ ಹೊಂದಿದೆ. ಅದರಂತೆ ವಿಶ್ವವಿದ್ಯಾಲಯದ ತಜ್ಞರ ಸಮಿತಿ ಸಂಶೋಧನಾ ಭವನ ಮತ್ತು ಶೈಕ್ಷಣಿಕ ಭವನ ನಿರ್ಮಾಣಕ್ಕೆ ಸೂಕ್ತ ಸ್ಥಳವನ್ನು ಸೂಚಿಸಿದೆ. ಮರಗಳ ಸಂಖ್ಯೆ ಕಡಿಮೆ ಇದ್ದು,ಶೈಕ್ಷಣಿಕವಾಗಿ ವೈಜ್ಞಾನಿಕವಾಗಿ ಸೂಕ್ತವಾಗಿರುವ ಸ್ಥಳವನ್ನು ನಿರ್ಮಾಣಕ್ಕೆ ಆಯ್ಕೆ ಮಾಡಲಾಗಿದೆ ಎಂದರು.

ವಿಶ್ವವಿದ್ಯಾಲಯ 1200 ಎಕರೆ ವಿಸ್ತೀರ್ಣ ಹೊಂದಿದ್ದು ಶಿಕ್ಷಣಕ್ಕೆ,ಸಂಶೋಧನೆಗೆ ಮೀಸಲಾಗಿರುವುದು. ವಿಶ್ವವಿದ್ಯಾಲಯದ ವತಿಯಿಂದ ಜ್ಞಾನಭಾರತಿಯಲ್ಲಿ 6 ಲಕ್ಷಕ್ಕಿಂತ ಹೆಚ್ಚು ಮರಗಳನ್ನು ನೆಡುವ ಮೂಲಕ ಕಿರು ಅರಣ್ಯ ಸೃಷ್ಟಿಸಲಾಗಿದೆ. ವಿಶ್ವವಿದ್ಯಾಲಯ ಸದಾ ಪರಿಸರ ಕಾಳಜಿ ಮತ್ತು ಪರಿಸರ ಸಂರಕ್ಷಣೆಯ ದೃಷ್ಟಿಯಿಂದಲೇ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದೆ. ಈಗ ನಿರ್ಮಾಣವಾಗುತ್ತಿರುವ ಭವನವು ಯಾವುದೇ ಜೈವಿಕ ಉದ್ಯಾನವನದಲ್ಲಿ ನಿರ್ಮಿಸುತ್ತಿಲ್ಲ,ಅಲ್ಲಿ ಯಾವುದೇ ಪಾರಂಪರಿಕ ಮರಗಳಿಲ್ಲ.419 ಮರಗಳನ್ನು ಕಡಿಯಲಾಗುತ್ತಿದೆ ಎಂದು ಬಿಂಬಿಸಲಾಗಿದೆ ವಾಸ್ತವವಾಗಿ 282 ಮರಗಳನ್ನು ಕಡಿಯಲಾಗುತ್ತಿದ್ದು ಅದರಲ್ಲಿ 169 ನೀಲಗಿರಿ ಮತ್ತು ಅಕೇಶಿಯ ಮರಗಳಾಗಿದೆ.ಉಳಿದ 137 ಮರಗಳನ್ನು ಬಫರ್ ಜೋನ್‌ನಲ್ಲಿ ಉಳಿಸಲಾಗುತ್ತದೆ. ಮತ್ತು ಸಣ್ಣ ಮರಗಳನ್ನು ಹತ್ತಿರದ ಸ್ಥಳಕ್ಕೆ ಸ್ಥಳಾಂತರಿಸಲಾಗುವುದುಕಾನೂನಾತ್ಮಕವಾಗಿ,ನಿಯಮಾವಳಿ ಅನುಸಾರ ವೈಜ್ಞಾನಿಕವಾಗಿ ನಾವು ಕಟ್ಟಡ ನಿರ್ಮಿಸುತ್ತೇವೆ ಎಂದು ತಿಳಿಸಿದರು.

> ವಿಶ್ವವಿದ್ಯಾಲಯದ ಎಲ್ಲರೂ ಒಗ್ಗಟ್ಟಾಗಿದ್ದೇವೆ. ವಿಶ್ವವಿದ್ಯಾಲಯವು ಶೈಕ್ಷಣಿಕ ಸ್ಥಳವಾಗಿದ್ದು ಸಾರ್ವಜನಿಕ ತಾಣವಲ್ಲ. ಸಾರ್ವಜನಿಕರು ಇಲ್ಲಿ ಬಂದು ದಬ್ಬಾಳಿಕೆ ಮಾಡುವುದನ್ನು ವಿಶ್ವವಿದ್ಯಾಲಯ ಸಹಿಸುವುದಿಲ್ಲ. ವಾಯು ವಿಹಾರಿಗಳ ಸಂಘದ ಕುರಿತು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ವಿಶ್ವವಿದ್ಯಾಲಯದಲ್ಲಿ ಯಾವುದೇ ಪ್ರತಿಭಟನೆಗಳಿಗೆ ಅವಕಾಶವಿಲ್ಲ .ಯಾವುದೇ ರ‍್ಯಾಲಿ ನಡೆಸಲು ಅನುಮತಿ ಇಲ್ಲ ಈ ಸಂಬಂಧ ಪೊಲಿಸರ ಗಮನಕ್ಕೆ ತರಲಾಗಿದ್ದು ಸೂಕ್ತ ವ್ಯವಸ್ಥೆಗೆ ಸೂಚಿಸಲಾಗಿದೆ.
>
> -ಡಾ. ಜಯಕರ ಎಸ್.ಎಂ, ಬೆಂಗಳೂರು ವಿವಿ ಕುಲಪತಿ

ಬದಲಾವಣೆ ಬಗ್ಗೆ ರಾಜಣ್ಣಗೆ ಗೊತ್ತಿರಬೇಕು: ಪರಂ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುವ ಕ್ರಾಂತಿಯ ಬಗ್ಗೆ ರಾಜಣ್ಣಗೆ ಮಾಹಿತಿ ಇರಬೇಕು. ನನಗೆ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸೆಪ್ಟೆಂಬರ್‌ನಲ್ಲಿ ಕ್ರಾಂತಿ ನಡೆಯುವ ಬಗ್ಗೆ ಕೆ.ಎನ್. ರಾಜಣ್ಣಗೆ ಮಾಹಿತಿ ಇರಬೇಕು. ಇಲ್ಲದಿದ್ದರೆ ಹಾಗೆ ಹೇಳುತ್ತಿರಲಿಲ್ಲ. ಅವರಿಗೆ ಯಾವ ಮಾಹಿತಿ ಇದೆ ಗೊತ್ತಿಲ್ಲ. ಸೆಪ್ಟೆಂಬರ್‌ನಲ್ಲಿ ಕ್ರಾಂತಿಯಾಗುತ್ತೆ ಅಂದಿದ್ದಾರೆ. ಅವರಿಗೆ ಯಾವುದೋ ಮಾಹಿತಿ ಇರಬೇಕು. ಇಲ್ಲದಿದ್ದರೆ ಆ ರೀತಿ ಅವರು ಜವಾಬ್ದಾರಿ ಸ್ಥಾನದಲ್ಲಿ ಇದ್ದು ಹೇಳುತ್ತಿರಲಿಲ್ಲ. ಯಾವ ಕ್ರಾಂತಿ ಅನ್ನೋದನ್ನು ಅವರನ್ನೇ ಕೇಳಿ. ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರು.

ಸಚಿವರ ಬದಲಾವಣೆ ಎಂಬ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರಿಗಿರುವ ಮಾಹಿತಿ ಪ್ರಕಾರ ಹೇಳಿರಬಹುದು. ನನಗೆ ಯಾವುದೇ ಮಾಹಿತಿ ಇಲ್ಲ. ನನಗೆ ತಿಳಿದಂತೆ ಯಾವುದೇ ಬದಲಾವಣೆ ಆಗಲ್ಲ. ಮುಂದೇನಾ ಗುತ್ತೆ ಅಂತ ಹೇಗೆ ಹೇಳಲು ಸಾಧ್ಯ. ಮುಂದೇನು ಅಂತ ಹೈಕಮಾಂಡ್ ತೀರ್ಮಾನಿಸುತ್ತದೆ ಎಂದರು. ಸಿಎಂ

ಗ್ರಿಪ್ ಕಳೆದುಕೊಂಡಿಲ್ಲ: ಮುಖ್ಯಮಂತ್ರಿ ಗಳು ಹಿಡಿತ ಕಳೆದುಕೊಂಡಿದ್ದಾರೆ ಎನ್ನುವ ಹೇಳಿಕೆಗೆ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಅವರು ಯಾವುದೇ ಗ್ರಿಪ್ ಕಳೆದುಕೊಂಡಿಲ್ಲ. ಮುಖ್ಯ ಮಂತ್ರಿಗಳು ಈಗ ಆಡಳಿತ ನಡೆಸುತ್ತಿಲ್ಲವೇ? ಸಣ್ಣಪುಟ್ಟ ವಿಚಾರಗಳಿರುತ್ತವೆ, ಬಗೆಹರಿಸುತ್ತಾರೆ. ಬಿಜೆಪಿಯವರು ಹಿಂದೆಯೂ ಟೀಕೆ ಮಾಡುತ್ತಿದ್ದರು. ಈಗಲೂ ಮಾಡುತ್ತಲೇ ಇದ್ದಾರೆ. ಸಿದ್ದರಾಮಯ್ಯ ಅವರಿಗೆ ಸ್ವಲ್ಪ ವಯಸ್ಸಾಗಿರು ವುದರಿಂದ ಸ್ವಲ್ಪ ಸಾಫ್ಟ್ ಆಗಿರಬಹುದು. ಅವರು ಎಲ್ಲಿಯೂ ಗ್ರಿಪ್ ಕಳೆದುಕೊಂಡಿಲ್ಲ ಎಂದು ಹೇಳಿದರು.

ಅನ್ಯರಾಜ್ಯಗಳ ಪೊಲೀಸ್ ಕಾನ್‌ಸ್ಟೇಬಲ್‌ಗಳ ಟೋಪಿ ವೀಕ್ಷಿಸಿದ ಪರಮೇಶ್ವರ್

ಕಾನ್‌ಸ್ಟೇಬಲ್ ಕ್ಯಾಪ್ ಬದಲಾವಣೆಗೆ ಚಿಂತನೆ

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆ ಯಲ್ಲಿ ಕಾನ್‌ಸ್ಟೇಬಲ್‌ಗಳು ಬಳಸುತ್ತಿರುವ ಬ್ರಿಟಿಷರ ಕಾಲದ ಕ್ಯಾಪ್‌ಗಳ ಬದಲಾವಣೆಯ ಚರ್ಚೆಗಳು ಚಾಲ್ತಿಯಲ್ಲಿರುವಾಗ, ಅನ್ಯ ರಾಜ್ಯಗಳಲ್ಲಿ ಪೊಲೀಸ್ ಕಾನ್‌ಸ್ಟೇಬಲ್‌ಗಳು ಧರಿಸುತ್ತಿರುವ ಟೋಪಿಗಳ ಮಾದರಿಗಳನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವೀಕ್ಷಿಸಿದ್ದಾರೆ.

ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಭೆ ನಡೆಸಿದ ಅವರು, ಮಹಾರಾಷ್ಟ್ರ, ದೆಹಲಿ, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಪೊಲೀಸ್ ಕಾನ್‌ಸ್ಟೇಬಲ್‌ಗಳು ಬಳಸುತ್ತಿರುವ ಕ್ಯಾಪ್‌ಗಳನ್ನು ಪರಿಶೀಲಿಸಿದರು.

ರಾಜ್ಯ ಪೊಲೀಸ್ ಕಾನ್‌ಸ್ಟೇಬಲ್‌ಗಳ ಟೋಪಿ ಬದಲಿಸುವಂತೆ ಹಲವು ವರ್ಷಗಳಿಂದಲೂ ಪೊಲೀಸ್ ಸಿಬ್ಬಂದಿ ಬೇಡಿಕೆಯಿಡುತ್ತಲೇ ಬಂದಿದ್ದರಾದರೂ, ಇದುವರೆಗೂ ಬೇಡಿಕೆ ಈಡೇರಿಲ್ಲ. ಹಳೆಯ ಮಾದರಿಯ ಸ್ಲೋಚ್ ಹ್ಯಾಟ್ ಬದಲಿಗೆ ಪೀಕ್ ಕ್ಯಾಪ್ ನೀಡುವುದರ ಕುರಿತು ಚರ್ಚೆ ನಡೆಸಿ ವರದಿ ನೀಡುವಂತೆ ಇತ್ತೀಚೆಗೆ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರು ಪೊಲೀಸ್ ಕಿಟ್ ನಿರ್ದಿಷ್ಟತಾ ಸಮಿತಿಗೆ ಸೂಚಿಸಿದ್ದರು.

ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ನಾನಾ ರಾಜ್ಯ ಕಾನ್‌ಸ್ಟೇಬಲ್‌ಗಳ ಟೋಪಿಗಳನ್ನು ಗೃಹ ಸಚಿವ ಪರಮೇಶ್ವರ್ ವೀಕ್ಷಣೆ ಮಾಡಿದರು.

ಸಾರ್ವಜನಿಕರ ಸುರಕ್ಷತೆಗಾಗಿ ಪೊಲೀಸ್ ಇಲಾಖೆ ವಿನೂತನ ಉಪಕ್ರಮ

ಇನ್ಮುಂದೆ ಮನೆ ಮನೆಗೆ ಪೊಲೀಸ್

ಬೆಂಗಳೂರು: ಸಾರ್ವಜನಿಕರ ಸುರಕ್ಷತೆಗಾಗಿ ಮನೆ ಮನೆಗೆ ಪೊಲೀಸ್ ಎಂಬ ವಿನೂತನ ಉಪಕ್ರಮವನ್ನು ರಾಜ್ಯ ಪೊಲೀಸ್ ಇಲಾಖೆ ಜಾರಿಗೊಳಿಸಿದೆ.

ಈ ಯೋಜನೆಯೂ ಸಮಾಜದಲ್ಲಿ ಅಪರಾಧ ತಡೆಗೆ ಸಹಕಾರಿಯಾಗುವುದಲ್ಲದೇ ಶಾಂತಿ ಮತ್ತು ಭದ್ರತೆಯ ಸ್ಥಿರತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸರ್ವರನ್ನು ಸಮಾನವಾಗಿ ಒಳಗೊಂಡು ಸಾರ್ವಜನಿಕರು ಈ ಕಾರ್ಯದಲ್ಲಿ ನೇರವಾಗಿ ಪಾಲ್ಗೊಳ್ಳುವಿಕೆ ಖಾತರಿ ಪಡಿಸಿ, ಸಾಮಾಜಿಕ ಪಿಡುಗುಗಳ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಈ ವ್ಯವಸ್ಥೆಯು ಒಂದು ಆಶಾಕಿರಣವಾಗಲಿದೆ. ಈ ಉಪಕ್ರಮದ ಮೂಲಕ ಪೊಲೀಸರ ಬಗ್ಗೆ ಇರುವ ಭಯದ ಭಾವದ ಬದಲು ವಿಶ್ವಾಸದ ಚಿಹ್ನೆಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ.

ಆಧುನಿಕ ಯುಗದಲ್ಲಿ ಪೊಲೀಸರ ಪಾತ್ರವು ಬಹುಮುಖ್ಯವಾಗಿದೆ. ಕೇವಲ ಕಾನೂನು ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳುವವರಾಗಿ ಮಾತ್ರವಲ್ಲದೇ, ಸಮಾಜದ ಶಾಂತಿ ಮತ್ತು ಭದ್ರತೆಯ ರೂವಾರಿಗಳಾಗಿದ್ದಾರೆ. ಅಪರಾಧಗಳ ತಡೆ, ಅಪರಾಧ ಪ್ರಕರಣಗಳ ತನಿಖೆ, ಸಾರ್ವಜನಿಕ ಸಮಾರಂಭಗಳಲ್ಲಿ ಭದ್ರತೆ ಏರ್ಪಡಿಸುವುದು, ಪ್ರವಾಹ, ಭೂಕಂಪ, ಮಹಾಮಾರಿ ಮುಂತಾದ ವಿಪತ್ತು ಸಂದರ್ಭಗಳಲ್ಲಿ ರಕ್ಷಣಾತ್ಮಕ ಕಾರ್ಯಗಳಲ್ಲಿ ತೊಡಗುವುದು ಪೊಲೀಸ್ ಇಲಾಖೆಯ ಪ್ರಮುಖ ಕರ್ತವ್ಯಗಳಾಗಿವೆ. ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಶಾಂತಿಯುತವಾಗಿ ನಿಭಾಯಿಸುವ ಮೂಲಕ ಪೊಲೀಸರು ಸಾರ್ವಜನಿಕರಲ್ಲಿ ಭದ್ರತೆ ಮತ್ತು ವಿಶ್ವಾಸ ಉಂಟು ಮಾಡುವುದು ಇಲಾಖೆಯ ಆದ್ಯತೆಯಾಗಿದೆ.

ಸಾರ್ವಜನಿಕರಲ್ಲಿ ಕಾನೂನುಗಳ ಬಗ್ಗೆ ತಿಳುವಳಿಕೆ ಬೆಳೆಸುವುದು ಮತ್ತು ಪೌರ ಸಹಭಾಗಿತ್ವದ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಇಲಾಖೆಯು ಪ್ರಗತಿಪರ ನಿಲುವುಗಳನ್ನು ತೆಗೆದುಕೊಳ್ಳುತ್ತಿದೆ. ಆಧುನಿಕ ತಂತ್ರಜ್ಞಾನಗಳ ಬಳಕೆಯಿಂದ ಪೊಲೀಸ್ ಇಲಾಖೆಯು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕ ಸೇವಾ ದಿಟ್ಟ ನೋಟದೊಂದಿಗೆ ತನ್ನ ಕಾರ್ಯವ್ಯಾಪ್ತಿ ವಿಸ್ತರಿಸುತ್ತಿದೆ.

ಸೈಬರ್ ಅಪರಾಧ ಅಧ್ಯಯನ ವರದಿ ಬಿಡುಗಡೆ

ಸೈಬರ್ ಅಪರಾಧಗಳಲ್ಲಿ ಅಕ್ರಮ ಹಣ ವರ್ಗಾವಣೆಗೆ ನಕಲಿ ಬ್ಯಾಂಕ್ ಖಾತೆಗಳ ಬಳಕೆಯ ಬಗ್ಗೆ ರಾಜ್ಯ ಪೊಲೀಸ್ ಇಲಾಖೆ ಅಧ್ಯಯನ ವರದಿ ಬಿಡುಗಡೆ ಮಾಡಿದೆ. ಸೈಬರ್ ಅಪರಾಧ ಪ್ರಕರಣಗಳಲ್ಲಿ ಅಕ್ರಮ ಹಣದ ವರ್ಗಾವಣೆಗೆ ವ್ಯಾಪಕವಾಗಿ ನಕಲಿ ಬ್ಯಾಂಕ್ ಖಾತೆಗಳ ಬಳಕೆಯ ಬಗ್ಗೆ ಅಧ್ಯಯನ ಮಾಡಿ ಅವುಗಳನ್ನು ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳನ್ನು ಶಿಫಾರಸು ಮಾಡಲು ಸಿಐಡಿಯ ಸೈಬರ್ ಅಪರಾಧ ತನಿಖಾ ತರಬೇತಿ ಮತ್ತು ಸಂಶೋಧನಾ ಕೇಂದ್ರ (ಸಿಸಿಐಆರ್‌ಟಿ) ವತಿಯಿಂದ ವಿಶೇಷ ತಂಡ ರಚಿಸಲಾಯಿತು. ಈ ತಂಡದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು, ತನಿಖಾಧಿಕಾರಿಗಳು, ಡೇಟಾ ಸೆಕ್ಯೂರಿಟಿ ಕೌನ್ಸಿಲ್ ಆಫ್ ಇಂಡಿಯಾ (ಡಿಎಸ್‌ಸಿಐ)ತಜ್ಞರು, ಬ್ಯಾಂಕಿಂಗ್ ವಲಯದ ಪ್ರತಿನಿಧಿಗಳು ಒಳಗೊಂಡಿದ್ದರು. ಈ ಅಧ್ಯಯನದಲ್ಲಿ ಕಳೆದ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಎನ್‌ಸಿಆರ್‌ಪಿ ಪೋರ್ಟಲ್‌ನಲ್ಲಿ ಸ್ವೀಕರಿಸಲಾದ ದೂರುಗಳನ್ನು ಹಾಗೂ ನಗರದಲ್ಲಿ ದಾಖಲಾದ ಸೈಬರ್ ಅಪರಾಧ ಪ್ರಕರಣಗಳ ಮಾಹಿತಿ ಕ್ರೋಡೀಕರಿಸಿ ವಿಶ್ಲೇಷಣೆ ಮಾಡಲಾಗಿದೆ. ಅಲ್ಲದೇ ಪೊಲೀಸ್ ಅಧಿಕಾರಿಗಳು, ತಂತ್ರಜ್ಞರು, ಬ್ಯಾಂಕಿಂಗ್ ವಲಯದ ಪ್ರತಿನಿಧಿಗಳು ಹಾಗೂ ತನಿಖಾಧಿಕಾರಿಗಳೊಂದಿಗೆ ಹಲವು ಸುತ್ತಿನ ಚರ್ಚೆ ಮಾಡಲಾಗಿದೆ.

ಕಾನೂನು ಜಾಗೃತಿ ಹೇಗೆ

- ಶಾಲಾ-ಕಾಲೇಜುಗಳಲ್ಲಿ ಕಾನೂನು ಜಾಗೃತಿ ಕಾರ್ಯಕ್ರಮಗಳು, ಮಹಿಳಾ ಭದ್ರತೆ ಕುರಿತ ಕಾರ್ಯಾಗಾರಗಳು ಮತ್ತು ಯುವ ಜನರಿಗೆ ಪೊಲೀಸ್ ಸೇವೆಗಳ ಬಗ್ಗೆ ಅರಿವು ಮೂಡಿಸುವ ಸಭೆಗಳನ್ನು ಏರ್ಪಡಿಸಲಾಗುತ್ತದೆ.
- ಸಾರ್ವಜನಿಕರ ಸಹಕಾರದಿಂದ ಪೊಲೀಸರು ಶಂಕಾಸ್ಪದ ಚಟುವಟಿಕೆಗಳನ್ನು ಬೇಗ ಗುರುತಿಸಿ ತಡೆಗಟ್ಟುವುದು. ಜನರಲ್ಲಿ ನಂಬಿಕೆ ಬೆಳೆಸುವುದು-ಸಮುದಾಯ ಪೊಲೀಸ್ ವ್ಯವಸ್ಥೆಯು ಪೊಲೀಸ್ ಮತ್ತು ಸಾರ್ವಜನಿಕರ ನಡುವೆ ವಿಶ್ವಾಸದ ಸಂಬಂಧವನ್ನು ನಿರ್ಮಿಸುವುದು.
- ಯುವ ಜನರನ್ನು ಸಕಾರಾತ್ಮಕ ಚಟುವಟಿಗಳತ್ತ ತೊಡಗಿಸಲು ಇದು ಸಹಾಯ ಮಾಡುತ್ತದೆ. ಒಟ್ಟಾರೆ ಸಮಾಜದಲ್ಲಿ ಗಂಭೀರ ಸಮಸ್ಯೆ ಉದ್ಭವಿಸುವ ಮೊದಲೇ ಪರಿಹಾರೋಪಾಯಗೊಂದಿಗೆ ಸನ್ನದ್ಧರಾಗಿರುವಂತಹ ವಾತಾವರಣ ರೂಪುಗೊಂಡಿರುತ್ತದೆ.

ಈ ಅಧ್ಯಯನ ವರದಿಯಲ್ಲಿ, ಭಾರತದಲ್ಲಿ ನಕಲಿ ಖಾತೆಗಳ ನಿಯಂತ್ರಣಕ್ಕೆ ಅನುಸರಿಸಬೇಕಾದ ಕ್ರಮಗಳನ್ನು ಶಿಫಾರಸು ಮಾಡಿದ್ದು, ಈ ಕ್ರಮಗಳನ್ನು ಮೂರು ವರ್ಗಗಳಲ್ಲಿ ವಿವರಿಸಲಾಗಿದೆ. ಅವುಗಳೆಂದರೆ, ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳು, ಪೊಲೀಸ್ ಮತ್ತು ಇತರೆ ಕಾನೂನು ಜಾರಿ ಸಂಸ್ಥೆಗಳು ಅನುಸರಿಸಬೇಕಾದ ಕ್ರಮಗಳು ಹಾಗೂ ಸರಕಾರ ಮತ್ತು ನಿಯಂತ್ರಕರು ಕೈಗೊಳ್ಳಬಹುದಾದ ಕ್ರಮಗಳು. ಈ ಅಧ್ಯಯನ ವರದಿಯನ್ನು ಕೇಂದ್ರ ಸರಕಾರ , ಇತರ ಕಾನೂನು ಜಾರಿ ಸಂಸ್ಥೆಗಳು, ವಿವಿಧ ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳೊಂದಿಗೆ ಹಂಚಿಕೊಳ್ಳುವ ಉದ್ದೇಶವಿದೆ.

ವಿದ್ಯುತ್ ಸ್ಪರ್ಶಿಸಿ ದಂಪತಿ ಸಾವು

ಶಿವಮೊಗ್ಗ: ಸೊರಬ ತಾಲೂಕಿನ ಕಪ್ಪಗಳಲೆ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ದಂಪತಿ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಮೃತರನ್ನು ಕೃಷ್ಣಪ್ಪ (55) ಮತ್ತು ಅವರ ಪತ್ನಿ ವಿನೋದ (42) ಎಂದು ಗುರುತಿಸಲಾಗಿದೆ.

ಏನಾಯ್ತು?: ಮನೆ ಮುಂದೆ ಬಟ್ಟೆ ಒಣಗಿಸಲು ಹಾಕಿದ್ದ ಕಬ್ಬಿಣದ ತಂತಿಗೆ ಮನೆಯ ವಿದ್ಯುತ್ ಮೋಟಾರ್ ವೈರ್‌ಗಳು ಸಂಪರ್ಕವಾಗಿದ್ದು, ನಿರಂತರವಾಗಿ ಸುರಿಯುತ್ತಿದ್ದ ಮಳೆಯಿಂದ ತಂತಿ ತೇವಗೊಂಡಿದೆ. ತಂತಿಯಲ್ಲಿ ಬಟ್ಟೆ ಒಣಗಿಸಲು ಹೋದ ವಿನೋದ ಅವರಿಗೆ ವಿದ್ಯುತ್ ತಗುಲಿದ್ದು, ಅವರನ್ನು ರಕ್ಷಿಸಲು ಧಾವಿಸಿದ ಪತಿ ಕೃಷ್ಣಪ್ಪ ಅವರಿಗೂ ಶಾಕ್ ಹೊಡೆದು ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಟ್ಟೆ ಒಣಗಿಸುವ ತಂತಿಗೆ ಮೋಟಾರ್‌ನ ಸ್ಕಿನ್ ಹೋಗಿರುವ ವೈರ್ ಮೂಲಕ ವಿದ್ಯುತ್ ಹರಿದಿದ್ದು ಇದಕ್ಕೆ ಕಾರಣವಾಗಿದೆ ಎಂದು ಶಂಕಿಸಲಾಗಿದೆ. ಘಟನಾ ಸ್ಥಳಕ್ಕೆ ಸೊರಬ ಪೊಲೀಸ್ ಠಾಣೆಯ ಪಿಎಸ್‌ಐ ನವೀನ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ

ಉಪ ನಿರ್ದೇಶಕರ ಕಛೇರಿ, ಪೃಥ್ವಿ ಮ್ಯಾನ್ಸನ್, 100 ಅಡಿ ರಸ್ತೆ, ವಿನೋಬನಗರ, ಶಿವಮೊಗ್ಗ

Ph:08182-249241 E-mail: dswsmg@gmail.com

ಸಂ: ಉನಿ/ಸಕಇಶಿ/ಪ.ವ್ಯ/ವಿ.ನಿ /ಆಹಾರ ಸಾಮಗ್ರಿ ಟೆಂಡರ್/ಸಿಆರ್–01/2025–26 ದಿನಾಂಕ:25–06–2025.

E-PROCUREMENT TENDER NOTIFICATION

2025–26ನೇ ಸಾಲಿಗೆ ಶಿವಮೊಗ್ಗ ಭದ್ರಾವತಿ/ಶಿಕಾರಿಪುರ/ಸಾಗರ/ ಸೊರಬ/ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯ/ವಸತಿಶಾಲೆಗಳಿಗೆ ಆಹಾರ ಪದಾರ್ಥಗಳು, ವಿವಿಧ ತರಕಾರಿ ಮತ್ತು ಇತರೆ ಸಂಕೀರ್ಣ ಸಾಮಗ್ರಿಗಳ (ಗ್ರೂಪ್–ಎ, ಗ್ರೂಪ್–ಬಿ, ಗ್ರೂಪ್–ಸಿ, ಗ್ರೂಪ್–ಡಿ, ಗ್ರೂಪ್–ಇ, ಗ್ರೂಪ್–ಎಫ್, ಗ್ರೂಪ್–ಜಿ, ಗ್ರೂಪ್–ಹೆಚ್ ಮತ್ತು ಗ್ರೂಪ್–ಐ) ಪೂರೈಕೆಗಾಗಿ ಅಲ್ಪಾವಧಿ ಮರುಟೆಂಡರ್‌ನ್ನು ಆಸಕ್ತಿಯುಳ್ಳ ಟೆಂಡರ್‌ದಾರರಿಂದ E-Procurement ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಆದ್ದರಿಂದ ಆಸಕ್ತಿಯುಳ್ಳ ಟೆಂಡರ್‌ದಾರರು 2025–26ನೇ ಸಾಲಿಗೆ ಶಿವಮೊಗ್ಗ ಭದ್ರಾವತಿ/ಶಿಕಾರಿಪುರ/ಸಾಗರ/ ಸೊರಬ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯ/ವಸತಿಶಾಲೆಗಳಿಗೆ ಆಹಾರ ಪದಾರ್ಥಗಳು, ವಿವಿಧ ತರಕಾರಿ ಮತ್ತು ಇತರೆ ಸಂಕೀರ್ಣ ಸಾಮಗ್ರಿಗಳ (ಗ್ರೂಪ್ –ಎ, ಗ್ರೂಪ್–ಬಿ, ಗ್ರೂಪ್–ಸಿ, ಗ್ರೂಪ್–ಡಿ, ಗ್ರೂಪ್–ಇ, ಗ್ರೂಪ್–ಎಸ್, ಗ್ರೂಪ್–ಜಿ, ಗ್ರೂಪ್–ಹೆಚ್ ಮತ್ತು ಗ್ರೂಪ್–ಐ) ಪೂರೈಕೆಗಾಗಿ ಅಲ್ಪಾವಧಿ ಮರುಟೆಂಡರ್ ದಿನಾಂಕ:09–07–2025ರ ಸಂಜೆ 5.30 ಗಂಟೆಯೊಳಗಾಗಿ ಟೆಂಡರ್ ಅರ್ಜಿಗಳನ್ನು Website:https://kppp.karnataka.gov.in ನಲ್ಲಿ ಅಪ್ಲೋಡ್ ಮಾಡುವುದು. ಹಾಗೂ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಪೃಥ್ವಿ ಮ್ಯಾನ್ಷನ್, 100 ಅಡಿರಸ್ತೆ, ವಿನೋಬನಗರ, ಶಿವಮೊಗ್ಗ ಇಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಕಛೇರಿ ದೂರವಾಣಿ ಸಂಖ್ಯೆ: 08182–249241

ಸಹಿ/–ಉಪ ನಿರ್ದೇಶಕರ, ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗಜಿಲ್ಲೆ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/116/06/484

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910 ಫ್ಯಾಕ್ಸ್: 080–25536105
ಇ–ಮೇಲ್: purchase@kmf.coop

ಸಂ:ಕಹಾಮ/ಖರೀದಿ/ಟೆಂಡರ್–797/2025–26 ದಿನಾಂಕ: 27.06.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ವ್ಯಾಪ್ತಿಯ ಘಟಕವಾದ ಪಶು ಆಹಾರ ಕಾರ್ಖಾನೆಗಳಲ್ಲಿ ಉಪಯೋಗಿಸಿದ ಹಳೆಯ ಗೋಣಿ ಚೀಲಗಳನ್ನು ಆರು ತಿಂಗಳ ಅವಧಿಗೆ ಎತ್ತುವಳಿ ಮಾಡುವ ಸಂಬಂಧ ಪ್ರತಿಷ್ಠಿತ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ.ಸಂ	ವಿವರ	ಪಶು ಆಹಾರ ಘಟಕ	ಇ,ಎಂ,ಡಿ (ರೂ)
1	ಹಳೆಯ ಗೋಣಿ ಚೀಲಗಳು	ರಾಜನಕುಂಟೆ	58,000/–
2		ಗುಬ್ಬಿ	89,000/–
3		ಧಾರವಾಡ	53,000/–
4		ಶಿಕಾರಿಪುರ	87,000/–
5		ಹಾಸನ	1,82,000/–

ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಅನ್ನು ದಿನಾಂಕ 11.07.2025 ರಂದು 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.
ಇನ್ನಿತರ ವಿವರಗಳನ್ನು ಟೆಂಡರ್‌ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ.

ಮುಚಖಂಡಿ ರಸ್ತೆ, ನವನಗರ ಬಾಗಲಕೋಟೆ–587115 (ಜಿಲ್ಲೆ: ಬಾಗಲಕೋಟೆ)
e_mail : apmcbagalkot@rediffmail.com&apmcbagalkote@gmail.com
PH[O] 08354 - / 235370 [Fax] 235370

ಕ್ರ.ಸಂಖ್ಯೆ:ಕೃಉಮಾಸ(ಬಾ)/ಅಭಿವೃದ್ಧಿ/248/2025–26 ದಿನಾಂಕ:26/06/2025

: ಇ–ಟೆಂಡರ ಪ್ರಕಟಣೆ :

ಬಾಗಲಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಸನ್ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದನೆಯಾದ ಬಾಗಲಕೋಟ ಮುಖ್ಯ/ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ಬಾಕಿ ಉಳಿದಿರುವ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡುವ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಸಂಬಂಧಿಸಿದ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರಿಗಿಟ್ಟ ಮೊತ್ತ ರೂ. 91,48,867–18 (ಜಿ.ಎಸ್.ಟಿ. ಹೊರತುಪಡಿಸಿ) ಇಂಡೆಂಟ್ ನಂ:APMC/2025-26/RD/WORK_INDENT569. ಫ್ರೀ ಬಿಡ್ ಮೀಟಿಂಗ್ ದಿನಾಂಕ: 05–07–2025 ರಂದು ಬೆಳಿಗ್ಗೆ 11–30 ಗಂಟೆಗೆ ಸ್ಥಳ:ಆಡಳಿತ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಾಗಲಕೋಟೆ. ಭರ್ತಿ ಮಾಡಿದ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:17–07–2025 ಸಾಯಂಕಾಲ 4–00 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18–07–2025 ರಂದು ಸಾಯಂಕಾಲ 4–30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ:25–07–2025 ರಂದು ಬೆಳಿಗ್ಗೆ 11–00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ. ಟೆಂಡರಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/–(ವಿ.ಡಿ.ಪಾಟೀಲ)
ಕಾರ್ಯದರ್ಶಿ
ಕೃ.ಉ.ಮಾ.ಸ., ಬಾಗಲಕೋಟೆ

ಸಹಿ/–(ಅಮರೇಶ ಪಮ್ಮಾರ)
ಆಡಳಿತಾಧಿಕಾರಿಗಳು
ಕೃ.ಉ.ಮಾ.ಸ., ಬಾಗಲಕೋಟೆ

DIPR/BGK/RO-NO-143/KSMCA/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪರು–2 ರವರ ಕಛೇರಿ, (ಬಿಎಸ್‌ಡಬ್ಲ್ಯೂಎಂಎಲ್), 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ–2/(ಬಿಎಸ್‌ಡಬ್ಲ್ಯೂಎಂಎಲ್)/ತಿದ್ದುಪಡಿ–01/2025–26 ದಿನಾಂಕ: 27–06–2025

ತಿದ್ದುಪಡಿ – 1

ವಿಷಯ : ಟೆಂಡರ್ ಅಧಿಸೂಚನೆಯ ಕ್ಯಾಲೆಂಡ್‌ರ್ ಇವೆಂಟ್ಸ್‌ನ ವಿಸ್ತರಣೆ.

ಉಲ್ಲೇಖ : ಈ ಕಛೇರಿಯ ಅಧಿಸೂಚನೆ ಸಂಖ್ಯೆ: DGM-2/BSWML/TEND/10/2025-26, ದಿನಾಂಕ: 24.06.2025.

ಮೇಲಿನ ವಿಷಯ ಮತ್ತು ಉಲ್ಲೇಖದ ಪ್ರಕಾರ, ಮೇಲಿನ ಟೆಂಡರ್ ಅಧಿಸೂಚನೆಯ ಕಾರ್ಯಕ್ರಮಗಳ ಕ್ಯಾಲೆಂಡರ್‌ನ್ನು ಆಡಳಿತ ಮತ್ತು ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ.

ಷೆಡ್ಯೂಲ್ ಸಮಯ / ವೇಳಾಪಟ್ಟಿ:

ಕ್ರ. ಸಂ.		ಟೆಂಡರ್ ಅಧಿಸೂಚನೆಯ ಪ್ರಕಾರ	ವಿಸ್ತರಿಸಿದ ದಿನಾಂಕಗಳನ್ನು ದಯವಿಟ್ಟು ಹೀಗೆ ಓದಿ
1	ಪೂರ್ವ ಬಿಡ್ ಸಭೆ	01.07.2025 ರಂದು ಮಧ್ಯಾಹ್ನ 15:00 ಗಂಟೆಗೆ	**05.07.2025 ರಂದು ಮಧ್ಯಾಹ್ನ 15:00 ಗಂಟೆಗೆ**
2	ಅರ್ಹತಾ ದಾಖಲೆಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ & ಸಮಯ	14.07.2025 ರಂದು ಸಂಜೆ 16:00 ಗಂಟೆಗೆ	**16.07.2025 ರಂದು ಸಂಜೆ 16:00 ಗಂಟೆಗೆ**
3	ಟೆಂಡರ್ ತೆರೆಯುವ ದಿನಾಂಕ & ಸಮಯ	15.07.2025 ರಂದು ಸಂಜೆ 16:30 ಗಂಟೆಗೆ	**17.07.2025 ರಂದು ಸಂಜೆ 16:30 ಗಂಟೆಗೆ**

ಹೆಚ್ಚಿನ ಮಾಹಿತಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ.

ವಾಸಾಸಂಇ/ವಾ.ಪ್ರ/1508/ಎಎಎ/2025–26

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ಆಂತರಿಕ ಬೇಗುದಿ ತಣಿಸಲು ಬಿಜೆಪಿ ನಾಯಕರ ಸಭೆ | ಪ್ರತಿ 15 ದಿನಕ್ಕೊಮ್ಮೆ ಸಭೆ ಸೇರಲು ಸಂಘದ ಸೂಚನೆ

ಸಂಘದ ಸೂಚನೆಯಂತೆ ಸಮನ್ವಯ ಸಭೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಬಿಜೆಪಿಯಲ್ಲಿನ ಅಸಮಾಧಾನ ಹಾಗೂ ನಾಯಕತ್ವ ಬದಲಾವಣೆಯ ಕೂಗಿನ ನಡುವೆಯೇ ಸಂಘ ಪರಿವಾರದ ಸೂಚನೆಯಂತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಸಭೆ ಆಯೋಜಿಸಿ ಪಕ್ಷದ ಆಂತರಿಕ ಭಿನ್ನಾಭಿಪ್ರಾಯಕ್ಕೆ ಮದ್ದು ಅರೆಯುವ ಪ್ರಯತ್ನ ನಡೆದಿದೆ.

ಸದಾಶಿವನಗರದ ಶಾಸಕ ಅಶ್ವತ್ಥ ನಾರಾಯಣ ನಿವಾಸದಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಡಿವಿ ಸದಾನಂದ ಗೌಡ, ಅಶ್ವಥ್ ನಾರಾಯಣ, ಸಿ.ಟಿ.ರವಿ, ರವಿಕುಮಾರ್, ಸುನೀಲ್ ಕುಮಾರ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸೇರಿ ಹಲವು ನಾಯಕರು ಭಾಗಿಯಾಗಿದ್ದರು. ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಅಪಸ್ವರ ಎತ್ತಿದ್ದ ಅರವಿಂದ ಲಿಂಬಾವಳಿ ಕೂಡ ಭಾಗಿಯಾಗಿದ್ದರು.

ಸಭೆಯಲ್ಲಿ ಪ್ರಮುಖವಾಗಿ ಪಕ್ಷದಲ್ಲಿ ತಲೆದೋರಿರುವ ಆಂತರಿಕ ಭಿನ್ನಮತಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಸಂಘಟನೆ, ಒಳ ಬೇಗುದಿ ಸೇರಿದಂತೆ ಹಲವು ಸಮಸ್ಯೆಯನ್ನು ಒಂದೊಂದಾಗಿ ಬಗೆಹರಿಸುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಭೆಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, 'ರಾಜ್ಯಾಧ್ಯಕ್ಷ ಸ್ಥಾನವನ್ನು ಹೊರತುಪಡಿಸಿ ಉಳಿದ ವಿಷಯದ ಬಗ್ಗೆ ಚರ್ಚಿಸೋಣ' ಎಂದು ಮೂಲಗಳು ತಿಳಿಸಿವೆ. ಇದಕ್ಕೆ ಅರವಿಂದ ಲಿಂಬಾವಳಿ ಪ್ರತಿಕ್ರಿಯಿಸಿದ್ದು, 'ರಾಜ್ಯಾಧ್ಯಕ್ಷರು ಯಾರೇ ಆಗಲಿ. ಮೊದಲು ಪಕ್ಷದ ಸಂಘಟನೆಯನ್ನು ಬಲಪಡಿಸಿಕೊಳ್ಳೋಣ' ಎನ್ನುವ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಇದು ಆಂತರಿಕ ಬೇಗುದಿ ಶಮನ ಸಭೆ ಅಲ್ಲ. ಎಲ್ಲಾ ಹಿರಿಯರೂ ಸೇರಿ ಚರ್ಚೆ ಮಾಡಿದ್ದೇವೆ. ಕಾಂಗ್ರೆಸ್ ಸರಕಾರ ಎಲ್ಲ ರೀತಿಯಲ್ಲೂ ವಿಫಲವಾಗಿದ್ದು, ಇದರ ವಿರುದ್ಧ ಹೋರಾಟದ ರೂಪುರೇಷೆ ಬಗ್ಗೆ ಚರ್ಚೆ ಮಾಡಿದ್ದೇವೆ. ತಂಡಗಳನ್ನು ಮಾಡಿ ಜಿಲ್ಲಾ ಪ್ರವಾಸ ಮಾಡ್ತೇವೆ. ಆಂತರಿಕ ಬೇಗುದಿ ಸರಿಪಡಿಸುವ ವಿಚಾರ ಅಲ್ಲ. ಜಿಲ್ಲೆಗಳಲ್ಲಿ ಒಂದಷ್ಟು ಸಮಸ್ಯೆಗಳಿದ್ದು, ಸಮಗ್ರವಾಗಿ ಚರ್ಚೆ ಮಾಡಿದ್ದೇವೆ. ಒಂದಾಗಿ ಒಗ್ಗಟ್ಟಿನಲ್ಲಿ ಎಲ್ಲರೂ ಹೋರಾಟ ಮಾಡಬೇಕು, ಒಂದಾಗಿ ಹೋಗಬೇಕು ಅಂತ ಚರ್ಚೆ ಮಾಡಿದ್ದೇವೆ ಎಂದರು.



ದೆಹಲಿಯಲ್ಲಿ ಅಶೋಕ ಮೊಕ್ಕಾಂ

ಬೆಂಗಳೂರಿನಲ್ಲಿ ಮಹತ್ವದ ಸಭೆ ನಡೆಯುತ್ತಿರುವಾಗಲೇ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರ ಉಪಸ್ಥಿತಿ ಕಂಡು ಬಂದಿತ್ತು. ಇದಕ್ಕೆ ಪ್ರತಿಕ್ರಯಿಸಿರುವ ಸಿ.ಟಿ. ರವಿ, ಆರ್.ಅಶೋಕ ಅವರು ದೆಹಲಿ ಪ್ರವಾಸದಲ್ಲಿದ್ದಾರೆ. ನಾವು ಯಾರನ್ನೂ ಹೊರಗಿಟ್ಟು ಸಭೆ ಮಾಡೋದಿಲ್ಲ ಎಂದಿದ್ದಾರೆ. ಹೀಗಿದ್ದರೂ ಕಳೆದ ನಾಲ್ಕು ದಿನ ಗಳಿಂದ ವರಿಷ್ಠರ ಭೇಟಿಗೆಂದು ದೆಹಲಿಗೆ ಆರ್.ಅಶೋಕ ತೆರಳಿದ್ದರೂ ಇನ್ನೂ ಕೂಡ ಕೇಂದ್ರದ ವರಿಷ್ಠರ ಭೇಟಿ ಸಾಧ್ಯವಾಗಿಲ್ಲ ಎನ್ನಲಾಗಿದೆ.

ಜೋಶಿ ಮೂಲಕ ಒಗ್ಗಟ್ಟಿನ ಸಂದೇಶ

ಬಿಜೆಪಿಯಲ್ಲಿ ಸದ್ಯ, ಮನೆಯೊಂದು ಹಲವು ಬಾಗಿಲು ಎನ್ನುವಂತಾಗಿದೆ. ಈ ಹಿನ್ನೆಲೆ ಪ್ರಲ್ಹಾದ್ ಜೋಶಿ ಮೂಲಕ ರಾಜ್ಯ ನಾಯಕರನ್ನು ಒಂದುಗೂಡಿಸಲು ಹೈಕಮಾಂಡ್ ಕಸರತ್ತು ನಡೆಸಿ ಒಗ್ಗಟ್ಟಿನ ಸಂದೇಶ ಕಳಿಸಿದ ಕೇಂದ್ರದ ವರಿಷ್ಠರು ಸಮನ್ವಯತೆ, ಹೊಂದಾಣಿಕೆಯಿಂದ ಹೋಗುವಂತೆ ತಾಕೀತು ಮಾಡಿದೆ. ಅರವಿಂದ ಲಿಂಬಾವಳಿ ಅವರನ್ನು ಮುಂದಿನ ಎಲ್ಲ ವಿಚಾರಗಳಲ್ಲೂ ಪರಿಗಣಿಸಿ ಸೂಕ್ತ ಸ್ಥಾನಮಾನ ನೀಡುವ ಬಗ್ಗೆಯೂ ವರಿಷ್ಠರಿಂದ ಸಂದೇಶ ರವಾನೆಯಾಗಿದೆ ಎನ್ನಲಾಗಿದೆ.

ನಮ್ಮ ಯೋಜನೆ ಮುಂದಿನ ಪ್ರವಾಸ, ಮುಂದಿನ ಕಾರ್ಯಕ್ರಮ ಬಗ್ಗೆ ವಿವರವಾಗಿ ಚರ್ಚೆ ಮಾಡಿದ್ದೇವೆ. ಕೆಟ್ಟ ಕಾಂಗ್ರೆಸ್ ಸರಕಾರ ತೊಲಗಬೇಕು ಎಂದು ರಾಜ್ಯಾಧ್ಯಕ್ಷರು ಈಗಾಗಲೇ ಹೇಳಿದ್ದಾರೆ. ಅರವಿಂದ ಲಿಂಬಾವಳಿ ಸಭೆಗೆ ಬಂದಿರುವುದನ್ನು ಅನುಮಾನದಲ್ಲಿ ನೋಡುವುದು ಬೇಡ. ಆಗುವುದೆಲ್ಲ ಒಳ್ಳೆಯದಕ್ಕೆ. ಒಳ್ಳೆಯದೇ ಆಗುತ್ತದೆ.

ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ಇಂದು ಪರ್ವ ಗ್ರೂಪ್ ಎಕ್ಸ್‌ಪೋ

← ಮೊದಲಪುಟದಿಂದ

ಪರ್ವ ಗ್ರೂಪ್ ದುಬೈನ ಸಂಸ್ಥಾಪಕರಾದ ನೀಲೇಶ್ ಎಚ್.ಪಿ ಹಾಗೂ ಸಹಸಂಸ್ಥಾಪಕರಾದ ಶಶಿಧರ್ ನಾಗರಾಜಪ್ಪ ಸೇರಿದಂತೆ ಸಂಸ್ಥೆತ ತಜ್ಞರು ಸ್ಥಳದಲ್ಲಿ ಇರಲಿದ್ದಾರೆ. ಅವರಿಂದ ಹೂಡಿಕೆ ಸಂಬಂಧ ಮಾಹಿತಿ ಪಡೆಯಬೇಕು. ಹಲವರಿಗೆ ದುಬೈನಲ್ಲಿ ಗೃಹ ಅಥವಾ ವಾಣಿಜ್ಯ ಕಟ್ಟಡ ಖರೀದಿಸುವ ಆಸೆ ಇದೆ; ಅದನ್ನು ಕೆಲವು ಕಾಲದ ನಂತರ ಮಾರಾಟ ಮಾಡಿ, ಸೂಕ್ತ ಎನಿಸುವ ಲಾಭವನ್ನೂ ಪಡೆಯುವ ಅಭಿಲಾಷೆ ಇದೆ; ಆದರೆ ದುಬೈನಲ್ಲಿ ಬಂಡವಾಳ ಹೂಡಲು ಆಸಕ್ತಿ ಇದ್ದರೂ ಸೂಕ್ತ ಮಾರ್ಗದರ್ಶನದ ಕೊರತೆ ಇರಬಹುದು. ಇಂಥ ಕೊರತೆಯನ್ನು ತುಂಬಿಸಿಕೊಡುವುದೇ ನಮ್ಮ ಉದ್ದೇಶವಾಗಿದೆ ಎಂದು ಶಶಿಧರ್ ನಾಗರಾಜಪ್ಪ ಅಭಿಪ್ರಾಯಪಟ್ಟಿದ್ದಾರೆ. ಎರಡು ದಿನದ ಎಕ್ಸ್‌ಪೋದಲ್ಲಿ ದುಬೈನಲ್ಲಿ ಹೂಡಿಕೆ ಮಾಡಿದರೆ ಅಥವಾ ಆಸಕ್ತಿ ತೋರಿದರೆ, ಅಂತವರಿಗೆ ದುಬೈಗೆ ಕಪಲ್ ರಿಟರ್ನ್ ಏರ್ ಟಿಕೆಟ್, ದುಬೈ ವೀಸಾ ಮತ್ತು 3 ರಾತ್ರಿಗಳ ವಾಸ್ತವ್ಯ. 10 ಗ್ರಾಂ ಚಿನ್ನ, ಗೋಲ್ಡನ್ ವೀಸಾ, ಗ್ಯಾರಂಟೀಡ್ ಬಯ್ ಬ್ಯಾಕ್ ಸೇರಿದಂತೆ ಹಲವು ಆಫರ್‌ಗಳನ್ನು ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ 9742117707 ಅಥವಾ +971 502568857 ಸಂಪರ್ಕಿಸಿ.



ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಬಳ್ಳೆ ಆನೆ ಶಿಬಿರದಲ್ಲಿ ಸ್ಥಾಪಿಸಲಾಗಿರುವ ಅರ್ಜುನ ಆನೆಯ ಪ್ರತಿಮೆಯನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಲೋಕಾರ್ಪಣೆ ಮಾಡಿದರು. ಶಾಸಕ ಅನಿಲ್ ಚಿಕ್ಕಮಾದು ಮತ್ತಿತರರು ಇದ್ದರು.

ಸರಕಾರಕ್ಕೆ ಶಿಕ್ಷಣ, ಮಕ್ಕಳ ಬಗ್ಗೆ ಕಾಳಜಿಯಿಲ್ಲ

ಹುಬ್ಬಳ್ಳಿ: ಸರಕಾರಿ ಶಾಲೆಗಳ ಕಟ್ಟಡಗಳು ಶಿಥಿಲಾವಸ್ಥೆಯಲಿದ್ದು, ಅದರಲ್ಲಿಯೇ ಮಕ್ಕಳು ಕಲಿಯುತ್ತಿದ್ದಾರೆ. ಶಾಲೆ, ಶಿಕ್ಷಣ ಹಾಗೂ ಮಕ್ಕಳ ಬಗ್ಗೆ ರಾಜ್ಯ ಸರಕಾರಕ್ಕೆ ಕಾಳಜಿಯೇ ಇಲ್ಲವಾಗಿದೆ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಥಿಲಾವಸ್ಥೆಯಲ್ಲಿರುವ ಸರಕಾರಿ ಶಾಲೆಗಳನ್ನು ದುರಸ್ತಿ ಮಾಡಿಸುವಂತೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆಯಲಾಗಿದೆ' ಎಂದು ಹೇಳಿದರು. ಶಾಲೆಗಳನ್ನು ದುರಸ್ತಿ ಮಾಡಿಸುವುದು, ಮಕ್ಕಳಿಗೆ ಬೇರೆ ಶಾಲೆಯ ವ್ಯವಸ್ಥೆ ಮಾಡುವುದು ಇಲಾಖೆಯ ಅಧಿಕಾರಿಗಳು ಜವಾಬ್ದಾರಿಯೂ ಇದೆ. ಆದರೆ, ಇದಾಗುತ್ತಿಲ್ಲ. ಶೇ 90ರಷ್ಟು ಅಧಿಕಾರಿಗಳಲ್ಲಿ ತಿಳಿವಳಿಕೆಯೇ ಇಲ್ಲವಾಗಿದೆ. ಅವರು ಸಹ ಪಿಡಬ್ಲ್ಯೂಡಿ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ರೀತಿಯಾಗಿದ್ದಾರೆ. ಅವರ ಮೂರ್ಖತನದಿಂದಾಗಿ ಈ ಸಮಸ್ಯೆ ಯಾಗುತ್ತಿದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಯಲ್ಲಾಪುರ ವಿಭಾಗ, ಯಲ್ಲಾಪುರ

ಕೆ.ಎಸ್.ಆರ್.ಟಿ.ಸಿ ಬಸ್‌ಸ್ಟ್ಯಾಂಡ್ ಹತ್ತಿರ, ಯಲ್ಲಾಪುರ–581359 (ಉ.ಕ)
ದೂರವಾಣಿ: 08419–261273 ಇ–ಮೇಲ್: dcfyellapur@gmail.com

ಎ5/ಬಿಜಿಟಿ/ವಿವ–55/ಕೆಶೋರ್/ಇಟೆಂಡರ್/2025–26 ದಿನಾಂಕ: 24–06–2025

ಟೆಂಡರ ಆಹ್ವಾನಿಸುವ ಅಧಿಸೂಚನೆ

(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಯಲ್ಲಾಪುರ ಅರಣ್ಯ ವಿಭಾಗದ ವ್ಯಾಪ್ತಿಗೊಳಪಡುವ ವಲಯಗಳಲ್ಲಿ ವಿಶ್ವ ಬ್ಯಾಂಕ ನೆರವಿನ K-shore ಯೋಜನೆ ಅಡಿ ಮಾನ್‌ಸೂನ್ ನೆಡುತೋಪು ರಚನೆ ಮುಂಗಡ ಕಾಮಗಾರಿ ಹಾಗೂ ಇತರ ಕಾಮಗಾರಿ ಕುರಿತು ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ (ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಕೆಡಬ್ಲ್ಯೂ–1 ದ್ವಿ ಲಕೋಟೆ ಪದ್ಧತಿ) ಕರೆಯಲಾಗಿದೆ. ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02–07–2025 ಮಧ್ಯಾಹ್ನ 4.00 ಗಂಟೆಗೆ ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಯಲ್ಲಾಪುರ ವಿಭಾಗ, ಯಲ್ಲಾಪುರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ: 08419–261273)

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಲ್ಲಾಪುರ ವಿಭಾಗ, ಯಲ್ಲಾಪುರ

DIPR/KWR/KSMCA/234/25-26 Dt.27.06.2025

ನಗರಸಭೆ ಕಾರ್ಯಾಲಯ ಚಿಕ್ಕಬಳ್ಳಾಪುರ

ಇ–ಮೇಲ್: itstaff_ulb_chickballapur@yahoo.co.in,
ದೂರವಾಣಿ: 08156–275557, ಫ್ಯಾಕ್ಸ್: 08156–274742 ವೆಬ್‌ಸೈಟ್: www.chikkaballapurcity.gov.in

ಸಂಖ್ಯೆ: ನ.ಸ.ಚಿ/ತಾ.ಶಾ/ಸಿ.ಆರ್/ಟೆಂ–07/2025–26 ದಿನಾಂಕ:20.06.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಪೌರಾಯುಕ್ತರು, ನಗರಸಭೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರಂತೆ ಡಲ್ಟ್ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿ ಕೆಲಸವನ್ನು ನಿರ್ವಹಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್–2.0) ಆಹ್ವಾನಿಸಲಾಗಿದೆ. ಇಂಡೆಂಟ್ ನಂ.**DMA/2024-25/OW/WORK_INDENT36022, ಅಂದಾಜು ಮೊತ್ತ: ರೂ.163,90,000.00. ಟೆಂಡರ್‌ಗಿಟ್ಟ ಮೊತ್ತ: ರೂ.138,85,925.09. ಇ.ಎಂ.ಡಿ. ಮೊತ್ತ ರೂ.2,08,289.0.** ಟೆಂಡರ್ ಕುರಿತು ಹೆಚ್ಚಿನ ವಿವರಗಳು/ ಆಕ್ಷೇಪಣೆ ಸಲ್ಲಿಸಲು ಕಡೆಯ **ದಿನಾಂಕ: 02.07.2025 ರಂದು ಬೆಳಿಗ್ಗೆ 11.00 ಗಂಟೆಯವರೆಗೆ,** ಭರ್ತಿ ಮಾಡಿದ ಟೆಂಡರ್‌ಗಳನ್ನು ಅಂತರ್ಜಾಲದ ಮುಖಾಂತರ ಸಲ್ಲಿಸುವ ಕಡೆಯ **ದಿನಾಂಕ: 07.07.2025 ರಂದು ಸಂಜೆ 5.30 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 09.07.2025 ರಂದು ಬೆಳಿಗ್ಗೆ 11.00 ಗಂಟೆಗೆ,** ಟೆಂಡರ್ ದಾಖಲೆಗಳನ್ನು ಪರಿಶೀಲಿಸುವ **ದಿನಾಂಕ: 14.07.2025 ರಂದು ಬೆಳಿಗ್ಗೆ 11.00 ಗಂಟೆಗೆ** ವೆಬ್ ಸೈಟ್ **https://kppp.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಈ ಮೂಲಕ ಕೋರಲಾಗಿದೆ.

ಸಹಿ/–
ಅಧ್ಯಕ್ಷರು
ನಗರಸಭೆ, ಚಿಕ್ಕಬಳ್ಳಾಪುರ

ಸಹಿ/–
ಪೌರಾಯುಕ್ತರು
ನಗರಸಭೆ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:110/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–3/ಇ–ಟೆಂಡರ್ ಪ್ರಕಟಣೆ/2025–26/662, ದಿನಾಂಕ: 26.06.2025

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಲೆಕ್ಕಶೀರ್ಷಿಕೆ 4202 ಶಿಕ್ಷಣ ಇಲಾಖೆ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಸುರಪೂರ ತಾಲೂಕಿನ (1)20317/2ನೇ ಕರೆ, ಒಟ್ಟಾರೆ 01 (ಒಂದು) ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. 2) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ರೂ.87.00 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ:ಸಿವಿಲ್ 3ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) ಪ್ರೀ ಬಿಡ್ ಮೀಟಿಂಗ್ ದಿನಾಂಕ:27.06.2025 (11.30 ಗಂಟೆ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ :30.06.2025 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 03.07.2025 (16.00 ಗಂಟೆವರೆಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್: 05.07.2025 (11.30 ಗಂಟೆ ನಂತರ) 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: 08.07.2025 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ :ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ: ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/122/ಕೆ.ಎಸ್.ಎಂ.ಸಿ.&ಎ/2025–26

ಚಾಮುಂಡೇಶ್ವರಿಗೆ ವಿಶೇಷ ಅಲಂಕಾರ | ಬೆಳಗ್ಗೆ 5:30 ರಿಂದ ರಾತ್ರಿ 10ರ ವರೆಗೆ ದರ್ಶನ

ಆಷಾಢ ಶುಕ್ರವಾರ: ಬೆಟ್ಟದಲ್ಲಿ ಜನಸಾಗರ

ಮೈಸೂರು: ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಆಷಾಢ ಮಾಸದ ಸಂಭ್ರಮ ಮನೆ ಮಾಡಿದ್ದು, ಮೊದಲ ಆಷಾಢ ಶುಕ್ರವಾರವೇ ಸಹಸ್ರಾರು ಭಕ್ತರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ನಾಡಿನ ಅದಿದೇವತೆ ಚಾಮುಂಡೇಶ್ವರಿಯ ದರ್ಶನ ಪಡೆದರು.

ಶಕ್ತಿ ದೇವತೆಗಳನ್ನು ಆರಾಧಿಸುವ ಆಷಾಢ ಮಾಸದ ಮೊದಲ ಶುಕ್ರವಾರ ಮೈ ಕೊರೆಯುವ ಚಳಿ, ದಟ್ಟ ಮಂಜು, ಆಗಾಗ್ಗೆ ಬರುತ್ತಿದ್ದ ತುಂತುರು ಮಳೆಯನ್ನೂ ಲೆಕ್ಕಿಸದೆ ಮುಂಜಾನೆಯಿಂದಲೇ ಮೆಟ್ಟಿಲು, ಬಸ್‌ಗಳ ಮೂಲಕ ಬೆಟ್ಟದತ್ತ ಬಂದ ಭಕ್ತರು ದೇವಿಯ ದರ್ಶನ ಪಡೆದು ಪುನೀತರಾದರು. ಜಿಲ್ಲೆ, ರಾಜ್ಯ, ಹೊರ ರಾಜ್ಯದಿಂದ ಬೆಟ್ಟಕ್ಕೆ ಆಗಮಿಸಿದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ವಿಶೇಷವಾಗಿ ಅಲಂಕೃತಗೊಂಡಿದ್ದ ತಾಯಿ ಚಾಮುಂಡೇಶ್ವರಿಯನ್ನು ಕಂಡು ಪಾವನರಾದರು.

ಅಭಿಷೇಕ, ಅರ್ಚನೆ: ಚಾಮುಂಡೇಶ್ವರಿಗೆ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ಅರ್ಚಕರು ಮುಂಜಾನೆ 3.30ರಿಂದಲೇ ವಿವಿಧ ಪೂಜಾ ಕೈಂಕರ್ಯಗಳನ್ನು ಆರಂಭಿಸಿದರು. ಮುಂಜಾನೆ 3 ಗಂಟೆಯಿಂದಲೇ ದೇವಾಲಯ ಸಮೀಪದ ದೇವಿ ಕೆರೆಯಿಂದ ನೀರು ತಂದು ಚಾಮುಂಡೇಶ್ವರಿ ದೇವಿಗೆ ಮಹನ್ಯಾಸಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕದ ನಂತರ ತಾಯಿಗೆ ವಿಶೇಷ ಅಲಂಕಾರ ಮಾಡಲಾಯಿತು. ಬೆಳಗ್ಗೆ 5.30ರಿಂದ ರಾತ್ರಿ 10ರವರೆಗೂ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ಆಷಾಢ ಮೊದಲ ಶುಕ್ರವಾರದ ಹಿನ್ನೆಲೆ ಚಾಮುಂಡೇಶ್ವರಿ ದರ್ಶನಕ್ಕೆ ಸೇರಿದ್ದ ಜನಸಾಗರ.

2 ಸಾವಿರ ರು. ಟಿಕೆಟ್ ವಿಶೇಷವೇನು?

ಎರಡು ಸಾವಿರ ರು. ಟಿಕೆಟ್ ತೆಗೆದುಕೊಂಡ ಭಕ್ತರಿಗೆ ಎಸಿ ಬಸ್ ವ್ಯವಸ್ಥೆ ಇತ್ತು. ಜತೆಗೆ 500 ಎಂಎಲ್ ವಾಟರ್ ಬಾಟಲ್, ಚಾಮುಂಡಿ ತಾಯಿ ವಿಗ್ರಹ, ಕುಂಕುಮ, ಒಂದು ಲಡ್ಡು ಒಳಗೊಂಡ ಬ್ಯಾಗ್ ನೀಡಲಾಯಿತು. ಜತೆಗೆ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ಮುತ್ತೈದೆಯರಿಗೆ ಪ್ರಾಧಿಕಾರದಿಂದ ಉಚಿತವಾಗಿ ಮಡಿಲಕ್ಕಿ ವಿತರಣೆ ಮಾಡಲಾಯಿತು.

ದಾವಣಗೆರೆ ಇಂದು ಬಂದ್

ದಾವಣಗೆರೆ: ಭದ್ರಾ ಕೆನಾಲ್ ಒಡೆದು ಕುಡಿಯುವ ನೀರು ಒದಗಿಸುವ ಯೋಜನೆ ಖಂಡಿಸಿ ಇಂದು ದಾವಣಗೆರೆ ನಗರ ಬಂದ್ ಮಾಡಲು ನಿರ್ಧರಿಸಲಾಗಿದೆ. ರೈತ ಪರ ಸಂಘಟನೆಗಳಿಂದ ಬಂದ್ ಕರೆ ನೀಡಿದ್ದು, ಜಿಲ್ಲಾ ಬಿಜೆಪಿ ಘಟಕ ಬೆಂಬಲ ನೀಡಿದೆ. ಅಗತ್ಯ ಹಾಗೂ ವೈದ್ಯಕೀಯ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲವುಗಳನ್ನು ಬಂದ್ ಮಾಡಲು ನಿರ್ಧರಿಸಲಾಗಿದೆ.

ಕಾವೇರಿ ಆರತಿ: ಸರಕಾರಕ್ಕೆ ಹೈಕೋರ್ಟ್ ನೋಟಿಸ್

← ಮೊದಲಪುಟದಿಂದ

ಅರ್ಜಿದಾರರನ್ನು ಪ್ರತಿನಿಧಿಸಿದ್ದ ವಕೀಲ ಶಿವಪ್ರಕಾಶ್ ಅವರು ಕೆಆರ್‌ಎಸ್ ಬಳಿ 120 ಅಡಿಯ ಕಾವೇರಿ ವಿಗ್ರಹ ಸ್ಥಾಪಿಸಲಾಗುತ್ತಿದೆ. ಕಾಮಗಾರಿಗೆ ಪೂರಕವಾಗಿ ಫೋಟೊ ಸಲ್ಲಿಕೆ ಮಾಡಲಾಗಿದೆ ಎಂದರು.

ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಕಾವೇರಿ ಪ್ರತಿಮೆ ಸ್ಥಾಪಿಸಲು ಮಾತ್ರ ಟೆಂಡರ್ ನೀಡಲಾಗಿದೆ. ಕಾವೇರಿ ಪ್ರತಿಮೆ ಸ್ಥಾಪನೆಗೆ ತಾಂತ್ರಿಕ ತಜ್ಞರ ಅನುಮತಿ ಪಡೆಯಲಾಗಿದೆ. ಮನರಂಜನಾ ಪಾರ್ಕ್ ಟೆಂಡರ್ ಪೂರ್ಣಗೊಂಡಿಲ್ಲ ಎಂದರು. ಆಗ ಪೀಠವು ಕಾಮಗಾರಿಗೆ ಅಗೆಯುವುದರಿಂದ ಜಲಾಶಯಕ್ಕೆ ಹಾನಿಯಾಗುವುದಿಲ್ಲವೇ? ಜಲಾಶಯಕ್ಕೆ ಸುರಕ್ಷತೆ ಸಮಿತಿಯ ಅನುಮತಿ ಏಕೆ ಪಡೆದಿಲ್ಲ? ಮನರಂಜನಾ ಪಾರ್ಕ್ ಕಾಮಗಾರಿಗೆ ತಾಂತ್ರಿಕ ತಜ್ಞರ ಅನುಮತಿ ಪಡೆಯಲಾಗಿದೆಯೇ? ಕಾವೇರಿ ಪ್ರತಿಮೆ ಸ್ಥಾಪಿಸುವಾಗ ತಜ್ಞರ ಸಲಹೆ ಪಾಲಿಸಲಾಗಿದೆಯೇ? ಎಂಬ ಅಂಶಗಳನ್ನು ಒಳಗೊಂಡು ಎರಡು ವಾರದಲ್ಲಿ ಅಫಿಡವಿಟ್ ಸಲ್ಲಿಸಬೇಕು ಎಂದು ಆದೇಶಿಸಿತು. ಅಲ್ಲದೇ, ಕೇಂದ್ರ, ರಾಜ್ಯ ಸರಕಾರ, ರಾಷ್ಟ್ರೀಯ ಜಲಾಶಯ ಸುರಕ್ಷತಾ ಪ್ರಾಧಿಕಾರ, ಜಲಸಂಪನ್ಮೂಲ, ಪ್ರವಾಸೋದ್ಯಮ ಇಲಾಖೆ, ಕಾವೇರಿ ನೀರಾವರಿ ನಿಗಮ, ಜಿಲ್ಲಾಡಳಿತ ಮತ್ತು ಪೊಲೀಸ್ ವರಿಷ್ಠಾಧಿಕಾರಿಗೆ ನೋಟಿಸ್ ಜಾರಿಗೊಳಿಸಿತು. ಕೆಆರ್‌ಎಸ್ ಸುರಕ್ಷತೆಗೆ ಸಂಬಂಧಿಸಿದಂತೆ 15 ದಿನಗಳಲ್ಲಿ ಅಫಿಡವಿಟ್ ಸಲ್ಲಿಸಬೇಕು. ಇದಕ್ಕೆ ಅರ್ಜಿದಾರರು ಆನಂತರ ಪ್ರತ್ಯುತ್ತರ ಸಲ್ಲಿಸಬೇಕು ಎಂದು ಆದೇಶಿಸಿರುವ ನ್ಯಾಯಾಲಯವು ವಿಚಾರಣೆ ಮುಂದೂಡಿತು.

ನನ್ನ ಮೇಲೆ ಇಲ್ಲ ಸಲ್ಲದ ಆರೋಪ

ದಾವಣಗೆರೆ: ನನ್ನನ್ನು ಪಕ್ಷದಿಂದ ಉಚ್ಛಾಟಿಸಲು ಸ್ವಪಕ್ಷದವರೇ ಹುನ್ನಾರ ನಡೆಸಿದ್ದು ಇದಕ್ಕೆ ಚನ್ನಗಿರಿ ಶಾಸಕ ಬಸವರಾಜ ಶಿವಗಂಗಾ ಅವರನ್ನು ಬಳಸಿಕೊಂಡಿದ್ದಾರೆ. ಕಾಂಗ್ರೆಸ್ ಶಾಸಕ ನನ್ನ ವಿರುದ್ಧ ಮಾಡಿರುವ ಆರೋಪಗಳ ಹಿಂದೆ ನಮ್ಮ ಪಕ್ಷದವರದ್ದೇ ಪಿತೂರಿ ಅಡಗಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಕಿಡಿಕಾರಿದ್ದಾರೆ.

ಸುದ್ದಿಗೋಷ್ಠಿ ನಡೆಸಿ ಮಾತನಾಡಿ ನನ್ನನ್ನು ಉಚ್ಚಾಟಿಸಲು ಹೈಕಮಾಂಡ್‌ಗೆ ನನ್ನ ತಪ್ಪು ತೋರಿಸಬೇಕಿತ್ತು. ಹಾಗಾಗಿ ನನ್ನ ಮೇಲೆ ಇಲ್ಲ ಸಲ್ಲದ ಸುಳ್ಳು ಆರೋಪ ಮಾಡಿಸಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲು ಹಣ ಪಡೆದಿದ್ದಾರೆ. ಮರಳು ದಂಧೆ ನಡೆಸಿದ್ದಾರೆ. ಮಕ್ಕಳ ಶಿಕ್ಷಣಕ್ಕೆ ಎಸ್ಸಿ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ ಸೇರಿದಂತೆ ಶಾಸಕ ಬಸವರಾಜ ಮಾಡಿರುವ ಆರೋಪಗಳೆಲ್ಲವೂ ನಿರಾಧಾರ. ಈ ವಿಚಾರವಾಗಿ ಅವರು ಎಲ್ಲೇ ಕರೆದರೂ ಪ್ರಮಾಣ ಮಾಡಲು ಸಿದ್ಧ ಎಂದರು.

ಹುಲಿಗಳ ಸಾವು ಸಂಪೂರ್ಣ ತನಿಖೆಯಾಗಲಿ

ಗದಗ: ಹುಲಿಗಳ ಸಾವಿಗೆ ಅರಣ್ಯ ಇಲಾಖೆ ನಿರ್ಲಕ್ಷ್ಯವೇ ಕಾರಣವಾಗಿದ್ದು, ಈ ಬಗ್ಗೆ ಸಂಪೂರ್ಣ ತನಿಖೆಯಾಗಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹುಲಿಗಳ ಬಗ್ಗೆ ಸಮಾಜ ಮತ್ತು ಸರಕಾರ ಎರಡೂ ಬಹಳ ಪ್ರಾಮುಖ್ಯತೆ ಕೊಡುತ್ತವೆ. ಯಾವುದಾದರೂ ಒಂದು ಹುಲಿ ಆಕಸ್ಮಿಕವಾಗಿ ಸಾವಿಗೀಡಾದರೆ ಬಹಳ ದೊಡ್ಡ ವಿಚಾರ. ಅಂತದರಲ್ಲಿ ತಾಯಿ ಹುಲಿ ಹಾಗೂ ನಾಲ್ಕು ಮರಿಗಳು ಸಾವಿಗೀಡಾಗಿರುವುದು ಆಘಾತಕಾರಿಯಾಗಿರುವ ವಿಷಯ. ಇಷ್ಟು ದೊಡ್ಡ ಪ್ರಮಾಣದ ಅನಾಹುತ ಆಗಿದೆಯೆಂದರೆ ಅರಣ್ಯ ಇಲಾಖೆಯ ನಿರ್ಲಕ್ಷ್ಯ ಬಹಳ ಸ್ಪಷ್ಟವಾಗಿದೆ. ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಬಹಳಷ್ಟು ಜನದಟ್ಟಣೆಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಹುಲಿ ಅರಣ್ಯ ಪ್ರದೇಶದ ಪಕ್ಕದಲ್ಲಿಯೇ ರೆಸಾರ್ಟ್ ಗೆ ಅನುಮತಿ ನೀಡಿದ್ದಾರೆ. ಹುಲಿ ಸಂರಕ್ಷಿತ ಅರಣ್ಯದ ಬಳಿಯೇ ಜನರು ಪಿಕ್‌ನಿಕ್ ಹೋಗುತ್ತಾರೆ. ಇಷ್ಟೆಲ್ಲಾ ಆದರೂ ಕೂಡ ಅರಣ್ಯ ಇಲಾಖೆಯವರು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ ಎಂದು ಆರೋಪಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ, ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಶೀಘ್ರ ಆರಂಭವಾಗುತ್ತದೆ. ವರಿಷ್ಠರು ಈ ಬಗ್ಗೆ ಆದಷ್ಟು ಬೇಗ ನಿರ್ಧಾರ ಮಾಡುತ್ತಾರೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಬದಲಾಗುತ್ತಾರಾ. ಮುಂದುವರೆಯುತ್ತಾರೆ ಅನ್ನುವ ಬಗ್ಗೆ ಊಹೆ ಮಾಡಲು ಸಾಧ್ಯವಿಲ್ಲ ಎಂದರು.

ಸಮಾಚಾರ ಸಣ್ಣದಲ್ಲ

ನದಿಯಲ್ಲಿ ಮುಳುಗಿ ಇಬ್ಬರ ಸಾವು

ಯಾದಗಿರಿ: ವಡಗೇರಾ ತಾಲೂಕಿನ ಮಾಚನೂರ ಗ್ರಾಮದ ಭೀಮಾ ನದಿಯ ಪ್ರವಾಹಕ್ಕೆ ಸಿಲುಕಿ ಇಬ್ಬರು ಕೊಚ್ಚಿಕೊಂಡು ಹೋಗಿರುವ ಘಟನೆ ಶುಕ್ರವಾರ ನಡೆದಿದೆ. ಪಶ್ಚಿಮ ಘಟ್ಟದಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಭೀಮಾ ನದಿಯ ದಡದಲ್ಲಿ ದನ ಮೇಯಿಸಲು ಹೋಗಿದ್ದ ಯುವಕರಿಬ್ಬರು ನೀರು ಕುಡಿಯಲು ಹೋದಾಗ ಈ ಘಟನೆ ಸಂಭವಿಸಿದೆ. ಮಾಚನೂರ ಗ್ರಾಮದ ರಮೇಶ(17) ಸಿದ್ದಪ್ಪ (21) ಭೀಮಾ ನದಿ ಪ್ರವಾಹದಲ್ಲಿ ಕೊಚ್ಚಿ ಹೋದವರಾಗಿದ್ದಾರೆ. ಇನ್ನೂ ಮೃತ ದೇಹಗಳ ಪತ್ತೆಗೆ ಶೋಧನಾ ಕಾರ್ಯ ಮುಂದುವರೆದಿದೆ. ಅಗ್ನಿ ಶಾಮಕ ದಳ, ಸ್ಥಳೀಯ ಮೀನುಗಾರರು ಸೇರಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಸರಕಾರದ ಬೊಕ್ಕಸ ಖಾಲಿಯಾಗಿಲ್ಲ

ಮಡಿಕೇರಿ: ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ 8 ಸಾವಿರ ಕೋಟಿ ಮೀಸಲಿರಿಸಲಾಗಿದ್ದು, ಮಾರ್ಗ ಸೂಚಿಗಳನ್ನು ರಚಿಸಿ ಶಾಸಕರಿಗೆ ಹಂಚಿಕೆ ಮಾಡಲು ಸಿದ್ಧತೆ ನಡೆಯುತ್ತಿದೆ. ಸದ್ಯದಲ್ಲೇ ಮುಖ್ಯಮಂತ್ರಿ ಇದನ್ನು ಘೋಷಿಸಲಿದ್ದಾರೆ' ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

ಅನುದಾನ ಹಂಚಿಕೆಯಲ್ಲಿ ತಾರತಮ್ಯ, ಸರಕಾರದಲ್ಲಿ ಹಣ ಇಲ್ಲ' ಎಂಬ ಆರೋಪಗಳನ್ನು ಕುರಿತು ಕುಶಾಲನಗರದ ಹಾರಂಗಿ ಜಲಾಶಯದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಸರಕಾರದ ಬೊಕ್ಕಸ ಖಾಲಿಯಾಗಿಲ್ಲ' ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ

ವಿಜಯಪುರ: ಕಾಂಗ್ರೆಸ್ ಪಕ್ಷದಲ್ಲಿ ಯಾವ ಕ್ರಾಂತಿಯೂ ನಡೆಯಲ್ಲ, ನಮ್ಮದು ಸ್ವಾತಂತ್ರ್ಯ ಕ್ರಾಂತಿಯಲ್ಲಿ ಭಾಗವಹಿಸಿರುವ ಪಕ್ಷ ಮಾತ್ರ' ಎಂದು

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು. ಸಚಿವ ಕೆ.ಎನ್. ರಾಜಣ್ಣ ಅವರ ಸೆಪ್ಟೆಂಬರ್ ಕ್ರಾಂತಿ' ಹೇಳಿಕೆ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ನಲ್ಲಿ ಯಾವುದೇ ಕ್ರಾಂತಿ ಆಗುವುದಿದ್ದರೂ ಅದು ಹೈಕಮಾಂಡ್, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಸೇರಿ ಮಾಡುತ್ತಾರೆ ಎಂದರು. ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಸಚಿವ ಸಂಪುಟ ಪುನರ್ ರಚನೆ ಕುರಿತು ಸದ್ಯ ಯಾವುದೇ ಚರ್ಚೆ ನಡೆದಿಲ್ಲ. ಈ ಬಗ್ಗೆ ಹೈಕಮಾಂಡ್ ತೀರ್ಮಾನಿಸಲಿದೆ ಎಂದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :**ದಾವಣಗೆರೆ

ಸಮಸ್ಯೆಯೇನು..?: ಹರಿಹರ ನಗರದ ದೇವಸ್ಥಾನ ರಸ್ತೆಯ ಮುಂಭಾಗದ ಮುಖ್ಯ ರಸ್ತೆಯಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸುವ ಬಗ್ಗೆ.

- **ಪರಿಹಾರ:** ಹರಿಹರ ನಗರದ ದೇವಸ್ಥಾನ ರಸ್ತೆಯ ಮುಂಭಾಗದ ಮುಖ್ಯ ರಸ್ತೆಯ ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದ್ದು, ಇಲ್ಲಿ ಎಸ್‌ಎಚ್-25 ರಲ್ಲಿ ಮಾತ್ರ ವಾಹನ ಸಂಚಾರ ಇದ್ದು, ಸದರಿ ಸ್ಥಳದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸುವ ಅವಶ್ಯಕತೆ ಇರುವುದಿಲ್ಲ. ಬಗ್ಗೆ.

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ಅಂಗೈನಲ್ಲಿ ಆಕಾಶ ತೋರಿಸಿ, ರಾಜ್ಯದ ಜನತೆಗೆ ಯಾಮಾರಿಸಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಸರಕಾರ ಎರಡೇ ವರ್ಷಕ್ಕೆ ಗೃಹಲಕ್ಷ್ಮಿ ಯೋಜನೆಗೆ ಎಳ್ಳುನೀರು ಬಿಟ್ಟಿದೆ. . ನುಡಿದಂತೆ ನಡೆಯಲಾಗದ ಸಿದ್ದರಾಮಯ್ಯ ನವರು ಕಳೆದ ಮೂರು ತಿಂಗಳಿಂದ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ನೀಡಿಲ್ಲ, ಇದರಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕಾಂಗ್ರೆಸ್‌ನ ಮೋಸದ ಜಾಲಕ್ಕೆ ಸಿಲುಕಿ ಆಕ್ರೋಶಗೊಂಡ ಮಹಿಳೆಯರು ಹಣ ಬಿಡುಗಡೆಗೆ ಒತ್ತಾಯಿಸುತ್ತಿದ್ದರೂ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕಾಣದಂತೆ ಮಾಯವಾಗಿದ್ದಾರೆ.

ಭಗತ್

11 ವರ್ಷದಿಂದ ಮೋದಿಯವರಿಂದ 15 ಲಕ್ಷಕ್ಕೆ ಕಾದು ಕಾದು ಸಾಕಾಯ್ತು. ಸ್ವಿಸ್ ಬ್ಯಾಂಕಿಂದ ಹಣ ತಂದು ಕೊಡ್ತಾರೆ ಅಂತ ಮತ ಒತ್ತಿ ಒತ್ತಿ ನಮ್ಮ ಬೆರಳುಗಳು ಮುರುದಿವೆ.

ಕಾಲ್ತುಳಿತ ಪ್ರಕರಣದಲ್ಲಿ ಅಧಿಕಾರಿಗಳ ಅಮಾನತಿಗೆ ಬೇಸರವಿದೆ | ಪ್ರಕರಣದ ಬಗ್ಗೆ ನನಗೆ ಸರಿಯಾಗಿ ಮಾಹಿತಿ ನೀಡಲೇ ಇಲ್ಲ: ಸಿಎಂ

ತಪ್ಪು ಮಾಡಿರೋದಕ್ಕೆ ಹಿರಿಯ ಅಧಿಕಾರಿಗಳ ಅಮಾನತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆರ್‌ಸಿಬಿ ವಿಜಯೋತ್ಸವ ಸಮಯದಲ್ಲಿನ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ಐಪಿಎಸ್, ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿರುವ ಬಗ್ಗೆ ಇದೇ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದು, ಅಧಿಕಾರಿಗಳನ್ನು ಅಮಾನತು ಮಾಡಿರುವುದಕ್ಕೆ ಬೇಸರವಿದೆ ಎಂದಿದ್ದಾರೆ.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ಮತ್ತು ಪೊಲೀಸ್ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಿದ್ದರಾಮಯ್ಯ ಅವರು ಕಾಲ್ತುಳಿತ ಪ್ರಕರಣವನ್ನು ಪ್ರಸ್ತಾಪಿಸಿದರು. ಆರ್‌ಸಿಬಿ ವಿಜಯೋತ್ಸವ ಸಮಯದಲ್ಲಿನ ಕಾಲ್ತುಳಿತದ ಬಗ್ಗೆ ಸರಿಯಾದ ಮಾಹಿತಿಯನ್ನು ಯಾರೂ ನೀಡಲಿಲ್ಲ. ಗುಪ್ತಚರ ಇಲಾಖೆ ಈ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಲಿಲ್ಲ. ಆದ್ದರಿಂದ ಹಿರಿಯ ಅಧಿಕಾರಿಗಳನ್ನು ಅಮಾನತು ಮಾಡಬೇಕಾಯಿತು. ಈ ಬೇಸರ ನನಗಿದೆ. ಆದರೆ ತಪ್ಪಾಗಿರುವುದು ನಿಜವಲ್ಲವೇ ಎಂದು ಪ್ರಶ್ನಿಸಿದರು.

ನಾನು 1983 ರಿಂದ ಶಾಸಕನಾಗಿ ಮುಖ್ಯಮಂತ್ರಿಯಾಗಿದ್ದೇನೆ. ಬೆಂಗಳೂರಿನಲ್ಲಿ ನಡೆದ ಇಂಥಾ ಕಾಲ್ತುಳಿತ ಪ್ರಕರಣ ಹಿಂದೆಂದೂ ನಾನು ನೋಡಿರಲಿಲ್ಲ. ಗುಪ್ತಚರ ಇಲಾಖೆ ಇರುವುದು ಏಕೆ ? ಸರಿಯಾದ ಸಮಗ್ರ ಮಾಹಿತಿ ನೀಡಲಿಲ್ಲ. ಪರಿಣಾಮ 11 ಮಂದಿ ಮೃತಪಟ್ಟರು. ಕಾಲ್ತುಳಿತ ಘಟನೆ ನಡೆದ ದಿನ ಮಧ್ಯಾಹ್ನ 3:50ಕ್ಕೆ ಸಾವುಗಳು ಸಂಭವಿಸಿದ್ದವು. ಆದರೂ ಸರಿಯಾದ ಮಾಹಿತಿ ಕೊಟ್ಟಿರಲಿಲ್ಲ. ಇದು ತಪ್ಪಲ್ಲವಾ ? 5:45 ಕ್ಕೆ ನಾನಾಗೇ ಕೇಳಿದಾಗಲೂ ಒಂದೇ ಸಾವು ಆಗಿದೆ ಎನ್ನುವ ಮಾಹಿತಿ ನೀಡಿದರು. ಅಷ್ಟೊತ್ತಿಗಾಗಲೇ 11 ಸಾವು ಆಗಿಬಿಟ್ಟಿತ್ತು. ಹಿರಿಯ ಅಧಿಕಾರಿ ಸರಿಯಾದ ಮಾಹಿತಿಯನ್ನು ತಕ್ಷಣ ನಮಗೆ ನೀಡಿದ್ದರೆ ಸ್ಟೇಡಿಯಂ ಕಾರ್ಯಕ್ರಮ ರದ್ದುಗೊಳಿಸಲು ಸೂಚನೆ ನೀಡಬಹುದಿತ್ತು. ಹಿರಿಯ ಅಧಿಕಾರಿಗಳ ಸಸ್ಪೆಂಡ್ ಮಾಡಬೇಕಾಗಿ ಬಂದಿದ್ದಕ್ಕೆ ನನಗೂ ಬೇಸರ ಇದೆ. ಆದರೆ ತಪ್ಪಾಗಿದ್ದು ನಿಜ ತಾನೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಐದು ತಿಂಗಳಾದರೂ ಬಂಧನವೇಕಿಲ್ಲ?: ರಾಜ್ಯದಲ್ಲಿ ಅಪರಾಧಗಳ ಪ್ರಮಾಣ ಕಡಿಮೆ ಆಗಿರುವುದು ಸಮಾಧಾನದ ಸಂಗತಿಯಾದರೂ ಪೊಲೀಸರ ತನಿಖೆಯ ಗುಣಮಟ್ಟ ಕಡಿಮೆಯಾಗಿದ್ದು ಇದನ್ನು ಹೆಚ್ಚಿಸಬೇಕಿದೆ. ಬೀದರ್‌ನಲ್ಲಿ ನಡೆದ ದರೋಡೆ ಪ್ರಕರಣದ ಆರೋಪಿ ಯಾರು ಎಂದು ಗೊತ್ತಾಗಿದ್ದರೂ 5 ತಿಂಗಳುಗಳಿಂದ ಆತನನ್ನು ಬಂಧಿಸದೇ ಇರುವುದನ್ನು ಉಲ್ಲೇಖಿಸಿ ಹೇಳಿದರು. ಅಲ್ಲದೆ ಬಿಡಿ ಬಿಡಿ ಪ್ರಕರಣ ಗಳಲ್ಲಿ ತನಿಖೆಯ ಗುಣಮಟ್ಟ ಹೆಚ್ಚಿದ್ದರೂ ಒಟ್ಟಾರೆಯಾಗಿ ಗಮನಿಸಿದಾಗ ತನಿಖೆಯ ಗುಣಮಟ್ಟ ಕುಸಿದಿರುವುದು ಸ್ಪಷ್ಟವಾಗುತ್ತಿದೆ ಎಂದು ಎಚ್ಚರಿಕೆ ನೀಡಿದರು. ಬೀದರ್‌ನಲ್ಲಿ ನಡೆದ ದರೋಡೆ ಪ್ರಕರಣದ ಆರೋಪಿ ಯಾರು ಎಂದು ಗೊತ್ತಾಗಿದ್ದರೂ 5 ತಿಂಗಳುಗಳಿಂದ ಆತನನ್ನು ಬಂಧಿಸದೇ ಇರುವುದನ್ನು ಉಲ್ಲೇಖಿಸಿ ಹೇಳಿದರು. ಅಲ್ಲದೆ ಬಿಡಿ ಬಿಡಿ ಪ್ರಕರಣ ಗಳಲ್ಲಿ ತನಿಖೆಯ ಗುಣಮಟ್ಟ ಹೆಚ್ಚಿದ್ದರೂ ಒಟ್ಟಾರೆಯಾಗಿ ಗಮನಿಸಿದಾಗ ತನಿಖೆಯ ಗುಣಮಟ್ಟ ಕುಸಿದಿರುವುದು ಸ್ಪಷ್ಟವಾಗುತ್ತಿದೆ ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಗೃಹ ಸಚಿವ ಜಿ.ಪರಮೇಶ್ವರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಗೃಹ ಇಲಾಖೆ ಎಸಿಎಸ್ ಗೌರವ್ ಗುಪ್ತ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎ.ಎಂ ಸಲೀಂ ಅವರು ಉಪಸ್ಥಿತರಿದ್ದರು.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ಮತ್ತು ಪೊಲೀಸ್ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಗೃಹ ಸಚಿವ ಜಿ.ಪರಮೇಶ್ವರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರು ಉಪಸ್ಥಿತರಿದ್ದರು.

ಮಂಗಳೂರು ಮಾತ್ರ ಹದಗೆಟ್ಟಿದ್ದೇಕೆ?

ದ್ವೇಷ ಭಾಷಣ ಮಾಡುವವರ ವಿರುದ್ಧ, ಜನರ-ರಾಜ್ಯದ ನೆಮ್ಮದಿ ಕೆಡಿಸುವವರ ವಿರುದ್ಧ ಸ್ವಯಂಪ್ರೇರಿತ ಕ್ರಮ ಏಕೆ ತೆಗೆದುಕೊಳ್ಳುತ್ತಿಲ್ಲ, ನೀವು ಕ್ರಮ ತೆಗೆದುಕೊಳ್ಳದಿದ್ದರೆ ನಾವು ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಖಾರವಾಗಿ ಪ್ರಶ್ನಿಸಿದರು. ಕೋಮು ಘರ್ಷಣೆ ಮತ್ತು ಕೊಲೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಹೆಚ್ಚಾಗಿ ಆಗುತ್ತಿದೆ. ಇತರೆ ಜಿಲ್ಲೆಗಳಲ್ಲಿ ಯಾಕೆ ಆಗುತ್ತಿಲ್ಲ ಎಂದು ಪ್ರಶ್ನಿಸಿದ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ನೆಮ್ಮದಿ ಕೆಡಿಸುವವರನ್ನು ಮೂಲದಿಂದಲೇ ಪತ್ತೆ ಹಚ್ಚಿ ಅವನು ಯಾರೇ ಇದ್ದರೂ ಕಠಿಣ ಕಾನೂನು ಕ್ರಮ ಕೈಗೊಳ್ಳಿ. ನಾವು ವ್ಯವಸ್ಥೆ ದೂಷಿಸಿಕೊಂಡು ಕೈ ಕಟ್ಟಿಕೊಂಡು ಕೂರೋದಲ್ಲ. ಪೊಲೀಸ್ ಠಾಣೆಗಳು ಜನಸ್ನೇಹಿ ಆಗುವ ಜೊತೆಗೆ ಅಪರಾಧ ಮನಸ್ಥಿತಿಯವರಿಗೆ ಕಾನೂನಿನ ಬಗ್ಗೆ ಭಯ ಇರುವ ವಾತಾವರಣ ಸೃಷ್ಟಿಸಬೇಕು ಎಂದು ಕರೆ ನೀಡಿದರು.

ಖಾಲಿ ಹುದ್ದೆ ಶೀಘ್ರ ಭರ್ತಿ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಪೊಲೀಸ್ ಇಲಾಖೆಯಲ್ಲಿ ಹಲವು ವರ್ಷಗಳಿಂದ ಖಾಲಿಯಿರುವ ಶೇ.15.64 ಹುದ್ದೆಗಳನ್ನು, ಒಳ ಮೀಸಲು ಜಾರಿ ಬಳಿಕ ಹಂತ ಹಂತವಾಗಿ ಭರ್ತಿ ಮಾಡಲಾಗುವುದು. ಇದಕ್ಕೆ ತಕ್ಕ ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ. ಕಳೆದ ಒಂದು ವರ್ಷದ ಪೊಲೀಸ್ ಇಲಾಖೆಯ ಕಾರ್ಯಕ್ಷಮತೆಯ ಮೌಲ್ಯಮಾಪನ, ಇಲಾಖೆಯ ಬೇಡಿಕೆಗಳು, ಸರಕಾರದ ನೆರವಿನ ಸಭೆಯಲ್ಲಿ ಚರ್ಚೆ ನಡೆದಿದೆ. ಕಳೆದ 2 ವರ್ಷದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ, ಕೊಲೆ-ದರೋಡೆ-ಮನೆ ಗಳ್ಳತನ ಸೇರಿ ಇತರೆ ಅಪರಾಧಗಳು ಕಡಿಮೆ ಆಗಿರುವುದನ್ನು ಇಲಾಖೆ ಕೊಟ್ಟಿರುವ ಅಂಕಿ ಅಂಶಗಳಿಂದ ಗೊತ್ತಾಗಿದೆ. ಆದರೆ, ಆರೋಪ ಪಟ್ಟಿಯನ್ನು ಸೂಕ್ತ ಸಮಯಕ್ಕೆ ಸಲ್ಲಿಸುವ ಜೊತೆಗೆ FIR ಅನ್ನು ತಕ್ಷಣ ದಾಖಲಿಸಬೇಕು, ತನಿಖೆಯ ಗುಣಮಟ್ಟ ಹೆಚ್ಚಿಸಬೇಕು ಎಂದು ತಿಳಿಸಿದ್ದಾರೆ.

ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಅಗತ್ಯ ಎಲ್ಲಾ ಕ್ರಮ ಕೈಗೊಳ್ಳಬೇಕು. ಡ್ರಗ್ಸ್ ಮಾರುವವರ ಅಂಗಡಿ, ವ್ಯಾಪಾರದ ಲೈಸೆನ್ಸ್ ರದ್ದುಗೊಳಿಸುವ ಅಗತ್ಯ ಬಿದ್ದರೆ ಮಾಡಿ. ಪ್ರಚೋದನೆ, ದ್ವೇಷ ಭಾಷಣ ಮಾಡುವವರ ವಿರುದ್ಧ ಸ್ವಯಂಪ್ರೇರಿತ ಕೇಸು ಕಡ್ಡಾಯವಾಗಿ ದಾಖಲಿಸಿ. ಈ ಬಗ್ಗೆ ದೂರು ಬಂದ ತಕ್ಷಣ ಕ್ರಮಕೈಗೊಳ್ಳಬೇಕು. ರೈತರು, ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ವಿರುದ್ಧ ದೌರ್ಜನ್ಯಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚಿಸಿದ್ದೇನೆ. ಬಾಲ್ಯವಿವಾಹ, ಪೋಕ್ಸೋ, ಅತ್ಯಾಚಾರ, ಭ್ರೂಣಹತ್ಯೆಗಳನ್ನು ನೂರಕ್ಕೆ ನೂರು ತಡೆಗಟ್ಟುವ ನಿಟ್ಟಿನಲ್ಲಿ ಜಿಲ್ಲಾಡಳಿತ ಜತೆ ಸೇರಿ ಕ್ರಮಕ್ಕೆ ಸೂಚನೆ ನೀಡಲಾಗಿದೆ.

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಭೆಯ ಮುಖ್ಯಾಂಶ

- ಕಳೆದ 2 ವರ್ಷದಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ, ಕೊಲೆ-ದರೋಡೆ-ಮನೆ ಗಳ್ಳತನ ಸೇರಿ ಇತರೆ ಅಪರಾಧಗಳು ಕಡಿಮೆ ಆಗಿದೆ. ಎಫ್ಐಆರ್ ತಕ್ಷಣ ದಾಖಲಿಸಬೇಕು, ತನಿಖೆಯ ಗುಣಮಟ್ಟ ಹೆಚ್ಚಿಸಬೇಕು.
- ಅಪರಾಧಿಗಳನ್ನು ಕ್ಷಿಪ್ರವಾಗಿ ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕು.
- ಸೈಬರ್ ಅಪರಾಧಗಳು ಹೆಚ್ಚುತ್ತಿದ್ದರೆ, ಇವುಗಳ ಪತ್ತೆಯ ಪ್ರಮಾಣ ಕಡಿಮೆ ಆಗುತ್ತಿದೆ. ತನಿಖೆಯ ಗುಣಮಟ್ಟ ಹೆಚ್ಚಿಸಬೇಕು.
- ಹಿರಿಯ ಅಧಿಕಾರಿಗಳು ಪೊಲೀಸ್ ಠಾಣೆಗಳಿಗೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಬೇಕು.
- ರೈತರು, ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ವಿರುದ್ಧ ದೌರ್ಜನ್ಯ ನಡೆಯದಂತೆ ಕಟ್ಟುನಿಟ್ಟಿನ ಕ್ರಮಕ್ಕೆ ಸೂಚನೆ.
- ಬಾಲ್ಯವಿವಾಹ, ಪೋಕ್ಸೊ, ಅತ್ಯಾಚಾರ, ಭ್ರೂಣಹತ್ಯೆ ನೂರಕ್ಕೆ ನೂರು ತಡೆಗಟ್ಟಲು ಜಿಲ್ಲಾಡಳಿತ ಜತೆ ಸೇರಿ ಕ್ರಮಕ್ಕೆ ಸೂಚನೆ.
- ಪೊಲೀಸ್ ಇಲಾಖೆಗೆ ಅಗತ್ಯವಾದ ಸವಲತ್ತುಗಳನ್ನು ಒದಗಿಸಲಾಗುವುದು.ಪೊಲೀಸ್ ಗಸ್ತು ಹೆಚ್ಚಿಸಬೇಕು.

ಸಚಿವ ರಾಜಣ್ಣ ಹೇಳಿಕೆಯನ್ನು ನಿರ್ಲಕ್ಷಿಸುವುದು ಸೂಕ್ತ: ಸಿಎಂ

ಪಕ್ಷದಲ್ಲಿ ಆಂತರಿಕ ಕಲಹವಿಲ್ಲ

ಬೆಂಗಳೂರು: ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ಕದನ, ಒಳ ಜಗಳ ನಡೆದಿದೆ ಎಂಬ ವರದಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತಳ್ಳಿ ಹಾಕಿದ್ದಾರೆ.

ಕೆಂಪೇಗೌಡ ಜಯಂತಿ ಅಂಗವಾಗಿ ವಿಧಾನಸೌಧದ ಮುಂಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆಗ ಮಾಲಾರ್ಪಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ

ಅವರು, ಪಕ್ಷದಲ್ಲಿ ಆಂತರಿಕ ಜಗಳವಿಲ್ಲ. ಜಗಳ ಎಲ್ಲಿದೆ ತೋರಿಸಿ ಎಂದು ಪ್ರಶ್ನಿಸಿದರು.

ಸಚಿವ ರಾಜಣ್ಣ ಅವರು ರಾಜ್ಯ ರಾಜಕೀಯದಲ್ಲಿ ಬೆಳವಣಿಗೆ ಆಗಬಹುದು ಎಂದು ಹೇಳಿದ್ದಾರೆ ಅಷ್ಟೆ. ಇಂತಹದ್ದೆ ಆಗುತ್ತದೆ ಎಂದು ಅವರು ಹೇಳಿಲ್ಲ. ನೀವೆಲ್ಲಾ ಏನೇನೋ ಊಹೆ ಮಾಡಿಕೊಂಡು ವರದಿ ಮಾಡುವುದು ಸರಿಯಲ್ಲ. ರಾಜಣ್ಣ ಅವರ ಹೇಳಿಕೆಯನ್ನು ವಿಶ್ಲೇಷಿಸಲು ನಾನು ಪತ್ರಕರ್ತನಲ್ಲ. ಅವರ ಹೇಳಿಕೆಯನ್ನು ನಿರ್ಲಕ್ಷಿಸಿ ಎಂದರು. ರಾಜ್ಯ ರಾಜಕೀಯದಲ್ಲಿ ಶುರುವಾಗಿರುವ ಅಸಮಾಧಾನದ ಬೆನ್ನಲ್ಲೇ, ರಾಜಣ್ಣ ಅವರು ಸೆಪ್ಟೆಂಬರ್‌ನಲ್ಲಿ ರಾಜ್ಯದಲ್ಲಿ ರಾಜಕೀಯ ಕ್ರಾಂತಿ ಆಗುತ್ತದೆ ಎಂದು ಹೇಳಿಕೆ ನೀಡಿದ್ದು ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಚರ್ಚೆ ವಿವಾದದ ಸ್ವರೂಪ ಪಡೆಯುವ ಸಾಧ್ಯತೆಯಿರುವುದರಿಂದ, ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಪಷ್ಟನೆ ನೀಡವ ಮೂಲಕ ಯಾವ ಬೆಳವಣಿಗೆಗಾಳಬೇಕು ಎಂಬುದುನ್ನು ರಾಜಣ್ಣ ಹೇಳಿಲ್ಲ. ಅದನ್ನು ನಿರ್ಲಕ್ಷಿಸಿ ಎನ್ನುವ ಮೂಲಕ ಚರ್ಚೆಗಳಿಗೆ ತೆರೆ ಎಳೆಯುವ ಯತ್ನ ನಡೆಸಿದ್ದಾರೆ. ಕಾಂಗ್ರೆಸ್ ಶಾಸಕರಲ್ಲಿನ ಅತೃಪ್ತಿ, ಅಸಮಾಧಾನ ಸರಿಪಡಿಸಿ. ಯಾವುದೇ ಶಾಸಕರು ಬಹಿರಂಗವಾಗಿ ರಾಜ್ಯ ಸರಕಾರದ ವಿರುದ್ಧ ಹೇಳಿಕೆ ನೀಡುವುದಕ್ಕೆ ಕಡಿವಾಣ ಹಾಕಿ ಎಂದು ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಜಿಲ್ಲಾವಾರು ಕಾಂಗ್ರೆಸ್ ಶಾಸಕರನ್ನು ಕರೆದು ಅವರ ಜತೆ ಸಭೆ ನಡೆಸಿ ಅವರ ಸಮಸ್ಯೆಗಳನ್ನು ಚರ್ಚಿಸುವ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಮುಖ್ಯಮಂತ್ರಿಗಳ ಆಪ್ತ ಮೂಲಗಳು ಹೇಳಿವೆ.

ಜಿಲ್ಲಾವಾರು ಶಾಸಕರ ಸಭೆಗೆ ಚಿಂತನೆ

ಸರಕಾರದ ವಿರುದ್ಧ ಸ್ವಪಕ್ಷೀಯ ಶಾಸಕರುಗಳೇ ಅಸಮಾಧಾನ, ಅತೃಪ್ತಿಯನ್ನು ಬಹಿರಂಗವಾಗಿ ವ್ಯಕ್ತಪಡಿಸಿ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಸಿಗುತ್ತಿಲ್ಲ. ಅನುದಾನ ಮತ್ತು ಬಡವರಿಗೆ ಮನೆಗಳನ್ನು ಪಡೆಯಲು ಹಣ ನೀಡಬೇಕು ಎಂದು ಹೇಳಿಕೆ ನೀಡಿರುವ ಬೆನ್ನಲ್ಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕರ ಅತೃಪ್ತಿ, ಅಸಮಾಧಾನ ಶಮನಕ್ಕೆ ಮುಂದಾಗಿದ್ದು ಜಿಲ್ಲಾವಾರು ಶಾಸಕರ ಸಭೆ ಕರೆದು ಅಹವಾಲು ಆಲಿಸಲು ಮುಂದಾಗಿದ್ದಾರೆ.

- ಜಗಳ ಎಲ್ಲಿದೆ ತೋರಿಸಿ -ಸಿಎಂ ಪ್ರಶ್ನೆ
- ಊಹಾಪೋಹ ಮಾಡುವುದು ಸರಿಯಲ್ಲ
- ರಾಜಣ್ಣನ ಹೇಳಿಕೆ ವಿಶ್ಲೇಷಿಸಲು ನಾನು ಪತ್ರಕರ್ತನಲ್ಲ
- ರಾಜಣ್ಣ ಹೇಳಿಕೆಗೆ ಸಿಎಂ ತೆರೆಎಳೆಯುವ ಯತ್ನ
- ಅಸಮಾಧಾನ ಶಮನಕ್ಕೆ ಜಿಲ್ಲಾವಾರು ಶಾಸಕರ ಸಭೆ

ಕೃಷ್ಣಾ ಬಚಾವತ್ ತೀರ್ಪಿನಂತೆ ನಮಗೆ ನೀರು ಸಿಕ್ಕಿಲ್ಲ ಎಚ್.ಡಿ ದೇವೇಗೌಡ

ನಾವು ಕುಟುಂಬ ರಾಜಕಾರಣ ಮಾಡಲ್ಲ

ದೇವದುರ್ಗ: ಕೃಷ್ಣಾ ಬಚಾವತ್ ತೀರ್ಪಿನಂತೆ ಕರ್ನಾಟಕದ ಪಾಲಿಗೆ ನೀರು ಸಿಕ್ಕಿಲ್ಲ. ನೀರನ್ನು ಪಡೆಯಲು ಹಾಗೂ ರಾಜ್ಯವನ್ನು ಹಸಿರನ್ನಾಗಿ ಮಾಡಲು ರಾಜ್ಯದ ಜನತೆ ಸಂಘಟಿತರಾಗಿ ಹೋರಾಟ ಮಾಡುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರಕಾರದ ಗಮನ ಸೆಳೆಯುವ ಅಗತ್ಯ ಇದೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹೇಳಿದರು.

ದೇವದುರ್ಗ ನಗರದಲ್ಲಿ ಆಯೋಜಿಸಿದ್ದ ಜನರೊಂದಿಗೆ ಜನತಾ ದಳ ಹಾಗೂ ಮಾಜಿ ಪ್ರಧಾನಿಗಳ ಹಾಗೂ ಅಭಿನಂದನಾ ಸಮಾರಂಭದಲ್ಲಿಕ್ಕೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯದಲ್ಲಿ ನೀರಾವರಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು. ಪಕ್ಷತೀತಾಗಿ ಎಲ್ಲ ರೈತರ ಪರವಾಗಿ ಹೋರಾಟ ಮಾಡಬೇಕು. ಇದರಿಂದ ರಾಜ್ಯದ ಜನರು ಸಮೃದ್ಧಿಗೊಳ್ಳುತ್ತಾರೆ. ಎಲ್ಲ ಸಮುದಾಯದವರು ಎಲ್ಲ ರಂಗಗಳಲ್ಲೂ ಮುಖ್ಯವಾಹಿನಿಯಲ್ಲಿ ಇರುತ್ತಾರೆ ಎಂದು ಹೇಳಿದರು. ಶಾಸಕಿ ಕರೆಮ್ಮ ಅವರು, ಜನರ ಆಶಯದಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಅವರಿಗೆ ನನ್ನ ಆಶೀರ್ವಾದ ಯಾವಗಲೂ ಇರುತ್ತದೆ. ಜನರ ಮಧ್ಯೆ ಇದ್ದೂ ಜನ ಸೇವೆ ಮಾಡುತ್ತಾ ಜನಮನದಲ್ಲಿ ಉಳಿಯಬೇಕು. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅವರೇ ಜೆಡಿಎಸ್ ಅಭ್ಯರ್ಥಿ ಎಂದು ಘೋಷಿಸಿದರು. ಸಮಾವೇಶದಲ್ಲಿ ಶಾಸಕಿ ಕರೆಮ್ಮ ಜಿ. ನಾಯಕ. ಗುರುಮಿಠಕಲ್ ಶಾಸಕ ಶರಣಗೌಡ ಕಂದಕೂರು, ಮಾಜಿ ಮಂತ್ರಿ ವೆಂಕಟರಾವ್ ನಾಡಗೌಡ, ಹನುಮಂತಪ್ಪ ಆಲ್ಕೋಡ್, ಮಾಜಿ ಶಾಸಕರಾದ ಬಂಡೆಪ್ಪ ಕಾಶಂಪೂರು, ರಾಜಾ ವೆಂಕಟಪ್ಪ ನಾಯಕ, ಜೆಡಿಎಸ್ ಜಿಲ್ಲಾಧ್ಯಕ್ಷ ಎಂ. ವೀರುಪಾಕ್ಷಿ, ಮಹಾಂತೇಶ ಪಾಟೀಲ್ ಅತ್ತನೂರು, ತಾಲೂಕ ಜೆಡಿಎಸ್ ಅಧ್ಯಕ್ಷ ಬುಡನಗೌಡ ಪಾಟೀಲ್, ಮುಖಂಡರಾದ ಸಿದ್ದಣ್ಣತಾತ ಮುಂಡರಗಿ, ಸಿದ್ದನಗೌಡ ಮೂಡಲಗುಂಡ, ನಾಗರಾಜ ಪಾಟೀಲ್ ನೀಲಗಲ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ದೇವದುರ್ಗ ನಗರದಲ್ಲಿ ನಡೆದ ಜನರೊಂದಿಗೆ ಜನತಾ ದಳ ಕಾರ್ಯಕ್ರಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ನಿಖಿಲ್ ಕುಮಾರಸ್ವಾಮಿ ಪಾಲ್ಗೊಂಡಿದ್ದರು.

ನಮ್ಮ ಬಗ್ಗೆ ಇಲ್ಲ ಸಲ್ಲದ ಆರೋಪ

ನಾನು ರಾಜಕೀಯ ರಂಗ ಪ್ರವೇಶ ಮಾಡಿದಾಗಿನಿಂದಲ್ಲೂ ರೈತರು ಹಾಗೂ ಜನಪರವಾಗಿ ಹೋರಾಟ ಮಾಡುತ್ತಾ ಬಂದಿದ್ದೇನೆ. ನನ್ನ ಜೀವನ ಇರವವರೆಗೂ ರೈತರ ಪರವಾಗಿ ಹೋರಾಟ ಮಾಡುತ್ತೇನೆ. ಇದರ ಬಗ್ಗೆ ಎರಡು ಮಾತಿಲ್ಲ. ನಮ್ಮದು ಕುಟುಂಬ ರಾಜಕಾರಣ ಎಂದು ಹೇಳುತ್ತಿದ್ದಾರೆ. ನಮ್ಮದು ಕುಟುಂಬ ರಾಜಕಾರಣವಲ್ಲ. ನಮ್ಮ ಪಕ್ಷದಿಂದಲೇ ಉನ್ನತ ಸ್ಥಾನ ಪಡೆದುಕೊಂಡು ನಮ್ಮ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ತಾಜ್‌ವೆಸ್ಟ್ ಎಂಡ್‌ನಲ್ಲಿ ನಡೆಯಲಿರುವ ಎಕ್ಸ್‌ಪೋ | ದುಬೈನಲ್ಲಿ ಮನೆ ಖರೀದಿಸುವ ಅವಕಾಶ | 10 ಗ್ರಾಂ ಚಿನ್ನ, ದುಬೈ ಪ್ರವಾಸ ಸೇರಿದಂತೆ ಹಲವು ಆಫರ್

ಬೆಂಗಳೂರಿನಲ್ಲಿ ಇಂದು, ನಾಳೆ ಪರ್ವ ಗ್ರೂಪ್ ಎಕ್ಸ್‌ಪೋ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವದ ಅತಿ ಸುರಕ್ಷಿತ ತಾಣ ಎನಿಸಿರುವ ದುಬೈನಲ್ಲಿ ಹೂಡಿಕೆ ಮಾಡಬೇಕು ಎನ್ನುವ ಅನೇಕರ ಕನಸನ್ನು ನನಸು ಮಾಡಿಸಲು ಪರ್ವ ಗ್ರೂಪ್ ಮುಂದಾಗಿದೆ. ಇದರ ಭಾಗವಾಗಿ ಅತ್ಯಾಕರ್ಷಕ ಆಫರ್‌ಗಳೊಂದಿಗೆ ಎರಡು ದಿನದ ಎಕ್ಸ್‌ಪೋ ಬೆಂಗಳೂರಿನ ತಾಜ್‌ವೆಸ್ಟ್ ಎಂಡ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ವಿಶ್ವದ ಅತಿ ಸುರಕ್ಷಿತ ದೇಶ ಹಾಗೂ ವಿಶ್ವದ ಬಹುತೇಕ ರಾಷ್ಟ್ರದ ಜನರಿರುವ ದೇಶ ಎನಿಸಿರುವ ದುಬೈನಲ್ಲಿ ಹೂಡಿಕೆ ಮಾಡಲು ಉತ್ಸಾಹವಿದ್ದರೂ, ಸರಿಯಾದ ದಾರಿ ಕಾಣದೇ ಸುಮ್ಮನಿರುವ ರಾಜ್ಯದ ಜನರಿಗೆ ಇದೀಗ ದುಬೈನಲ್ಲಿನ ಹೂಡಿಕೆಗೆ 'ಸುರಕ್ಷಿತ' ಗೇಟ್‌ವೇ ಒಂದು ಸಿಕ್ಕಿದೆ. ಕರ್ನಾಟಕದ ಇಬ್ಬರು ಯುವ ಉತ್ಸಾಹ ಉದ್ದಿಮೆದಾರರು ಆರಂಭಿಸಿರುವ ಪರ್ವ ಗ್ರೂಪ್ ಇದೀಗ ಬೆಂಗಳೂರಿನ ತಾಜ್‌ವೆಸ್ಟ್ ಎಂಡ್‌ನಲ್ಲಿ ಎರಡು ದಿನಗಳ ಎಕ್ಸ್‌ಪೋವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೂಡಿಕೆ ಮಾಡುವವರಿಗೆ ಹತ್ತಾರು ಸೌಲಭ್ಯ ಹಾಗೂ ರಿಯಾಯಿತಿಯನ್ನು ನೀಡುವುದಾಗಿ ಪರ್ವ ಗ್ರೂಪ್ ಘೋಷಿಸಿದೆ. ದುಬೈನ ರೇರಾ ಏಜೆನ್ಸಿಯಿಂದ ಪರ್ವ ಗ್ರೂಪ್‌ಗೆ ಅಧಿಕೃತ ಮಾನ್ಯತೆ ಸಿಕ್ಕಿರುವುದರಿಂದ ಕಾನೂನಾತ್ಮಕವಾಗಿ ಯಾವುದೇ ಸಮಸ್ಯೆಯಿಲ್ಲ.

ನೀಲೇಶ್ ಹಾಗೂ ಶಶಿಧರ ಅವರು ಸ್ಥಾಪಿಸಿರುವ ಪರ್ವ ಗ್ರೂಪ್‌ನ ಅಂಗಸಂಸ್ಥೆಯಾಗಿರುವ ಪರ್ವ ರಿಯಾಲಿಟಿಯಿಂದ ಈ ಅಭಿಯಾನವನ್ನು ಆಯೋಜಿಸಲಾಗಿದೆ. ಬೆಂಗಳೂರಿನಲ್ಲಿ ಆಯೋಜಿಸಿರುವ 'ದುಬೈ ಪ್ರಾಪರ್ಟಿ ರೋಡ್ ಶೋ'ದಲ್ಲಿ ದುಬೈನಲ್ಲಿ ಹೂಡಿಕೆದಾರರಿಗೆ ಇರುವ ಅವಕಾಶ? ಎಷ್ಟು ಪ್ರಮಾಣದಲ್ಲಿ ಹೂಡಿಕೆ ಮಾಡಿದರೆ ಉತ್ತಮ ಲಾಭಾಂಶ ಸಿಗಲಿದೆ? ಖರೀದಿಸಿದ ಫ್ಲಾಟ್ ಅಥವಾ ಪ್ರಾಪರ್ಟಿಗಳ ಬಾಡಿಗೆಯಿಂದ ಬರುವ ಲಾಭವೆಷ್ಟು? ವಾಪಸು ಮಾರಬೇಕೆಂದರೆ ಇರುವ ಅವಕಾಶಗಳೇನು ಎನ್ನುವ ವಿಷಯದ ಬಗ್ಗೆ ವಿಶೇಷ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ.

ಪರ್ವ ಗ್ರೂಪ್ ದುಬೈನ ಸಂಸ್ಥಾಪಕರಾದ ನೀಲೇಶ್ ಎಚ್.ಪಿ ಹಾಗೂ ಸಹಸಂಸ್ಥಾಪಕರಾದ ಶಶಿಧರ್ ನಾಗರಾಜಪ್ಪ ಸೇರಿದಂತೆ ಸಂಸ್ಥೆಯ ತಜ್ಞರು ಸ್ಥಳದಲ್ಲಿ ಇರಲಿದ್ದಾರೆ. ಅವರಿಂದ ಹೂಡಿಕೆ ಸಂಬಂಧ ಮಾಹಿತಿ ಪಡೆಯಬೇಕು. ಹಲವರಿಗೆ ದುಬೈನಲ್ಲಿ ಗೃಹ ಅಥವಾ ವಾಣಿಜ್ಯ ಕಟ್ಟಡ ಖರೀದಿಸುವ ಆಸೆ ಇದೆ; ಅದನ್ನು ಕೆಲವು ಕಾಲದ ನಂತರ ಮಾರಾಟ ಮಾಡಿ, ಸೂಕ್ತ ಎನಿಸುವ ಲಾಭವನ್ನೂ ಪಡೆಯುವ ಅಭಿಲಾಷೆ ಇದೆ; ಆದರೆ ದುಬೈನಲ್ಲಿ ಬಂಡವಾಳ ಹೂಡಲು ಆಸಕ್ತಿ ಇದ್ದರೂ ಸೂಕ್ತ ಮಾರ್ಗದರ್ಶನದ ಕೊರತೆ ಇರಬಹುದು. ಇಂಥ ಕೊರತೆಯನ್ನು ತುಂಬಿಸಿ ಕೊಡುವುದೇ ನಮ್ಮ ಉದ್ದೇಶವಾಗಿದೆ ಎಂದು ಶಶಿಧರ್ ನಾಗರಾಜಪ್ಪ ಅಭಿಪ್ರಾಯಪಟ್ಟಿದ್ದಾರೆ.

ಎರಡು ದಿನ ಆಪ್ತ ಸಮಾಲೋಚನೆ: ಬೆಂಗಳೂರಿನ ತಾಜ್ ವೆಸ್ಟ್ ಎಂಡ್‌ನಲ್ಲಿ 28 ಹಾಗೂ 29ರಂದು ಪರ್ವ ರಿಯಾಲ್ಟಿಯ ತಜ್ಞರ ತಂಡ ಲಭ್ಯವಿರಲಿದೆ. ಈ ತಂಡ ದುಬೈನಲ್ಲಿ ಹೂಡಿಕೆಗೆ ಸಂಬಂಧಿಸಿದಂತೆ ಇರುವ ಹಲವು ಅನುಮಾನಗಳಿಗೆ ಸೂಕ್ತ ಮಾರ್ಗದರ್ಶನ ಹಾಗೂ ಸಲಹೆಯನ್ನು ನೀಡಲಿದೆ. ಎರಡು ದಿನದ ಎಕ್ಸ್‌ಪೋದಲ್ಲಿ ದುಬೈನಲ್ಲಿ ಹೂಡಿಕೆ ಮಾಡಿದರೆ ಅಥವಾ ಆಸಕ್ತಿ ತೋರಿದರೆ, ಅಂತವರಿಗೆ ದುಬೈಗೆ ಕಪಲ್ ರಿಟರ್ನ್ ಏರ್ ಟಿಕೆಟ್, ದುಬೈ ವೀಸಾ ಮತ್ತು 3 ರಾತ್ರಿಗಳ ವಾಸ್ತವ್ಯ. 10 ಗ್ರಾಂ ಚಿನ್ನ, ಗೋಲ್ಡನ್ ವೀಸಾ, ಗ್ಯಾರಂಟೀಡ್ ಬಯ್ ಬ್ಯಾಕ್ ಸೇರಿದಂತೆ ಹಲವು ಆಫರ್‌ಗಳನ್ನು ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ 9742117707 ಅಥವಾ +971 502568857 ಸಂಪರ್ಕಿಸಿ.

ಶಶಿಧರ ನಾಗರಾಜಪ್ಪ ಸಂಸ್ಥಾಪಕರು, ಸಿಇಒ ಪರ್ವ ಗ್ರೂಪ್

ನೀಲೇಶ್ ಎಚ್.ಪಿ. ಸಂಸ್ಥಾಪಕರು, ವ್ಯವಸ್ಥಾಪಕ ನಿರ್ದೇಶಕರು ಪರ್ವ ಗ್ರೂಪ್

PARVA REALTY

ಬೆಂಗಳೂರು ರೇಟಲ್ಲಿ ದುಬೈನಲ್ಲಿ ಮನೆ ಖರೀದಿಸುವ ಅವಕಾಶ

ಗ್ರಾಹಕರಿಗೆ ಸಿಗುವ ಸೌಲಭ್ಯ?

- 10 ವರ್ಷದ ಅವಧಿಗೆ ಶೇ.10ರಷ್ಟು ಬಾಡಿಗೆ ಆದಾಯ ನಿಶ್ಚಿತ
- ವಾಪಾಸು ಖರೀದಿಗೆ ಶೇ.100ರಷ್ಟು ಖರೀದಿಯ ಗ್ಯಾರಂಟಿ
- ಪಾವತಿಯ ವಿಶೇಷ ಯೋಜನೆಗಳು ಲಭ್ಯ
- ಶೂನ್ಯ ಆದಾಯ ತೆರಿಗೆ

ಯಾವೆಲ್ಲ ಸಂಸ್ಥೆಗಳು ಭಾಗಿ

- ಡಮ್ಯಾಕ್
- ಆಝೀಜಿ
- ಶೋಭಾ ರಿಯಾಲಿಟಿ
- ಡನ್ಯೂಬ್ ಪ್ರಾಪರ್ಟೀಸ್
- ಸಮನ ಡೆವಲಪರ್ಸ್
- ಎಮ್ಮಾರ್

10 ವರ್ಷ ಉಚಿತ ದುಬೈ ಗೋಲ್ಡ್ ವೀಸಾ ಸೌಲಭ್ಯ

ಪರ್ವ ಗ್ರೂಪ್ ಆಯೋಜಿಸಿರುವ ಈ ಎಕ್ಸ್‌ಪೋದಲ್ಲಿ ಭಾಗವಹಿಸಿ, ಮನೆ ಅಥವಾ ಭೂಮಿ ಖರೀದಿ ಮಾಡಿದರೆ 10 ವರ್ಷದ ಅವಧಿಗೆ ದುಬೈನ ಗೋಲ್ಡ್ ವೀಸಾವನ್ನು ನೀಡಲಾಗುತ್ತಿದೆ. ಈ ವೀಸಾವನ್ನು ಪಡೆದರೆ ಇತರೆ ವೀಸಾಗಳಿಗೆ ಇರುವ ಹಲವು ನಿರ್ಬಂಧಗಳಿರುವುದಿಲ್ಲ. ದುಬೈನಲ್ಲಿ ಹೂಡಿಕೆ ಮಾಡಲು, ಕುಟುಂಬ ಸದಸ್ಯರಿಗೆ ವೀಸಾ ಪಡೆಯಲು, ಸೌದಿ ರಾಷ್ಟ್ರಗಳಿಗೆ ಹೋಗಲು ಸೇರಿದಂತೆ ಹಲವು ಲಾಭಗಳಿವೆ. ದುಬೈ ಗೋಲ್ಡ್ ವೀಸಾದೊಂದಿಗೆ 10 ಗ್ರಾಮ್ ಬಂಗಾರ, ದುಬೈಗೆ ಮೂರು ದಿನ ಪ್ರವಾಸ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲಾಗುತ್ತಿದೆ.

ವಿಶ್ವವಾಣಿ

ಸಂಪಾದಕೀಯ

ನಾವೇ ಹುಲಿ ಜಾಗದಲ್ಲಿದ್ದೇವೆ

ಹುಲಿ, ನಮ್ಮ ವನ್ಯಜೀವಿಗಳ ಕಿರೀಟ ರತ್ನ. ಇದು ಕೇವಲ ಒಂದು ಕಾಡು ಪ್ರಾಣಿ ಅಲ್ಲ, ಇದು ಪರಿಸರದ ಸಮತೋಲನ ಕಾಪಾಡುವ ಪ್ರಮುಖ ಕೊಂಡಿ. ಭಾರತದಲ್ಲಿ ಹುಲಿಯನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಲಾಗಿದೆ. ಆದರೆ ಅಂತಹ ಪ್ರಾಮುಖ್ಯತೆ ಇರುವ ಹುಲಿಗಳನ್ನು ಚಾಮರಾಜನಗರ ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದಲ್ಲಿ ವಿಷ ಹಾಕಿ ಸಾಯಿಸಲಾಗಿದೆ. ಈ ಘಟನೆ ಇಡೀ ನಾಡೇ ತಲೆತಗ್ಗಿಸುವಂತೆ ಮಾಡಿದೆ. ಮಲೆ ಮಹದೇಶ್ವರರ ವಾಹನವೆಂದೇ ಪೂಜಿಸುವ ಹುಲಿಯನ್ನು ಬೆಟ್ಟದ ಸನ್ನಿಧಿಯಲ್ಲೇ ಹುಲಿಗಳಿಗೆ ವಿಷ ಹಾಕಿ ಸಾಯಿಸಿರುವುದು ಮನುಷ್ಯನ ಕ್ರೂರತೆಗೆ ಸಾಕ್ಷಿ. ತನ್ನ ಹಸುವನ್ನು ಸಾಯಿಸಿದ ಕೋಪದಲ್ಲಿ ತಂದೆ ಮತ್ತು ಮಗ ಇಬ್ಬರೂ ಸೇರಿ ಹುಲಿಗಳಿಗೆ ಹಸುವಿನ ಮಾಂಸದಲ್ಲೇ ವಿಷ ಹಾಕಿದ್ದಾರೆ ಎಂಬ ಆಘಾತಕಾರಿ ಮಾಹಿತಿ ತನಿಖೆಯ ವೇಳೆ ಹೊರಬಿದ್ದಿದೆ. ಈ ರೀತಿಯ ಕ್ರೂರತೆಯನ್ನು ಮೆರೆದವರನ್ನು ಈಗಾಗಲೇ ವಶಕ್ಕೆ ಪಡೆದಿದ್ದು, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬೇಕಾದ ನಿಟ್ಟಿನಲ್ಲಿ ತನಿಖೆ ಆರಂಭವಾಗಿದೆ. ಆದರೆ, ಇಲ್ಲಿ ತನ್ನ ಹಸುವನ್ನೇ ಸಾಯಿಸಿದ ಮನುಷ್ಯ ಇಷ್ಟೊಂದು ಉಗ್ರನಾಗಬೇಕಾದರೆ, ಕಾಡು ಪ್ರಾಣಿಗಳ ಸ್ಥಾನವನ್ನೇ ಕಬಳಿಸಿ, ಮನೆ, ರೆಸಾರ್ಟ್‌ಗಳನ್ನು ಕಟ್ಟಿಕೊಂಡಿರುವ ಮನುಷ್ಯನ ಮೇಲೆ ಆ ವ್ಯಾಘ್ರಗಳು ಎಷ್ಟು ಉಗ್ರವಾಗಬೇಕು? ಎಂಬುದನ್ನು ಯೋಚಿಸಬೇಕಿದೆ. ಕಾಡುಪ್ರಾಣಿಗಳು ಯಾವವೂ ನಮ್ಮ ವಾಸಸ್ಥಾನಗಳಿಗೆ ಬಂದು ನೆಲೆಸಿಲ್ಲ, ನಾವೇ ಅವುಗಳ ವಾಸಸ್ಥಾನವನ್ನು ಕಬಳಿಸಿಕೊಂಡಿದ್ದೇವೆ ಎಂಬ ಸಾಮಾನ್ಯ ಪ್ರಜ್ಞೆಯೂ ಮನುಷ್ಯನಿಗೆ ಇಲ್ಲವಾಯಿತೇ? ಇಡೀ ಮನುಕುಲದ ಅಸ್ತಿತ್ವವೇ ವನ್ಯಜೀವಿ ಪ್ರಾಣಿಗಳ ಸಂರಕ್ಷಣೆಯಲ್ಲಿದೆ ಎಂಬುದನ್ನು ಮನುಷ್ಯ ಅರಿಯದೇ ಹೋದರೆ ಮಾನವ ಮತ್ತು ವನ್ಯಜೀವಿಗಳ ನಡುವಿನ ಸಂಘರ್ಷಕ್ಕೆ ಕೊನೆ ಇಲ್ಲದಂತಾಗುತ್ತದೆ. ಸರಕಾರ ಕೂಡ ಕಾಡಂಚಿನಲ್ಲಿ ವಾಸಿಸುವ ಜನರಲ್ಲಿ ಅರಣ್ಯ ಹಾಗೂ ವನ್ಯ ಜೀವಿಗಳ ಸಂರಕ್ಷಣೆಯ ಕುರಿತು ಅರಿವಿನ ಜಾಗೃತಿಯ ಕಾರ್ಯಕ್ರಮ ಕೈಗೊಳ್ಳಬೇಕಿದೆ. ಪ್ರತಿಯೊಂದು ವನ್ಯಜೀವಿಯೂ ಮನುಷ್ಯ ಸಮಾಜದ ಸ್ನೇಹಜೀವಿ ಹಾಗೂ ದೇಶದ ಸಂಪತ್ತು ಎಂಬ ನಿಟ್ಟಿನಲ್ಲಿ ವ್ಯಾಪಕ ಪ್ರಚಾರಾಂದೋಲನ ಹಮ್ಮಿಕೊಳ್ಳಬೇಕಿದೆ.

ಸೊಂಪಾದಕೀಯ

ಒಡಿಯಾ ಮತ್ತು ಒಡೆಯ

ಕನ್ನಡ ಚಿತ್ರರಂಗ ಪ್ರಕಾಶಿಸುತ್ತಿದೆ ಅನ್ನೋ ಮಾತುಗಳನ್ನು ಕೇಳಿ ಸದ್ಯಕ್ಕಂತೂ ಬಹಳ ದಿನಗಳಾಗಿವೆ ಅಂತ ಎಲ್ಲರಿಗೂ ಅನ್ನಿಸುತ್ತಿರೋದು ಸಹಜ. ಇಂತಹ ಹೊತ್ತಿನಲ್ಲೇ ಬೆಂಗಳೂರಿನಲ್ಲಿ ಪರಭಾಷೆಯ ಚಿತ್ರವೊಂದು ಸದ್ದು ಮಾಡುತ್ತಿದೆ. ನಮ್ಮ ಜನ ಕನ್ನಡ ಸಿನಿಮಾ ಬಿಟ್ಟು ಬೇರೆ ಭಾಷೆಯ ಸಿನಿಮಾಗಳನ್ನೇ ಜಾಸ್ತಿ ನೋಡುವ ಈ ಕಾಲದಲ್ಲಿ ಅದೇನೂ ಹೊಸ ವಿಷಯ ಅಲ್ಲ ಬಿಡಿ ಅಂತ ನೀವನ್ನಬಹುದು. ಆದರೆ ಇದು ತಮಿಳು, ತೆಲುಗು, ಹಿಂದಿ ಅಥವಾ ಸೋ ಕಾಲ್ಡ್ ಎಂಥ ಸಿನಿಮಾ ಬಂದ್ರೂ ನಮ್ಮ ಜನ ಹೊಗಳುವ ಮಲಯಾಳಂ ಚಿತ್ರಕ್ಕೆ ಸಂಬಂಧಪಟ್ಟ ಸುದ್ದಿ ಅಲ್ಲ. ಬದಲಾಗಿ ಬೆಂಗಳೂರು ಅನ್ನೋ ಕರ್ನಾಟಕದ ರಾಜಧಾನಿಯಲ್ಲಿ ಈಗ ಒಡಿಯಾ ಚಿತ್ರವೊಂದು ಗಲ್ಲಾಪೆಟ್ಟಿಗೆ ಧೂಳೆಬ್ಬಿಸುತ್ತಿದೆ. ಬೌ ಬುಟ್ಟು ಭೂತ ಅನ್ನೋ ಹೆಸರಿನ ಈ ಚಿತ್ರ ಈಗ ಬೆಂಗಳೂರಿನ ಅನೇಕ ಮಲ್ಟಿಪ್ಲೆಕ್ಸ್ ಗಳಲ್ಲಿ ಭರ್ಜರಿ ಪ್ರದರ್ಶನ ಕಾಣುತ್ತಿದೆ. ಆದರೆ ಇದ್ದಕ್ಕಿದ್ದ ಹಾಗೆ ಬೆಂಗಳೂರಿನಲ್ಲಿ ಒಡಿಯಾ ಸಿನಿಮಾಗೆ ಮಾರ್ಕೆಟ್ ಹೇಗೇ ಸೃಷ್ಟಿ ಆಯ್ತು ಅನ್ನೋದು ಗೊಂದಲದ ವಿಷಯ ಆಗಿದೆ. ಹಾಗಾಗಿ ಈ ಸಿನಿಮಾವನ್ನು ನೋಡುವ ಪ್ರೇಕ್ಷಕ ವರ್ಗ ಯಾವುದು ಅಂತ ಎಲ್ಲರಿಗೂ ಕುತೂಹಲ. ಬೆಂಗಳೂರಿನ ಕನ್ನಡಿಗರು ಮತ್ತು ಇತರ ಭಾಷೆಗಳ ಜನ ಒಡಿಯಾ ಸಿನಿಮಾ ನೋಡ್ತಾ ಇದ್ದಾರಾ ಅಥವಾ ಒಡಿಯಾ ಮಾತನಾಡುವ ಜನರೇ ಬೆಂಗಳೂರಿನಲ್ಲಿ ಅಷ್ಟೊಂದು ಜನ ಇದ್ದಾರಾ ಅನ್ನೋದು ಈಗ ಲಕ್ಷಗಳನ್ನು ಮೀರಿ ಕೋಟಿಗಟ್ಟಲೇ ದುಡ್ಡು ದುಡಿಯುತ್ತಿರುವ ಈ ಸಿನಿಮಾದ ಬಗೆಗಿನ ಯಕ್ಷ ಪ್ರಶ್ನೆ ಆಗಿದೆ. ಸುಮಾರು 20ಕ್ಕೂ ಹೆಚ್ಚು ಮಲ್ಟಿಪ್ಲೆಕ್ಸ್ ಗಳಲ್ಲಿ ಈ ಚಿತ್ರವನ್ನು ಪ್ರದರ್ಶನ ಮಾಡಲಾಗುತ್ತಿದೆ. ಮೇಲ್ನೋಟಕ್ಕೆ ಹಾರರ್ ಸಿನಿಮಾದಂತೆ ಕಾಣುವ ಈ ಚಿತ್ರ ಬಿಡುಗಡೆ ಆಗಿರುವ ಎಲ್ಲ ಕಡೆ ಹೌಸ್ ಫುಲ್ ಪ್ರದರ್ಶನ ಕಾಣ್ತಾ ಇದೆ. ಅತ್ತ ಬಿಡುಗಡೆ ಆಗಿರುವ ಸ್ಟಾರ್ ಗಳೇ ತುಂಬಿರುವ ಹಿಂದಿಯ 'ಹೌಸ್ ಫುಲ್ 5' ಚಿತ್ರ ಕೂಡಾ ಹೌಸ್‌ಫುಲ್ ಆಗದಿದ್ದರೂ ಈ ಹೆಸರೇ ಇಲ್ಲದ ಚಿತ್ರಕ್ಕೆ ಜನ ಮುಗಿಬಿದ್ದಿದ್ದಾರೆ. ಅದೇನೇ ಇರಲಿ, ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ, ಕನ್ನಡಿಗನೇ ಒಡೆಯ ಅನ್ನೋ ಕಾಲದಲ್ಲಿ ಒಡಿಯಾ ಸಿನಿಮಾವೊಂದು ಈ ರೀತಿ ಸದ್ದು ಮಾಡ್ತಾ ಇರೋದು ವಿಶೇಷವೇ ಸರಿ.

ಸಂಪಾದಕರ ಸದ್ಯಶೋಧನೆ

ಪೈಲಟ್‌ಗೆ ನಿದ್ದೆ ಬಂದರೆ?

ವಿಮಾನ ಹಾರುವಾಗ ಪೈಲಟ್‌ಗಳಿಗೆ ನಿದ್ದೆ ಬಂದರೆ? ಇಂಥ ಪ್ರಶ್ನೆ ವಿಮಾನ ಪ್ರಯಾಣಿಕರ ತಲೆಯಲ್ಲಿ ಹಾದುಹೋದರೆ ಆಶ್ಚರ್ಯವಿಲ್ಲ. ವಿಮಾನಯಾನ ಕ್ಷೇತ್ರದಲ್ಲಿ ಸುರಕ್ಷತೆ ಅತ್ಯಂತ ಪ್ರಾಮುಖ್ಯತೆ ಹೊಂದಿದೆ. ವಿಮಾನವನ್ನು ನಿಭಾಯಿಸುವ ಪೈಲಟ್‌ಗಳು ಉನ್ನತ ಮಟ್ಟದ ಗಮನ, ಸಾಮರ್ಥ್ಯ ಮತ್ತು ತೀಕ್ಷ್ಣತೆಯೊಂದಿಗೆ ಕಾರ್ಯನಿರ್ವಹಿಸುತ್ತಾರೆ. ಆದರೆ, ನಿದ್ದೆ ಅಥವಾ ತೂಕಡಿಸುವ ಸ್ಥಿತಿ ಪೈಲಟ್‌ಗಳಿಗೆ ಎದುರಾದರೆ ಅದು ಪ್ರಯಾಣಿಕರ ಜೀವಕ್ಕೆ ಅಪಾಯ ತರುವ ಸಾಧ್ಯತೆ ಇದೆ. ಪೈಲಟ್‌ಗಳಿಗೆ ನಿದ್ದೆ ಬರುವ ಪ್ರಮುಖ ಕಾರಣಗಳಿಲ್ಲದಿಲ್ಲ. ಇವುಗಳಲ್ಲಿ ಮುಖ್ಯವಾದುದು, ದೀರ್ಘ ಸಮಯದ ಕಾರ್ಯನಿರ್ವಹಣೆ (Long Duty Hours). ಪೈಲಟ್‌ಗಳ ಕೆಲಸದ ಅವಧಿಗಳು ಕೆಲವೊಮ್ಮೆ 10–14 ಗಂಟೆಗಳನ್ನು ಮೀರಬಹುದು. ಈ ರೀತಿಯ ದೀರ್ಘ ಹಾರಾಟಗಳು ಮತ್ತು ಸಮಯ ಬದಲಾವಣೆಗಳಿಂದ ದೈಹಿಕ ಹಾಗೂ ಮಾನಸಿಕ ಬಳಲಿಕೆ, ದಣಿವು ಉಂಟಾ ಗಬಹುದು. ಇದು ತೂಕಡಿಕೆ, ನಿದ್ದೆಗೆ ಕಾರಣವಾಗುತ್ತದೆ. ವಿಮಾನಗಳು ವಿಭಿನ್ನ ಸಮಯ ವಲಯಗಳಲ್ಲಿ ಹಾರುವ ಕಾರಣ, ನಿದ್ರಾಚಕ್ರ (circadian rhythm) ಅಸ್ಥಿರವಾಗುತ್ತದೆ. ಇದರಿಂದಾಗಿ ಪೈಲಟ್‌ಗಳು ಪ್ರತಿ ಹಾರಾಟಕ್ಕೂ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳಬೇಕಾಗುತ್ತದೆ. ಇದು ನಿದ್ದೆಗೆ ಶಕ್ತಿ ಕುಂದಿಸಲು ಕಾರಣವಾಗುತ್ತದೆ. ಪೈಲಟ್ ಗಳು ಬೇರೆ ಬೇರೆ ಪರಿಸ್ಥಿತಿ, ಜಾಗ ಮತ್ತು ಸಮಯದಲ್ಲಿ ಕೆಲಸ ನಿರ್ವಹಿಸುವುದರಿಂದ ಅವರಿಗೆ ಬೇಕಾದಾಗ ನಿದ್ದೆ ಬರದಿರುವ ಸಾಧ್ಯತೆ ಹೆಚ್ಚು. ಇದು ನಿದ್ರಾ ಕೊರತೆ (Sleep Deprivation) ಗೂ ಕಾರಣವಾಗಬಹುದು. ಅನುಭವ, ಕೆಲಸದ ಒತ್ತಡ, ವೈಯಕ್ತಿಕ ಸಮಸ್ಯೆಗಳು ಅಥವಾ ನಿರಂತರ ಒತ್ತಡದಿಂದಾಗಿ ಮನಸ್ಸು ಕಲ್ಲವಿಲಗೊಳ್ಳಬಹುದು. ಇದರಿಂದ ಏಕಾಗ್ರತೆ ಕಡಿಮೆ ಆಗಿ ನಿದ್ದೆಗೆ ಕಾರಣವಾಗಬಹುದು. ಪೈಲಟ್‌ಗೆ ನಿದ್ದೆ ಬಂದಾಗ ಅವನು/ಅವಳು ಮಹತ್ವದ ಸೂಚನೆಗಳನ್ನು ಗಮನಿಸಲು ವಿಫಲರಾಗಿ ಲೋಪಕ್ಕೆ ಎರವಾಗಬಹುದು. ಇದರಿಂದ ಹಠಾತ್ ಪರಿಸ್ಥಿತಿಗೆ ತ್ವರಿತ ಪ್ರತಿಕ್ರಿಯೆ ನೀಡುವ ಸಾಮರ್ಥ್ಯ ಕುಂದಬಹುದು. ಒಬ್ಬ ಪೈಲಟ್ ನಿದ್ರಿಸಿದರೆ ಇತರ ಪೈಲಟ್ ಅಥವಾ ಸಹಾಯಕನಿಗೆ ಅಧಿಕ ಒತ್ತಡ ಬರುತ್ತದೆ. ಇದು ಟೀಮ್ ವರ್ಕ್‌ನಲ್ಲಿಯೂ ವ್ಯತ್ಯಯ ಉಂಟುಮಾಡಬಹುದು. ವಿಮಾನ ಸಂಸ್ಥೆಗಳು ಹಾಗೂ ವಿಮಾನ ನಿಯಂತ್ರಣ ಸಂಸ್ಥೆಗಳು (ಅಂದರೆ DGCA, FAA, EASA) ಪೈಲಟ್‌ಗಳ ಕರ್ತವ್ಯದ ಅವಧಿಗೆ ಗರಿಷ್ಠ ಮಿತಿಯನ್ನು ವಿಧಿಸಿವೆ. ಉದಾಹರಣೆಗೆ, ಗರಿಷ್ಠ ಹಾರಾಟದ ಸಮಯವನ್ನು 8–9 ಗಂಟೆಗಳಿಗೆ ಮಿತಿಗೊಳಿಸಲಾಗಿದೆ. ಒಂದು ಹಾರಾಟದ ನಡುವೆ ಕನಿಷ್ಠ ಹತ್ತು ಗಂಟೆಗಳ ವಿಶ್ರಾಂತಿ ಅಗತ್ಯ ಎಂದು ಹೇಳಿವೆ. ಆಗತ್ಯವಿದ್ದರೆ, ಬದಲಿ ಪೈಲಟ್ ಮತ್ತು ದೀರ್ಘ ಹಾರಾಟಗಳಿಗಾಗಿ ಹೆಚ್ಚುವರಿ ಪೈಲಟ್‌ಗಳನ್ನು ನಿಯೋಜಿಸಬ ಹುದೆಂದು ಸೂಚಿಸಿವೆ. ದೀರ್ಘ ಹಾರಾಟಗಳ ಸಂದರ್ಭದಲ್ಲಿ (ಉದಾ: ಇಂಟರ್‌ಕಾಂಟಿನೆಂಟಲ್ ಫ್ಲೈಟ್ಸ್), ಪೈಲಟ್‌ಗಳಿಗೆ ವಿಮಾನದಲ್ಲಿಯೇ ವಿಶ್ರಾಂತಿ ಪಡೆಯುವ ಅವಕಾಶ ನೀಡಲಾಗುತ್ತದೆ. ಕೆಲವು ವಿಮಾನಗಳಲ್ಲಿ 'ಪೈಲಟ್ ವಿಶ್ರಾಂತಿ ಕೋಣೆ' ಎಂಬ ವಿಭಜಿತ ವಿಭಾಗವನ್ನು ಇದಕ್ಕಾಗಿ ನಿರ್ಮಿಸಲಾಗಿದೆ. ಅಲ್ಲಿ ಪೈಲಟ್‌ಗಳು ಲಘು ನಿದ್ರೆ ಮಾಡಬಹುದು. ಪ್ರತಿ ವಿಮಾನದಲ್ಲಿ ಕನಿಷ್ಠ ಇಬ್ಬರು ಪೈಲಟ್‌ಗಳು ಇರುತ್ತಾರೆ – ಕ್ಯಾಪ್ಟನ್ ಮತ್ತು ಫಸ್ಟ್ ಆಫೀಸರ್. ಒಂದು ವೇಳೆ ಒಬ್ಬರಿಗೆ ನಿದ್ರೆ ಬಂದರೆ ಅಥವಾ ಅಸ್ವಸ್ಥತೆಯುಂಟಾದರೆ ಇತರರು ನಿಯಂತ್ರಣ ತೆಗೆದುಕೊಳ್ಳುತ್ತಾರೆ. ವಿಮಾನ ಅಪಘಾತಕ್ಕೆ ಪೈಲಟ್ ನಿದ್ದೆಯೇ ಕಾರಣವಾದ ಪ್ರಸಂಗಗಳು ಇವೆ. 2010 ರಲ್ಲಿ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ 812 ಮಂಗಳೂರು ವಿಮಾನ ನಿಲ್ದಾಣದಲ್ಲಿ ಭೀಕರ ಅಪಘಾತಕ್ಕೀಡಾಯಿತು. ಅದಕ್ಕೆ ಪೈಲಟ್ ನಿದ್ರೆಯೇ ಕಾರಣವೆಂದು ತನಿಖೆಯಿಂದ ಗೊತ್ತಾಯಿತು. ಈ ಅಪಘಾತದಲ್ಲಿ 158 ಜನರು ಸಾವಿಗೀಡಾದರು. 2005 ರಲ್ಲಿ ಸೈಪ್ರಸ್ ನಿಂದ ಗ್ರೀಸ್‌ಗೆ ಹಾರುತ್ತಿದ್ದ ಹಿಲಿಯೋಸ್ ಏರ್ ವೇಸ್ ವಿಮಾನದಲ್ಲಿ ಆಕ್ಸಿಜನ್ ಕೊರತೆಯಿಂದ ಪೈಲಟ್ ಗಳು ಕಾಕ್‌ಪಿಟ್ ನಲ್ಲಿ ನಿದ್ದೆ ಹೋದರು. ವಿಮಾನ ನಿಯಂತ್ರಣ ತಪ್ಪಿ ಪರ್ವತ ಪ್ರದೇಶದಲ್ಲಿ ಬಿದ್ದಿತು. ಹೆಚ್ಚಿನ ವಿಮಾನಗಳಲ್ಲಿ ಪೈಲಟ್ ಚಲನವಲನ ಇಲ್ಲದಿದ್ದರೆ ಅಲಾರ್ಮ್ ಸಿಸ್ಟಮ್‌ಗಳು ಎಚ್ಚರಿಸುತ್ತವೆ. ಸ್ಲೀಪ್ ಟ್ರ್ಯಾಕಿಂಗ್ ವೇರಬಲ್ ಸಿಸ್ಟಮ್ ಮೂಲಕ ಪೈಲಟ್‌ಗಳ ನಿದ್ದೆಯ ಮೇಲೆ ಕಣ್ಣಿಡಲಾಗುತ್ತದೆ. ಏಟಿಸಿ (Air Traffic Control) ಕೂಡ ಪೈಲಟ್‌ಗಳ ಪ್ರತಿಕ್ರಿಯೆ ಗಮನಿಸುತ್ತವೆ. ಪ್ರತಿಕ್ರಿಯೆ ಇಲ್ಲದಿದ್ದರೆ ತುರ್ತು ಕ್ರಮ ಕೈಗೊಳ್ಳಬಹುದು.

ಪ್ಯಾಲೆಸ್ತೀನಿಯರ ನರಮೇಧ ನಡೆಸಿದ್ದ ಪಾಕಿಸ್ತಾನ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ

vveditoped@gmail.com

camohanbn@gmail.com

ಇಸ್ರೇಲ್ ನಡೆಸಿದ್ದ ಆರು ದಿನಗಳ ಯುದ್ಧದ ಬಗ್ಗೆ ಬಹುತೇಕರಿಗೆ ತಿಳಿದಿದೆ. ಇಸ್ರೇಲ್ ಕೇವಲ ಆರು ದಿನಗಳಲ್ಲಿ ತನ್ನ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಬಳಸಿಕೊಂಡು 1967ರಲ್ಲಿ ಈಜಿಪ್ಟ್, ಸಿರಿಯಾ ಹಾಗೂ ಜೋರ್ಡಾನ್ ದೇಶಗಳ ಮೇಲೆ ಯುದ್ಧ ಮಾಡಿ ಇಡೀ ಜಗತ್ತಿಗೆ ತನ್ನ ಸೈನ್ಯದ ಶಕ್ತಿ ಪ್ರದರ್ಶನವನ್ನು ತೋರಿಸಿತ್ತು. ಈ ಯುದ್ಧದಲ್ಲಿ ಇಸ್ರೇಲ್ ಪರವಾಗಿ ಅಮೆರಿಕ ಸಂಪೂರ್ಣವಾಗಿ ನಿಂತಿತ್ತು. ಈ ಯುದ್ಧದ ನಂತರ ಮಧ್ಯಪ್ರಾಚ್ಯದಲ್ಲಿ ಇಸ್ರೇಲ್ ಅರಬ್ಬರನ್ನು ಮೀರಿಸಿದ ಹೊಸ ಶಕ್ತಿಯಾಗಿ ಹೊರಹೊಮ್ಮಿತ್ತು. ಅರಬ್ಬರ ನಾಡಿನ ದೊಡ್ಡ ದೊಡ್ಡ ರಾಜಕೀಯ ನಾಯಕರು ಕೈಚೆಲ್ಲಿ ಕುಳಿತಿದ್ದರು. ಆ ಸಂದರ್ಭದಲ್ಲಿ 'ಪ್ಯಾಲೆಸ್ತೀನ್ ಲಿಬರೇಶನ್ ಸಂಘಟನೆ' ಹುಟ್ಟಿಕೊಂಡಿತು. 1969ರಲ್ಲಿ ಜೋರ್ಡಾನ್‌ನಲ್ಲಿದ್ದ ಪ್ಯಾಲೆಸ್ತೀನಿಗಳು ಪ್ರತ್ಯೇಕ ರಾಷ್ಟ್ರಕ್ಕೆ ಬೇಡಿಕೆಯಿಡುವ ಸಲುವಾಗಿ ತಮ್ಮ ಸಂಘಟನೆ ಮೂಲಕ ಚಳವಳಿಗಳನ್ನು ಮಾಡಲು ಪ್ರಾರಂಭಿಸಿದ್ದರು. ಜೋರ್ಡಾನ್ ದೇಶದೊಳಗೆ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿದ್ದರು. ಆರು ದಿನಗಳ ಯುದ್ಧದ ಸೋಲಿನಿಂದ ಕಂಗೆಟ್ಟಿದಂತಹ ಅರಬ್ಬರ ನಾಡಿನಿಂದ ಸಾವಿರಾರು ಯುವಕರು ಈ ಸಂಘಟನೆಗೆ ಸೇರಿಕೊಂಡರು. ಜಗತ್ತಿನಾದ್ಯಂತ ಹಲವು ಮುಸಲ್ಮಾನರು ಈ ಸಂಘಟನೆಗೆ ಸೇರಿಕೊಂಡರು, 1969ರಲ್ಲಿ ಜೋರ್ಡಾನಿನಲ್ಲಿದ್ದಂತಹ ಪ್ಯಾಲೆಸ್ತೀನಿಗಳ ಮೇಲೆ ಇಸ್ರೇಲಿ ಪಡೆಗಳು ದಾಳಿ ನಡೆಸಿದವು. ಜೋರ್ಡಾನಿನ ಸೈನ್ಯದ ಸಹಾಯದಿಂದ ಪ್ಯಾಲೆಸ್ತೀನಿ ಪ್ರತ್ಯೇಕತಾವಾದಿ ಸಂಘಟನೆ ಇಸ್ರೇಲ್ ಸೈನಿಕರ ವಿರುದ್ಧ ಹೋರಾಡಿ ವಿಜಯ ಸಾಧಿಸಿತು. ಮೊಟ್ಟಮೊದಲ ಬಾರಿಗೆ ಇಸ್ರೇಲ್ ಸೈನ್ಯಕ್ಕೆ ಪ್ಯಾಲೆಸ್ತೀನಿಗಳಿಂದ ಹಿನ್ನಡೆಯಾಗಿತ್ತು, ಈ ದಾಳಿಯ ನೇತೃತ್ವವನ್ನು ವಹಿಸಿಕೊಂಡಿದ್ದವನು ಪ್ಯಾಲೆಸ್ತೀನಿ ನಾಯಕ 'ಯಾಸೀರ್ ಅರಾಫತ್'.

ಅರಬ್ಬರು ಮಾಡದ ಕೆಲಸವನ್ನು ಜೋರ್ಡಾನ್ ಸೈನ್ಯದ ನೆರವಿನಿಂದ 'ಯಾಸಿರ್ ಅರಾಫತ್' ಮಾಡಿದ್ದನು. ಮುಂದಿನ ದಿನಗಳಲ್ಲಿ 'ಯಾಸಿರ್ ಅರಾಫತ್'ನ ಜನಪ್ರಿಯತೆ ಅರಬ್ಬರಲ್ಲಿ ಹೆಚ್ಚತೊಡಗಿತು. ಅರಾಫತ್– ಪ್ಯಾಲೆಸ್ತೀನಿ ಸಂಘಟನೆಯ ನೂತನ ನಾಯಕನಾಗಿ ಹೊರಹೊಮ್ಮಿದ್ದ, ಆದರೆ ಅರಬ್ಬರಲ್ಲಿ ನಿಧಾನವಾಗಿ ಒಗ್ಗಟ್ಟು ಮುರಿದಿತ್ತು. ಸೌದಿ ಅರೇಬಿಯಾ ಹಾಗೂ ಇರಾನ್ ದೇಶಗಳು ಅಮೆರಿಕ ದೇಶದೊಡನೆ ಕೈ ಜೋಡಿಸಿದ್ದವು. ಇತ್ತ ಜೋರ್ಡಾನ್ ಹಾಗೂ ಈಜಿಪ್ಟ್ ದೇಶಗಳು ನಿಧಾನವಾಗಿ ಅಮೆರಿಕ ದೇಶದೊಡನೆ ಮಾತುಕತೆಯಾಡಲು ಪ್ರಾರಂಭಿಸಿದ್ದವು. ಜೋರ್ಡಾನ್ ನಿಧಾನವಾಗಿ ಇಸ್ರೇಲ್ ದೇಶದೊಡನೆ ಮಾತುಕತೆ ಆರಂಬಿಸಿತ್ತು, ಜೋರ್ಡಾನ್‌ನಲ್ಲಿ ನಿಧಾನವಾಗಿ ಮುಸ್ಲಿಂ ದೊರೆ 'ಹುಸೇನ್'ನ ಜನಪ್ರಿಯತೆ ಕುಗ್ಗತೊಡಗಿತು. ಜೋರ್ಡಾನ್ ಸೈನ್ಯ ಆತನ ಮಾತನ್ನು ಕೇಳಲು ತಯಾರಿರಲಿಲ್ಲ, ಆತನ ವಿರುದ್ಧ ಕೆಲಸ ಮಾಡತೊಡಗಿತ್ತು. ಪ್ಯಾಲೆಸ್ತೀನಿ ಸಂಘಟನೆ ಯಾವಾಗ ಬೇಕಾದರೂ ಮಿಂಚಿನ ದಾಳಿಯ ಮೂಲಕ ಕಾರ್ಯಾಚರಣೆ ನಡೆಸಿ ಜೋರ್ಡಾನ್ ಪ್ರಾಂತ್ಯದಲ್ಲಿ ತಾನು ಕೇಳುತ್ತಿರುವ ಪ್ರತ್ಯೇಕ ಪ್ಯಾಲೆಸ್ತೀನಿ ರಾಷ್ಟ್ರವನ್ನು ಪಡೆದುಬಿಡಬಹುದೆಂಬ ಭಯ ಅವನಿಗಿತ್ತು. 'ಹುಸೇನ್'ನನ್ನು ಕೊಲ್ಲಲು ಪ್ಯಾಲೆಸ್ತೀನಿಗಳು ಹಲವು ಪ್ರಯತ್ನಗಳನ್ನು ಮಾಡಿದ್ದರು, ಅದೃಷ್ಟವಶಾತ್ ಆತನಿಗೆ ಏನೂ ಆಗಲಿಲ್ಲ. 'ಜೋರ್ಡಾನ್' ದೇಶದಲ್ಲಿ ಸಣ್ಣದಾದ ಭೂಭಾಗವನ್ನು ಪ್ಯಾಲಿಸ್ತೀನಿಗಳು ವಶಪಡಿಸಿಕೊಂಡು ನಿರಂತರವಾಗಿ ಇಸ್ರೇಲ್ ಮೇಲೆ ಸಣ್ಣ ಪುಟ್ಟ ದಾಳಿಗಳನ್ನು ಮಾಡುತ್ತಿದ್ದರು. ಇದರಿಂದ ಹುಸೇನ್ ತನ್ನ ದೇಶದಲ್ಲಿ ನಿಧಾನವಾಗಿ ತನ್ನ ನೆಲೆಯನ್ನೇ ಕಳೆದುಕೊಳ್ಳುತ್ತಿದ್ದ. ತನ್ನ ಸೈನ್ಯದ ಕೆಲವು ಅಧಿಕಾರಿಗಳ ಮೇಲೆ ನಂಬಿಕೆಯನ್ನು ಕಳೆದುಕೊಂಡಿದ್ದ 'ಹುಸೇನ್' ಪ್ಯಾಲೆಸ್ತೀನಿಗಳನ್ನು ಬಗ್ಗು ಬಡೆಯಲು ಪಾಕಿಸ್ತಾನದ ಸಹಾಯ ಕೋರಿದ್ದ. ಸೆಪ್ಟೆಂಬರ್ 1970ರಲ್ಲಿ ಪ್ಯಾಲಿಸ್ತೀನಿಗಳು 'ಸ್ವಿಸ್ ಏರ್' ವಿಮಾನವನ್ನು ಅಪಹರಿಸಿ ಈಜಿಪ್ಟಿನ ಕೈರೋನಲ್ಲಿ ಇಳಿಸಿ, ಪ್ರಯಾಣಿಕರನ್ನು ಕೆಳಗಿಳಿಸಿ ಕ್ಯಾಮೆರಾಗಳ ಮುಂದೆ ಇಡೀ ವಿಮಾನಕ್ಕೆ ಬೆಂಕಿ ಹಚ್ಚಿದ್ದರು. ಇದಾದ ನಂತರ ಜೋರ್ಡಾನ್ನಿನ 'ಇಬ್ರಿಡ್' ಪ್ರಾಂತ್ಯವನ್ನು ಸ್ವತಂತ್ರವೆಂದು ಘೋಷಿಸಿ ಪ್ಯಾಲಿಸ್ತೀನಿ ಭೂಭಾಗವೆಂದರು. ಇನ್ನು ಸುಮ್ಮನಿರುವುದು ಸರಿಯಿಲ್ಲವೆಂದು 'ಹುಸೇನ್' ಜೋರ್ಡಾನ್ ದೇಶದಲ್ಲಿ 'ಮಾರ್ಷಿಯಲ್ ಕಾನೂನು' ಘೋಷಿಸಿಬಿಟ್ಟನು.

1970ರ ಸೆಪ್ಟೆಂಬರ್ ತಿಂಗಳಲ್ಲಿ ಜೋರ್ಡಾನ್ ಸೈನ್ಯ ಹಾಗೂ ಪಾಕಿಸ್ತಾನದಿಂದ ತರಬೇತಿ ನೀಡಲು ಬಂದಿದ್ದ 'ಜಿಯಾ ಉಲ್ ಹಕ್' ನೇತೃತ್ವದ ಪಡೆಗಳು ಇರಾನಿ ಸೈನಿಕರೊಂದಿಗೆ 'ಇಬ್ರಿಡ್' ನಗರಕ್ಕೆ ಪ್ಯಾಲೆಸ್ತೀನಿಗಳನ್ನು ಸದೆಬಡಿಯಲು ನುಗ್ಗಿದವು. ಇಡೀ ಕಾರ್ಯಾಚರಣೆ ಪಾಕಿಸ್ತಾನದ ಸೇನಾನಾಯಕ 'ಜಿಯಾ ಉಲ್ ಹಕ್' ನೇತೃತ್ವದಲ್ಲಿ ನಡೆಯಿತು. 'ಇಬ್ರಿಡ್' ಪ್ರಾಂತ್ಯದ ಗಲ್ಲಿ ಗಲ್ಲಿಗಳಲ್ಲಿ ಪ್ಯಾಲಿಸ್ತೀನಿಗಳನ್ನು ಮನಬಂದಂತೆ ಕೊಲ್ಲಲಾಯಿತು. ಒಂದು ಅಂದಾಜಿನ ಪ್ರಕಾರ, ಸುಮಾರು 25,000 ಪ್ಯಾಲಿಸ್ತೀನಿ ಮುಸಲ್ಮಾನರನ್ನು ಈ ಕಾರ್ಯಾಚರಣೆಯಲ್ಲಿ ಕೊಲ್ಲಲಾಗಿದೆ. ಸಿರಿಯಾ ಪ್ಯಾಲೆಸ್ತೀನಿಗಳ ಸಹಾಯಕ್ಕೆ ನಿಲ್ಲಲು ಮುಂದೆ ಬಂದಿತ್ತು. ಆದರೆ ಇಸ್ರೇಲ್ ಹಾಗೂ ಅಮೆರಿಕ ನೀಡಿದ ಎಚ್ಚರಿಕೆಯಿಂದ ಹಿಂದೆ ಸರಿದು ಪ್ಯಾಲಿಸ್ತೀನಿಗಳಿಗೆ ಸಹಾಯ ಮಾಡಲಿಲ್ಲ. ಪ್ಯಾಲಿಸ್ತೀನಿ ನಾಯಕ 'ಅರಾಫತ್' ರೇಡಿಯೋ ಸಂದರ್ಶನದಲ್ಲಿ ಸುಮಾರು 10,000 ಪ್ಯಾಲಿಸ್ತೀನಿಗಳು ಮೃತಪಟ್ಟರೆಂದು ಹೇಳಿದ್ದ. ಪಾಕಿಸ್ತಾನದ 'ಜಿಯಾ ಉಲ್ ಹಕ್' ಪ್ಯಾಲಿಸ್ತೀನಿ ಮುಸಲ್ಮಾನರ ಮೇಲೆ ನಡೆಸಿದ ಈ ಕಾರ್ಯಾಚರಣೆಯನ್ನು ಮುಸಲ್ಮಾನರ ಮೇಲೆ ನಡೆದ ಪ್ರಪಂಚದ ಬಹುದೊಡ್ಡ ನರಮೇಧವೆಂದು ಇಂದಿಗೂ ಹೇಳಲಾಗುತ್ತದೆ. ವಿಧಿಯಿಲ್ಲದೆ 'ಯಾಸಿರ್ ಅರಾಫತ್' ಕದನ ವಿರಾಮ ಘೋಷಿಸಬೇಕಾಯಿತು. ಜೋರ್ಡಾನ್ ಪಡೆಗಳಿಗೆ ಶರಣಾಗಿ 'ಇಬ್ರಿಡ್' ಪ್ರಾಂತ್ಯದಿಂದ ತನ್ನ ಹೋರಾಟಗಾರರನ್ನು ವಾಪಸ್ ಕರೆಸಿಕೊಳ್ಳುವ ಪರಿಸ್ಥಿತಿ ಪ್ಯಾಲೆಸ್ತೀನಿಗರಿಗೆ ಎದುರಾಯಿತು. ಜಿಯಾ ಉಲ್ ಹಕ್ ನಡೆಸಿದ ಸೆಪ್ಟೆಂಬರ್ 1970ರ ಕಾರ್ಯಾಚರಣೆ ಪ್ಯಾಲೇಸ್ತೀನಿ ಮುಸಲ್ಮಾನರಲ್ಲಿ ಅದೆಷ್ಟು ಸೇಡಿನ ಮನೋಭಾವನೆಯನ್ನು ಮೂಡಿಸಿತ್ತೆಂದರೆ, ಸೇಡು ತೀರಿಸಿಕೊಳ್ಳಲು 'ಬ್ಲಾಕ್ ಸೆಪ್ಟೆಂಬರ್' ಎಂಬ ಉಗ್ರ ಸಂಘಟನೆಯೊಂದನ್ನು ಕಟ್ಟಿದರು. ನಂತರದ ದಿನಗಳಲ್ಲಿ ಜರ್ಮನಿಯ 'ಮ್ಯುನಿಕ್' ಒಲಿಂಪಿಕ್‌ನಲ್ಲಿ ಇಸ್ರೇಲಿ ಕ್ರೀಡಾಪಟುಗಳ ಅಪಹರಣ ಹಾಗೂ ಕೊಲೆಯ ಹೊಣೆಯನ್ನು ಇದೇ ಉಗ್ರ ಸಂಘಟನೆ ಹೊತ್ತಿತ್ತು.

1970ರ ಸೆಪ್ಟೆಂಬರ್ ತಿಂಗಳಲ್ಲಿ ಪ್ಯಾಲಿಸ್ತೀನಿ ಮುಸ್ಲಿಂ ಸಂಘಟನೆಗಳ ಮೇಲೆ ಏಳು ದಿನಗಳ ಕಾಲ 'ಜಿಯಾ ಉಲ್ ಹಕ್' ಹಾಗೂ ಜೋರ್ಡಾನ್ ದೊರೆ 'ಹುಸೇನ್' ನಡೆಸಿದ ನರಮೇಧದಲ್ಲಿ ಸತ್ತವರ ಸಂಖ್ಯೆ ಇಪ್ಪತ್ತು ವರ್ಷಗಳಲ್ಲಿ ಇಸ್ರೇಲ್ ದಾಳಿಗೆ ತುತ್ತಾಗಿ ಸತ್ತಂತಹ ಪ್ಯಾಲೆಸ್ತೀನಿಗಳಿಗಿಂತಲೂ ಹೆಚ್ಚಿತ್ತೆಂದು ಇಸ್ರೇಲ್ ದೇಶದ ಜನಕರೊಬ್ಬರು ಬಹಿರಂಗವಾಗಿ ಅಂದು ಹೇಳಿದ್ದರು. 1981ರಲ್ಲಿ ಪ್ಯಾಲಿಸ್ತೀನಿ ಮುಸಲ್ಮಾನರ ಮೇಲಿನ ದಾಳಿಯನ್ನು ಸಮರ್ಥಿಸಿಕೊಂಡ 'ಜಿಯಾ ಉಲ್ ಹಕ್', ಪಾಕಿಸ್ತಾನ ಹಾಗೂ ಇಸ್ರೇಲ್ ಎರಡೂ ದೇಶಗಳ ಸಿದ್ಧಾಂತವೊಂದೇ ಆಗಿದೆ. ಹೇಗೆ ಯಹೂದಿಗಳಿಲ್ಲದೆ ಇಸ್ರೇಲ್ ರಾಷ್ಟ್ರವಿಲ್ಲವೋ, ಮುಸಲ್ಮಾನರಿಲ್ಲದೇ ಪಾಕಿಸ್ತಾನವಿಲ್ಲ. ಯಹೂದಿಗಳಿಗಾಗಿ ಇಸ್ರೇಲ್ ಹೇಗೆ ಯಾವ ಮಟ್ಟಕ್ಕಾದರೂ ಹೋಗಿ ತನ್ನವರನ್ನು ಕಾಪಾಡುತ್ತದೆಯೋ, ಮುಸಲ್ಮಾನರಿಗಾಗಿ ಪಾಕಿಸ್ತಾನ ಯಾವ ಮಟ್ಟಕ್ಕಾದರೂ ಹೋಗಿ ತನ್ನವರನ್ನು ಕಾಪಾಡುತ್ತದೆಯೆಂದು ತನ್ನ ಪ್ರಜೆಗಳ ಮುಂದೆ ಹೇಳಿದ್ದ. ಇಸ್ರೇಲ್ ದೇಶದಿಂದ 'ಜೂಡಾಯಿಸಂ' ತೆಗೆದರೆ ಹೇಗೆ ಇಡೀ ದೇಶ ತರಗೆಲೆಯಾಗಿ ಉದುರುತ್ತದೆಯೋ, ಪಾಕಿಸ್ತಾನದಿಂದ 'ಇಸ್ಲಾಂ' ತೆಗೆದು ಜಾತ್ಯತೀತತೆಯನ್ನು ಪ್ರತಿಪಾದಿಸಿದರೆ ಪಾಕಿಸ್ತಾನ ತರಗೆಲೆಯಂತೆ ಉದುರುವುದು ನಿಶ್ಚಿತವೆಂದು ಹೇಳಿದ್ದನು. ಪ್ಯಾಲಿಸ್ತೇನಿನ ರಸ್ತೆಗಳಲ್ಲಿ ಸಾವಿರಾರು ಮುಸಲ್ಮಾನರನ್ನು ಕೊಂದವನಿಗೆ ಅಂದಿನ ಪಾಕಿಸ್ತಾನ ಸರಕಾರ 'ಮುಂಬಡ್ತಿ' ನೀಡಿ ಗೌರವಿಸಿತ್ತು, ಮುಸಲ್ಮಾನ್ ರಾಷ್ಟ್ರವೊಂದು ಮುಸಲ್ಮಾನರನ್ನು ಕೊಂದಿದಕ್ಕೆ ದೊಡ್ಡ ಬಹುಮಾನ ನೀಡಿದ ಜಗತ್ತಿನ ಏಕೈಕ ಮುಸಲ್ಮಾನ ರಾಷ್ಟ್ರ ಪಾಕಿಸ್ತಾನ. ಪಾಕಿಸ್ತಾನದ ಅಂದಿನ ಅಧ್ಯಕ್ಷ 'ಜುಲ್ಫಿಕರ್ ಅಲಿ ಭುಟ್ಟೋ' ಸ್ವತಃ ಈ ನಿರ್ಧಾರವನ್ನು ತೆಗೆದುಕೊಂಡು 'ಜಿಯಾ ಉಲ್ ಹಕ್'ನನ್ನು ಸೈನ್ಯದ ಮುಖ್ಯಸ್ಥನನ್ನಾಗಿ ನೇಮಿಸಿದ್ದರು.

1976ರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ 'ಪರಮಾಣು' ತಂತ್ರಜ್ಞಾನದ ಬಗ್ಗೆ ಬಹುದೊಡ್ಡ ಚರ್ಚೆಗಳು ಆರಂಭವಾಗಿದ್ದವು, ಪಾಕಿಸ್ತಾನವು ಸಹ ಪರಮಾಣು ತಂತ್ರಜ್ಞಾನದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು 'ಪರಮಾಣು' ಬಾಂಬ್ ತಯಾರಿಸುವ ನಿಟ್ಟಿನಲ್ಲಿ ಯೋಜನೆಯನ್ನು ಸಿದ್ಧಪಡಿಸುತ್ತಿತ್ತು. ಅಮೆರಿಕವು ಪಾಕಿಸ್ತಾನದ ಈ ನಡೆಯನ್ನು ಖಂಡಿಸಿ 'ಇಸ್ಲಾಮಿಕ್ ಬಾಂಬ್'ಎಂದು ಕರೆಯುವ ಮೂಲಕ ಎಚ್ಚರಿಕೆ ನೀಡಿತ್ತು. ಆದರೆ ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಮಂಡಳಿಯ ಅನುಮತಿ ಪಡೆದು ತಾನು ಈ ಕೆಲಸ ಮಾಡುತ್ತಿರುವುದಾಗಿ ಅಂದಿನ ಪಾಕಿಸ್ತಾನದ ಅಧ್ಯಕ್ಷ 'ಜುಲ್ಫಿಕರ್ ಅಲಿ ಭುಟ್ಟೋ' ಹೇಳಿದ್ದರು, ಅವರ ಮಾತುಗಳನ್ನು ಪಾಶ್ಚಿಮಾತ್ಯ ದೇಶಗಳು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಇದೇ ಸಮಯದಲ್ಲಿ ಪಾಕಿಸ್ತಾನದ ಸೈನ್ಯದ ಮುಖ್ಯಸ್ಥನಾಗಿದ್ದ 'ಜನರಲ್ ಟಿಕ್ಕಾ ಖಾನ್' ನಿವೃತ್ತಿ ಹೊಂದುವವನಿದ್ದ. ಆತನ ಜಾಗಕ್ಕೆ ನೂತನ ಮುಖ್ಯಸ್ಥನನ್ನು ಕೂರಿಸಬೇಕಿತ್ತು. 1947ರ ನಂತರ ಪಾಕಿಸ್ತಾನದ ಇತಿಹಾಸದಲ್ಲಿ ನಡೆದಂತಹ 'ಸೇನಾ ಮುಖ್ಯಸ್ಥರ' ಕ್ಷಿಪ್ರ ಕಾರ್ಯಾಚರಣೆಯ ಅರಿವಿದ್ದ 'ಭುಟ್ಟೋ' ತಾನು ಹೇಳಿದ ಹಾಗೆ ಕೇಳುವ ವ್ಯಕ್ತಿಯನ್ನು ಆ ಜಾಗಕ್ಕೆ ಕೂರಿಸಬೇಕಿತ್ತು. 'ಜನರಲ್ ಟಿಕ್ಕಾ ಖಾನ್' ಬಳಿ ಮಾತನಾಡಿ ಆತನು ಕಳುಹಿಸಿದ ಶಿಫಾರಸ್ಸು ಪಟ್ಟಿಯಲ್ಲಿ 'ಜಿಯಾ ಉಲ್ ಹಕ್'ನ ಹೆಸರಿಲ್ಲದಿರುವುದನ್ನು ಕಂಡು 'ಭುಟ್ಟೋ'ಗೆ ಆಶ್ಚರ್ಯವಾಗಿತ್ತು. ಆರು ಜನರ ಹೆಸರನ್ನು ಶಿಫಾರಸ್ಸು ಮಾಡಿದ ಆತ, 'ಜಿಯಾ ಉಲ್ ಹಕ್'ನ ಹೆಸರನ್ನು ಶಿಫಾರಸ್ಸು ಮಾಡಿರಲಿಲ್ಲ, ಆದರೆ 1973ರಲ್ಲಿ 'ಜುಲ್ಫಿಕರ್ ಅಲಿ ಭುಟ್ಟೋ' ಸರಕಾರದ ಮೇಲೆ ಬೇಹುಗಾರಿಕೆ ನಡೆಸಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಆಡಳಿತವನ್ನು ಸೈನ್ಯದ ತೆಕ್ಕೆಗೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದ ಒಂದು ತಂಡದ ಕಾರ್ಯಾಚರಣೆಯನ್ನು ವಿಫಲಗೊಳಿಸುವಲ್ಲಿ 'ಜಿಯಾ ಉಲ್ ಹಕ್' ಪ್ರಮುಖ ಪಾತ್ರವಹಿಸಿದ್ದರಿಂದ 'ಭುಟ್ಟೋ'ಗೆ ಆತನ ಮೇಲೆ ಆತ್ಮವಿಶ್ವಾಸ ಹೆಚ್ಚಿತ್ತು. ಹಾಗಾಗಿ 'ಭುಟ್ಟೋ' ಜನರಲ್ ಟಿಕ್ಕಾ ಖಾನ್ ಮಾತಿಗೆ ಮಣೆ ಹಾಕದೆ 'ಜಿಯಾ ಉಲ್ ಹಕ್'ನನ್ನು ಪಾಕಿಸ್ತಾನದ ಸೇನಾ ಮುಖ್ಯಸ್ಥನನ್ನಾಗಿ ಘೋಷಿಸಿಬಿಟ್ಟರು. ಸರಿಯಾದ ಸಮಯಕ್ಕೆ ಕಾದು ತನ್ನ ಕಾರ್ಯಾಚರಣೆ ನಡೆಸುವ ನರಿ ಬುದ್ಧಿಯ ಸೇನಾ ಮುಖ್ಯಸ್ಥ 'ಜಿಯಾ ಉಲ್ ಹಕ್'ನ ಬಗ್ಗೆ ಭುಟ್ಟೋಗೆ ಅರಿವಿರಲಿಲ್ಲ. ಮುಂದೆ ಊಸರವಳ್ಳಿಯಂತೆ ಸರಿಯಾದ ಸಮಯಕ್ಕೆ ಕಾಯ್ದು ಜಿಯಾ ಉಲ್ ಹಕ್ ಪಾಕಿಸ್ತಾನದ ಆಡಳಿತವನ್ನು ಸೇನಾ ಕಾರ್ಯಾಚರಣೆಯ ಮೂಲಕ ತನ್ನ ತೆಕ್ಕೆಗೆ ತೆಗೆದುಕೊಂಡು ಜುಲ್ಫಕರ್ ಅಲಿ ಭುಟ್ಟೋನನ್ನು ನೇಣಿಗೇರಿಸಿದ. ಪಾಕಿಸ್ತಾನದ ಸೇನಾ ಮುಖ್ಯಸ್ಥನೊಬ್ಬ ಪ್ಯಾಲೆಸ್ತೀನಿ ಮುಸಲ್ಮಾನರನ್ನು ಬೀದಿ ಬೀದಿಗಳಲ್ಲಿ ಕೊಲ್ಲುವುದನ್ನು ಪಾಕಿಸ್ತಾನ ಅಂದು ತಡೆಯಬಹುದಾಗಿತ್ತು, ಆದರೆ ತಡೆಯಲಿಲ್ಲ, ಜೋರ್ಡಾನ್ ಸೈನ್ಯಕ್ಕೆ ತರಬೇತಿ ನೀಡಲೆಂದು ಹೋಗಿದ್ದ ತನ್ನ ಸೈನ್ಯಾಧಿಕಾರಿಯನ್ನು ವಾಪಸ್ ಕರೆಸಿಕೊಳ್ಳಲಿಲ್ಲ. ಪ್ಯಾಲಿಸ್ತೀನಿ ಮುಸಲ್ಮಾನರ ಮೇಲೆ ಆತನು ನಡೆಸಿದ ನರಮೇಧಕ್ಕೆ ಮೆಚ್ಚಿ ಆತನಿಗೆ ಮುಂಬಡ್ತಿ ನೀಡಿ, ಮುಂದೆ ಆತನನ್ನು ಪಾಕಿಸ್ತಾನಿ ಸೈನ್ಯದ 'ಮುಖ್ಯಸ್ಥನನ್ನಾಗಿ' ಮಾಡಿದ್ದರು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಭಾಧ್ಯಕ್ಷರು ಮರು ಚಿಂತಿಸಲಿ

ಕಾಂಗ್ರೆಸ್ ಸರಕಾರ ಅಧಿಕಾರಕ್ಕೇರಿದ ಪ್ರಾರಂಭದಲ್ಲಿ ರಾಜಕೀಯ ತರಬೇತಿ ಸಂಸ್ಥೆ ಸ್ಥಾಪಿಸುವ ಉತ್ಸಾಹ ತೋರಿದ್ದ ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ ಖಾದರ್ ಎರಡು ವರ್ಷ ಗತಿಸಿದರೂ ಮೌನವಾಗಿರುವುದು ಯೋಜನೆ ಕೇವಲ ಘೋಷಣೆಗೆ ಸೀಮಿತವಾಯಿತೇ ಎನ್ನುವ ಅನುಮಾನ ಮೂಡಿಸುತ್ತಿದೆ. ಸಭಾಧ್ಯಕ್ಷರಾಗಿ ಆಯ್ಕೆಯಾದಾಗಿನಿಂದ ವಿಧಾನಸೌಧದಲ್ಲಿ ಹೊಸ ಹೊಸ ಪ್ರಯೋಗ ಮಾಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುವ ಸ್ಪೀಕರ್ ಸಾಹೇಬರು ಈ ಯೋಜನೆಯ ಬಗ್ಗೆ ಏಕೆ ಆಸಕ್ತಿ ತೋರುತ್ತಿಲ್ಲವೋ ಗೊತ್ತಿಲ್ಲ. ಸದನದ ಇತಿಹಾಸದಲ್ಲಿಯೇ ಹೊಸ ಚಿಂತನೆ ಮೂಡಿದ್ದು ಅದು ಅನುಷ್ಠಾನಕ್ಕೆ ಬಂದರೆ ಘೋಷಣೆ ಸಾರ್ಥಕತೆ ಕಂಡಂತಾಗುತ್ತದೆ. ಈ ನಿಟ್ಟಿನಲ್ಲಿ ಸಭಾಧ್ಯಕ್ಷರು ಮತ್ತೊಮ್ಮೆ ಯೋಚಿಸಿದರೆ ರಾಜ್ಯದ ವಿದ್ಯಾರ್ಥಿಗಳಿಗೆ ಹೊಸ ವಿಷಯ ಅಧ್ಯಯನ ಮಾಡಲು ಅನುಕೂಲವಾಗುತ್ತದೆ.

ಮಣಿಕಂಠ ಪಾ ಹಿರೇಮಠ ಬಾಗಲಕೋಟೆ

ಅರ್ಹ ವಿದ್ಯಾರ್ಥಿಗಳಿಗೆ ಅನ್ಯಾಯ ಆಗದಿರಲಿ

ಇಂಜಿನಿಯರಿಂಗ್ ಸೀಟುಗಳನ್ನು ಕೆಲವು ಖಾಸಗಿ ಕಾಲೇಜುಗಳು ಮತ್ತು ಏಜೆಂಟ್‌ಗಳು ಸೇರಿ ತಪ್ಪಾಗಿ ಕಾದಿರಿಸುತ್ತಿದ್ದಾರೆ. ಇವರು ಸರಕಾರಿ ಕೋಟಾದ ಸೀಟುಗಳನ್ನು ಹಣಕ್ಕಾಗಿ ಉಳಿಸಿಕೊಳ್ಳುತ್ತಿದ್ದಾರೆ. ಇದರ ಪರಿಣಾಮ ನಿಜವಾಗಿಯೂ ಕಲಿಕೆಗೆ ಅರ್ಹರಾದ ಮಕ್ಕಳಿಗೆ ಸೀಟು ಸಿಗದೆ ಹೋಗುತ್ತಿದೆ. 5,000 ಸೀಟುಗಳನ್ನು ಈ ರೀತಿಯಾಗಿ ಕಾದಿರಿಸಲಾಗಿದೆ ಎಂದು ವರದಿಯಾಗಿದೆ. ಇದು ಕೇವಲ ಭ್ರಷ್ಟಾಚಾರವಲ್ಲ, ಇದು ಮಕ್ಕಳ ಭವಿಷ್ಯವನ್ನು ಹಾಳು ಮಾಡುವ ಕುತಂತ್ರ. ಈ ರೀತಿಯ ಅಕ್ರಮಗಳಲ್ಲಿ ಭಾಗಿಯಾದ ಕಾಲೇಜುಗಳು ಮತ್ತು ಏಜೆಂಟ್‌ಗಳ ವಿರುದ್ಧ ಸರಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇನ್ನಷ್ಟು ಎಚ್ಚರದಿಂದ ಮೇಲ್ವಿಚಾರಣೆ ಮಾಡಬೇಕು. ವಿದ್ಯಾರ್ಥಿಗಳ ಭವಿಷ್ಯ ಸುರಕ್ಷಿತವಾಗಿರಬೇಕಾದರೆ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ಅಕ್ರಮಗಳನ್ನು ತಕ್ಷಣ ತಡೆದು, ನ್ಯಾಯಯುತ ಸೀಟು ಹಂಚಿಕೆ ಮತ್ತು ತಾಂತ್ರಿಕ ಶಿಕ್ಷಣ ಮೇಲೆ ನಂಬಿಕೆಯನ್ನು ಮರುಸ್ಥಾಪಿಸಬೇಕು.

ಡಾ. ವಿಜಯಕುಮಾರ್ ಎಚ್. ಕೆ. ರಾಯಚೂರು

ಮನ ಕಲುಕಿದ ಲೇಖನ

ಇದೆಂಥ ಪ್ರಯೋಗವಪ್ಪಾ ಅಂತ ಅನಿಸಿಬಿಟ್ಟಿತು. ಮಾನವ, ತನ್ನ ಸುಖ, ಅನುಕೂಲಕ್ಕಾಗಿ, ಮೂಕ ಪ್ರಾಣಿಗಳನ್ನು ಹೇಗೆ ಬಲಿ ತೆಗೆದುಕೊಳ್ಳುತ್ತಾನೆ ಎಂಬುದರ ಅರಿವೂ ಆದಂತಾಯಿತು.

ಇಷ್ಟೇ ಅಲ್ಲ, ಆ ಪ್ರಯೋಗ ಸ್ಥಳಕ್ಕೆ ಹೋಗುವಾಗಿನ ದೃಶ್ಯದ ಚಿತ್ರಣ ಇನ್ನೂ ಭಯಾನಕ ! ಸಂಶೋಧನೆಗೆ ಮುಂದಾದವರ ಆತ್ಮ ಬಲದ ಪರೀಕ್ಷೆ ಮೊದಲಾದಂತೆ ಅನಿಸಿತು. ತಮ್ಮ ಕಂಪನಿಯ ಕೆಲಸಕ್ಕಾಗಿ, ಫಾರ್ಮಾಸಿಟಿಕಲ್ ಕಂಪನಿಯೊಂದಿಗಿನ ಒಪ್ಪಂದದ ಭಾಗವಾಗಿ ಶಿಶಿರ ಹೆಗಡೆ ಪಾಲ್ಗೊಂಡಿದ್ದೇ ಬಹಳ ರೋಮಾಂಚನಕಾರಿ ! ಇಂದು ನಾವು ಬಳಸುವ ಅದೆಷ್ಟೋ ಸೌಂದರ್ಯ ವರ್ಧಕ ವಸ್ತುಗಳು ಇದೇ ರೀತಿ ಪ್ರಾಣಿಗಳ ಮೇಲೆ ಪ್ರಯೋಗವಾದ ಮೇಲೇ ಬಳಕೆಗೆ ಲಭ್ಯವಾಗಿದೆ ಎಂಬುದನ್ನು ಊಹಿಸಿಕೊಂಡರೂ ಅಸಹ್ಯ ಅನಿಸುತ್ತದೆ. ಅಷ್ಟೊಂದು ಅಮಾನವೀಯ ಪ್ರಯೋಗಗಳು.

ಶಿಶಿರ ಹೆಗಡೆ, ಪ್ರಯೋಗ ಶಾಲೆಯಿಂದ ಹೊರ ಬರುವಾಗ ಕಾಣಿಸಿದ ತಲೆ ನೋವಿನ ಗುಳಿಗೆಯೂ ಇದೇ ರೀತಿಯ ಪ್ರಯೋಗದ ಪರಿಣಾಮ ಎಂಬುದನ್ನು ತಿಳಿದು ತನ್ನಷ್ಟಕ್ಕೇ ಜುಗ್ಗಿ ಹೋಗಿರಲೂ ಬಹುದು. ಇಷ್ಟಕ್ಕೂ ಇಂತಹ ಕೆಲಸವನ್ನೂ ಒಪ್ಪಿಕೊಂಡ ಶಿಶಿರ ಹೆಗಡೆ ಅವರ ಎದೆಗಾರಿಕೆಯನ್ನೂ ಮೆಚ್ಚಲೇಬೇಕು !

ಶಂಕರನಾರಾಯಣ ಭಟ್ ಮಾಡಗೇರಿ, ಹೊನ್ನಾವರ

ಕರ್ನಾಟಕದ ಈ ಅಪ್ರತಿಮ ಆಟಗಾರ ರಾಜಕೀಯಕ್ಕೆ ಬಲಿಯಾಗಿದ್ದ!

ಪದಸಾಗರ

ನವೀನ್ ಸಾಗರ್

vveditoped@gmail.com

naveensagar2709@gmail.com

ಭಾರತ ಕ್ರಿಕೆಟ್ ತಂಡ ಕಂಡ ಸರ್ವಶ್ರೇಷ್ಠ ವಿಕೆಟ್ ಕೀಪರ್ ಯಾರು? ದಾಖಲೆಗಳನ್ನು ನೋಡಿದಾಗ ನಿಸ್ಸಂಶಯವಾಗಿ ಮಹೇಂದ್ರ ಸಿಂಗ್ ಧೋನಿ ಹೆಸರು ಉತ್ತರವಾಗಿ ಬರುತ್ತದೆ. ಬೆಸ್ಟ್ ವಿಕೆಟ್ ಕೀಪರ್ ಬ್ಯಾಟರ್ ಯಾರು ಎಂಬ ಪ್ರಶ್ನೆಗೂ ಸದ್ಯಕ್ಕೆ ಹೊರ ಬರುವ ಉತ್ತರ ಎಂ.ಎಸ್ ಧೋನಿ. ಆದರೆ ಎಂಬತ್ಮೂರರ ವಿಶ್ವಕಪ್ ಗೆದ್ದಾಗ, ವಿಕೆಟ್ ಕೀಪರ್ ಅಂದ್ರೆ ಕಿರ್ಮಾನಿ ಎಂಬಷ್ಟು ಖ್ಯಾತಿ ಸೈಯದ್ ಕಿರ್ಮಾನಿಗೆ ಸಿಕ್ಕಿತ್ತು. ಆ ನಂತರ ಬಂದ ಮತ್ತೊಬ್ಬ ಕರ್ನಾಟಕದ ವಿಕೆಟ್ ಕೀಪರ್ ಅಂದ್ರೆ ಅದು ಸದಾನಂದ ವಿಶ್ವನಾಥ್ ! ಇವರನ್ನು ಹೊರತುಪಡಿಸಿದರೆ ಭಾರತದ ವಿಕೆಟ್ ಕೀಪರ್‌ಗಳು ಯಾವತ್ತಿಗೂ ಸ್ಟಾರ್ ಆಗಿರಲಿಲ್ಲ. ಕಿರಣ್ ಮೋರೆ, ಸಾಬಾ ಕರೀಮ್, ಚಂದ್ರಕಾಂತ ಪಂಡಿತ್, ಅಜಯ್ ರಾತ್ರಾ, ವಿಜಯ್ ದಹಿಯಾ, ನಯನ್ ಮೋಂಗಿಯಾ ಹೀಗೆ ಸಾಲು ಸಾಲು ಕೀಪರ್ ಗಳು ಬಂದು ಹೋದರು. ಇವರಲ್ಲಿ ನಯನ್ ಮೋಂಗಿಯಾ ಟೆಸ್ಟ್ ಗಳಲ್ಲಿ ಒಂದು ಮಟ್ಟಿಗೆ ಬ್ಯಾಟಿಂಗ್ ಪವರ್ ತೋರಿಸಿದ್ದು, ಅಲ್ಲೊಂದು ಇಲ್ಲೊಂದು ಮ್ಯಾಚ್ ಗಳಲ್ಲಿ ಕಿರಣ್ ಮೋರೆ ಚಿನಕುರಳಿ ಇನ್ನಿಂಗ್ಸ್ ಆಡಿದ್ದು ಬಿಟ್ಟರೆ, ನಮ್ಮ ದೇಶದ ವಿಕೆಟ್ ಕೀಪರ್ ಅಂದ್ರೆ ಆತ ನೈಟ್ ವಾಚ್ ಮನ್ ಆಗೋಕೆ ಲಾಯಕ್ ಎಂಬಂಥ ಸ್ಥಿತಿ ಇತ್ತು. ಕೀಪರ್ ಗಳ ಬ್ಯಾಟಿಂಗ್ ಬಗ್ಗೆ ಯಾವತ್ತೂ ನಂಬಿಕೆ ಇರಲಿಲ್ಲ. ಬ್ಯಾಟ್ ಮಾಡುವ ಕೀಪರ್ ಬೇಕು ಎಂಬ ಅಗತ್ಯವನ್ನೇ ಭಾರತ ಕಂಡಿರಲಿಲ್ಲ. ಬಹುಶಃ ಅದರ ಅಗತ್ಯ ಮೊತ್ತಮೊದಲ ಬಾರಿ ಕಂಡವನು ಸೌರವ್ ಗಂಗೂಲಿ. ರಾಹುಲ್ ದ್ರಾವಿಡ್‌ನನ್ನು ತಂಡದಲ್ಲಿ ಉಳಿಸಿಕೊಳ್ಳಲೆಂದೋ ಅಥವಾ ಒಬ್ಬ ಎಕ್ಸ್ಟ್ರಾ ಬೌಲರ್ ಅಥವಾ ಬ್ಯಾಟರ್‌ಗೆ ಜಾಗ ಮಾಡಿಕೊಡಲೆಂದೋ, ಒಟ್ಟು ಒಂದು ರಣತಂತ್ರದ ಭಾಗವಾಗಿ ದ್ರಾವಿಡ್ ಗೆ ಕೀಪಿಂಗ್ ಜವಾಬ್ದಾರಿ ವಹಿಸಿಬಿಟ್ಟ. ಅದು ಬಹುಶಃ ಭಾರತೀಯ ಕ್ರಿಕೆಟ್ ನಲ್ಲಿ ಆದ ಮಹತ್ತರ ಬದಲಾವಣೆ. ಇತರ ದೇಶಗಳ ತಂಡದಲ್ಲಿ ಗಿಲ್ ಕ್ರಿಸ್ಟ್, ಸಂಗಕ್ಕಾರ, ಮೋಯಿನ್ ಖಾನ್, ಆಂಡಿ ಫ್ಲವರ್, ಅಲೆಕ್ ಸ್ಟುವರ್ಟ್, ಬೌಚರ್ ಹೀಗೆ ಬ್ಯಾಟಿಂಗ್‌ನಲ್ಲಿ ಅಬ್ಬರಿಸುವ ಕೀಪರ್ ಗಳಿದ್ದರು. ಇದರಿಂದಾಗಿ ಟೀಮಿಗೊಂದು ಸಮತೋಲನ ಸಿಕ್ಕಿಬಿಡುತ್ತಿತ್ತು. ಗಂಗೂಲಿ ಇದನ್ನು ಅರ್ಥ ಮಾಡಿಕೊಂಡು ದ್ರಾವಿಡ್ ಕೈಗೆ ಕೀಪರ್ ಗ್ಲೋವ್ಸ್ ತೊಡಿಸಿಬಿಟ್ಟಿದ್ದ. ಅಲ್ಲಿಂದ ಮುಂದೆ ಭಾರತ ಬ್ಯಾಟಿಂಗ್ ಚೆನ್ನಾಗಿ ಆಡಬಲ್ಲ ಕೀಪರೇ ಬೇಕು ಎಂಬ ನಿಯಮ ಮಾಡಿಕೊಂಡಿತು. ಅದರ ಫಲವಾಗಿ ಧೋನಿ, ಕಾರ್ತಿಕ್, ಸಂಜು ಸ್ಯಾಮ್ಸನ್, ರಿಷಬ್ ಪಂತ್, ಹೀಗೆ ಬ್ಯಾಟಿಂಗ್ ಮಾಡುವ ಕೀಪರ್ ಗಳ ಪರಂಪರೆ ಶುರುವಾಯಿತು. ಕೆ.ಎಲ್ ರಾಹುಲ್ ನಂಥ ಕ್ಲಾಸಿಕ್ ಬ್ಯಾಟ್ಸ್‌ಮನ್ ತಂಡದಲ್ಲಿ ಸ್ಥಾನ ಗಳಿಸಿಕೊಳ್ಳಲು ಉಳಿಸಿಕೊಳ್ಳಲು ಕೀಪರ್ ಆಗುವುದು ಅನಿವಾರ್ಯವಾಯಿತು.

ಧೋನಿ ಶಾಸ್ತ್ರೀಯ ಶೈಲಿಯ ವಿಕೆಟ್ ಕೀಪಿಂಗ್ ಗೊತ್ತಿಲ್ಲದಾಗ್ಯೂ ಕೀಪರ್ ಆಗಿ ಉಳಿದದ್ದು ಬ್ಯಾಟಿಂಗ್‌ನಿಂದಲೇ. ಕಾರ್ತಿಕ್ ಸೇರಿದಂತೆ ಹಲವಾರು ಕೀಪರ್ ಗಳು, ಶುದ್ಧ ಬ್ಯಾಟರ್ ಗಳಾಗಿ ಟೀಮ್ ಸೇರುವಂತಾಗಿದ್ದೂ ಒಂದು ಕ್ರಾಂತಿಯೇ. ಪ್ರತಿ ತಂಡದಲ್ಲಿ ಈಗ ಮೂರ್ನಾಲ್ಕು ಮಂದಿ ಕೀಪಿಂಗ್ ಮಾಡಬಲ್ಲ ಬ್ಯಾಟರ್ ಗಳಿರ್ತಾರೆ.

ಇತ್ತೀಚೆಗೆ ನಡೆದ ಇಂಗ್ಲೆಂಡ್ ಭಾರತ ನಡುವಣ ಟೆಸ್ಟ್ ಪಂದ್ಯದಲ್ಲಿ ರಿಷಬ್ ಪಂತ್ ಎರಡೂ ಇನ್ನಿಂಗ್ಸ್ ಗಳಲ್ಲಿ ಶತಕ ಗಳಿಸಿ ದಾಖಲೆ ನಿರ್ಮಿಸಿದ. ಆದರೆ ಪಂದ್ಯ ಸೋತಾಗ ರಿಷಬ್ ಸೆಂಚುರಿಯ ಖುಷಿ ಮಾಯವಾಯ್ತು. ಆತನ ಕೀಪಿಂಗ್ ಬಗ್ಗೆ ಟೀಕೆಗಳು ಕೇಳಿ ಬಂದವು. ಇದರ ಜತೆ ಜತೆಗೆ ಮತ್ತು ಶುರುವಾದದ್ದು ಭಾರತದ ಶ್ರೇಷ್ಠ ಕೀಪರ್ ಬ್ಯಾಟ್ಸ್‌ಮನ್ ಯಾರು ಎಂಬ ಚರ್ಚೆ.

ನಾನು ಕಿರ್ಮಾನಿಯ ಕೀಪಿಂಗ್ ಲೈವ್ ಮ್ಯಾಚ್ ಗಳಲ್ಲಿ ನೋಡಿದವನಲ್ಲ. ಆದರೆ ಸದಾನಂದ್ ವಿಶ್ವನಾಥ್ ಎಂಬ ಸಿಡಿಲಮರಿಯ ಕೀಪಿಂಗ್ ನೋಡಿದ್ದೇನೆ. ವೇಗದ ಬೌಲರ್ ಗಳಿಗೂ ಹೆಲ್ಮೆಟ್ ಕೂಡ ಧರಿಸದೇ ವಿಕೆಟ್‌ಗೆ ಅಂಟಿಕೊಂಡು ನಿಂತು ಕೀಪಿಂಗ್ ಮಾಡುತ್ತಿದ್ದ ಸದಾನಂದ ವಿಶ್ವನಾಥ್ ಭಾರತ ಕಂಡ ಅತ್ಯದ್ಭುತ ಕೀಪರ್. ಅಂದು ತಂತ್ರಜ್ಞಾನ ಇಷ್ಟು ಮುಂದುವರಿದಿದ್ದರೆ, ಫಾಸ್ಟೆಸ್ಟ್ ಸ್ಟಂಪಿಂಗ್ ದಾಖಲೆ ಅವನ ಹೆಸರಲ್ಲೇ ಇದ್ದಿರುತ್ತಿತ್ತೇನೋ. ತಾಳ್ಮೆ ಅಂದರೇನು ಅಂತ ಗೊತ್ತಿಲ್ಲದ, ಆಕ್ರಮಣಕಾರಿ ಮನೋಭಾವದ ಕೀಪರ್ ಮತ್ತು ಬ್ಯಾಟ್ಸ್‌ಮನ್ ಎಸ್.ವಿಶ್ವನಾಥ್. ಅದೇ ಆತನ ವೃತ್ತಿ ಬದುಕನ್ನು ಮೊಟಕುಗೊಳಿಸಿದ್ದು ಎಂಬ ಮಾತಿದೆ. ಆದರೆ ಇದ್ದಷ್ಟು ದಿನ ತಂಡದಲ್ಲಿ ತನ್ನ ಮನೋಭಾವದ ಮೂಲಕ ಹೈ ಎನರ್ಜಿ ತುಂಬುವುದರಲ್ಲಿ ಯಶಸ್ವಿಯಾಗಿದ್ದ ಆಟಗಾರ ಈತ. ಇವತ್ತಿಗೂ ಯೂಟ್ಯೂಬ್ ನಲ್ಲಿ ಸದಾನಂದ್ ವಿಶ್ವನಾಥ್ ಕೀಪಿಂಗ್ ನ ಕೆಲವು ತುಣುಕುಗಳು ಸಿಗುತ್ತವೆ. ಆಸಕ್ತರು ನೋಡಬಹುದು.

ಇಂದು ನಾನು ಹೇಳೋಕೆ ಹೊರಟಿರೋದು ಕರ್ನಾಟಕದ ಮತ್ತೊಬ್ಬ ಅಪ್ರತಿಮ ಕೀಪರ್ ಬ್ಯಾಟ್ಸ್‌ಮನ್ ಆದರೆ ನತದೃಷ್ಟ ಆಟಗಾರನ ಬಗ್ಗೆ. ಆತನ ಹೆಸರು ಬೂಧಿ ಕುಂದರನ್. ಬೂಧಿ ಕುಂದರನ್ ಅವರ ಅಸಲಿ ಹೆಸರಿನ ಬಗ್ಗೆ ಹಲವಾರು ಗೊಂದಲಗಳಿವೆ. ಕುಂದರನ್ ಎಂಬ ಹೆಸರು ಕೇಳಿದಾಗ ತಮಿಳರೋ ಮಲಯಾಳಿಯೋ ಅನಿಸಬಹುದು. ಆದರೆ ಇವರು ಕರ್ನಾಟಕದ ದಕ್ಷಿಣ ಕನ್ನಡದ ಮೂಲ್ಕಿಯವರಂತೆ. ಅದು ಕುಂದರನ್ ಅಲ್ಲ ಕರಾವಳಿಯ ಕಡಲತಡಿಯ ಕುಟುಂಬದ ಕುಂದರ್ ಎಂದು ಅವರ ಕುಟುಂಬವನ್ನು ಬಲ್ಲವರು ಹೇಳುತ್ತಾರೆ.

ಬೂಧಿ ಕುಂದರನ್ ಭಾರತ ಕಂಡ ಮೊದಲ ಸಿಡಿಲಬ್ಬರದ ಬ್ಯಾಟರ್ ಮತ್ತು ವಿಕೆಟ್ ಕೀಪರ್ ಅನ್ನುತ್ತದೆ ಕ್ರಿಕೆಟ್ ಇತಿಹಾಸ. ಬೂಧಿ ಕುಂದರನ್ ಬಡ ಮೀನುಗಾರರ ಕುಟುಂಬದಲ್ಲಿ ಹುಟ್ಟಿದ ಹುಡುಗ. ಅಪ್ಪನೆದುರು ಕ್ರಿಕೆಟ್ ಅನ್ನೋ ಪದವನ್ನೂ ಮಾತನಾಡುವಂತಿರಲಿಲ್ಲ. ಆದರೆ ತಾಯಿ ಮಗನ ಕ್ರಿಕೆಟ್ ಕನಸಿಗೆ ಬಲ ತುಂಬುತ್ತಾರೆ. ಅಪ್ಪನ ಬಿಳಿ ಅಂಗಿ ಪ್ಯಾಂಟುಗಳನ್ನೇ ರಿಪೇರಿ ಮಾಡಿ ಹೊಲಿಸಿ ಕೊಟ್ಟು ಕ್ರಿಕೆಟ್ ಆಡಲು ಕಳಿಸುತ್ತಾರೆ. ದುಸ್ತರ ಬದುಕು ಸಾಕಾಗಿ, ಭವಿಷ್ಯ ಅರಸಿಕೊಂಡು ತಂದೆ ಕುಟುಂಬ ಸಮೇತ ಮುಂಬಯಿಗೆ ಪಯಣಿಸುತ್ತಾರೆ. ಮುಂಬಯಿಗೆ ಬಂದ ನಂತರ ಬೂಧಿ ಕುಂದರನ್ ಅವರ ಕ್ರಿಕೆಟ್ ಕನಸು ಇನ್ನಷ್ಟು ಹಿರಿದಾಗುತ್ತದೆ. ಸ್ಟೇಡಿಯಂಗಳಲ್ಲಿ ಬೌಂಡರಿ ಆಚೆ ನಿಂತು ಬಾಲ್ ಬಾಯ್ ಥರ ಕೆಲಸ ಮಾಡುತ್ತಾರೆ. ಹಾಗಾದರೂ ಒಮ್ಮೆ ಆಡುವ ಅವಕಾಶ ಸಿಕ್ಕಬಹುದು ಎಂದು. ಒಂದುದಿನ ಅವಕಾಶ ಸಿಕ್ಕೇ ಬಿಡುತ್ತದೆ. ಕೀಪಿಂಗ್ ಮಾಡು ಎಂದು ತಂಡಕ್ಕೆ ಕರೆಯುತ್ತಾರೆ. ಹುಡುಗನ ಆಸಕ್ತಿ, ಚುರುಕುತನ, ಆಕ್ರಮಣಕಾರಿ ಮನೋಭಾವ ಮೊದಲ ನೋಟದಲ್ಲೇ ಗೊತ್ತಾಗಿಬಿಡುತ್ತದೆ.

ಬೂಧಿ ಕುಂದರನ್ ಒಂದೇ ಒಂದು ದೇಶೀ ಪಂದ್ಯವನ್ನೂ ಆಡದೇ ನೇರವಾಗಿ ಭಾರತ ತಂಡಕ್ಕೆ ಆಯ್ಕೆಯಾಗಿ ಬಿಡುತ್ತಾನೆ. ಮುಂಬಯಿಯಲ್ಲಿ ಮೊದಲ ಪಂದ್ಯ. ಆಗ ಕ್ರಿಕೆಟ್ ಮಂಡಳಿಯ ಧೋರಣೆಗಳು ಎಷ್ಟು ಕೆಟ್ಟದಾಗಿದ್ದವು ಅಂದರೆ, ಸ್ಥಳೀಯ ಆಟಗಾರರಿಗೆ ಹೊಟೇಲ್ ವಾಸ್ತವ್ಯ ನೀಡುತ್ತಾ ಇರಲಿಲ್ಲ. ಮಿಕ್ಕವರ ಹಾಗೆ ಸಿರಿವಂತನಲ್ಲ ಬೂಧಿ. ಐದು ರಾತ್ರಿಗಳನ್ನು ಹುಲ್ಲುಹಾಸಿನಲ್ಲಿ ಸೊಳ್ಳೆ ಇರುವೆಗಳ ಕಾಟದ ನಡುವೆ ಮಲಗಿ ಕಳೆದಿದ್ದ. ಹಗಲು ಹೊತ್ತಿನಲ್ಲಿ ಸುಮಾರು 150 ಓವರ್ ಕೀಪಿಂಗ್ ಮಾಡಿ ಸೈ ಎನಿಸಿಕೊಂಡಿದ್ದ. ಮೊದಲ ಪಂದ್ಯದಲ್ಲಿ ಎಂಟನೇ ಬ್ಯಾಟ್ಸ್‌ಮನ್ ಆಗಿ ಹೋಗಿದ್ದ ಹುಡುಗ ಹೊಡೆಯಲು ಸಾಧ್ಯವಾಗಿದ್ದು ಒಟ್ಟು ಇಪ್ಪತ್ತೆರಡು ರನ್ ಮಾತ್ರ. ಆ ಪಂದ್ಯ ಆಡೋದಕ್ಕೂ ಆತ ಯಾರದ್ದೋ ಪ್ಯಾಡ್ ಮತ್ತು ಗ್ಲೋವ್ಸ್ ಕಡ ಪಡೆದಿದ್ದ ಅಂದ್ರೆ ಆತನ ಪರಿಸ್ಥಿತಿ ಎಷ್ಟು ಶೋಚನೀಯವಿದ್ದಿರಬಹುದು.



ಎರಡನೇ ಪಂದ್ಯದಲ್ಲಿ ಕುಂದರನ್ ಗೆ ಇನ್ನಿಂಗ್ಸ್ ಓಪನ್ ಮಾಡುವ ಅಚ್ಚರಿಯ ಅವಕಾಶ. ನಾರಿ ಕಂಟ್ರಾಕ್ಟರ್ ಎಂಬ ಓಪನರ್ ಹೊಸ ಚೆಂಡು ಎದುರಿಸೋಕೆ ಸಿದ್ಧನಿಲ್ಲ ಎಂದು ಹಿಂದೆ ಸರಿದ ಪರಿಣಾಮ ಕುಂದರನ್ ಗೆ ಇನ್ನಿಂಗ್ಸ್ ಆರಂಭಿಸುವ ಹೊಣೆ ಒಪ್ಪಿಸಲಾಗುತ್ತದೆ. ಅಂದಿನ ಟೆಸ್ಟ್ ಪಂದ್ಯದಲ್ಲಿ ಬೂಧಿ ಟ್ವೆಂಟಿ ಇನ್ನಿಂಗ್ಸ್ ಮಾದರಿಯಲ್ಲಿ 12 ಬೌಂಡರಿಯ 71 ರನ್ ಗಳಿಸಿಬಿಡುತ್ತಾನೆ. ಈ ಕೀಪರ್ ಬ್ಯಾಟ್ಸ್‌ಮನ್ ಸಾಮಾನ್ಯನಲ್ಲ ಎಂದು ಅವತ್ತೇ ಜಗತ್ತಿಗೆ ತಿಳಿದಿತ್ತು.

ಅಲ್ಲಿಂದ ಮುಂದೆ ರಣಜಿ ಪದಾರ್ಪಣೆ ಮಾಡುವ ಬೂಧಿ, ಸ್ಫೋಟಕ ದ್ವಿಶತಕ ಬಾರಿಸುತ್ತಾನೆ. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಗೆ ಆಯ್ಕೆಯಾಗಿ, ಚೆನ್ನೈಯಲ್ಲಿ 192 ರನ್ ಗಳ ಇನ್ನಿಂಗ್ಸ್ ಕಟ್ಟುತ್ತಾನೆ. ನಿಮಗೆ ನೆನಪಿರಲಿ. ಈ ದಾಖಲೆ ದಶಕಗಳ ಕಾಲ ಅಬಾಧಿತವಾಗಿಯೇ ಇತ್ತು. ಅದೇ ಮೈದಾನದಲ್ಲಿ ಧೋನಿ 205 ರನ್ ಬಾರಿಸುವ ತನಕ! ಆ ಪಂದ್ಯದಲ್ಲಿ ಬಾರಿಸಿದ ಮೂವತ್ತೊಂದು ಬೌಂಡರಿ ಕೂಡ ಕೋಲ್ಕತ್ತಾದಲ್ಲಿ ವಿವಿಎಸ್ ಲಕ್ಷ್ಮಣ್ 281 ರನ್ ಗಳ ಇನ್ನಿಂಗ್ಸ್ ಆಡುವ ತನಕ ದಾಖಲೆಯಾಗಿಯೇ ಉಳಿದಿತ್ತು. ಆ ಸರಣಿಯಲ್ಲಿ ಬೂಧಿ ಕುಂದರನ್ 525 ರನ್ ಗಳಿಸಿದ್ದು ಟೆಸ್ಟ್ ಸರಣಿಯಲ್ಲಿ ಕೀಪರ್ ಒಬ್ಬನ ದಾಖಲೆಯಾಗಿತ್ತು.

ಆದರೆ ಬೂಧಿಯ ದುರದೃಷ್ಟ ಹೇಗಿತ್ತು ನೋಡಿ. ಆತನ ಕಾಲದಲ್ಲಿ ಫಾರೂಕ್ ಇಂಜಿನಿಯರ್ ಎಂಬ ಮತ್ತೊಬ್ಬ ಅದ್ಭುತ ಕೀಪರ್ ಬ್ಯಾಟರ್ ಇದ್ದ. ಈಗ ಧೋನಿ ಜಮಾನದಲ್ಲಿ ಕಾರ್ತಿಕ್ ಅನುಭವಿಸಿದ ಪರಿಸ್ಥಿತಿ ಇಂಜಿನಿಯರ್ ಕಾಲದಲ್ಲಿ ಬೂಧಿ ಅನುಭವಿಸಿದ. ಓಪನಿಂಗ್ ಸ್ಥಾನ ಬಿಟ್ಟು ಕೊಡಬೇಕಾಯ್ತು. ಕೀಪರ್ ಸ್ಥಾನವೂ ಅಭದ್ರವಾಯ್ತು. ಆದರೂ ಸಿಕ್ಕ ಅವಕಾಶ ಬಿಡಲಿಲ್ಲ. ವೆಸ್ಟ್ ಇಂಡೀಸ್ ವಿರುದ್ಧ ಅದೊಂದು ಪಂದ್ಯದಲ್ಲಿ ಭಾರತ 197 ರನ್ ಗಳಿಗೆ ಏಳು ವಿಕೆಟ್ ಕಳೆದುಕೊಂಡು ಕಳವಳ ಪಡ್ತಾ ಇದ್ದಾಗ, ಕೇವಲ ಒಂದೇ ಒಂದು ಗಂಟೆಯಲ್ಲಿ 79 ರನ್ ಚಚ್ಚಿ ಕೆಡವಿದ್ದ ಬೂಧಿ ಕುಂದರನ್.

ನಸೀಬು ಹೇಗಿತ್ತು, ಒತ್ತಡ ಹೇಗಿತ್ತು ನೋಡಿ. 1967ರಲ್ಲಿ ತಂಡಕ್ಕೆ ಆಯ್ಕೆ ಆದಾಗ ಏಕಾಏಕಿಯಾಗಿ ನಾಯಕ ಪಟೌಡಿ, ಬೂಧಿ ಕೈಗೆ ಚೆಂಡು ಕೊಟ್ಟು ಬೌಲ್ ಮಾಡು ಅಂದು ಬಿಡುತ್ತಾನೆ. ಓಪನರ್ ಬ್ಯಾಟ್ಸ್‌ಮನ್ ಮತ್ತು ಓಪನಿಂಗ್ ಬೌಲರ್ ಆಗಿ ಆಡಿದ ಏಕೈಕ ಆಟಗಾರ ಎಂದು ಹಿಸ್ಟರಿಯಲ್ಲಿ ಬೂಧಿ ದಾಖಲಾಗುತ್ತಾನೆ. ಆದರೆ ಯಾವತ್ತೂ ಬೌಲಿಂಗ್ ಮಾಡಿರದ, ತನಗೆ ಬೌಲಿಂಗ್ ಮಾಡುವ ಪರಿಸ್ಥಿತಿ ಬರಬಹುದು ಎಂದೂ ಗೊತ್ತಿಲ್ಲದ ಬೂಧಿ, ಅಂದು ಬೌಲಿಂಗ್ ಮಾಡಲೇಬೇಕಾಗುತ್ತದೆ. ಅದು ಆತ ಆಡಿದ ಕೊನೆಯ ಟೆಸ್ಟ್. ಆತನನ್ನು ತಂಡದಿಂದ ಹೊರ ಹಾಕಲೆಂದೇ ಹೂಡಿದ ಷಡ್ಯಂತ್ರಗಳಲ್ಲಿ ಅದೂ ಒಂದು. ಭಾರತೀಯ ಕ್ರಿಕೆಟ್ ನ ಹಾಳು ರಾಜಕೀಯಕ್ಕೆ ಬೂಧಿ ಕುಂದರನ್ ಹಂತಹಂತವಾಗಿ ಬಲಿಯಾಗುತ್ತಾ ಹೋಗುತ್ತಾನೆ. ಕೊನೆಗೊಮ್ಮೆ ಭಾರತವನ್ನೇ ತೊರೆದು ಸ್ಕಾಟ್‌ಲೆಂಡ್ ನಲ್ಲಿ ನೆಲೆಸುವಂತಾಗುತ್ತದೆ. ಅಲ್ಲಿಯ ತಂಡಕ್ಕೆ ಆಡಲು ಶುರು ಮಾಡುತ್ತಾನೆ. ಪ್ಯಾಶನ್ ಕಡಿಮೆಯಾಗುವುದೇ ಇಲ್ಲ, ಐವತ್ತಾರನೇ ವಯಸ್ಸಿನ ತನಕ ಕ್ರಿಕೆಟ್ ಆಡುತ್ತಲೇ ಇರುತ್ತಾನೆ. ಕ್ರಿಕೆಟ್ ಮಂಡಳಿ ಮತ್ತು ಪಟೌಡಿ ಜೊತೆಗಿನ ಹಳಸಿದ ಸಂಬಂಧ ಭಾರತೀಯ ಕ್ರಿಕೆಟ್ ನಲ್ಲಿ ಸ್ಟಾರ್ ಆಗಿ ಮಿಂಚಬಹುದಾಗಿದ್ದ ಪ್ರತಿಭೆಯೊಂದು ಆರಿಹೋಗುವಂತೆ ಮಾಡುತ್ತದೆ. ಕೊನೆಗೊಮ್ಮೆ ಕ್ಷಮೆ ಕೇಳಿಕೊಂಡರೂ ಕ್ರಿಕೆಟ್ ಮಂಡಳಿ ಬೂಧಿ ಕುಂದರನ್ ನನ್ನು ಸುವರ್ಣ ಮಹೋತ್ಸವ ಕಾರ್ಯಕ್ರಮದಿಂದ ದೂರ ಇಡುತ್ತದೆ. 2004ರಲ್ಲೊಮ್ಮೆ ಭಾರತಕ್ಕೆ ಬಂದು ಹೋಗುವ ಬೂಧಿ ಕುಂದರನ್, 2006ರಲ್ಲಿ ಕ್ಯಾನ್ಸರ್ ಗೆ ಬಲಿಯಾಗಿ ಸಾವನ್ನಪ್ಪುತ್ತಾರೆ. ಮೊನ್ನೆ ಜೂನ್ 23ಕ್ಕೆ ಬೂಧಿ ಕುಂದರನ್ ಇಲ್ಲವಾಗಿ ಹತ್ತೊಂಬತ್ತು ವರ್ಷ. ಗಾಂಧಿ ಜಯಂತಿಯಂದು ಹುಟ್ಟಿದ್ದ ಈ ಪ್ರತಿಭಾವಂತ ಕ್ರಿಕೆಟರ್ ಇನ್ಯಾವ ತಂಡದಲ್ಲೂ ಕಾಣಸಿಗದ ಬ್ಯಾಟಿಂಗ್ ವಿಕೆಟ್ ಕೀಪರ್ ಆಗಿದ್ದರು. ಧೋನಿ, ಗಿಲ್ ಕ್ರಿಸ್ಟ್, ಪಂತ್ ಮುಂತಾದ ಹಿಟ್ಟರ್ ಗಳನ್ನು ನೋಡುವ ಮೊದಲೇ ಭಾರತ ಇಂಥ ಒಬ್ಬ ಆಟಗಾರನನ್ನು ಕಂಡಿತ್ತು. ಆದರೆ ಉಳಿಸಿಕೊಳ್ಳಲಿಲ್ಲ ಎಂಬುದು ದುರಂತ.

ಭಟ್ಟರ್ ಸ್ಕಾಚ್

- **ಕರಿಬಸವ ಹಿರಿಯಣ್ಣ, ಮಂಡ್ಯ**
ಭಟ್ರೇ, ಕಾಂಗ್ರೆಸ್ಸಿನಲ್ಲಿ ಇದ್ದಕ್ಕಿದ್ದಂತೆ ಅಸಮಾಧಾನ ಸ್ಫೋಟವಾಗುತ್ತಿದೆಯಲ್ಲ?
– **ಸ್ಫೋಟವಾಗಿ ಶಾಂತವಾಗುತ್ತಿರುವುದು ವಿಪರ್ಯಾಸ!**

- **ಎಸ್.ರಮೇಶ ಬರ್ಕಲಿ, ಮಂಡ್ಯ**
ಭಟ್ರೇ, ಕೆಲವರ ಬಗ್ಗೆ ಯಾಕೋ ಸಂದೇಹಗಳೇ ಬರುತ್ತವಲ್ಲ?
– **ಒಮ್ಮೆ ಸಂಶಯ ಪಿಶಾಚಿ ಹೊಕ್ಕಿದರೆ ಮನೆ ಖಾಲಿ ಮಾಡುವುದಿಲ್ಲ!**

- **ಮಹಾದೇವಿ ಪಾಟೀಲ, ಬೆಳಗಾವಿ**
ಭಟ್ರೇ, ಈ ಕಾಲದಲ್ಲಿ ಆದರ್ಶ ಗಂಡಂದಿರು ಇದ್ದಾರಾ?
– **ಅದೊಂದು ಸುಂದರ ಕಲ್ಪನೆ ಅಂತ ಭಾವಿಸುವುದು ಒಳ್ಳೆಯದು!**

- **ಆನಂದ ಸಂಗಕ್ಕ, ಧಾರವಾಡ**
ಭಟ್ರೇ, ಹಬ್ಬ ಬಂದ್ರೆ ಸಾಕು, ತವರಿಗೆ ಹೋಗ್ತೇನೆ ಅಂತ ಬೆದರಿಸುತ್ತಾಳಲ್ಲ?
– **ಅದು ಬೆದರಿಕೆ ಅಲ್ಲ ಮಾರಾಯ, ಫೆಸ್ಟಿವಲ್ ಆಫರ್ !**

- **ಯೋಗಣ್ಣ ಕೆ., ಮದ್ದೂರು**
ಭಟ್ರೇ, ಪ್ರತಿದಿನ ಐದು ಕಿಮೀ ನಡೆದರೂ ಹೊಟ್ಟೆ ಕರಗಿಲ್ಲವಲ್ಲ?
– **ನಡೆದ ಬಳಿಕ ಏನು ಮತ್ತು ಎಷ್ಟು ತಿಂತೀಯಾ ಅನ್ನೋದನ್ನು ಹೇಳಬೇಕಿತ್ತು!**

- **ದಿನೇಶ ಬಾಗಲಗುಂಟೆ, (ಇಮೇಲ್ ಮೂಲಕ)**
ಭಟ್ರೇ, ಕೆಂಪೇಗೌಡ ಪ್ರಶಸ್ತಿಯನ್ನು ಪಡೆಯಲು ಏನು ಮಾಡಬೇಕು?
– **ಲಾಬಿ!**

- **ವಿ.ಲಕ್ಷ್ಮಣ, ಹೂವಿನಹಡಗಲಿ**
ಭಟ್ರೇ, ಎಲ್ಲ ಕಾರ್ಯಕ್ರಮಗಳಿಗೂ ವಂದನಾರ್ಪಣೆ ಭಾಷಣ ಮಾಡು ಅಂತಾರಲ್ಲ?
– **ಜನ ಎದ್ದು ಹೋದ ಬಳಿಕ ನೀನು ಚೆನ್ನಾಗಿ ಮಾತಾಡ್ತೀಯಾ ಅಂತ ಎಲ್ಲರಿಗೂ ಗೊತ್ತಾಗಿರಬೇಕು!**

- **ಬೃಂದಾ, ಚನ್ನಗಿರಿ**
ಭಟ್ರೇ, ಲಕ್ಷ್ಮಿ ಹೆಬ್ಬಾಳ್ಕರ್ ಮುಖ್ಯಮಂತ್ರಿ ಆಗ್ತಾರಾ?
– **ವಿಷ್ಯ ಸಿದ್ರಾಮಯ್ಯ, ಡಿಕೆಶಿ ಕಿವಿಗೆ ಬಿದ್ರೆ, ಮಂತ್ರಿಯಾಗಿಯೂ ಇರೊಲ್ಲ!**

- **ಪ್ರತಿಮಾ, ತಿಪಟೂರು**
ಭಟ್ರೇ, ಸುಂದರವಾಗಿ ಕಾಣಲು ಏನು ಮಾಡಬೇಕು?
– **ದಿನವೂ ಸ್ವಲ್ಪ ಸ್ವಲ್ಪ ಮೇಕಪ್ ತಿನ್ನಬೇಕು!**

- **ರಮೇಶ ಗೊಂಬೆ, (ಇಮೇಲ್ ಮೂಲಕ)**
ಭಟ್ರೇ, ಒಂದೇ ಮನೆಯಲ್ಲಿದ್ದರೂ ಹೆಂಡತಿಗೆ ಪತ್ರ ಬರೆಯಬಹುದಾ?
– **ಬರೆಯಬಹುದು, ಆದರೆ ಸ್ಟ್ಯಾಂಪ್ ಹಚ್ಚಬೇಡ!**

- **ವಾದಿರಾಜ ದಂಡಿನ, (ಇಮೇಲ್ ಮೂಲಕ)**
ಭಟ್ರೇ, ಜವಾಬ್ದಾರಿಯುತವಾಗಿ ಎಣ್ಣೆ ಹಾಕುವುದು ಅಂದ್ರೆ ಏನು?
– **ಸ್ವಲ್ಪವೂ ಚೆಲ್ಲದೇ ಕುಡಿಯುವುದು!**

ಎಳನೀರೆಂಬ ಅಮೃತದಿಂದಲೂ ತೊಂದರೆ ತಪ್ಪಿದ್ದಲ್ಲ !

ಒಮ್ಮೆ ಕುಡಿದ ಎಳನೀರು ಜೀರ್ಣವಾಗುವ ಮುನ್ನ ಇನ್ನೊಮ್ಮೆ ಎಳನೀರನ್ನು ಕುಡಿಯಬಾರದು. ಇದೇ ರೀತಿ ಸಂಜೆ ಸೂರ್ಯಾಸ್ತದ ನಂತರ ಎಳನೀರಿನ ಸೇವನೆ ಪ್ರಶಸ್ತವಾದುದಲ್ಲ. ಜೀರ್ಣಶಕ್ತಿಯನ್ನು, ನಮ್ಮ ಆಹಾರ ಕಾಲವನ್ನು ಮತ್ತು ಹಸಿವೆಯನ್ನು ಗಮನಿಸದೆ ಮನಬಂದಂತೆ ಸೇವಿಸುವ ಎಳನೀರು ಸದಾ ನಮ್ಮ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ.



ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com
drsadhanashree@gmail.com

ಸ್ನೇಹಿತರೆ, ನನ್ನ ಕ್ಲಿನಿಕ್ ಪುರಾಣವನ್ನು ನಿಮ್ಮೆಲ್ಲರ ಜೊತೆ ಹಂಚಿಕೊಳ್ಳಲು ಮತ್ತೊಮ್ಮೆ ಇಂದು ಹಾಜರಾಗಿದ್ದೇನೆ. ಕಳೆದ ವಾರ, ಸಂಜೆಯ ಸಮಯದಲ್ಲಿ ಕ್ಲಿನಿಕ್ಕಿಗೆ ತಂದೆ ಮತ್ತು ಮಗಳ ಭೇಟಿ. ತಂದೆಗೆ ಕಳೆದ ಕೆಲವು ದಿನಗಳಿಂದ ಮೈ ಕೈ ನೋವು, ಜ್ವರದ ರೀತಿಯ ಅನುಭವ, ಅಜೀರ್ಣ ಮತ್ತು ಭೇದಿ. ಮಗಳಿಗೆ ಅತಿಯಾದ ನೆಗಡಿ, ಸೀನು ಮತ್ತು ತಲೆನೋವು. ಗೊತ್ತಿದ್ದ ಮನೆ ಮದ್ದುಗಳ ಪ್ರಯೋಗವು ಸಫಲವಾಗದಿದ್ದಾಗ ವೈದ್ಯರನ್ನು ಭೇಟಿ ಮಾಡುವ ಯೋಚನೆ ಬಂತು. ಇವರು ಸ್ವಲ್ಪ ಹಳೆಯ ರೋಗಿಯಾಗಿದ್ದರಿಂದ ಆಯುರ್ವೇದ ಚಿಕಿತ್ಸೆಯನ್ನು ಪಡೆದ ಅನುಭವವಿದ್ದ ಕಾರಣ ಆಯುರ್ವೇದ ವೈದ್ಯರಲ್ಲಿ ಯಾವ ವಿಷಯವನ್ನೂ ಮುಚ್ಚಿಡಬಾರದು ಎಂಬ ಭಾವನೆ ಮನಸ್ಸಿನಲ್ಲಿ ಬೇರೂರಿತ್ತು. ಆದ್ದರಿಂದ ನಾನು ಹೆಚ್ಚು ಪ್ರಶ್ನೆಗಳನ್ನು ಕೇಳುವ ಮೊದಲೇ ಅವರು ತಾವು ಮಾಡಿರಬಹುದಾದ ತಪ್ಪುಗಳನ್ನು ಒಪ್ಪಿಕೊಳ್ಳಲು ಪ್ರಾರಂಭಿಸಿದರು. ಈ ಪೇಷಂಟಿಗೆ ಹಲವು ತಿಂಗಳಿಂದ ಕಿಡ್ನಿ ಸ್ಟೋನಿನ ಸಮಸ್ಯೆ. ಅದಕ್ಕೆ ಚಿಕಿತ್ಸೆಯೂ ನಡೆಯುತ್ತಿದೆ. ಯಾವುದೋ ಸಂದರ್ಭದಲ್ಲಿ ತಮ್ಮ ಗೆಳೆಯರೊಂದಿಗೆ ಮಾತನಾಡುವಾಗ ಕಿಡ್ನಿ ಸ್ಟೋನಿಗೆ 'ಎಳನೀರು' ಅತ್ಯುತ್ತಮವಾದ ಔಷಧಿ ಎಂದು ಇವರಿಗೆ ತಿಳಿದು ಬಂತು. ಮಗಳಿಗೆ ಮ್ಯೂಸಿಕ್ ಕ್ಲಾಸಿಗೆ ಕರೆದುಕೊಂಡು ಹೋಗಿ ಬರುವ ಒಂದು ಜವಾಬ್ದಾರಿ ಇವರದ್ದು. ಜೊತೆಗೆ ಬೇಗನೆ ತಮ್ಮ ಮೂತ್ರಕೋಶದ ಕಲ್ಲನ್ನು ಕರಗಿಸಿಕೊಳ್ಳುವ ಉತ್ಸಾಹವೂ ಸೇರಿಕೊಂಡಿತು. ಹಾಗಾಗಿ ಇವರು ಮಾಡಿದ್ದೇನೆಂದರೆ, ಪ್ರತಿನಿತ್ಯವೂ ಮಧ್ಯಾಹ್ನ ಚೆನ್ನಾಗಿ ಹೊಟ್ಟೆ ತುಂಬುವಷ್ಟು ಊಟವನ್ನು ಮಾಡಿದ ನಂತರ ಮಗಳನ್ನು ಮ್ಯೂಸಿಕ್ ಕ್ಲಾಸಿಗೆ ಕರೆದುಕೊಂಡು ಹೋಗುವ ದಾರಿಯಲ್ಲಿ ಇಬ್ಬರೂ ಒಂದೊಂದು ಎಳನೀರನ್ನು ಕುಡಿಯುತ್ತಿದ್ದರು. ಜೊತೆಗೆ ಅದರ ತಿರುಳನ್ನೂ ಸವಿಯುತ್ತಿದ್ದರು. ಅಷ್ಟೇ ಅಲ್ಲದೆ ಅವರು ದಿನನಿತ್ಯ ಬೆಳಿಗ್ಗೆ ವಾಕಿಂಗ್ ನಿಂದ ಹಿಂತಿರುಗುವ ಸಮಯದಲ್ಲಿ ಮತ್ತೊಂದು ಎಳನೀರನ್ನು ಸೇವಿಸಿ, ಅದು ಜೀರ್ಣವಾಗುವ ಮೊದಲೇ ಮತ್ತೆ ಉಪಾಹಾರವನ್ನು ತೆಗೆದುಕೊಳ್ಳುತ್ತಿದ್ದರು. ಹೀಗೆ ಸತತವಾಗಿ 10 ದಿನಗಳ ಕಾಲ ಮಾಡಿದ ನಂತರ ಅಜೀರ್ಣ, ಜ್ವರ, ನೆಗಡಿ, ತಲೆನೋವಿನ ವ್ಯತ್ಯಾಸಗಳನ್ನು ಅಪ್ಪ-ಮಗಳು ಅನುಭವಿಸಲು ಪ್ರಾರಂಭಿಸಿದರು. ಎಳನೀರಿನಿಂದಲೇ ಈ ಸಮಸ್ಯೆಗಳು ಉದ್ಭವಿಸಿದೆಯೇ ಎಂಬ ಪ್ರಶ್ನೆಯನ್ನು ನನ್ನ ಮುಂದೆ ಇಟ್ಟರು. ಡಾಕ್ಟ್ರೇ, ಆಯುರ್ವೇದದ ಪ್ರಕಾರ ಎಳನೀರು ಬಹಳ ಒಳ್ಳೆಯದು ಅಲ್ಲವೇ, ಹಾಗಿದ್ದಾಗ ನಮಗೆ ಅದರಿಂದ ತೊಂದರೆ ಆಗಿದ್ದಾದರೂ ಏಕೆ? ಎಂದು ಪ್ರಶ್ನಿಸತೊಡಗಿದರು. ಸ್ನೇಹಿತರೆ, ಇಷ್ಟು ಹೊತ್ತಿಗೆ ನಿಮ್ಮ ಮನಸ್ಸಿನಲ್ಲೂ ಈ ಪ್ರಶ್ನೆಗಳು ಉದ್ಭವಿಸಿರಬಹುದು. ಹಾಗಾಗಿ, ಬನ್ನಿ ಆಯುರ್ವೇದ ಶಾಸ್ತ್ರಗಳಲ್ಲಿ ಈ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕೋಣ.

ಆಯುರ್ವೇದದಲ್ಲಿ ನಾರಿಕೇಲ' ಅಥವಾ ನಾಲಿಕೇರ' ಅಂದರೆ ತೆಂಗು. ಪೂರ್ವಜರು ಹೇಳಿರುವಂತೆ, ಆಕಾಶದಿಂದ ಸುರಿಯುವ ಪರಿಶುದ್ಧ ಮಳೆ ನೀರು ಮತ್ತು ಗಂಗಾಜಲವನ್ನು ಬಿಟ್ಟರೆ ಭೂಮಿಯಲ್ಲಿ ಸಿಗುವ ಪರಿಶುದ್ಧ ಜಲಗಳಲ್ಲಿ ತೆಂಗಿನ ನೀರು /ಎಳನೀರೇ ಹೆಚ್ಚು ಉತ್ತಮವಾದದ್ದು . ಸಂಸ್ಕೃತದ ಶಬ್ದಕೋಶದಲ್ಲಿ ನಾರಿಕೇಲದ ಉತ್ಪತ್ತಿಯನ್ನ ನೋಡಿದರೆ ಅದು ಹೀಗೆ ಹೇಳುತ್ತೆ – ಆನಂದವನ್ನು ಉಂಟುಮಾಡುವ ಸ್ತ್ರೀಯರ ರಾಸಕೇಳಿಯಂತೆ ತೆಂಗು ಕೂಡ ಸೇವಿಸಿದಾಗ ತೃಪ್ತಿಯನ್ನು ಮತ್ತು ಹರ್ಷವನ್ನು ಉಂಟುಮಾಡುತ್ತದೆ ಎಂದರ್ಥ. ಇದರ ಜೊತೆಗೆ, ಇದಕ್ಕೆ ಮತ್ತೊಂದು ವಿಶೇಷ ಅರ್ಥವಿದೆ – ನೀರು ಕೆಳಮುಖವಾಗಿ ಹರಿಯುವ ಸ್ವಭಾವ ಉಳ್ಳದ್ದಾದರೂ ತೆಂಗಿನಲ್ಲಿ ಮಾತ್ರ ನೀರು ವಾಯುವಿನ ಪ್ರೇರಣೆಯಿಂದ ಮೇಲ್ಮುಖವಾಗಿ ಪ್ರವಹಿಸುತ್ತದೆ ಎಂಬುದನ್ನು ಇದು ಸೂಚಿಸುತ್ತದೆ. ಈ ಎಳನೀರಿನಲ್ಲಿ ದೋಷಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿರುವುದರಿಂದ ಇದು ಅಮೃತಕ್ಕೆ ಸಮಾನ.

ತೆಂಗನ್ನು ಭೂಲೋಕದ ಕಲ್ಪವೃಕ್ಷವೆಂದು ಕರೆದಿದ್ದಾರೆ, ಕಾರಣ ಇದರ ಎಲ್ಲಾ ಭಾಗಗಳು ಬೇರೆ ಬೇರೆ ರೀತಿಯಲ್ಲಿ ಉಪಯುಕ್ತವಾಗುತ್ತದೆ. ಆದರೆ ನಮ್ಮ ಜೀವದ ಮತ್ತು ಜೀವನದ ಪುಷ್ಟಿಗೆ ನೇರವಾಗಿ ಸಹಕರಿಸುವ ಭಾಗವೆಂದರೆ ತೆಂಗಿನ ಫಲದೊಳಗಿರುವ ಮಧುರವಾದ ನೀರು ಮತ್ತು ಮೃದುವಾದ ತೆಳ್ಳಗಿನ ಬಿಳಿಭಾಗ. ಇದರ ಜೊತೆಗೆ, ಒಣಕೊಬ್ಬರಿ, ಕೊಬ್ಬರಿಯಿಂದ ಹಿಂಡಿದ ಎಣ್ಣೆ ಹಾಗೂ ಹಿಂಡಿ, ತೆಂಗಿನ ಹೂವು, ಹೂವಿನಿಂದ ಹಿಂಡಿದ ರಸ – ಹೀಗೆ ಈ ಎಲ್ಲವೂ ಒಂದೇ ಮರದ ಭಾಗಗಳಾದರೂ ಸಹ ಅವುಗಳ ಗುಣ ಧರ್ಮಗಳಲ್ಲಿ ಬಹಳಷ್ಟು ವ್ಯತ್ಯಾಸವಿದೆ. ಹಾಗಾಗಿ ಅವುಗಳನ್ನು ತಿಳಿದುಕೊಂಡು ಉಪಯೋಗಿಸಿದರೆ ಸದಾ ಕ್ಷೇಮ.

ಇಂದಿನ ಈ ಲೇಖನದಲ್ಲಿ ಎಳನೀರಿನ ಉಪಯೋಗದ ಬಗ್ಗೆ ವಿಶೇಷವಾಗಿ ತಿಳಿದುಕೊಳ್ಳೋಣ. ಇದರ ಬಗ್ಗೆ ಒಂದು ಸ್ವಾರಸ್ಯಕರವಾದ ವಿಷಯವೊಂದನ್ನು ಓದಿದ್ದೆ. ಇತಿಹಾಸದ ಪ್ರಕಾರ, ಎರಡನೇ ಮಹಾಯುದ್ಧದ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ ತುರ್ತು ಐ.ವಿ ಫ್ಲುಯಿಡ್ ಲಭ್ಯವಿಲ್ಲದ ಕಾರಣ ನೇರವಾಗಿ ರಕ್ತನಾಳಗಳಿಗೆ ಎಳನೀರನ್ನು ಸೇರಿಸಿದ್ದರು ಎಂಬ ಅಚ್ಚರಿಯ ವಿಷಯ ಸಿಗುತ್ತದೆ. ಇಂದು, ಇದರ ನೈಸರ್ಗಿಕ ಮತ್ತು ಪೌಷ್ಟಿಕಾಂಶಗಳ ಸಮೃದ್ಧಿಯಿಂದ ಇದು ಬಹಳ ಜನಪ್ರಿಯವಾದ ಪಾನೀಯವಾಗಿದ್ದು ಹಲವಾರು ರೂಪಗಳಲ್ಲಿ ಇದು ಲಭ್ಯವಿದೆ.

ಇದರ ಗುಣ ಧರ್ಮಗಳನ್ನು ನಾವು ನೋಡುವುದಾದರೆ, ನೀರಿಗೆ ಹೋಲಿಸಿದರೆ ಎಳನೀರು ಸ್ನಿಗ್ಧವಾಗಿರುತ್ತದೆ. ಅಂದರೆ ದೇಹಕ್ಕೆ ಜಿಡ್ಡನ್ನು ಪೂರೈಸುವ ಗುಣವಿದೆ. ಇದು ರುಚಿಯಲ್ಲಿ ಸಿಹಿಯಾಗಿದ್ದು ಕುಡಿದಾಗ ತೃಪ್ತಿಯನ್ನು ನೀಡುತ್ತದೆ. ಸ್ವಭಾವತಃ ಎಳನೀರು ಬಹಳ ಶೀತಲ ಮತ್ತು ಸ್ಪರ್ಶಕ್ಕೆ ಅತ್ಯಂತ ತಂಪೆನಿಸುವ ಇದು ದೇಹಕ್ಕೂ ಸಹ ಈ ತಂಪನ್ನು ನೀಡುತ್ತದೆ.ನೀರಿಗೆ ಹೋಲಿಸಿದರೆ ಎಳನೀರು ಬಹಳ ಬೇಗ ಜೀರ್ಣವಾಗುತ್ತದೆ. ಹಾಗಾಗಿಯೇ ಇದನ್ನು ಕುಡಿದ ಸ್ವಲ್ಪ ಸಮಯಕ್ಕೆ ಮೂತ್ರ ವಿಸರ್ಜನೆ ಆಗುತ್ತದೆ. ಇದು ಬಸ್ತಿ – ಮೂತ್ರಾಶಯಗಳ ಶುದ್ಧಿಯನ್ನು ಹಾಗೂ ಪಚನಶಕ್ತಿಯನ್ನು ಉತ್ತೇಜಿಸುತ್ತದೆ.

ಈ ಮೇಲೆ ಹೇಳಿದ ಗುಣಗಳಿಂದ ಎಳನೀರು ದೇಹವನ್ನು ಮತ್ತು ಮನಸ್ಸನ್ನು ಆಹ್ಲಾದಗೊಳಿಸುತ್ತದೆ. ದೈಹಿಕ ಶ್ರಮ ಹೆಚ್ಚಾಗಿರುವವರಿಗೆ ಇದು ಅಮೃತ ಪ್ರಾಯವಾಗಿರುತ್ತದೆ. ಇದು ಒಂದು ಹಂತದಲ್ಲಿ ಹೃದಯಕ್ಕೆ ಉತ್ತೇಜಕವು ಹೌದು. ಬಾಯಿ, ನಾಲಿಗೆ, ಗಂಟಲುಗಳು ಬೇಸಿಗೆಯ ಬಿಸಿಯಿಂದ ಒಣಗಿರುವವರಿಗೆ ಇದು ತಕ್ಷಣವೇ ಪರಿಹಾರವನ್ನು ನೀಡುತ್ತದೆ. ಇದು ದೇಹದಲ್ಲಿ ವಾತ-ಪಿತ್ತ ಶಾಮಕವಾಗಿ ಕೆಲಸ ಮಾಡುತ್ತದೆ. ನಮ್ಮ ದೇಹಕ್ಕೆ ಅಗತ್ಯವಾಗಿರುವ ಹಲವಾರು ಖನಿಜಾಂಶಗಳನ್ನು ಹೊಂದಿರುವುದರಿಂದ ಇದು ಒಂದು ಉತ್ತಮ ಟಾನಿಕ್ ಆಗಿ ಪರಿಣಮಿಸುತ್ತದೆ.

ಸಾಮಾನ್ಯವಾಗಿ ಆಸ್ಪತ್ರೆಯಲ್ಲಿ ನಮ್ಮ ಸ್ನೇಹಿತರು ಯಾರಾದರೂ ಸೇರಿದಾಗ ಅವರ ಆರೈಕೆಗೆ ಸಾಕಷ್ಟು ಎಳನೀರನ್ನು ನಾವು ತೆಗೆದುಕೊಂಡು ಹೋಗಿ ಕೊಡುವ ರೂಢಿ ಇದೆ. ಎಳನೀರು ರೋಗಾವಸ್ಥೆಯಲ್ಲಿ ಉತ್ತಮ ಪರಿಹಾರ ಎಂಬುದು ಹಲವರ ಅಭಿಪ್ರಾಯ. ಆದರೆ ಅಮೃತವೂ ಸಹ ಕ್ರಮ ತಪ್ಪಿದಾಗ ವಿಷವಾಗುವಂತೆ ಎಳನೀರನ್ನು ವಿವೇಚನೆಯಲ್ಲದೆ ಉಪಯೋಗಿಸುವುದರಿಂದ ಅನುಕೂಲಕ್ಕಿಂತಲೂ ಪ್ರತಿಕೂಲವೇ ಹೆಚ್ಚಾಗುತ್ತದೆ. ಆದ್ದರಿಂದ ಇದರ ಗುಣಧರ್ಮಗಳನ್ನು ಅರಿತು ಉಪಯೋಗಿಸಿದಾಗ ಇದು ನಮಗೆ ಸ್ವಾಸ್ಥ್ಯವನ್ನು ಧಾರೆ ಎರೆಯುತ್ತದೆ.

ಬಿಸಿಲಿನ ಬೇಗೆಯಿಂದ ಬಳಲುತ್ತಿರುವಾಗ ಎಳನೀರನ್ನು ಕುಡಿಯುವುದು ರೂಢಿ. ಇದು ದೇಹದಲ್ಲಿ ತಕ್ಷಣದಲ್ಲಿ ಶೀತ-ಉಷ್ಣಗಳ ಏರುಪೇರನ್ನು ಉಂಟು ಮಾಡುವುದರಿಂದ ಹಲವರಿಗೆ ಹೀಗೆ ಮಾಡಿದಾಗ ನೆಗಡಿ, ತಲೆನೋವು, ತಲೆಭಾರ ಉಂಟಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ ಬಿಸಿಲಿನಲ್ಲಿ ಹೋಗಿ ಬಂದ ನಂತರ ಸ್ವಲ್ಪ ಸಮಯ ಸುಧಾರಿಸಿಕೊಂಡು ನಂತರ ನಿಧಾನವಾಗಿ ಎಳನೀರನ್ನು ಸೇವಿಸುವುದು ಒಳ್ಳೆಯದು.

ಅಂತೆಯೇ, ಅತಿ ತಂಪಾಗಿರುವ ಎಳನೀರನ್ನು ಪ್ಲಾಸ್ಟಿಕ್ ಕೊಳವೆಯಿಂದ/ ಸ್ಟ್ರಾ ಇಂದ ಹೀರುವುದು ಅಭ್ಯಾಸ. ಆದರೆ, ಈ ಅಭ್ಯಾಸವು ಗಂಟಲ ಭಾಗವನ್ನೇ ವಿಶೇಷವಾಗಿ ಅತ್ಯಂತ ಶೀಘ್ರವಾಗಿ ತಣ್ಣಗಾಗಿಸುವುದರಿಂದ ಆ ಭಾಗದ ಅವಯವಗಳು ವಿಕೃತಿ ಹೊಂದಿ ತೊಂದರೆ ಉಂಟಾಗುತ್ತದೆ. ಕಿರುನಾಲಿಗೆಯ ಬಾವು, ನೆಗಡಿ, ಕೆಮ್ಮು, ಉಬ್ಬಸಗಳು ಉಂಟಾಗುತ್ತದೆ.

ಆಯುರ್ವೇದವು ಎಳನೀರನ್ನು ದ್ರವಹಾರವಾಗಿಯೇ ಪರಿಗಣಿಸಿದೆ. ಆದ್ದರಿಂದ ಹಸಿವೆಯನ್ನು ಗಮನಿಸದೆ ಅಥವಾ ಆಹಾರವನ್ನು ಸೇವಿಸಿದ ನಂತರ ಮನಬಂದಂತೆ ಎಳನೀರನ್ನು ಸೇವಿಸಿದರೆ ಇದರಿಂದ ಖಂಡಿತ ತೊಂದರೆ ತಪ್ಪದು. ಇದರ ಪರಿಣಾಮವಾಗಿ ಅಜೀರ್ಣ, ಅತಿಸಾರ, ಜ್ವರ- ಮುಂತಾದ ತೊಂದರೆಗಳು ಕಾಣಿಸಿಕೊಳ್ಳಬಹುದು. ಆದ್ದರಿಂದ ಎಳನೀರನ್ನು ಆಹಾರದ ಸಮಯದಲ್ಲೇ ಪಾನೀಯವಾಗಿ ಬಳಸುವುದು ಸೂಕ್ತ. ಅಂದರೆ ಬೇಸಿಗೆಯಲ್ಲಿ ಊಟದೊಂದಿಗೆ ನೀರಿನ ಬದಲು ಎಳನೀರನ್ನು ಸವಿಯಬಹುದು.ಅಥವಾ ಬಾಯಾರಿಕೆ ಎನಿಸಿದಾಗ ನೀರಿನ ಬದಲು ಬಾಯಾರಿಕೆ ನೀಕುವಷ್ಟು ಪ್ರಮಾಣದಲ್ಲಿ ಮಾತ್ರ ಎಳನೀರನ್ನು ಕುಡಿಯಬಹುದು. ಅಥವಾ, ಘನ ಆಹಾರದ ಬದಲು ಎಳನೀರನ್ನೇ ಆಹಾರವಾಗಿ ಸೇವಿಸಬಹುದು.

ಅಂತೆಯೇ, ಬಿಸಿಲುಗಾಲದ ಆಹಾರದ ತಯಾರಿಕೆಯಲ್ಲಿ ನೀರಿನ ಬದಲು ಎಳನೀರನ್ನು ಬಳಸಬಹುದು. ಉದಾಹರಣೆಗೆ- ಎಳನೀರಿನಿಂದ ತಯಾರಿಸಿದ ಗಂಜಿ, ಪಾಯಸ, ಅಪ್ಪಂ ಇತ್ಯಾದಿ. ಎಳನೀರಿನ ತಿರುಳಿನ ಭಾಗವನ್ನು ಸಹ ಊಟದ ಜೊತೆಯಲ್ಲಿ ಸೇವಿಸಿ, ಆಹಾರದ ಪ್ರಮಾಣವನ್ನು ಸ್ವಲ್ಪ ಕಡಿಮೆ ಮಾಡುವುದರಿಂದ ತೊಂದರೆಯಾಗುವುದಿಲ್ಲ. ಆದರೆ ನೆನಪಿಡಿ- ಒಮ್ಮೆ ಕುಡಿದ ಎಳನೀರು ಜೀರ್ಣವಾಗುವ ಮುನ್ನ ಇನ್ನೊಮ್ಮೆ ಎಳನೀರನ್ನು ಕುಡಿಯಬಾರದು. ಇದೇ ರೀತಿ ಸಂಜೆ ಸೂರ್ಯಾಸ್ತದ ನಂತರ ಎಳನೀರಿನ ಸೇವನೆ ಪ್ರಶಸ್ತವಾದುದಲ್ಲ. ಜೀರ್ಣಶಕ್ತಿಯನ್ನು, ನಮ್ಮ ಆಹಾರ ಕಾಲವನ್ನು ಮತ್ತು ಹಸಿವೆಯನ್ನು ಗಮನಿಸದೆ ಮನಬಂದಂತೆ ಸೇವಿಸುವ ಎಳನೀರು ಸದಾ ನಮ್ಮ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ.

ಕೆಲವು ಮುನ್ನೆಚ್ಚರಿಕೆಗಳನ್ನು ಸದಾ ನೆನಪಿನಲ್ಲಿಟ್ಟುಕೊಂಡರೆ ಒಳ್ಳೆಯದು. ಎಳನೀರು ಅತಿ ತಂಪನ್ನೆರೆಯುವ ಕಾರಣ ಇದನ್ನು ಚಳಿಗಾಲ ಅಥವಾ ಮಳೆಗಾಲದಲ್ಲಿ ಕುಡಿಯುವುದು ಸೂಕ್ತವಲ್ಲ. ಆಹಾರ ಸೇವಿಸುವ ಕಾಲದ ಹೊರತಾಗಿ ಪದೇಪದೇ ಎಳನೀರನ್ನು ಸೇವಿಸುವುದರಿಂದ ಹಲವಾರು ಆರೋಗ್ಯದ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಎಳನೀರಿನ ಅತಿಯಾದ ಸೇವನೆಯಿಂದ ಜೀರ್ಣಶಕ್ತಿ ಕುಂದಬಹುದು. ಅಜೀರ್ಣದಿಂದಾದ ಜ್ವರ, ಭೇದಿ, ವಾಂತಿ ಮುಂತಾದ ತೊಂದರೆಗಳಲ್ಲಿ ಎಳನೀರನ್ನು ಸೇವಿಸಿದಾಗ ಮತ್ತಷ್ಟು ತೊಂದರೆ ಆಗಬಹುದು

ಎಳನೀರು ಸುಸ್ತು,ಕಾರ್ಶ್ಯ, ತಲೆ ತಿರುಗುವಿಕೆಯನ್ನು ನಿವಾರಿಸುತ್ತದೆ. ಇಂತಹವರು ಇದನ್ನು ಬೆಳಗ್ಗಿನ ಆಹಾರದೊಡನೆ ಹಸಿವೆಯನ್ನು ಗಮನಿಸಿ ಸೇವಿಸಬಹುದು.ಇದು ಸದ್ಯ ಶುಕ್ರಕರವಾದ್ದರಿಂದ ಕ್ಷೀಣ ವೀರ್ಯದವರು/ ಕಡಿಮೆ ಮೈಥುನ ಶಕ್ತಿ ಹೊಂದಿದವರು ಕ್ರಮವರಿತು ಸೇವಿಸತಕ್ಕದ್ದು.

ದಿನನಿತ್ಯ ಮಲಪ್ರವೃತ್ತಿ ಸರಿಯಾಗದವರಿಗೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ಅಗ್ನಿಮಾಂದ್ಯಗಳಿದ್ದವರು ಎಳನೀರನ್ನು (ಬಿಸಿನೀರಿನಲ್ಲಿಟ್ಟು) ಬೆಚ್ಚಗೆ ಮಾಡಿ, ಒಂದೆರಡು ಚಿಟಿಕೆ ಉಪ್ಪನ್ನು ಸೇರಿಸಿ ಕುಡಿಯುವುದು ಉತ್ತಮ ಫಲಿತಾಂಶವನ್ನು ನೀಡುತ್ತದೆ. ಈ ರೀತಿಯ ಪ್ರಯೋಗ ಅತಿಸಾರದಲ್ಲಿಯೂ ಒಳ್ಳೆಯದು. ವಾಂತಿ ಇದ್ದಾಗ ಉಪ್ಪಿನ ಬದಲು ಒಂದೆರಡು ಚಮಚ ಹಳೆಯ ಜೇನನ್ನು ಸೇರಿಸಿ ಬಿಸಿ ಮಾಡದೆ, ಪ್ರತಿ 10 ನಿಮಿಷಕ್ಕೆ ಒಂದೆರಡು ಚಮಚದಂತೆ ಕುಡಿಯುವುದರಿಂದ ವಾಂತಿ ನಿಂತು ದಣಿವು ಪರಿಹಾರವಾಗುತ್ತದೆ.

ಚೆನ್ನಾಗಿ ಪೋಷಣೆ ಇಲ್ಲದ ಗರ್ಭಿಣಿಯರು ಸಹ ಪ್ರತಿದಿನವೂ ಸಹ ಒಂದು ಬಲಿತ ಸಿಹಿ ಎಳನೀರನ್ನು ಕುಡಿಯುವುದರಿಂದ ಮಲಪ್ರವೃತ್ತಿ ಸರಿಯಾಗಿ ಗರ್ಭವು ಉತ್ತಮವಾಗಿ ಬೆಳೆಯುತ್ತದೆ. ಮೂತ್ರಕೋಶದ ಕಲ್ಲಿನ ಸಮಸ್ಯೆ ಇದ್ದಾಗ ಅರ್ಧ ಚಮಚ ನೆಗ್ಗಿಲ ಪುಡಿ ಅಥವಾ ಸೌತೆ ಬೀಜದ ಪುಡಿಯನ್ನು ಎಳನೀರಿಗೆ ಸೇರಿಸಿ, 20 ನಿಮಿಷಗಳ ಕಾಲ ಬಿಟ್ಟು ನಂತರ ಉಪಯೋಗಿಸುವುದರಿಂದ ಕೆಲವೇ ದಿನಗಳಲ್ಲಿ ಸಮಸ್ಯೆಯ ತೀವ್ರತೆ ಕಡಿಮೆಯಾಗಿ ನೋವು ಕಡಿಮೆಯಾಗುತ್ತದೆ. ಇದನ್ನು ಕನಿಷ್ಠ ಒಂದು ತಿಂಗಳವರೆಗಾದರೂ ಮಾಡತಕ್ಕದ್ದು.

ವಿವಿಧ ರೀತಿಯ ಎಳನೀರಿನ ಪ್ರಯೋಗವು ಅರೆತಲೆನೋವಿನಲ್ಲಿ, ಕಾಮಾಲೆಯಲ್ಲಿ, ಜ್ವರದಲ್ಲಿ – ಹೀಗೆ ಹಲವಾರು ರೋಗಗಳಲ್ಲಿ ಬಹಳ ಒಳ್ಳೆಯ ಫಲಿತಾಂಶವನ್ನು ನೀಡಿದೆ. ಒಟ್ಟಾರೆ, ಎಳನೀರು ಭೂಮಿಯಲ್ಲಿ ಸಿಗುವ ಅಮೃತವೇ ಸರಿ. ಇದರ ಅಮೃತತ್ವವನ್ನು ಸಂಪೂರ್ಣವಾಗಿ ನಾವು ಅನುಭವಿಸಬೇಕಾದರೆ ಅದಕ್ಕೆ ಬೇಕಾಗಿರುವ ಬಹುಮುಖ್ಯ ಅಂಶ – ವಿವೇಚನೆ. ಎಳನೀರಿನ ಬಳಕೆಯ ಮುನ್ನ ಯಾರಿಗೆ, ಎಷ್ಟು, ಯಾವಾಗ, ಹೇಗೆ ಎಂಬ ವಿವೇಚನೆಯು ಸದಾ ನಮ್ಮನ್ನು ಕಾಪಾಡುವ ರಕ್ಷಾ ಕವಚವಾಗಲಿ!

ಪ್ರಸ್ತುತ
ಬಿ.ಎಸ್. ಶಿವಣ್ಣ
vveditoped@gmail.com

ಮಂದಿರ, ಮಸೀದಿ, ಚರ್ಚ್‌ಗಳಲ್ಲೂ ಅಂಬೇಡ್ಕರ್ ಭಾವಚಿತ್ರ ಬರಲಿ

ರಾಜ್ಯದ ಎಲ್ಲಾ ಹಂತದ ನ್ಯಾಯಾಲಯಗಳಲ್ಲಿ, ಕೋರ್ಟ್ ಸಭಾಂಗಣಗಳಲ್ಲಿ, ಕಚೇರಿಗಳಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂದು ಹೈಕೋರ್ಟ್ ಆದೇಶ ಹೊರಡಿಸಿರುವುದು ಸ್ವಾಗತಾರ್ಹ. ಆದರೆ ಅಂಬೇಡ್ಕರ್ ಭಾವಚಿತ್ರ ಹಾಕಲು ಹೈಕೋರ್ಟ್ ಆದೇಶ ನೀಡಬೇಕಾದ ಪರಿಸ್ಥಿತಿ ಬಂತಲ್ಲಾ ಎಂಬ ನೋವು ಕಾಡುತ್ತದೆ. ಇಲ್ಲಿಯವರೆಗೂ ನ್ಯಾಯಾಲಯಗಳಲ್ಲಿ, ನ್ಯಾಯಾಲಯ ಸಂಬಂಧಿತ ಕಚೇರಿಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇರಲಿಲ್ಲವೇ ಎಂಬ ಪ್ರಶ್ನೆಯೂ ಮನಸ್ಸನ್ನು ಕಾಡುತ್ತದೆ.

ಬಾಬಾಸಾಹೇಬ ಅಂಬೇಡ್ಕರ್ ಅವರು ವಿಶ್ವ ಕಂಡ ಅತ್ಯಂತ ಶ್ರೇಷ್ಠ ನ್ಯಾಯವಾದಿಯಾಗಿದ್ದರು, ಕಾನೂನು ಪಂಡಿತರಾಗಿದ್ದರು. ದೇಶದ ಕಾನೂನು ಸಚಿವರಾಗಿ ಕೆಲಸ ಮಾಡಿದ್ದರು. ನ್ಯಾಯಾಲಯಗಳು ಪ್ರತಿನಿತ್ಯ ಸಾಂವಿಧಾನಿಕ ನಿಯಮಗಳ ಮೇಲೆಯೇ ನಡೆಯುತ್ತವೆ. ನ್ಯಾಯವಾದಿಗಳು, ನ್ಯಾಯಧೀಶರೆಲ್ಲರೂ ಸಂವಿಧಾನ ಓದುತ್ತಾರೆ. ಆದರೂ ನ್ಯಾಯಾಲಯಗಳಲ್ಲಿ ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸದೇ ಇರುವುದು ದುರದೃಷ್ಟಕರ. ಹೈಕೋರ್ಟ್ ಆದೇಶದ ಮೂಲಕ ಇನ್ನುಮುಂದಾದರೂ ನ್ಯಾಯಾಂಗ ವ್ಯವಸ್ಥೆಯ ಕಚೇರಿಗಳಲ್ಲಿ ಬಾಬಾ ಸಾಹೇಬರ ಭಾವಚಿತ್ರ ಅಳವಡಿಸಬೇಕು ಎಂಬ ಒತ್ತಾಯದೊಂದಿಗೆ ಇಲ್ಲಿ ಕೆಲ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ.

ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸುವುದು ಕೇವಲ ನ್ಯಾಯಾಲಯಗಳಿಗಷ್ಟೇ ಸಾಕಾ? ಈಗಲೂ ಕೆಲವು ಖಾಸಗಿ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳಲ್ಲೂ ಅಂಬೇಡ್ಕರ್ ಭಾವಚಿತ್ರ ಅಳವಡಿಸಿಲ್ಲ. ಕೇವಲ ರಾಷ್ಟ್ರೀಯ ಹಬ್ಬದ ದಿನ ಮಾತ್ರ ಭಾವಚಿತ್ರ ತೋರಿಸಿ ಮಿಕ್ಕಂತೆ ಮರೆತುಬಿಡುತ್ತಾರೆ. ಹೀಗಾಗಿ ಶಾಲಾ, ಕಾಲೇಜು, ವಿವಿಗಳಲ್ಲೂ ಅಂಬೇಡ್ಕರ್ ಭಾವಚಿತ್ರ ಅಳವಡಿಸುವುದು ಕಡ್ಡಾಯವಾಗಬೇಕು. ಅಂಬೇಡ್ಕರ್ ಭಾವಚಿತ್ರ ಪ್ರದರ್ಶನ ಮಾಡುವುದು ಮಾತ್ರವಲ್ಲ, ಅಂಬೇಡ್ಕರ್ ಅವರು ನೀಡಿರುವ

ಸಂವಿಧಾನದ ಮುನ್ನುಡಿ ಓದುವ ಕೆಲಸವೂ ಆಗಬೇಕು.

ಆಧುನಿಕ ಭಾರತದ ತಳಹದಿಯೇ ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನವಾಗಿದೆ. ಹೀಗಾಗಿ ಗುಡಿ, ಚರ್ಚು, ಮಸೀದಿ, ಬಸದಿ, ಗುರುದ್ವಾರಗಳಲ್ಲೂ ಅಂಬೇಡ್ಕರ್ ಭಾವಚಿತ್ರ ಅಳವಡಿಸಬೇಕು. ಗುಡಿಗಳಲ್ಲಿ ಭಗವದ್ಗೀತೆ ಇರುವ ಹಾಗೆ ಸಂವಿಧಾನದ ಪ್ರತಿಯೂ ಇರಬೇಕು. ಅಲ್ಲಿಯ ಅರ್ಚಕರು ಪೂಜೆ ಆರಂಭಿಸುವುದಕ್ಕೂ ಮೊದಲು ಸಂವಿದಾನ ಮುನ್ನಡಿ ಓದಿ ಪ್ರಾರ್ಥನೆ ಸಲ್ಲಿಸಬೇಕು.

ಅದೇ ರೀತಿ ಚರ್ಚ್‌ಗಳಲ್ಲಿ ಫಾದರ್‌ಗಳು ಬೈಬಲ್ ಓದುವುದಕ್ಕೂ ಮೊದಲು ಸಂವಿಧಾನದ ಮುನ್ನುಡಿ ಓದುವಂತಾಗಬೇಕು. ಮಸೀದಿಯಲ್ಲಿ ಮುಲ್ಲಾ, ಮೌಲ್ವಿಗಳು ಕುರಾನ್ ಪಠಣ ಮಾಡುವುದಕ್ಕೂ ಮೊದಲು ಸಂವಿಧಾನದ ಮುನ್ನುಡಿಯನ್ನು ಪಠಣ ಮಾಡಬೇಕು. ಅದೇ ರೀತಿ ಜೈನ ಬಸದಿ, ಗುರುದ್ವಾರಗಳಲ್ಲೂ ಸಂವಿಧಾನದ ಮುನ್ನುಡಿಗೆ ಮೊದಲ ಆದ್ಯತೆ ನೀಡಿ ನಂತರ ಧಾರ್ಮಿಕ ಆಚರಣೆ ಆರಂಭಿಸುವುದು ಕಡ್ಡಾಯವಾಗಬೇಕು. ಕರ್ನಾಟಕ ಸರಕಾರವೇ ಸಂವಿಧಾನದ ಪ್ರತಿಗಳನ್ನು ಉಚಿತವಾಗಿ ದೇವಾಲಯ, ಚರ್ಚ್, ಮಸೀದಿ, ಬಸದಿ, ಗುರುದ್ವಾರಗಳಿಗೆ ಉಚಿತವಾಗಿ ಪೂರೈಕೆ ಮಾಡಬೇಕು. ಜತೆಗೆ ಮುಜರಾಯಿ ಇಲಾಖೆ ದೇವಾಲಯಗಳಲ್ಲಿ ಸಂವಿಧಾನದ ಮುನ್ನುಡಿ ಪಠಣ ಮಾಡುವುದನ್ನು ಕಡ್ಡಾಯಗೊಳಿಸಬೇಕು ಎಂದು ನಾನು ಈ ಮೂಲಕ ಒತ್ತಾಯ ಮಾಡುತ್ತೇನೆ.

ಬಿಜೆಪಿ ಮುಖಂಡರು ಪ್ರತಿನಿತ್ಯ ದೇಶದ ಒಂದಲ್ಲ ಒಂದು ಕಡೆಗಳಲ್ಲಿ ಭಾರತೀಯ ಸಂವಿಧಾನದ ವಿರುದ್ಧ ಮಾತನಾಡುತ್ತಿದ್ದಾರೆ. ಅಂಬೇಡ್ಕರ್ ಅವರಿಗೆ ಅವಮಾನ ಮಾಡುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ. ಸಂವಿಧಾನದ ವಿರುದ್ಧ ಮಾತನಾಡುವುದು ಬಿಜೆಪಿ ಮುಖಂಡರಿಗೆ, ಬಿಜೆಪಿ ಸಂಸದರಿಗೆ ಅಭ್ಯಾಸವಾಗಿ ಹೋಗಿದೆ. ಸಂವಿಧಾನವನ್ನು ನಿಂದನೆ ಮಾಡಿದರೂ, ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದರೂ ಬಿಜೆಪಿ ಹೈಕಮಾಂಡ್ ಅವರ ವಿರುದ್ಧ ಯಾವುದೇ ಕ್ರಮ ಜರುಗಿಸುವುದಿಲ್ಲ. ಕನಿಷ್ಠ ಎಚ್ಚರಿಕೆಯನ್ನೂ ನೀಡುವುದಿಲ್ಲ. ಮನುವಾದವನ್ನು ಪುನರುತ್ಥಾನ ಮಾಡುವ ಚಿಂತನೆಯಲ್ಲಿರುವ ಬಿಜೆಪಿ ಮುಖಂಡರಿಗೆ ಸಂವಿಧಾನ, ಅಂಬೇಡ್ಕರ್ ಬೇಕಾಗಿಲ್ಲ.

ಬಿಜೆಪಿ ಮುಖಂಡರಿಗೆ ಧೈರ್ಯವಿದ್ದರೆ ಆರ್‌ಎಸ್‌ಎಸ್ ಕಚೇರಿಗಳಲ್ಲಿ, ಶ್ರೀರಾಮ ಸೇನೆ, ವಿಎಚ್‌ಪಿ ಕಚೇರಿಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸುವಂತೆ ಸಲಹೆ ನೀಡಲಿ. ಆರ್‌ಎಸ್‌ಎಸ್ ಅಭ್ಯಾಸಕ್ಕೆ ಬರುವ ಪ್ರತಿಯೊಬ್ಬ ಸ್ವಯಂಸೇವಕನಿಗೆ ಸಂವಿಧಾನದ ಮುನ್ನುಡಿ ಪಠಣ ಮಾಡುವುದು ಕಡ್ಡಾಯ ಎಂದು ನಿಯಮ ರೂಪಿಸಲಿ. 'ಕೇಶವ ಕೃಪಾ'ಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಿ ತೋರಿಸಿ ನೋಡೋಣ!

ದೇಶದ ಗೃಹಸಚಿವ ಅಮಿತ್ ಶಾ ಅವರು ತುಂಬಿದ ರಾಜ್ಯಸಭೆಯಲ್ಲಿ ಹೇಳಿದ್ದ ಮಾತುಗಳನ್ನು ನೆನಪಿಸಿಕೊಳ್ಳಿ. 'ಅಂಬೇಡ್ಕರ್ ಎಂಬುದು ಈಗ ಫ್ಯಾಷನ್ ಆಗಿಬಿಟ್ಟಿದೆ. ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್, ಬರೀ ಅಂಬೇಡ್ಕರ್. ಇಷ್ಟು ದೇವರ ನಾಮಸ್ಮರಣೆ ಮಾಡಿದ್ದರೆ ಏಳೇಳು ಜನ್ಮ ಸ್ವರ್ಗಕ್ಕೆ ಹೋಗುತ್ತಿದ್ದರು' ಎಂದು ವ್ಯಂಗ್ಯ ಮಾಡಿದ್ದರು. ಅಮಿತ್ ಶಾ ಅವರ ಕೀಳು ಅಭಿರುಚಿಯ ಈ ಮಾತು ಅವರ ಮನಸ್ಥಿತಿಯನ್ನು ತೆರೆದಿಟ್ಟಿತ್ತು. ಇದರಿಂದಂಲೇ ಗೊತ್ತಾಗುತ್ತದೆ ಅಂಬೇಡ್ಕರ್ ಹಾಗೂ ಸಂವಿಧಾನದ ಮೇಲೆ ಬಿಜೆಪಿಗೆ ಇರುವ ಅಭಿಮಾನ.

'ಇಂಗ್ಲಿಷ್ ಮಾತನಾಡುತ್ತಿದ್ದರೆ ನನಗೆ ನಾಚಿಕೆಯಾಗುತ್ತದೆ' ಎಂದು ಅಮಿತ್ ಶಾ ಹೇಳಿದ್ದಾರೆ. ಆದರೆ ಅವರ ಮಕ್ಕಳು, ಮೊಮ್ಮಕ್ಕಳು ಯಾವ ಭಾಷೆ ಮಾತನಾಡುತ್ತಾರೆ. ಯಾವ ಶಾಲೆಗೆ ಹೋಗುತ್ತಾರೆ ಎಂಬ ಬಗ್ಗೆಯೂ ಅವರು ಮಾತನಾಡಬೇಕಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಒಪ್ಪಂದಕ್ಕೆ ಸಹಿಹಾಕಿ ಈಗ ಇಂಗ್ಲಿಷ್ ಮಾತನಾಡುವುದಿಲ್ಲ ಎಂದರೆ ಅವರಿಗೆ ನಿಜಕ್ಕೂ ನಾಚಿಕೆಯಾಗಬೇಕು. ಅಮಿತ್ ಶಾ ಹೇಳಿಕೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಕ್ಕ ಉತ್ತರವನ್ನೇ ನೀಡಿದ್ದಾರೆ.

ಬಿಜೆಪಿಯವರ ಮನೋಭಾವ ಯಾವಾಗಲೂ ಅಂಬೇಡ್ಕರ್ ವಾದ ಹಾಗೂ ಸಂವಿಧಾನಕ್ಕೆ ವಿರೋಧಿಯಾಗಿರುತ್ತದೆ. ದೇಶಾದ್ಯಂತ ಮನುವಾದವನ್ನು ಹಬ್ಬಿಸುವುದು ಬಿಜೆಪಿಯವರ ಉದ್ದೇಶವಾಗಿದೆ. ಇಂತಹ ಸಂದರ್ಭದಲ್ಲಿ ಅಹಿಂದ. ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಜನರು ಸದಾ ಎಚ್ಚರಿಕೆಯಿಂದ ಇರಬೇಕು. ಅಂಬೇಡ್ಕರ ವಾದದ ಬಗ್ಗೆ ಹೆಚ್ಚೆಚ್ಚು ತಿಳಿವಳಿಕೆ ಹೊಂದಬೇಕು. ಸಂವಿಧಾನವನ್ನು ಅಭ್ಯಾಸ ಮಾಡಬೇಕು. ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಹೈಕೋರ್ಟ್ ಆದೇಶ ನೀಡುವಂತಹ ಪರಿಸ್ಥಿತಿ ಬರಬಾರದು.

ಲೇಖಕರು : ಡಾ.ರಾಮ್ ಮನೋಹರ್ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷರು

ಎಮರ್ಜೆನ್ಸಿ ಬಳಿಕ ಪತ್ರಿಕಾ ಲೋಕ ಭಯಮುಕ್ತವಾಗಿದೆಯೇ?

ವಿಶ್ವವಾಣಿಯ ಪತ್ರಿಕೆಯಲ್ಲಿ ಪ್ರಕಟವಾದ ತುರ್ತುಪರಿಸ್ಥಿತಿ 50 ವರ್ಷದ ವಿಶೇಷ ಲೇಖನಗಳು ಬಹಳಷ್ಟು ಮಾಹಿತಿ ನೀಡಿದವು. ಅದರಲ್ಲಿ ಬಹಳ ಕಾಡಿದ್ದು, ಪತ್ರಿಕಾ ಸ್ವಾತಂತ್ರ್ಯ? ಇದರ ಬಗ್ಗೆ ದು.ಗು ಲಕ್ಷ್ಮಣರವರ ಬರಹ ಇಷ್ಟವಾಯಿತು. ಆದರೆ ಎಮರ್ಜೆನ್ಸಿ ಯ ಬಳಿಕ ಪತ್ರಿಕಾ ಸ್ವಾತಂತ್ರ್ಯದ ಭಯಮುಕ್ತವಾಯಿತೇ? ಸ್ವತಂತ್ರವಾಗಿ ಪಕ್ಷಾತೀತವಾಗಿ ಸುದ್ದಿಗಳನ್ನು ಜನರ ಮುಂದೆ ತಲುಪಿಸುವ ಸ್ವಾತಂತ್ರ್ಯ ಪಡೆದಿದೆಯೇ ಎಂದು ಕೇಳಿದರೆ, ಉತ್ತರ ಇಲ್ಲ. ಇದೊಂದು ಆಲೋಚಿಸಬೇಕಾದ ಪ್ರಶ್ನೆಯೆಂದು ನನ್ನ ಅನಿಸಿಕೆ.

ಪ್ರಸ್ತುತ
ಸುರೇಂದ್ರ ಪೈ, ಭಟ್ಕಳ
vveditoped@gmail.com

ದೇಶದಲ್ಲಿ ಎಮರ್ಜೆನ್ಸಿ ಜಾರಿಯಾಗಿ 50 ವರ್ಷವಾದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ತರ ಭಾರತ ಕಂಡು ಕೇಳರಿಯದ 21 ತಿಂಗಳ ಕಾಲದ ಕರಾಳ ದಿನದ ಪ್ರತಿಯೊಂದು ಘಟನೆಗಳ ಬಗ್ಗೆ ಕನ್ನಡದ ಬಹುತೇಕ ಎಲ್ಲಾ ಪತ್ರಿಕೆಗಳು ಬೆಳಕು ಚೆಲ್ಲಿದವು. ಎಮರ್ಜೆನ್ಸಿ ಸಮಯದ ಸಂಕಷ್ಟಗಳ ಸಂಕೋಲೆಯಿಂದ ನಮ್ಮ ಪ್ರಜಾಪ್ರಭುತ್ವ ಹೇಗೆ ಪುನಃ ತನ್ನ ಚೇತರಿಸಿಕೊಂಡಿತು ಎಂಬುದರ ಸಮಗ್ರ ವಿವರವು ಜನತೆಗೆ ಮತ್ತೆ ನೆನಪಿಸಿಕೊಳ್ಳುವ ವೇದಿಕೆ ನಿರ್ಮಾಣವಾಯಿತು. ಈ ಎಮರ್ಜೆನ್ಸಿ ಸಮಯದಲ್ಲಿ ದೇಶದ ಸಾಮಾನ್ಯ ನಾಗರಿಕರು ಏನೆಲ್ಲಾ ಕಷ್ಟಗಳನ್ನು ಅನುಭವಿಸಬೇಕಾಯಿತು, ಅಂದಿನ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯಿಂದ ಸಂಭವಿಸಿದ ಸಾವು ನೋವು, ಜೈಲು ವಾಸದ ಕಥೆ, ಚಿತ್ರರಂಗ, ಗಾಯಕರಿಗೂ ತಟ್ಟಿದ ತುರ್ತುಪರಿಸ್ಥಿತಿಯ ಬಿಸಿ ಎಲ್ಲವೂ ಒಮ್ಮೆ ಕಣ್ ಮುಂದೆ ಸುಳಿದು ಹೋದವು. ಇವೆಲ್ಲಾ ಪರಿಸ್ಥಿತಿಗಳು ಇಂದು ಸಮಾಜದಲ್ಲಿ ಸುಸ್ಥಿತಿಯಲ್ಲಿ ಇವೆ ಎಂಬ ನೆಮ್ಮದಿ ಒಂದು ಕಡೆ.

ಆದರೆ ಎಮರ್ಜೆನ್ಸಿಯ ಸಮಯದಲ್ಲಿ ಜಾರಿಯಾದ ಹತ್ತಾರು ನಿರ್ಬಂಧನೆಗಳಲ್ಲಿ ಬಹಳ ಕಾಡಿದ್ದು ಹಾಗೂ ಇಂದಿಗೂ ನಾವು ಒಮ್ಮೆ ತುಲನಾತ್ಮಕವಾಗಿ ಯೋಚಿಸಬೇಕಾದ ಒಂದು ಸಂಗತಿ ಮಾತ್ರ, ಗಾಢವಾಗಿ ಮನದಲ್ಲಿ ಕುತ್ತುಬಿಟ್ಟಿತು. ಅದುವೇ 'ಪತ್ರಿಕಾ ಸ್ವಾತಂತ್ರ್ಯ'.

1975ರ ಜೂನ್ 25 ರ ಬಳಿಕ ಜನಿಸಿದವರಿಗೆ ಎಮರ್ಜೆನ್ಸಿಯಲ್ಲಿ ಪತ್ರಿಕಾ ಸ್ವಾತಂತ್ರ್ಯ ಅಕ್ಷರಶಃ ಬಂಧನದಲ್ಲಿತ್ತು ಎಂಬುದಷ್ಟೇ ತಿಳಿದ ಸಂಗತಿ. ಈ ವಿಷಯದ ಬಗ್ಗೆ ದು.ಗು ಲಕ್ಷ್ಮಣರವರ ತುರ್ತು ಪರಿಸ್ಥಿತಿಯಲ್ಲಿ ಹೇಗಿತ್ತು ಪತ್ರಿಕಾ ಪ್ರಪಂಚ ಎಂಬ ಲೇಖನವು ಜನತೆಯ ಮುಂದೆ ಸ್ಪಷ್ಟ ಚಿತ್ರಣವನ್ನು ತೆರೆದಿಟ್ಟಿದೆ. ಅದನ್ನೊಮ್ಮೆ ಓದುವಾಗ ಬ್ರಿಟಿಷರ ಕಾಲ ನೆನಪಾಯಿತು. ನಮ್ಮನ್ನು ಮೂನ್ನೂರು ವರ್ಷಕ್ಕೂ ಹೆಚ್ಚು ಕಾಲ ಆಳಿದ ಆಂಗ್ಲರು ಸಹ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಹೇಗೆಲ್ಲಾ ನಮ್ಮ ಒಗ್ಗಟ್ಟನ್ನು ಮುರಿಯಲು, ಸತ್ಯ ಜನರಿಗೆ ತಿಳಿಯದ ಹಾಗೇ ಮಾಡಲು, ದೇಶಭಕ್ತಿಯನ್ನು ತುಂಡರಿಸಲು ಪತ್ರಿಕಾ ಸ್ವಾತಂತ್ರ್ಯದ ಮೇಲೆ ಹೇರಿದ ನಿರ್ಬಂಧಕ್ಕೂ ಎಮರ್ಜೆನ್ಸಿ ಸಮಯದಲ್ಲಿ ಹೇರಲಾದ ನಿರ್ಬಂಧಕ್ಕೂ ಯಾವ ವ್ಯತ್ಯಾಸವು ಕಾಣಲಿಲ್ಲ. ಅಂದು ಬ್ರಿಟಿಷ್ ಸ್ವಾಮ್ಯದ ದಬ್ಬಾಳಿಕೆ ಆದರೆ, ಎಮರ್ಜೆನ್ಸಿ ಸಮಯದಲ್ಲಿ ನಮ್ಮ ರಾಜಕೀಯ ಹಿತಾಸಕ್ತಿಯ ದಬ್ಬಾಳಿಕೆ ಒಂದೇ ಇದ್ದ ಏಕೈಕ ವ್ಯತ್ಯಾಸ ಎಂದೆನಿಸಿತು.

ವಿಷಯ ಅಷ್ಟೇ, ಆಗಿದ್ದರೆ ಹೆಚ್ಚು ಬೇಸರವಿರಲಿಲ್ಲ. ಎಮರ್ಜೆನ್ಸಿಯ 21 ತಿಂಗಳ ಕಾಲದ ಕರಾಳ ಕಗ್ಗತ್ತಲಿನ ದಿನಗಳಲ್ಲಿ ಬಂಧಿಯಾಗಿದ್ದ ಪತ್ರಿಕಾ ಸ್ವಾತಂತ್ರ್ಯ ತದನಂತರದ ದಿನಗಳಲ್ಲಿ ಸ್ವತಂತ್ರವಾಗಿ ಉಸಿರಾಡುತ್ತಿದ್ದೇಯೆ ಎಂಬ ಪ್ರಶ್ನೆಯೊಂದು ಎದುರಾಯಿತು. ಬಹುಶಃ ಈ ಪ್ರಶ್ನೆ ಬಹಳಷ್ಟು ಜನರಿಗೆ ಕಾಡಿದ್ದಿರಬಹುದು. ಈ ಪ್ರಶ್ನೆಗೆ ಬಹುಶಃ ಪ್ರತಿಕೋದ್ಯಮದಲ್ಲಿ ಇರುವ ಬಹುತೇಕರಿಗೆ ಹಾಗೂ ಪ್ರತಿಕೋದ್ಯಮ ಕ್ಷೇತ್ರಕ್ಕೆ ಆಪ್ತರಾಗಿರುವ ಹಲವರಿಗೆ ಸ್ಪಷ್ಟ ಉತ್ತರ ತಿಳಿದಿರಬಹುದು. ವಾಸ್ತವದಲ್ಲಿ ಪತ್ರಿಕಾ ಪ್ರಪಂಚ ಎಮರ್ಜೆನ್ಸಿ ಬಳಿಕ ಭಯ ಮುಕ್ತವಾಗಿದೆಯೇ? ಸ್ವತಂತ್ರವಾಗಿ ಪಕ್ಷಾತೀತವಾಗಿ ಸುದ್ದಿಗಳನ್ನು ಜನರ ಮುಂದೆ ತಲುಪಿಸುವ ಸ್ವಾತಂತ್ರ್ಯ ಪಡೆದಿದೆಯೇ ಎಂದು ಕೇಳಿದರೆ, ಉತ್ತರ ಇಲ್ಲ.

ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಸಹ ಸತ್ಯವನ್ನು ಜಗತ್ತಿನ ಮುಂದೆ ತೆರೆದಿಡಬೇಕಾದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಇಂದು ಸಹ ಸತ್ಯವನ್ನು ವಸ್ತುನಿಷ್ಠ ನೆಲೆಯಲ್ಲಿ ಪಕ್ಷಾತೀತವಾಗಿ ಪತ್ರಿಕೆ, ಸಾಮಾಜಿಕ ಸುದ್ದಿ ಮಾಧ್ಯಮಗಳ ಮೂಲಕ ಪ್ರಕಟಿಸುವ ಸ್ವಾತಂತ್ರ್ಯ ಇಲ್ಲ ಎಂಬ ಕೂಗು ಕೇಳಿ ಬರುತ್ತಿದೆ. ಸತ್ಯವನ್ನು ಪ್ರಕಟಿಸಲು ಹೊರಟ ಕೆಲವು ನಿಷ್ಠಾವಂತ, ಕ್ರಿಯಾಶೀಲ ಪತ್ರಕರ್ತರನ್ನು, ಸಂಪಾದಕರನ್ನು, ವರದಿಗಾರರನ್ನು ಹುದ್ದೆಯಿಂದ ರಾಜೀನಾಮೆ ನೀಡುವಂತೆ ಒತ್ತಡ ಹೇರಿ, ಕಿರುಕುಳ ನೀಡಿ ಉದ್ಯೋಗದಿಂದ ತೆಗೆಯಲಾಗುತ್ತಿದೆ. ಕಾನೂನಿನ ಚೌಕಟ್ಟಿನಲ್ಲಿ ಸೌಹಾರ್ದಯುತ ಚರ್ಚೆಯ ಮೂಲಕ ಅಭಿವೃದ್ಧಿ ಕಡೆಗೆ ಕೊಂಡೊಯ್ಯಬಲ್ಲ ಸತ್ಯ ಸುದ್ದಿಗಳನ್ನು ಪ್ರಸಾರ ಮಾಡುವ ಮಾಧ್ಯಮ ಪ್ರತಿನಿಧಿಗಳ, ಸುದ್ದಿವಾಹಕ ಪತ್ರಕರ್ತರ ನಿಗೂಢ ಕಾಣೆ, ಸಾವು, ಕೊಲೆಗಳು ದೇಶಾದ್ಯಂತ ಸಂಭವಿಸುತ್ತಲೇ ಇವೆ. ಇವೆಲ್ಲಾ ನೋಡಿದಾಗ ನಿಜವಾಗಲೂ ಪತ್ರಕರ್ತರಿಗೆ ರಕ್ಷಣೆ ನಮ್ಮಲ್ಲಿ ಇದೆಯೇ ಎಂದರೆ ಉತ್ತರ, ಇಲ್ಲ ಎಂದೇ.

'ಸತ್ಯವನ್ನು ಅಭಿವ್ಯಕ್ತಿಗೊಳಿಸುವುದು ಎಂದರೆ ಪ್ರವಾಹದ ವಿರುದ್ಧ ದಿಕ್ಕಿಗೆ ಎದೆಯೊಡ್ಡಿ ನಿಲ್ಲುವುದು ಎಂದರ್ಥ ಎಂಬ ಮಾತೊಂದಿದೆ. ಎಮರ್ಜೆನ್ಸಿ ಸಮಯದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಕಗ್ಗೊಲೆಯು ಘೋಷಿತ ರೂಪದಲ್ಲಿ ನಡೆದಿದ್ದರೆ, ಇಂದು ಸಹ ಅಘೋಷಿತ ರೂಪದಲ್ಲಿ ಪತ್ರಿಕಾ ಸ್ವಾತಂತ್ರ್ಯದ ನೈತಿಕ ಮೌಲ್ಯಗಳನ್ನು ಹತ್ತಿಕ್ಕುವ ಘಟನೆಗಳು ನಡೆಯುತ್ತಿವೆ.

2023 ರಲ್ಲಿ ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಪತ್ರಿಕಾ ಸ್ವಾತಂತ್ರ್ಯ ಸರ್ಕಾರೇತರ ಸಂಸ್ಥೆಗಳ ಒಕ್ಕೂಟವಾದ ಇಂಡಿಯಾ ಫ್ರೀಡಂ ಆಫ್ ಎಕ್ಸ್‌ಪ್ರೆಶನ್ ಇನಿಶಿಯೇಟಿವ್‌ನ ಇಂಡಿಯಾ ಪ್ರೆಸ್ ಫ್ರೀಡಂ '2023 ರಲ್ಲಿ 5 ಪತ್ರಕರ್ತರ ಹತ್ಯೆ, 226 ಪತ್ರಕರ್ತರ ಮೇಲೆ ದಾಳಿ'ಯಾಗಿರುವ ವಾರ್ಷಿಕ ವರದಿಯನ್ನು ಬಿಡುಗಡೆಗೊಳಿಸಿತ್ತು. ಅವುಗಳಲ್ಲಿ ದೆಹಲಿಯ 54 ಪತ್ರಕರ್ತರು, ಪಶ್ಚಿಮ ಬಂಗಾಳ (25), ಮಣಿಪುರ (22), ಉತ್ತರ ಪ್ರದೇಶ (20), ಕೇರಳ (16), ಜಾರ್ಖಂಡ್ (11), ಮಹಾರಾಷ್ಟ್ರ ಮತ್ತು ತೆಲಂಗಾಣ (ತಲಾ ಎಂಟು), ಅಸ್ಸಾಂ, ಬಿಹಾರ ಮತ್ತು ಮಧ್ಯಪ್ರದೇಶ (ತಲಾ ಏಳು), ಛತ್ತೀಸ್‌ಗಢ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ ಮತ್ತು ಒಡಿಶಾ (ತಲಾ ಐದು); ಆಂಧ್ರಪ್ರದೇಶ ಮತ್ತು ಹರಿಯಾಣ (ತಲಾ ನಾಲ್ಕು),ಪಂಜಾಬ್ (ಮೂರು), ತ್ರಿಪುರ (ಇಬ್ಬರು), ಮತ್ತು ತಮಿಳುನಾಡು, ರಾಜಸ್ಥಾನ ಮತ್ತು ಉತ್ತರಾಖಂಡ (ತಲಾ ಒಂದು) ಎಂದು ವರದಿ ತಿಳಿಸಿದೆ. ಅಷ್ಟೇ ಅಲ್ಲದೇ ಹಲ್ಲೆಗೊಳಗಾದವರಲ್ಲಿ 30 ಮಂದಿ ಮಹಿಳಾ ಪತ್ರಕರ್ತರು ಇರುವುದು ಕಂಡುಬಂದಿದೆ ಎಂದು ತಿಳಿಸಿದೆ.



ಎಮರ್ಜೆನ್ಸಿಯ ತರುವಾಯ 77 ರಿಂದ 2022 ರ ನಡುವಿನ ಅವಧಿಯಲ್ಲಿ, ದೇಶದಲ್ಲಿ ಒಟ್ಟು 80 ಪತ್ರಕರ್ತರು ಕೊಲೆಯಾಗಿರುವ ಸಂಗತಿ ಕಳವಳಕಾರಿಯಾದದ್ದು. ಇವರಲ್ಲಿ ಪರಿಸರ ಹೋರಾಟಕ್ಕೆ ಸಂಬಂಧಿಸಿದ ಪತ್ರಕರ್ತರು, ಭೂ ಮಾಫಿಯಾ, ಮರಳು ಮಾಫಿಯಾ, ಇನ್ನಿತರ ವಿಷಯಗಳ ಮೇಲೆ ವರದಿ ಮಾಡಲು ಹೊರಟವರೇ ಹೆಚ್ಚಾಗಿದ್ದಾರೆ ಎಂಬ ಅಂಶವು ಬೆಳಕಿಗೆ ಬಂದಿದೆ. ಕಳೆದ 15 ವರ್ಷಗಳಲ್ಲಿ, ಮಾಧ್ಯಮ ಕಾವಲು ಸಂಸ್ಥೆ 'ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ (RSF) ನಿರ್ವಹಿಸುವ ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತವು 2009 ರಲ್ಲಿ 105 ರಿಂದ 2024 ರಲ್ಲಿ 159 ಕ್ಕೆ ತನ್ನ ಶ್ರೇಯಾಂಕಕ್ಕೆ ಭಾರಿ ಕುಸಿತ ಕಂಡಿದೆ ಎಂದು ವರದಿ ಮಾಡಿದೆ.

ಸ್ವತಂತ್ರ ಮಾಧ್ಯಮಗಳ ಬಾಯಿ ಮುಚ್ಚಿಸುವ ಮತ್ತು ವಿಮರ್ಶಾತ್ಮಕ ಧ್ವನಿಗಳನ್ನು ಮೌನಗೊಳಿಸುವ ಸ್ಪಷ್ಟ ಉದ್ದೇಶದೊಂದಿಗೆ ನಾವು ಸರ್ವಾಧಿಕಾರಿ ಪ್ರವೃತ್ತಿಯನ್ನು ನೋಡುತ್ತಿದ್ದೇವೆ ಎಂದು ಆರ್‌ಎಸ್‌ಎಫ್‌ನ ದಕ್ಷಿಣ ಏಷ್ಯಾ ಡೆಸ್ಕ್‌ನ ಮುಖ್ಯಸ್ಥೆ ಸೆಲಿಯಾ ಮರ್ಸಿಯರ್ ಹೇಳುತ್ತಾರೆ.

ಅದೇನೆ ಇರಲಿ, ಇಂದಿನ ಆಧುನಿಕ ಡೀಫ್ ಫೇಕ್ ನಂತಹ ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಸುಳ್ಳು ಸುದ್ದಿಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಜಾರಿಗೆ ತರಲಾದ ಹಲವಾರು ಕಾನೂನುಗಳನ್ನು ಪಾಲಿಸುವ ಅವಸರದಲ್ಲಿ, ಪತ್ರಿಕೆ ಹಾಗೂ ಸಾಮಾಜಿಕ ಸುದ್ದಿ ಮಾಧ್ಯಮಗಳ ಮೇಲೆ ಹಲ್ಲೆಯಾಗುತ್ತಿವೆ ಎಂಬುದನ್ನು ತಳ್ಳಿಹಾಕಲಾಗದು. ಅರ್ಥಾತ್ ಇದು ಸಹ ಪರೋಕ್ಷವಾಗಿ ಪತ್ರಿಕಾ ಸ್ವಾತಂತ್ರ್ಯವನ್ನು ಹದ್ದುಬಸ್ತಿನಲ್ಲಿ ಇರಿಸುವ ಪ್ರಯತ್ನವಲ್ಲವೇ?

ಪತ್ರಿಕೆಯು ಕೇವಲ ಜನರಿಗೆ ಸುದ್ದಿ ತಲುಪಿಸುವ ಕೆಲಸ ಮಾಡುವುದಿಲ್ಲ, ಬದಲಾಗಿ ಸತ್ಯಾಂಶವನ್ನು ನಿಖರವಾಗಿ ಜನರ ಮುಂದೆ ತೆರೆದಿಡುವ ಕೆಲಸವನ್ನು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಕಾಣದ ಕೈಗಳ ಕಪಿಮುಷ್ಟಿಯಿಂದ ಪತ್ರಿಕಾ ಪ್ರಪಂಚ ಪಾರಾಗುವ ಕಾಲ ಎಂದು ಬರುವುದು ಎಂಬುದೇ ಬಹು ದೊಡ್ಡ ಪ್ರಶ್ನೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10 Issue: 165

ಸಮಾಚಾರ ಸಣ್ಣದಲ್ಲ

ಶಾಲೆಯಲ್ಲಿ ಕಾಲ್ತುಳಿತ: 29 ವಿದ್ಯಾರ್ಥಿಗಳ ಸಾವು

ಬ್ಯಾಂಗ್ವೆ: ಮಧ್ಯ ಆಫ್ರಿಕಾದ ಗಣರಾಜ್ಯದ ರಾಜಧಾನಿಯಲ್ಲಿರುವ ಪ್ರೌಢಶಾಲೆಯೊಂದರಲ್ಲಿ ಸಂಭವಿಸಿದ ಸ್ಫೋಟದ ನಂತರ ಕಾಲ್ತುಳಿತ ಸಂಭವಿಸಿ ಕನಿಷ್ಠ 29 ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ ಮತ್ತು 250ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಗುಯಿಯಲ್ಲಿರುವ ಈ ಘಟನೆ ನಡೆದಿದ್ದು, ಅಲ್ಲಿ 5,300ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಬ್ಯಾಕ ಲೌರಿಯೇಟ್ ಪರೀಕ್ಷೆಯನ್ನು ಬರೆಯುತ್ತಿದ್ದರು. ಸ್ಫೋಟದ ಪರಿಣಾಮವಾಗಿ ಕಾಲ್ತುಳಿತ ಸಂಭವಿಸಿದೆ. ಕಾಲ್ತುಳಿತವಾದಾಗ ಸ್ಥಳದಲ್ಲಿಯೇ 16 ಬಾಲಕಿಯರು ಮೃತಪಟ್ಟಿದ್ದಾರೆ, ಇತರರನ್ನು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಕನಿಷ್ಠ 260 ವಿದ್ಯಾರ್ಥಿಗಳು ಗಾಯಗೊಂಡು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪರೀಕ್ಷೆಯ ಮಧ್ಯದಲ್ಲಿ ಟ್ರಾನ್ಸ್ ಫಾರ್ಮರ್‌ನಿಂದ ದೊಡ್ಡ ಸ್ಫೋಟದ ಶಬ್ದ ಕೇಳಿ ಬಂತು ಎಂದು ಬದುಕುಳಿದವರು ಹೇಳಿದರು. ಕಟ್ಟಡ ನಡುಗಿತು ಮತ್ತು ನಾವೆಲ್ಲರೂ ಭಯಭೀತರಾಗಿದ್ದೆವು. ನಾವು ಓಡಲು ಪ್ರಾರಂಭಿಸಿದೆವು ಎಂದು ಬದುಕುಳಿದ ಬಾಲಕನೊಬ್ಬ ಹೇಳಿದ್ದಾನೆ. ಕಟ್ಟಡದಿಂದ ಜಿಗಿದು ಕೆಲವರು ಸಾವನ್ನಪ್ಪಿದರೆ, ಉಳಿದವರು ಮೇಲಿನ ಮಹಡಿಯ ಜನದಟ್ಟಣೆಯ ಪ್ರವೇಶದ್ವಾರದಲ್ಲಿ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಸಾವನ್ನಪ್ಪಿದರು. ಗೊಂದಲದ ಮಧ್ಯೆ ಇತರ ಅನೇಕ ವಿದ್ಯಾರ್ಥಿಗಳು ಮೂರ್ಛೆ ಹೋದರು ಮತ್ತು ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು, ಅವರಲ್ಲಿ ಕೆಲವರನ್ನು ಮೋಟಾರ್ ಸೈಕಲ್‌ಗಳಲ್ಲಿ ಸಾಗಿಸಲಾಯಿತು. ವಿದ್ಯುತ್ ಪರಿವರ್ತಕದ ಸಮಸ್ಯೆಗಳನ್ನು ಸರಕಾರ ನಿರ್ಲಕ್ಷಿಸಿದೆ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೀನ್ಯಾದಲ್ಲಿ ಭಾರೀ ಹಿಂಸೆ

ನೈರೋಬಿ: ಕೀನ್ಯಾದಲ್ಲಿ ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆ ಹಿಂಸಾತ್ಮಕ ರೂಪ ಪಡೆದುಕೊಂಡಿದೆ. ಎಲ್ಲೆಂದರಲ್ಲಿ ಕಲ್ಲು ತೂರಾಟ, ಬೆಂಕಿ ಹಚ್ಚಿ ಜನರು ಅಲ್ಲಿನ ಸರಕಾರದ ವಿರುದ್ಧ ದಂಗೆ ಯೆದ್ದಿದ್ದಾರೆ. ಮಾನವ ಹಕ್ಕು ಗಳ ಸಂಘಟನೆಯ ಮುಖ್ಯಸ್ಥರಾದ ಇರುಂಗು ಹೌಟನ್ ಅವರು ಸಾವಿನ ಸಂಖ್ಯೆಯನ್ನು ದೃಢಪಡಿಸಿದ್ದಾರೆ. ಕಳೆದ ಜೂನ್‌ನಲ್ಲಿ ರಾಷ್ಟ್ರವ್ಯಾಪಿ ಆಕ್ರೋಶಕ್ಕೆ ಕಾರಣವಾದ ತೆರಿಗೆ ವಿರೋಧಿ ಪ್ರತಿಭಟನೆಗಳಿಗೆ ಒಂದು ವರ್ಷ ತುಂಬಿದ ನೆನಪಿಗಾಗಿ ಪ್ರತಿಭಟನಾಕಾರರು ಬೀದಿಗಿಳಿದು ಪ್ರತಿಭಟನೆ ಮಾಡಿದ್ದರು. 2024ರಲ್ಲಿ ನಡೆದ ಪ್ರತಿಭಟನೆಗಳು ತೆರಿಗೆಗಳನ್ನು ಹೆಚ್ಚಿಸಿದ ವಿವಾದಾತ್ಮಕ ಹಣಕಾಸು ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದವು, ಆದರೆ ಕೀನ್ಯಾದ ಅನೇಕ ಯುವಜನರು ಇನ್ನೂ ಪೊಲೀಸ್ ದೌರ್ಜನ್ಯದ ಹಲವಾರು ಪ್ರಕರಣಗಳಿಂದ ಆಕ್ರೋಶಗೊಂಡಿದ್ದಾರೆ, ಇದರಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಶಿಕ್ಷಕನ ಸಾವು ಮತ್ತು ನಿರಾಯುಧ ಬೀದಿ ವ್ಯಾಪಾರಿಯ ಮೇಲೆ ಗುಂಡು ಹಾರಿಸಿದ ಪ್ರಕರಣ ಕೂಡ ಜನರ ಆಕ್ರೋಶಕ್ಕೆ ಗುರಿಯಾಗಿದೆ. ಪ್ರತಿಭಟನಾ ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ಸಾವಿರಾರು ಜನರು ನೈರೋಬಿಯ ರಾಜಧಾನಿ, ಕರಾವಳಿ ನಗರ ಮೊಂಬಾಸಾ ಮತ್ತು ಇತರ ಪಟ್ಟಣಗಳಲ್ಲಿ ಪ್ರತಿಭಟನೆ ಮಾಡಿದರು. ನೈರೋಬಿಯಲ್ಲಿ, ಪ್ರತಿಭಟನೆಗಳಿಗೆ ಮುಂಚಿತವಾಗಿ ಕೀನ್ಯಾ ಸಂಸತ್ತು ಕಟ್ಟಡ ಮತ್ತು ಅಧ್ಯಕ್ಷರ ಕಚೇರಿಗೆ ಹೋಗುವ ರಸ್ತೆಗಳನ್ನು ಬ್ಯಾರಿಕೇಡ್‌ಗಳಿಂದ ಮುಚ್ಚಲಾಗಿತ್ತು.

ಕಟ್ಟಡ ಕುಸಿತ: 3 ಸಾವು

ತ್ರಿಶೂರ್: ಕೇರಳದ ಕೊಡಗರ ನಗರದಲ್ಲಿ ಶುಕ್ರವಾರ ಬೆಳಗಿನ ಜಾವ 40 ವರ್ಷ ಹಳೆಯ ಕಟ್ಟಡ ಕುಸಿದು ಕನಿಷ್ಠ ಮೂವರು ವಲಸೆ ಕಾರ್ಮಿಕರು ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ವರದಿಯಾಗಿದೆ. ಎರಡು ಅಂತಸ್ತಿನ ಲ್ಯಾಟರೈಟ್ ರಚನೆಯ ಕಟ್ಟಡವು ಕುಸಿದು ಬಿದ್ದು, 17 ವಲಸೆ ಕಾರ್ಮಿಕರಲ್ಲಿ ಮೂವರು ಒಳಗೆ ಸಿಲುಕಿಕೊಂಡರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹದಿನಾಲ್ಕು ಜನರು ಅವಶೇಷಗಳಿಂದ ಯಾವುದೇ ಹಾನಿಯಾಗದಂತೆ ಪಾರಾಗಿದ್ದಾರೆ. ಮೃತರನ್ನು ಪಶ್ಚಿಮ ಬಂಗಾಳದ ರಾಹುಲ್ (19), ರೂಪೆಲ್ (21) ಎಂದು ಗುರುತಿಸಲಾಗಿದ್ದು, ಮೂರನೇ ಬಲಿ ಪಶುವಿನ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ವರದಿಯ ಪ್ರಕಾರ, ಮೂರು ಅಗ್ನಿಶಾಮಕ ದಳ ವಾಹನಗಳು, ಜೆಸಿಬಿಗಳು ಮತ್ತು ರಕ್ಷಣಾ ಉಪಕರಣಗಳು ತ್ವರಿತವಾಗಿ ಸ್ಥಳಕ್ಕೆ ಆಗಮಿಸಿವೆ. ಮೇಲ್ಮೈ ಬಳಿ ಸಿಲುಕಿದ್ದ ಇಬ್ಬರನ್ನು ಬಹಳ ಬೇಗನೆ ರಕ್ಷಿಸಲಾಯಿತು.

{ ರಾಹುಲ್ ಗಾಂಧಿ } ಕಾಂಗ್ರೆಸ್ ನಾಯಕ

ಬಡಕಟ್ಟು ಸಮುದಾಯವನ್ನು ರಾಜಕೀಯವಾಗಿ ಸಬಲೀಕರಣಗೊಳಿಸುವ ಮೂಲಕ ಆ ಸಮುದಾಯದವರನ್ನು ಸಾಮಾಜಿಕವಾಗಿ ಬಲಪಡಿಸಲು ಕಾಂಗ್ರೆಸ್ ಬಯಸುತ್ತದೆ. ಅದಕ್ಕಾಗಿ ಪಕ್ಷದಲ್ಲಿ ಅವರಿಗೆ ಸ್ಥಾನಮಾನ ನೀಡಲಾಗುವುದು. ಆದಿವಾಸಿ ನಾಯಕರಿಗೆ ಬಲ ತುಂಬ ಬೇಕೆಂಬುದು ಕಾಂಗ್ರೆಸ್ ಪಕ್ಷದ ಬಯಕೆಯಾಗಿದೆ.

ಚುನಾವಣಾ ಆಯೋಗದ ಷರತ್ತು ಪೂರೈಸಲು ವಿಫಲ | 2019ರಿಂದ ಚುನಾವಣೆಗಳಲ್ಲಿ ಸ್ಪರ್ಧಿಸದ ಪಕ್ಷಗಳು

ಚು.ಆಯೋಗದಿಂದ 345 ಪಕ್ಷಗಳ ಮಾನ್ಯತೆ ರದ್ದು

ದೆಹಲಿ: ದೇಶದ ಒಟ್ಟು 345 ರಾಜಕೀಯ ಪಕ್ಷಗಳನ್ನು ಭಾರತೀಯ ಚುನಾವಣಾ ಆಯೋಗವು ಚುನಾವಣಾ ಪಟ್ಟಿಯಿಂದ ತೆಗೆದು ಹಾಕಿದೆ. ಹೆಸರಿಗೆ ಮಾತ್ರ ಈ ಪಕ್ಷಗಳು ನೋಂದಾಯಿಸಲ್ಪಟ್ಟಿದ್ದು, ಯಾವುದೇ ರೀತಿಯಲ್ಲಿ ದೇಶದ ಯಾವುದೇ ಭಾಗದಲ್ಲೂ ಕಾರ್ಯ ನಿರ್ವಹಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಅವುಗಳನ್ನು ಚುನಾವಣಾ ಪಟ್ಟಿಯಿಂದ ಕೈಬಿಡಲಾಗಿದೆ. ತೆಗೆದುಹಾಕಲಾದ 345 ರಾಜಕೀಯ ಪಕ್ಷಗಳು 2019ರಿಂದ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸಿಲ್ಲ, ಆದ್ದರಿಂದ ಅವುಗಳನ್ನು ಪಟ್ಟಿಯಿಂದ ತೆಗೆದುಹಾಕಿರುವುದಾಗಿ ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ.

ಒಂದಾದರೂ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎನ್ನುವ ಷರತ್ತನ್ನು ಪೂರೈಸಲು ವಿಫಲವಾದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. 345 ನೋಂದಾಯಿತ ಪಕ್ಷಗಳು ಕೇವಲ ಹೆಸರಿಗೆ ಮಾತ್ರ, ಇದ್ದು ಕಳೆದ ಆರು ವರ್ಷಗಳಿಂದ ಒಂದೇ ಒಂದು ಚುನಾವಣೆಯಲ್ಲೂ ಪಾಲ್ಗೊಂಡಿಲ್ಲ. ಹೀಗಾಗಿ ಚುನಾವಣಾ ಆಯೋಗದ ಷರತ್ತನ್ನು ಪಾಲಿಸುವಲ್ಲಿ ವಿಫಲವಾಗಿರುವ ಇವುಗಳ ಹೆಸರನ್ನು ಚುನಾವಣಾ ಪಟ್ಟಿಯಿಂದ ತೆಗೆದುಹಾಕುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಚುನಾವಣಾ ಆಯೋಗವು ಗುರುತಿಸಿರುವ ಪಕ್ಷಗಳ ಕಚೇರಿಗಳು ಭೌತಿಕವಾಗಿ ಎಲ್ಲಿಯೂ ಕಾರ್ಯ ನಿರ್ವಹಿಸುತ್ತಿಲ್ಲ. ಈ ರಾಜಕೀಯ ಪಕ್ಷಗಳು ದೇಶಾದ್ಯಂತ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನೋಂದಾಯಿಸಲ್ಪಟ್ಟಿದೆ, ಆದರೆ ಅವು ಯಾವುದೇ ಚುನಾವಣೆಯಲ್ಲಿ ಪಾಲ್ಗೊಂಡಿಲ್ಲ ಎಂದು ಆಯೋಗ ಹೇಳಿದೆ.

ಪ್ರಸ್ತುತ ಚುನಾವಣಾ ಆಯೋಗದಲ್ಲಿ ನೋಂದಾಯಿಸಲಾಗಿರುವ 2,800ಕ್ಕೂ ಹೆಚ್ಚು ರಾಜಕೀಯ ಪಕ್ಷಗಳಿವೆ.

ಅವುಗಳಲ್ಲಿ ಹೆಚ್ಚಿನ ಪಕ್ಷಗಳು ಷರತ್ತುಗಳನ್ನು ಪೂರೈಸುವಲ್ಲಿ ವಿಫಲವಾಗಿವೆ ಎಂಬುದನ್ನು ಆಯೋಗ ಗಮನಿಸಿರುವುದಾಗಿಯೂ ತಿಳಿಸಿದೆ.

ರಾಷ್ಟ್ರೀಯ ಪಕ್ಷ: ಮಾನದಂಡಗಳು

ಒಂದು ರಾಜಕೀಯ ಪಕ್ಷವು ಆಯೋಗ ನಿರ್ಧರಿಸಿರುವ ಯಾವುದಾದರೊಂದು ಷರತ್ತನ್ನು ಪೂರೈಸಿದರೆ ರಾಷ್ಟ್ರೀಯ ಪಕ್ಷವೆಂದು ಪರಿಗಣಿಸಲಾಗುತ್ತದೆ. ನಾಲ್ಕು ಇಲ್ಲವೇ ಹೆಚ್ಚಿನ ರಾಜ್ಯಗಳಲ್ಲಿ ರಾಜ್ಯ ಪಕ್ಷವಾಗಿ ಮಾನ್ಯತೆ ಪಡೆದಿರಬೇಕು ಅಥವಾ ಕಳೆದ ಲೋಕಸಭಾ ಅಥವಾ ವಿಧಾನಸಭಾ ಚುನಾವಣೆಯಲ್ಲಿ ಯಾವುದೇ ನಾಲ್ಕು ಅಥವಾ ಹೆಚ್ಚಿನ ರಾಜ್ಯಗಳಲ್ಲಿ ಅದರ ಅಭ್ಯರ್ಥಿಗಳು ಒಟ್ಟು ಚಲಾಚಣೆಯಾದ ಮತಗಳಲ್ಲಿ ಕನಿಷ್ಠ 6%ರಷ್ಟು ಮತಗಳನ್ನು ಪಡೆದಿದ್ದರೆ ಮತ್ತು ಕಳೆದ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ ನಾಲ್ಕು ಸಂಸದರನ್ನು ಹೊಂದಿರಬೇಕಾಗುತ್ತದೆ ಅಥವಾ ಲೋಕಸಭೆಯ ಒಟ್ಟು ಸ್ಥಾನಗಳಲ್ಲಿ ಕನಿಷ್ಠ 2%ರಷ್ಟು ಕನಿಷ್ಠ ಮೂರು ರಾಜ್ಯ ಗಳಿಂದ ಗೆದ್ದಿದ್ದರೆ ಅಂತಹ ಪಕ್ಷಗಳನ್ನು ರಾಷ್ಟ್ರೀಯ ಪಕ್ಷ ಎಂದು ಚುನಾವಣಾ ಆಯೋಗ ಗುರುತಿಸುತ್ತದೆ.

ಮಾನ್ಯತೆ ಪಡೆದ ಪಕ್ಷಗಳಿಗಿರುವ ಸೌಲಭ್ಯ

- 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಅಡಿಯಲ್ಲಿ ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳು ಮತದಾರರ ಪಟ್ಟಿ ಪರಿಷ್ಕರಣೆಯ ಸಮಯದಲ್ಲಿ ಎರಡು ಸೆಟ್ ಮತದಾರರ ಪಟ್ಟಿಯನ್ನು ಉಚಿತವಾಗಿ ಪಡೆಯಲು ಅರ್ಹರಾಗಿರುತ್ತಾರೆ ಮತ್ತು ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ಅವರ ಅಭ್ಯರ್ಥಿಗಳು ಮತದಾರರ ಪಟ್ಟಿಯ ಒಂದು ಪ್ರತಿಯನ್ನು ಉಚಿತವಾಗಿ ಪಡೆಯುತ್ತಾರೆ.
- ಸಾರ್ವತ್ರಿಕ ಚುನಾವಣೆಗಳ ಸಮಯದಲ್ಲಿ ಆಕಾಶವಾಣಿ/ದೂರದರ್ಶನದ ಮೂಲಕ ಪ್ರಸಾರ ಸೌಲಭ್ಯಗಳನ್ನು ಪಡೆಯುತ್ತಾರೆ.
- ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷವು ಗರಿಷ್ಠ 40 ಸ್ಟಾರ್ ಪ್ರಚಾರಕರನ್ನು ಹೊಂದಬಹುದು ಮತ್ತು ನೋಂದಾಯಿತ ಮಾನ್ಯತೆ ಪಡೆಯದ ಪಕ್ಷವು ಗರಿಷ್ಠ 20 ಸ್ಟಾರ್ ಪ್ರಚಾರಕರನ್ನು ನಾಮನಿರ್ದೇಶನ ಮಾಡಬಹುದು.

ಮೂಲ ಆಶಯಕ್ಕೆ ಧಕ್ಕೆ: ಜೈರಾಮ್ | ಸಂವಿಧಾನ ತಿದ್ದುಪಡಿಗೆ ಆರ್‌ಎಸ್‌ಎಸ್‌ನ ಹೊಸಬಾಳೆ ಆಗ್ರಹ

ಆರ್‌ಎಸ್‌ಎಸ್ ವಿರುದ್ಧ ಕಾಂಗ್ರೆಸ್ ಟೀಕೆ

ದೆಹಲಿ: ಆರ್‌ಎಸ್‌ಎಸ್ ಹೇಳಿಕೆಯನ್ನು ಕಾಂಗ್ರೆಸ್ ತೀವ್ರ ತರಾಟೆಗೆ ತೆಗೆದುಕೊಂಡಿದ್ದು, ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನವನ್ನು ಆರ್‌ಎಸ್‌ಎಸ್ ಎಂದಿಗೂ ಅಂಗೀಕರಿಸಿಲ್ಲ ಎಂದು ಹೇಳಿದೆ.

ಈ ಕುರಿತು 'ಎಕ್ಸ್'ನಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಬರೆದುಕೊಂಡಿದ್ದು, ಸಂವಿಧಾನವನ್ನು ನಾಶ ಮಾಡುವ ಆರ್‌ಎಸ್‌ಎಸ್‌ನ ಪಿತೂರಿ ಇದಾಗಿದೆ ಎಂದು ಆರೋಪಿಸಿದ್ದಾರೆ. ಭಾರತದ ಸಂವಿಧಾನವನ್ನು ಆರ್‌ಎಸ್‌ಎಸ್ ಎಂದೂ ಅಂಗೀಕರಿಸಿಲ್ಲ. 1949ರಲ್ಲಿ ಅಂಬೇಡ್ಕರ್, ನೆಹರೂ ಅವರಿಂದ ರಚನೆಯಾಗಿರುವ ಸಂವಿಧಾನದ ಮೇಲೆ ಆರ್‌ಎಸ್‌ಎಸ್ ದಾಳಿ ನಡೆಸುತ್ತಿದ್ದು, ಸಂವಿಧಾನದ ಮೂಲ ಆಶಯವನ್ನು ಬದಲಿಸುವ ಹುನ್ನಾರವನ್ನು ಆರ್‌ಎಸ್‌ಎಸ್ ಮಾಡುತ್ತಲೇ ಇದೆ ಎಂದು ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಸಂವಿಧಾನದ ಪ್ರಸ್ತಾವನೆ ಕೈಬಿಡಿ: ದತ್ತಾತ್ರೇಯ ಹೊಸಬಾಳೆ

ಸಮಾಜವಾದಿ ಹಾಗೂ ಜಾತ್ಯತೀತ ಪದಗಳನ್ನು ಸಂವಿಧಾನದ ಪ್ರಸ್ತಾವನೆಯಿಂದ ಕೈಬಿಡಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಆಗ್ರಹಿಸಿದ್ದಾರೆ.

ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಹೊಸಬಾಳೆ, ಮಾಜಿ ಪ್ರಧಾನಿ, ದಿ. ಇಂದಿರಾ ಗಾಂಧಿ ಅವರು 1975ರ ಜೂನ್ 25ರಂದು ತುರ್ತು ಪರಿಸ್ಥಿತಿ ಹೇರಿದ್ದರು, ಆ ಸಂದರ್ಭದಲ್ಲಿ ಸಮಾಜವಾದಿ ಹಾಗೂ ಜಾತ್ಯತೀತ ಪದಗಳನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲಾಗಿತ್ತು ಎಂದು ಹೇಳಿದ್ದಾರೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಾವಿರಾರು ಜನರನ್ನು ಜೈಲಿಗಟ್ಟಲಾಗಿತ್ತು.

ನ್ಯಾಯಾಂಗ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿರುವ ಅವರು, ಆ ಸಂದರ್ಭದಲ್ಲಿ ಸಾಕಷ್ಟು ಜನರಿಗೆ ಬಲವಂತವಾಗಿ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು ಎಂದೂ ದೂರಿದ್ದಾರೆ. ಆಗ ಆ ಕೆಲಸ ಮಾಡಿದವರು ಇಂದು ಸಂವಿಧಾನದ ಪ್ರತಿಗಳನ್ನು ಹಿಡಿದುಕೊಂಡು ಓಡಾಡುತ್ತಿದ್ದಾರೆ ಎಂದರು.

ಮಹಾರಾಷ್ಟ್ರ: ವಿದ್ಯುತ್ ದರ ಕಡಿತ



ಮುಂಬೈ: ದೇವೇಂದ್ರ ಫಡ್ನವಿಸ್ ನೇತೃತ್ವದ ಮಹಾಯುತಿ ಸರಕಾರವು ಮಹಾರಾಷ್ಟ್ರದ ನಿವಾಸಿಗಳಿಗೆ ಕೊಡುಗೆಯೊಂದನ್ನು ಘೋಷಿಸಿದೆ. ಮನೆಯ ವಿದ್ಯುತ್ ದರದಲ್ಲಿ ಶೇ.10 ರಷ್ಟು ಕಡಿತವನ್ನು ಘೋಷಿಸಿದ್ದು, ಮುಂದಿನ ಐದು ವರ್ಷಗಳಲ್ಲಿ ಮತ್ತಷ್ಟು ಕಡಿತಗೊಳಿಸುವ ನಿರೀಕ್ಷೆ ಇದೆ. ಈ ವರ್ಷ ಶೇ.10ರಷ್ಟು ಕಡಿತ ಘೋಷಿಸಿದ್ದು, ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ವಿದ್ಯುತ್ ದರ ಕಡಿತವನ್ನು ಮಾಡುವುದಾಗಿ ಸಿಎಂ ದೇವೇಂದ್ರ ಫಡ್ನವಿಸ್ ಹೇಳಿದ್ದಾರೆ.

ಮೊದಲ ವರ್ಷದಲ್ಲಿ, ವಿದ್ಯುತ್ ದರಗಳನ್ನು 10%ರಷ್ಟು ಕಡಿಮೆ ಮಾಡಿದ್ದು, ಮುಂದಿನ 5 ವರ್ಷಗಳಲ್ಲಿ ಒಟ್ಟು 26% ಕಡಿತವನ್ನು ಮಾಡುವ ಯೋಜನೆಯನ್ನು ರಾಜ್ಯ ಸರಕಾರವು ಹೊಂದಿದೆ.

ಮಹಾರಾಷ್ಟ್ರ ರಾಜ್ಯ ವಿದ್ಯುತ್ ವಿತರಣಾ ಕಂಪನಿ ಲಿಮಿಟೆಡ್, ವಿದ್ಯುತ್ ದರಗಳನ್ನು ಕಡಿಮೆ ಮಾಡುವ ಈ ಪ್ರಸ್ತಾವನೆಯನ್ನು ಮಹಾರಾಷ್ಟ್ರ ವಿದ್ಯುತ್ ನಿಯಂತ್ರಣ ಆಯೋಗ ಕೂಡ ಅನುಮೋದಿಸಿದೆ. ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದ್ದಕ್ಕೆ ಮಹಾರಾಷ್ಟ್ರದ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್‌ಗೆ ಮುಖ್ಯಮಂತ್ರಿ ಧನ್ಯವಾದವನ್ನು ತಿಳಿಸಿದ್ದಾರೆ. ವಿದ್ಯುತ್ ದರಗಳನ್ನು ಹಂತ ಹಂತವಾಗಿ ಮೊದಲ ವರ್ಷದಲ್ಲಿ ಶೇ. 10ರಷ್ಟು ಮತ್ತು 5 ವರ್ಷಗಳಲ್ಲಿ ಶೇ. 26 ರಷ್ಟು ಕಡಿಮೆ ಮಾಡಲಾಗುವುದು ಎಂದು ಫಡ್ನವಿಸ್ ಹೇಳಿದ್ದಾರೆ.

ವೃದ್ಧಾಶ್ರಮದಿಂದ 39 ಜನರ ರಕ್ಷಣೆ

ಲಖನೌ: ನೋಯ್ಡಾದಲ್ಲಿ ಅಮಾನವೀಯ ಘಟನೆಯೊಂದು ನಡೆದಿದ್ದು, ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ವೃದ್ಧರನ್ನು ಕೋಣೆಯಲ್ಲಿ ಬಂಧಿಸಿ, ಅವರಿಗೆ ಚಿತ್ರ ಹಿಂಸೆ ನೀಡಲಾಗಿದೆ. ನೋಯ್ಡಾದ ಸೆಕ್ಟರ್ 55ರಲ್ಲಿರುವ ಆನಂದ್ ನಿಕೇತನ ವೃದ್ಧಾಶ್ರಮದ ದುಃಸ್ಥಿತಿಯ ವಿಡಿಯೋವನ್ನು ಅದನ್ನು ಲಖನೌದ ಸಮಾಜ ಕಲ್ಯಾಣ ಇಲಾಖೆಗೆ ಕಳುಹಿಸಲಾಗಿದೆ.

ಆ ಕಿರು ವಿಡಿಯೋದಲ್ಲಿ ವೃದ್ಧ ಮಹಿಳೆಯೊಬ್ಬಳನ್ನು ಕೈಗಳನ್ನು ಕಟ್ಟಿ ಕೋಣೆಯಲ್ಲಿ ಇರಿಸಲಾಗಿದೆ ಎಂದು ತೋರಿಸಲಾಗಿದೆ. ಅದಾದ ಕೂಡಲೇ, ರಾಜ್ಯ ಮಹಿಳಾ ಆಯೋಗ ಮತ್ತು ನೋಯ್ಡಾ ಪೊಲೀಸರು ಮನೆಯ ಮೇಲೆ ದಾಳಿ ನಡೆಸಿ 39 ಹಿರಿಯ ನಾಗರಿಕರನ್ನು ರಕ್ಷಿಸಿದ್ದಾರೆ. ಅಧಿಕಾರಿಗಳು ಸ್ಥಳಕ್ಕೆ ತಲುಪಿದಾಗ, ಅನೇಕ ವೃದ್ಧರನ್ನು ಬಟ್ಟೆಗಳಲ್ಲಿ ಕಟ್ಟಿಹಾಕಿ ಕೊಠಡಿಗಳಲ್ಲಿ ಬೀಗ ಹಾಕಿರುವುದು ಕಂಡುಬಂದಿದೆ. ರಾಜ್ಯ ಮಹಿಳಾ ಆಯೋಗದ ಸದಸ್ಯೆ ಮೀನಾಕ್ಷಿ ಭಾರಲಾ ಅವರ ಪ್ರಕಾರ, ಕೆಲವು ವೃದ್ಧರನ್ನು ನೆಲಮಾಳಿಗೆಯಂತಹ ಕೋಣೆಗಳಲ್ಲಿ ಬಂಧಿಸಲಾಗಿತ್ತು. ಹೆಚ್ಚಿನ ವೃದ್ಧ ಪುರುಷರು ಬಟ್ಟೆ ಧರಿಸದಿದ್ದರೂ, ಮಹಿಳೆಯರಿಗೆ ಭಾಗಶಃ ಬಟ್ಟೆಗಳನ್ನು ನೀಡಲಾಯಿತು. ಅವರಲ್ಲಿ ಹಲವರು ಮೂತ್ರ ಅಥವಾ ಮಲಮಿಶ್ರಿತ ಬಟ್ಟೆಗಳೊಂದಿಗೆ ಕಂಡುಬಂದರು.

ಆಶ್ರಮದಲ್ಲಿರುವ ಹಿರಿಯ ನಾಗರಿಕರನ್ನು ನೋಡಿಕೊಳ್ಳಲು ಯಾವುದೇ ಸಿಬ್ಬಂದಿಯೂ ಅಲ್ಲಿ ಇರಲಿಲ್ಲ. ಅವರಿಗೆ ಸರಿಯಾಗಿ ಊಟವೂ ಇರಲಿಲ್ಲ ಎಂದು

ದಾಳಿಯ ಸಮಯದಲ್ಲಿ ತಿಳಿದು ಬಂದಿದೆ. ಆಶ್ರಮವು ವೃದ್ಧರ ಕುಟುಂಬಗಳಿಂದ 2.5 ಲಕ್ಷ ರು.ದೇಣಿಗೆ ಪಡೆದಿತ್ತು ಮತ್ತು ಹೆಚ್ಚುವರಿಯಾಗಿ, ಅವರ ಆಹಾರ ಮತ್ತು ವಸತಿಗಾಗಿ ಒಂದು ತಿಂಗಳಿಗೆ 6,000 ರು. ರಂತೆ ಪಡೆದಿತ್ತು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಏರ್ ಇಂಡಿಯಾ ವಿಮಾನ ದುರಂತ ತನಿಖೆ | ವೀಕ್ಷಕ ಸ್ಥಾನಮಾನ ನಿರಾಕರಣೆ

ವಿಶ್ವಸಂಸ್ಥೆ ತನಿಖಾಧಿಕಾರಿಗೆ ಭಾರತ ನಿರ್ಬಂಧ

ದೆಹಲಿ: ಅಹಮದಾಬಾದ್ ಏರ್ ಇಂಡಿಯಾ ವಿಮಾನ ದುರಂತದ ತನಿಖೆಯ ಭಾಗವಾಗಲು ವಿಶ್ವಸಂಸ್ಥೆಯ ತನಿಖಾಧಿಕಾರಿಗೆ ಭಾರತ ನಿರಾಕರಿಸಿದೆ ಎಂದು ಮೂಲಗಳು ತಿಳಿಸಿವೆ. ಭಾರತದಲ್ಲಿದ್ದ ತನಿಖಾಧಿಕಾರಿಗೆ ವೀಕ್ಷಕ ಸ್ಥಾನಮಾನ ನೀಡಬೇಕೆಂದು ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ (ಐಸಿಎಒ) ಕೇಳಿಕೊಂಡ ನಂತರ ಭಾರತೀಯ ಅಧಿಕಾರಿಗಳು ಈ ಪ್ರಸ್ತಾಪವನ್ನು ನಿರಾಕರಿಸಿದ್ದಾರೆ.

ಜೂನ್ 12ರಂದು ಅಹಮದಾಬಾದ್‌ನಲ್ಲಿ 270 ಜನರ ಸಾವಿಗೆ ಕಾರಣವಾದ ಬೋಯಿಂಗ್ 787-8 ಡ್ರೀಮ್‌ಲೈನರ್ ಅಪಘಾತದ ನಂತರ, ವಿಶ್ವಸಂಸ್ಥೆಯ ವಾಯುಯಾನ ಸಂಸ್ಥೆ ಭಾರತಕ್ಕೆ ನೆರವು ನೀಡಲು ತನ್ನ ತನಿಖಾಧಿಕಾರಿಗಳಲ್ಲಿ ಒಬ್ಬರನ್ನು ನೀಡುವ ಪ್ರಸ್ತಾಪವನ್ನು ಮುಂದಿಟ್ಟಿತ್ತು.

ಈ ಹಿಂದೆ 2014 ರಲ್ಲಿ ಮಲೇಷ್ಯಾದ ವಿಮಾನ ಪತನ ಮತ್ತು 2020ರಲ್ಲಿ ಉಕ್ರೇನಿಯನ್ ಜೆಟ್ ಲೈನರ್ ಪತನದಂತಹ ಕೆಲವು ತನಿಖೆಗಳಿಗೆ

ಸಹಾಯ ಮಾಡಲು ಐಸಿಎಒ ತನಿಖಾಧಿಕಾರಿಗಳನ್ನು ನಿಯೋಜಿಸಿತ್ತು. ತನಿಖಾ ತಂಡವು ಕಪ್ಪು ಪೆಟ್ಟಿಗೆಗಳಿಂದ ಡೇಟಾವನ್ನು ಹೊರತೆಗೆಯಲಾಗುತ್ತಿದೆ ಮತ್ತು ಏರ್ ಇಂಡಿಯಾ ವಿಮಾನ ಅಪಘಾತಕ್ಕೆ ಕಾರಣವಾದ ಘಟನೆಗಳ ಅನುಕ್ರಮವನ್ನು ಪುನರ್ನಿರ್ಮಿಸಲು ಕಾಕ್‌ಪಿಟ್ ಧ್ವನಿ ರೆಕಾರ್ಡರ್ ಮತ್ತು ಫ್ಲೈಟ್ ಡೇಟಾ ರೆಕಾರ್ಡರ್‌ಗಳ ವಿಶ್ಲೇಷಣೆ ನಡೆಯುತ್ತಿದೆ ಎಂದು ಹೇಳಿದೆ.

ವಿಮಾನ ಪತನಗೊಂಡ ಹಾಸ್ಟೆಲ್‌ನ ಮೇಲ್ಛಾವಣಿಯಲ್ಲಿ ಒಂದು ಪೆಟ್ಟಿಗೆ ಮತ್ತು ಅವಶೇಷಗಳಿಂದ ಇನ್ನೊಂದು ಪೆಟ್ಟಿಗೆ ಪತ್ತೆಯಾಗಿದ್ದು, ಎರಡೂ ಪೆಟ್ಟಿಗೆಗಳನ್ನು ದೆಹಲಿಯ ಎಎಐಬಿ ಪ್ರಯೋಗಾಲಯಕ್ಕೆ ಸುರಕ್ಷಿತವಾಗಿ ಕಳುಹಿಸಲಾಗಿದೆ ಎಂದು ಸರಕಾರ ತಿಳಿಸಿದೆ.

ಸಿವಿಆರ್ ದತ್ತಾಂಶವು ಕಾಕ್‌ಪಿಟ್ ಸಂಭಾಷಣೆಗಳು, ಸಿಬ್ಬಂದಿ ಪ್ರತಿಕ್ರಿಯೆಗಳು ಮತ್ತು ಸುತ್ತುವರಿದ ಶಬ್ದಗಳನ್ನು ಪರಿಶೀಲನೆ ಮಾಡಲಿದ್ದಾರೆ. ಸಿವಿಆರ್ ಮತ್ತು ಎಫ್‌ಡಿಆರ್ ದತ್ತಾಂಶಗಳ ವಿಶ್ಲೇಷಣೆ ನಡೆಯುತ್ತಿದೆ. ಹೆಚ್ಚುವರಿಯಾಗಿ, ಮುಂಭಾಗದ ಕಪ್ಪು ಪೆಟ್ಟಿಗೆಯಿಂದ ಕ್ರ್ಯಾಶ್ ಪ್ರೊಟೆಕ್ಷನ್ ಮಾಡ್ಯೂಲ್ ಅನ್ನು ಸುರಕ್ಷಿತವಾಗಿ ಹಿಂಪಡೆಯಲಾಯಿತು ಮತ್ತು ಜೂನ್ 25ರಂದು, ಮೆಮೊರಿ ಮಾಡ್ಯೂಲ್ ಅನ್ನು ಯಶಸ್ವಿಯಾಗಿ ಪರಿಶೀಲನೆ ಮಾಡಲಾಗಿದೆ.

ಮುಂಬೈಯಲ್ಲಿ ಹಿಂದಿ ಏರಿಕೆ ವಿರುದ್ಧ ಪ್ರತಿಭಟನೆ

ಮುಂಬೈ: 1ನೇ ತರಗತಿಯಿಂದ ಶಾಲೆಗಳಲ್ಲಿ ಹಿಂದಿ ಹೇರಿಕೆ ವಿರುದ್ಧದ ಅಸಮಾಧಾನದ ಕೂಗು ಹೆಚ್ಚುತ್ತಿದ್ದು, ಇದಕ್ಕೆ ಭಾರೀ ವಿರೋಧ ವ್ಯಕ್ತವಾಗುತ್ತಿದೆ. ಇದೀಗ ಈ ಹಿಂದಿ ಹೇರಿಕೆ ವಿರುದ್ಧ ಪ್ರತಿಭಟಿಸಲು ರಾಜ್ ಮತ್ತು ಉದ್ಧವ್ ಠಾಕ್ರೆ, ಒಂದಾಗಲು ಮುಂದಾಗಿದ್ದಾರೆ. ಸಹೋದರ ಸಂಬಂಧಿಗಳಾಗಿರುವ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಎಂಎನ್‌ಎಸ್ ಅಧ್ಯಕ್ಷ ರಾಜ್ ಠಾಕ್ರೆ, ಇಬ್ಬರು ತದ್ವಿರುದ್ಧ ದಿಕ್ಕುಗಳಾಗಿದ್ದರು. ಆದರೆ ಇದೀಗ ಅವರು ರಾಜ್ಯದಲ್ಲಿ ಹಿಂದಿ ಹೇರಿಕೆ ವಿರುದ್ಧ ಮರಾಠಿ ಭಾಷೆಯ ಕಾರಣದಿಂದ ಒಗ್ಗೂಡಲು ಮುಂದಾಗಿದ್ದಾರೆ. ರಾಜ್ಯದಲ್ಲಿ ಜುಲೈ 5ರಂದು ಪ್ರಾಥಮಿಕ ಹಂತದಲ್ಲೇ ತ್ರಿಭಾಷಾ ಕಲಿಕೆ ವಿರೋಧಿಸಿ ಪ್ರತಿಭಟನೆಗೆ ವೇದಿಕೆ ಸಜ್ಜಾಗಿದ್ದು, ಯುಬಿಸಿ ಮುಖ್ಯಸ್ಥ ಉದ್ಧವ್ ಠಾಕ್ರೆ ಮತ್ತು ಎಂಎನ್‌ಎಸ್ ಅಧ್ಯಕ್ಷ ರಾಜ್ ಠಾಕ್ರೆ, ಒಂದೇ ವೇದಿಕೆಯಲ್ಲಿ ಪ್ರತಿಭಟನೆಗೆ ಮುಂದಾಗಿದ್ದಾರೆ. ಪ್ರತ್ಯೇಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇಬ್ಬರು ನಾಯಕರು ತ್ರಿ ಭಾಷಾ ಸೂತ್ರ ಹಾಗೂ ಹಿಂದಿ ಹೇರಿಕೆಯನ್ನು ವಿರೋಧಿಸಿದ್ದಾರೆ. ಜುಲೈ 7ರಂದು ಆಜಾದ್ ಮೈದಾನದಲ್ಲಿ ನಾಗರಿಕ ಸಮಾಜ ನಡೆಸುತ್ತಿರುವ ಪ್ರತಿಭಟನೆಯಲ್ಲಿ ಭಾಗವಹಿಸುವುದಾಗಿ ಉದ್ಧವ್ ಠಾಕ್ರೆ, ಘೋಷಿಸಿದ್ದರೆ, ಜುಲೈ 6ರಂದು ಗಿರ್ಗಾಂವ್ ಚೌಪಟ್ಟಿಯಿಂದ ಮೆರವಣಿಗೆ ನಡೆಸುವುದಾಗಿ ಅವರು ತಿಳಿಸಿದ್ದಾರೆ.

ಭಾರತ-ಅಮೆರಿಕ ಮಹತ್ವದ ಹೆಜ್ಜೆ | ಬ್ಯೂಟಿಫುಲ್ ಈವೆಂಟ್ ವೇಳೆ ಘೋಷಣೆ

ವಾಣಿಜ್ಯ ಒಪ್ಪಂದಗಳ ಸುಳಿವು ನೀಡಿದ ಟ್ರಂಪ್

ವಾಷಿಂಗ್ಟನ್: ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಕುರಿತು ಎರಡು ದೇಶಗಳ ಸಮಾಲೋಚಕರ ತಂಡವು ನಾಲ್ಕು ದಿನಗಳ ಕಾಲ ಮಾತುಕತೆ ನಡೆಸಿದ ಬಳಿಕ ಗುರುವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದೊಂದಿಗೆ ಬಹಳ ದೊಡ್ಡ ವ್ಯಾಪಾರ ಒಪ್ಪಂದದ ಬಗ್ಗೆ ಸುಳಿವು ನೀಡಿದ್ದಾರೆ . ಶ್ವೇತಭವನದಲ್ಲಿ ನಡೆದ ಬಿಗ್ ಬ್ಯೂಟಿಫುಲ್ ಈವೆಂಟ್ ಅನ್ನು ಉದ್ದೇಶಿಸಿ ಮಾತನಾಡಿದ ಟ್ರಂಪ್, ಭಾರತದೊಂದಿಗೆ ಮಹಾನ್ ಒಪ್ಪಂದ ಇದೆ ಎಂದು ಹೇಳಿದರು.

ವ್ಯಾಪಾರ ಒಪ್ಪಂದಗಳ ಬಗ್ಗೆ ಸುಳಿವು ನೀಡುವ ತಮ್ಮ ಭಾಷಣದಲ್ಲಿ ಟ್ರಂಪ್, ಎಲ್ಲರೂ ಒಪ್ಪಂದ ಮಾಡಿಕೊಳ್ಳಲು ಮತ್ತು ಅದರಲ್ಲಿ ಭಾಗವಹಿಸಲು ಬಯಸುತ್ತಾರೆ. ಕೆಲವು ತಿಂಗಳ ಹಿಂದೆ, ಪತ್ರಿಕೆಗಳು, ನಿಮಗೆ ನಿಜವಾಗಿಯೂ ಆಸಕ್ತಿ ಇರುವ ಯಾರಾದರೂ ಇದ್ದಾರೆಯೇ? ಎಂದು ಕೇಳುತ್ತಿದ್ದವು, ಇದೀಗ ಅದಕ್ಕೆ ಉತ್ತರ ಸಿಕ್ಕಿದೆ. ಭಾರತದೊಂದಿಗೆ ಒಂದು ಮಹತ್ವದ ಯೋಜನೆ ಇದೆ. ನಾವು ಎಲ್ಲರೊಂದಿಗೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಕೆಲವರಿಗೆ ನಾವು ಪತ್ರ ಕಳುಹಿಸುತ್ತೇವೆ, ತುಂಬಾ ಧನ್ಯವಾದಗಳು ಎಂದು ಹೇಳುತ್ತೇವೆ. ಮೆಗಾ ವ್ಯಾಪಾರ ಒಪ್ಪಂದದ ಕುರಿತು ನಾಲ್ಕು ದಿನಗಳ ಮಾತುಕತೆಗಳು ನಡೆಯಲಿವೆ.

ಹಿಂದೂಗಳ ಭದ್ರತೆ: ಬಾಂಗ್ಲಾಗೆ ಭಾರತ ತಾಕೀತು

ಢಾಕಾ: ಬಾಂಗ್ಲಾದೇಶದಲ್ಲಿ ದುರ್ಗಾ ದೇವಸ್ಥಾನ ವನ್ನು ಧ್ವಂಸಗೊಳಿಸಿದ್ದು, ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುತ್ತಿರುವ ರೀತಿಗೆ ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದೆ. ಬಾಂಗ್ಲಾದೇಶದ ಅಧಿಕಾರಿಗಳು ಈ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿದ್ದು, ಇದನ್ನು ಅಕ್ರಮವಾಗಿ ನಿರ್ಮಿಸಲಾದ ತಾತ್ಕಾಲಿಕ ರಚನೆ ಎಂದು ಕರೆದಿದ್ದಾರೆ. ಢಾಕಾದ ಖಿಲ್ಖೇತ್‌ನಲ್ಲಿರುವ ದುರ್ಗಾ ದೇವಾಲಯವನ್ನು ಕೆಡವಲು ಉಗ್ರ, ಗಾಮಿಗಳು ಕೂಗುತ್ತಿ ದ್ದರು ಎಂದು ನಮಗೆ ಅರ್ಥವಾಗಿದೆ. ಮಧ್ಯಂತರ ಸರ್ಕಾರವು ದೇವಾಲಯಕ್ಕೆ ಭದ್ರತೆ ಯನ್ನು ಒದಗಿಸುವ ಬದಲು, ಈ ಘಟನೆಯನ್ನು ಅಕ್ರಮ ಭೂ ಬಳಕೆಯ ಪ್ರಕರಣವೆಂದು ಬಿಂಬಿಸಿ ಇಂದು ದೇವಾಲಯದ ನಾಶಕ್ಕೆ ಅವಕಾಶ ನೀಡಿತು ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಬಾಂಗ್ಲಾದೇಶ ರೈಲ್ವೆ ಅಧಿಕಾರಿಗಳು, ಪೊಲೀಸ್ ಮತ್ತು ಮಿಲಿಟರಿ ಸಿಬ್ಬಂದಿಗಳ ಸಹಾಯದಿಂದ ದೇವಾಲಯವನ್ನು ಕೆಡವಲಾಗಿತ್ತು. ಬುಲ್ಡೋಜರ್‌ಗಳು ದೇವಾಲಯವನ್ನು ಕೆಡವುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಇದರಿಂದಾಗಿ ದೇವರ ಮೂರ್ತಿಯನ್ನು ಸ್ಥಳಾಂತರಿಸುವ ಮೊದಲೇ ಹಾನಿಯಾಗಿದೆ.

ಪುರಿ ರಥಯಾತ್ರೆ: 10 ಲಕ್ಷಕ್ಕೂ ಹೆಚ್ಚು ಜನ ಭಾಗಿ

ಭುವನೇಶ್ವರ: ಒಡಿಶಾದ ಪುರಿ ಜಗನ್ನಾಥನ ರಥಯಾತ್ರೆಯಲ್ಲಿ ಶುಕ್ರವಾರ ಲಕ್ಷಾಂತರ ಭಕ್ತರು ಪಾಲ್ಗೊಂಡರು. ಈ ಉತ್ಸವದ ಹಿನ್ನೆಲೆಯಲ್ಲಿ ಭಕ್ತರು ಪುರಿಯ 3 ದೇವರುಗಳಾದ ಜಗನ್ನಾಥ, ಅವನ ಸಹೋದರ ಬಲಭದ್ರ ಮತ್ತು ಸಹೋದರಿ ಸುಭದ್ರೆಯ ಭವ್ಯ ರಥಗಳನ್ನು ಗುಂಡಿಚಾ ದೇವಸ್ಥಾನಕ್ಕೆ ಎಳೆದೊಯ್ದಿದ್ದಾರೆ. ದೇವರು ಅಲ್ಲಿ ಒಂದು ವಾರ ವಾಸಿಸಿ, ನಂತರ ಜಗನ್ನಾಥ ದೇವಸ್ಥಾನಕ್ಕೆ ಹಿಂತಿರುಗುತ್ತಾನೆ ಎಂಬ ಪ್ರತೀತಿ ಇದೆ. ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ 8 ಕಂಪನಿಗಳು ಸೇರಿದಂತೆ ಸುಮಾರು 10,000 ಭದ್ರತಾ ಸಿಬ್ಬಂದಿಯನ್ನು ಶುಕ್ರವಾರದ ರಥಯಾತ್ರೆಗೆ ನಿಯೋಜಿಸಲಾಗಿತ್ತು.

ಪುರಿ ಜಗನ್ನಾಥ ದೇವರ ರಥೋತ್ಸವದ

ವೇಳೆ ಎಲ್ಲರ ಗಮನ ಸೆಳೆಯುವ ಕೆಲವು ಆಸಕ್ತಿದಾಯಕ ಸಂಗತಿಗಳಿದ್ದು, ಅವುಗಳಲ್ಲಿ ಮುಖ್ಯವಾಗಿ ಜಗನ್ನಾಥ ದೇವಾಲಯದ ಮುಖ್ಯ ಗುಮ್ಮಟದ ನೆರಳು ಕಾಣಲು ಸಾಧ್ಯವಿಲ್ಲ ಎಂಬುದಾಗಿದೆ. ಸೂರ್ಯ ಯಾವುದೇ ಸ್ಥಾನದಲ್ಲಿದ್ದರೂ ಇದರ ನೆರಳು ಬೀಳುವುದಿಲ್ಲ ಎನ್ನುವುದು ಅಲ್ಲಿನ ವಿಶೇಷತೆ.

ದೇವಾಲಯದ ಪಕ್ಕದಲ್ಲೇ ಸಮುದ್ರವಿದ್ದರೂ ದೇವಾಲಯದ ಮುಖ್ಯ ದ್ವಾರವನ್ನು ಪ್ರವೇಶಿಸಿದ ತಕ್ಷಣ ಸಮುದ್ರದ ಶಬ್ದ ಮಾಯವಾಗುವುದು ಅಲ್ಲಿನ ಮತ್ತೊಂದು ಸೋಜಿಗ. ಯಾವುದೇ ಸದ್ದುಗದ್ದಲವಿಲ್ಲದೆ ಜಗನ್ನಾಥ ಸ್ವಾಮಿ ನಿದ್ರಿಸಲಿ ಎನ್ನುವ ಕಾರಣಕ್ಕೆ ದೇವಾಲಯದ ಒಳಗೆ ಸಮುದ್ರದ ಸದ್ದು ಬರದಂತೆ ಆಂಜನೇಯ ತಡೆಯುತ್ತಾನೆ ಎನ್ನುವ ನಂಬಿಕೆ ಇದೆ.

ಜಗನ್ನಾಥ ಮಂದಿರದ ಮೇಲ್ಭಾಗದಲ್ಲಿರುವ ಶಿಖರ ಧ್ವಜವು ಗಾಳಿಯ ದಿಕ್ಕಿಗೆ ವಿರುದ್ಧ ಹಾರುತ್ತದೆ. ಪುರಾತನ ಕಾಲದಿಂದಲೂ ಇರುವ ಈ ಧ್ವಜವು ವಿಜ್ಞಾನಕ್ಕೆ ಸವಾಲೊಡ್ಡಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇಂಜನೀಯರಿಂಗ್ ಘಟಕ, ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಆ & ಕು.ಕ.ಇ,ಇಂ. ವಿಭಾಗ, ಫೋರ್ಟ ರೋಡ್, ಧಾರವಾಡ – 580 008.
ದೂರವಾಣಿ : 0836 – 2955800. ಇ-ಮೇಲ್ : eehfwedvndwd1@gmail.com

NATIONAL HEALTH MISSION

ಸಂಖ್ಯೆ : ಕಾ.ನಿ.ಅ./ಆ.ಕು.ಕ.ಇ.ಇಂ./ವಿಭಾಗ-ಧಾ/ಬೆಳಗಾವಿ-ಖಾನಾಪುರ & ಕಿಮ್ಸ್/329/25-26
ದಿನಾಂಕ : 27-06-2025

ಟೆಂಡರ್ ಪ್ರಕಟಣೆ

(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯನಿರ್ವಾಹಕ ಅಭಿಯಂತರರು, ಆ & ಕು.ಕ.ಇ.ಇಂ., ವಿಭಾಗ, ಧಾರವಾಡ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗದಡಿಯಲ್ಲಿ ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿಯ ಈ ಕೆಳಗಿನ ಕಾಮಗಾರಿಗಳಿಗೆ (ಕೆ.ಪಿ.ಪಿ.ಪೋರ್ಟಲ್‌ನಲ್ಲಿರುವಂತೆ ಕಾಮಗಾರಿವಾರು (**ದ್ವಿ-ಲಕೋಟೆ ಪದ್ಧತಿ**) ಐಟಂವಾರು ದರದ ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಕರೆಯಲಾಗಿದೆ. **ಸದರಿ ಟೆಂಡರ್‌ಗಳ ಕಾಮಗಾರಿಗೆ ದಿನಾಂಕ : 09-07-2025 ರ ಸಂಜೆ 4.00 ಘಂಟೆಯವರೆಗೆ www.kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹಾಗೂ ಸದರಿ ಕಾಮಗಾರಿಯ ಬಿಡ್‌ಗಳನ್ನು ದಿನಾಂಕ : 11-07-2025 ರಂದು ತೆರೆಯಲಾಗುವುದು.**

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಪಿಎಮ್‌ಸಿ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಮ್.ಡಿ. ಮೊತ್ತ (ರೂ. ಲಕ್ಷಗಳಲ್ಲಿ)	ಲೆಕ್ಕ ಶೀರ್ಷಿಕೆ	ಕಾಮಗಾರಿಯ ಅವಧಿ (ಮಳೆಗಾಲ ಸಹಿತ)
01	ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕು ಆಸ್ಪತ್ರೆಯ ನಿರ್ಮಾಣ ಕಾಮಗಾರಿಯ ಪಿ.ಎಮ್.ಸಿ ಟೆಂಡರ್.	3520.00	10.00	0.50	4210-01-110-1-19-436 (NABARD)	ಕಾಮಗಾರಿ ಪೂರ್ಣ ಗೊಳ್ಳುವವರೆಗೆ
02	ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ ಆವರಣದಲ್ಲಿ 50 ಹಾಸಿಗೆಗಳ ಕ್ರಿಟಿಕಲ್ ಕೇರ್ ಸೆಂಟರ್ ನಿರ್ಮಾಣ ಕಾಮಗಾರಿಯ ಪಿ.ಎಮ್.ಸಿ. ಟೆಂಡರ್.	1663.00	5.00	0.25	PM ABHIM	ಕಾಮಗಾರಿ ಪೂರ್ಣ ಗೊಳ್ಳುವವರೆಗೆ

ಆಸಕ್ತ ಗುತ್ತಿಗೆದಾರರು ಕೆ.ಪಿ.ಪಿ.ಪಿ. ಪೋರ್ಟಲ್ **ವೆಬ್‌ಸೈಟ್ : www.kppp.karnataka.gov.in** ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಪಡೆದು, ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಒಂದು ವೇಳೆ ಮಾಹಿತಿ ಹಾಗೂ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ನಿಖರವಾದ ಮಾಹಿತಿ ಹಾಗೂ ದಿನಾಂಕಗಳನ್ನು **www.kppp.karnataka.gov.in** ಪೋರ್ಟಲ್‌ನಲ್ಲಿ ವೀಕ್ಷಿಸಿ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಆ. & ಕು. ಕ. ಇಲಾಖೆ ಇಂಜನೀಯರಿಂಗ್ ವಿಭಾಗ, ಧಾರವಾಡ.

ಡಿಐಪಿಆರ್/ಧಾರವಾಡ/352/ಮಣಿಪಾಲ್/2025-26

ಸಮಾಚಾರ ಸಣ್ಣದಲ್ಲ

ಸಿಎಂ ಅನುದಾನ: ಶೇ.25 ಬಳಕೆಗೆ ಅನುಮತಿ

ಬೆಂಗಳೂರು: ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಪ್ರತಿ ಕ್ಷೇತ್ರಕ್ಕೆ ನೀಡಿದ ಅನುದಾನದಲ್ಲಿ ಆಯಾ ಶಾಸಕರು ತಮ್ಮ ವಿವೇಚನಾ ಕೋಟಾದ ಕಾಮಗಾರಿಗಳಿಗೆ ಶೇ.25 ರಷ್ಟು ಮೊತ್ತ ಬಳಸಿಕೊಳ್ಳಲು ಸರಕಾರ ಅನುಮತಿ ನೀಡಿದೆ. ಮುಖ್ಯಮಂತ್ರಿ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಆರ್ಥಿಕ ಇಲಾಖೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಆಯಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿ ಯಲ್ಲಿ ಶೇ 50ರಷ್ಟು ಅನುದಾನವನ್ನು ಲೋಕೋಪಯೋಗಿ ಇಲಾಖೆಯ ರಸ್ತೆ, ಸೇತುವೆ ಕಾಮಗಾರಿಗಳಿಗೆ, ಶೇ.25 ರಷ್ಟು ಗ್ರಾಮೀಣ ರಸ್ತೆ ಮತ್ತು ಮೂಲಸೌಕರ್ಯ ಕಾಮಗಾರಿಗಳಿಗೆ ವಿನಿಯೋಗಿಸಲು ಸೂಚಿಸಿದೆ. ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯ ಒದಗಿಸುವುದು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ರಸ್ತೆಗಳ ನಿರ್ಮಾಣ, ಜನರ ದೈನದಂದಿನ ಕಾರ್ಯ ಗಳಿಗೆ ಅಗತ್ಯವಾದ ಮೂಲಸೌಕರ್ಯ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ. 10 ಕೋಟಿವರೆಗಿನ ಕಾಮಗಾರಿಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಆಡಳಿತಾತ್ಮಕ ಅನುಮೋದನೆ ನೀಡಬೇಕು. 10 ಕೋಟಿಗೂ ಅಧಿಕ ಮೊತ್ತಕ್ಕೆ ಸಚಿವ ಸಂಪುಟದ ಅನುಮೋದನೆ ಪಡೆಯಬೇಕು. ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ಕಾಮಗಾರಿಗಳ ಕನಿಷ್ಠ ಮೊತ್ತ 1 ಕೋಟಿ, ಗ್ರಾಮೀಣಾಭಿವೃದ್ಧಿ ಮತ್ತು ಇತರೆ ಇಲಾಖೆಗಳ ಕಾಮಗಾರಿಗಳ ಕನಿಷ್ಠ ಮೊತ್ತ 20 ಲಕ್ಷಕ್ಕೆ ನಿಗದಿ ಮಾಡಲಾಗಿದೆ. ಭೂಸ್ವಾಧೀನ ಕಾಮಗಾರಿ, ಆಡಳಿತಾತ್ಮಕ ವೆಚ್ಚಗಳಿಗೆ ಸಿಎಂ ಅವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಬಳಕೆ ಮಾಡಿಕೊಳ್ಳುವುದಕ್ಕೆ ನಿರ್ಬಂಧ ವಿಧಿಸಲಾಗಿದೆ.

ಅಣ್ಣಾಮಲೈ ಕೆಲಸಕ್ಕೆ ಅಮಿತ್ ಶಾ ಶ್ಲಾಘನೆ

ದೆಹಲಿ: ಬಿಜೆಪಿ ನಾಯಕ ಮತ್ತು ತಮಿಳುನಾಡು ಪಕ್ಷದ ಮಾಜಿ ಬಿಜೆಪಿ ಅಧ್ಯಕ್ಷ ಕೆ. ಅಣ್ಣಾಮಲೈ ರಾಜ್ಯ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ಅವರಿಗೆ ರಾಷ್ಟ್ರೀಯ ಮಟ್ಟದಲ್ಲಿಯೂ ಜವಾಬ್ದಾರಿಗಳನ್ನು ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

2026ರಲ್ಲಿ ಎನ್‌ಡಿಎ ತಮಿಳುನಾಡು ಸರಕಾರವನ್ನು ರಚಿಸಲಿದೆ ಎಂದು ಹೇಳಿದ್ದಾರೆ. ಏಪ್ರಿಲ್‌ನಲ್ಲಿ ತಮಿಳುನಾಡು ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದಿಂದ ಅಣ್ಣಾಮಲೈ ಕೆಳಗಿಳಿದ ನಂತರ ಮತ್ತು ನೈನಾರ್ ನಾಗೇಂದ್ರನ್ ಅವರನ್ನು ನೂತನ ಅಧ್ಯಕ್ಷರನ್ನಾಗಿ ನೇಮಿಸಿದ ನಂತರ ಅಮಿತ್ ಶಾ ಅಣ್ಣಾಮಲೈ ಅವರ ಅಧಿಕಾರಾವಧಿಯನ್ನು ಶ್ಲಾಘಿಸಿದ್ದರು. ತಮಿಳುನಾಡಿನಲ್ಲಿ ಪಕ್ಷದ ಹೆಜ್ಜೆಗುರುತನ್ನು ವಿಸ್ತರಿಸುವಲ್ಲಿ, ತಳಮಟ್ಟಕ್ಕೆ ಕೊಂಡೊಯ್ಯುವಲ್ಲಿ ಅವರ ಪ್ರಯತ್ನ ಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಪಕ್ಷದ ರಾಷ್ಟ್ರೀಯ ಚೌಕಟ್ಟಿನಲ್ಲಿ ಅಣ್ಣಾಮಲೈ ಅವರ ಸಂಘಟನಾ ಕೌಶಲ್ಯವನ್ನು ಬಿಜೆಪಿ ಬಳಸಿಕೊಳ್ಳುತ್ತದೆ ಎಂದು ಶಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು.

ಜುಂಬಾ ನೃತ್ಯ: ಮುಸ್ಲಿಂ ಸಂಘಟನೆ ವಿರೋಧ

ತಿರುವನಂತಪುರಂ: ಮಾದಕ ವಸ್ತು ವಿರೋಧಿ ಅಭಿಯಾನದ ಭಾಗವಾಗಿ ಕೇರಳದ ಶಿಕ್ಷಣ ಇಲಾಖೆಯು ಶಾಲೆಗಳಲ್ಲಿ ಪರಿಚಯಿಸಿದ ಜುಂಬಾ ನೃತ್ಯ ಕಾರ್ಯಕ್ರಮಕ್ಕೆ ಕೆಲ ಮುಸ್ಲಿಂ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. ಈ ನೃತ್ಯವು ನೈತಿಕ ಮೌಲ್ಯಗಳಿಗೆ ವಿರುದ್ಧವಾಗಿದೆ, ಈ ಕಾರ್ಯಕ್ರಮದ ಬಗ್ಗೆ ಪೋಷಕರು ಯೋಚಿಸಬೇಕು ಎಂದು ಸಮಸ್ತ ಕೇರಳ ಸುನ್ನಿ ಯುವಜನ ಸಂಘಂ (ಎಸ್‌ಐಎಸ್) ರಾಜ್ಯ ಕಾರ್ಯದರ್ಶಿ ಅಬ್ದುಸ್ಸಮದ್ ಪೂಕ್ಕೊಟ್ಟೂರ್ ಅವರು ಫೇಸ್‌ಬುಕ್‌ನಲ್ಲಿ ಶುಕ್ರವಾರ ಪೋಸ್ಟ್ ಮಾಡಿದ್ದಾರೆ.

ಪುರಿ ಕಾಲ್ತುಳಿತ: ತೇರು ಸ್ಥಗಿತ

ಇಂದು ಬೆಳಿಗ್ಗೆ ರಥೋತ್ಸವ ಪುನರಾರಂಭ | ಜಗನ್ನಾಥನ ದರ್ಶನಕ್ಕೆ ಜನಸಾಗರ

ಪುರಿ: ಒಡಿಶಾದ ಪುರಿ ಜಗನ್ನಾಥ ರಥಯಾತ್ರೆ ಸಂದರ್ಭದಲ್ಲಿ ಕಾಲ್ತುಳಿತ ಉಂಟಾಗಿ 600ಕ್ಕೂ ಹೆಚ್ಚು ಭಕ್ತರು ಗಾಯಗೊಂಡ ಹಿನ್ನೆಲೆಯಲ್ಲಿ ಐತಿಹಾಸಿಕ ರಥೋತ್ಸವ ಕಾರ್ಯಕ್ರಮವನ್ನು ಶನಿವಾರಕ್ಕೆ ಮುಂದೂಡಲಾಗಿದೆ.

ಪುರಿ ದೇಗುಲದ ಮುಖ್ಯ ಆಡಳಿತಾಧಿಕಾರಿ ಅರವಿಂದ್ ಪಾಧೀ ಅವರ ಪ್ರಕಾರ, ನಾಳೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ರಥ ಎಳೆಯುವುದು ಪುನರಾರಂಭಗೊಳ್ಳಲಿದೆ. ಬಾಲಭದ್ರನ ತಾಳಧ್ವಜ ಬಾಲಗಂಡಿಯನ್ನು ತಲುಪಿದೆ, ಸುಭದ್ರೆಯ ದೇಬದಲಾನವನ್ನು ಸಹ ಮಾರುಕಟ್ಟೆ ಚೌಕ್ ಬಳಿ ಮಧ್ಯದಲ್ಲಿ ನಿಲ್ಲಿಸಲಾಗಿದೆ, ಆದರೆ ಮಹಾಪ್ರಭು ಜಗನ್ನಾಥನ ರಥ 'ನಂದಿಘೋಷ'ವನ್ನು ಸಿಂಹದ್ವಾರದ ಬಳಿಯೇ ನಿಲ್ಲಿಸಲಾಗಿದೆ.

ರಥ ಎಳೆಯುವಲ್ಲಿ ವಿಳಂಬದಿಂದಾಗಿ ಸ್ಥಳದಲ್ಲಿ ಭಾರೀ ಜನಸಂದೋಹ ನೆರೆದಿತ್ತು. ಸಂಜೆ 7.50ರ ಸುಮಾರಿಗೆ ಜಗನ್ನಾಥ ದೇವರ ನಂದಿಘೋಷ ರಥ ಸಂಚಾರ ಆರಂಭವಾಗಿತ್ತು. ಆದರೆ ಜನಸಂದಣಿಯ ಕಾರಣಕ್ಕೆ ಸ್ವಲ್ಪ ಸಮಯದ ನಂತರ ರಥ ಎಳೆಯುವಿಕೆಯನ್ನು ನಿಲ್ಲಿಸಲಾಯಿತು. ಅಷ್ಟರಲ್ಲಿ ನೂಕು ನುಗ್ಗಲು ಆರಂಭವಾಗಿ ಹಲವಾರು ಮಂದಿ ಗಾಯಗೊಂಡರು. ತಕ್ಷಣವೇ ಸ್ಥಳಕ್ಕೆ ಆ್ಯಂಬುಲೆನ್ಸ್‌ಗಳನ್ನು ಕರೆಸಿ ಗಾಯಾಳುಗಳನ್ನು ಮತ್ತು ಅಸ್ವಸ್ಥರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ಸದ್ಯ ನಂದಿ ಘೋಷರಥವು ಶ್ರೀಮಂದಿರದ ಸಿಂಹದ್ವಾರದ ಬಳಿ ನಿಂತಿದೆ. ಅಲ್ಲಿಂದಲೇ ಮತ್ತೆ ಸಂಚಾರ ಆರಂಭವಾಗಲಿದೆ.

ರಥ ಎಳೆಯುವಲ್ಲಿನ ವಿಳಂಬಕ್ಕೆ 'ನಿರೀಕ್ಷೆಗಿಂತ ಹೆಚ್ಚಿನ ಭಕ್ತರ ಸಂಖ್ಯೆ' ಕಾರಣ ಎಂದು ಕಾನೂನು ಸಚಿವರು ಹೇಳಿದ್ದಾರೆ. ಮೂಲಗಳ ಪ್ರಕಾರ, ಶುಕ್ರವಾರ ಜಗನ್ನಾಥನ ಪಹಾಡಿ ಸಮಾರಂಭದ ಸಂದರ್ಭದಲ್ಲಿ ಗಜಪತಿ ದಿವ್ಯ ಸಂಘದೇವರ ಅರಮನೆಯ ಬಳಿ ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿದ್ದರು. ಜನಸಂದಣಿಯನ್ನು ನಿಯಂತ್ರಿಸಲು ಆಡಳಿತ ಮಂಡಳಿ ಹರಸಾಹಸ ಪಡಬೇಕಾಯಿತು. ಈ ಸಮಯದಲ್ಲಿ, ಭಕ್ತರಲ್ಲಿ ಗೊಂದಲ ಉಂಟಾಗಿ ಕಾಲ್ತುಳಿತ ಪರಿಸ್ಥಿತಿ ಉಂಟಾಯಿತು. ಭಕ್ತರು ಇದ್ದಕ್ಕಿದ್ದಂತೆ ಓಡಲು ಪ್ರಾರಂಭಿಸಿದರು. ಕೆಲವರು ಮೂರ್ಛೆ ಹೋಗಿ ಅಲ್ಲಿಯೇ ಬಿದ್ದರು.

ಎಲ್ಲಾ ಗಾಯಾಳುಗಳ ಚಿಕಿತ್ಸೆಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಸ್ಥಳದಲ್ಲಿದ್ದ ಪೊಲೀಸ್ ಆಡಳಿತವು ಪರಿಸ್ಥಿತಿಯನ್ನು ನಿಯಂತ್ರಿಸಿದೆ. ಇದರಿಂದಾಗಿ ದೊಡ್ಡ ಪ್ರಮಾಣದ ಅಪಘಾತ ತಪ್ಪಿದೆ ಎಂದು ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತ್ಯೇಕವಾಗಿ ಇಬ್ಬರ ವಿಚಾರಣೆ | ದಾಖಲೆ ಸಮೇತ ಬಿ. ದಯಾನಂದ್ ಹೇಳಿಕೆ

ಮುಂದಿನ ವಾರ ತನಿಖಾ ವರದಿ ಸಲ್ಲಿಕೆ ಸಾಧ್ಯತೆ

ಬೆಂಗಳೂರು: ಚಿನ್ನಸ್ವಾಮಿ ಮೈದಾನದ ಬಳಿ ನಡೆದ ಕಾಲ್ತುಳಿತ ಪ್ರಕರಣ ಸಂಬಂಧ ಅಮಾನತುಗೊಂಡಿದ್ದ ಪೊಲೀಸ್ ಕಮಿಷನರ್ ಆಗಿದ್ದ ಬಿ.ದಯಾನಂದ ಹಾಗೂ ಹೆಚ್ಚುವರಿ ಪೊಲೀಸ್ ಆಯುಕ್ತ ವಿಕಾಸ್ ಕುಮಾರ್ ವಿಕಾಸ್ ಅವರನ್ನು ಗುರುವಾರ ಬೆಂಗಳೂರು ನಗರ ಜಿಲ್ಲಾ ಮ್ಯಾಜಿಸ್ಟ್ರೇಟ್ ಜಗದೀಶ್ ಅವರು ವಿಚಾರಣೆ ನಡೆಸಿದರು.



ತನಿಖೆಯಲ್ಲಿ ಕಂಡುಬಂದ ಅಂಶಗಳೇನು?

- ಪೊಲೀಸ್ ಠಾಣೆಯಲ್ಲಿ ಅನುಮತಿಗಿಂತ ಮೊದಲೇ ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಿದ್ದರಿಂದ ಊಹೆಗೆ ಮೀರಿ ಜನರ ಜಮಾವಣೆಗೊಂಡಿದ್ದರಿಂದ ದುರಂತ ಸಂಭವಿಸಲು ಪ್ರಮುಖ ಕಾರಣವಾಗಿದೆ.
- ಪ್ರವೇಶದ್ವಾರ ಸೇರಿದಂತೆ ಆಯಕಟ್ಟಿನ ಜಾಗದಲ್ಲಿ ಬ್ಯಾರಿಕೇಡ್ ಹಾಕಿ ಸೂಕ್ತ ಭದ್ರತಾ ಸಿಬ್ಬಂದಿ ನಿಯೋಜಿಸದಿರುವುದು.
- ಅಂತಿಮ ಘಟ್ಟದಲ್ಲಿ ಉಚಿತ ಪ್ರವೇಶದ ಬಗ್ಗೆ ಘೋಷಿಸಿರುವುದು ಹಾಗೂ ಸಮರ್ಪಕವಾದ ಪೊಲೀಸ್ ನಿರ್ವಹಣೆ ಇಲ್ಲದಿರುವುದು.

ದುರಂತ ಸಂಬಂಧ ವಿಚಾರಣೆ ಹಾಜರಾಗುವಂತೆ ಈ ಇಬ್ಬರು ಐಪಿಎಸ್ ಅಧಿಕಾರಿಗಳಿಗೆ ಹಲವು ಬಾರಿ ನೋಟಿಸ್ ಜಾರಿ ಮಾಡಲಾಗಿತ್ತು. ಹೇಳಿಕೆ ನೀಡಲು ಅಧಿಕಾರಿಗಳು ಸಮಯಾವಕಾಶ ಪಡೆದು ಕೊಂಡಿದ್ದರು. ಗುರುವಾರ ಬರುವಂತೆ ಮತ್ತೆ ನೋಟಿಸ್ ಜಾರಿ ಹಿನ್ನೆಲೆಯಲ್ಲಿ, ಹಾಜರಾದ ಇಬ್ಬರನ್ನೂ ಪ್ರತ್ಯೇಕವಾಗಿ ವಿಚಾರಣೆಗೊಳಪಡಿಸಲಾಯಿತು. ದಯಾನಂದ ಅವರು ಖಾಸಗಿ ಕಾರಿನಲ್ಲಿ ವಕೀಲರೊಂದಿಗೆ ಕೆ.ಜಿ. ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಗೆ ಬಂದು ವಿಚಾರಣೆಗೆ ಹಾಜರಾದರು.

ಕಾಲ್ತುಳಿತ ಘಟನೆಗೆ ಏನು ಕಾರಣ? ಆರ್‌ಸಿಬಿ ವಿಜಯೋತ್ಸವಕ್ಕೆ ಅನುಮತಿ ನೀಡದಿದ್ದರೂ ಅನುವು ಮಾಡಿಕೊಟ್ಟಿದ್ದು ಯಾಕೆ? ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸರ ಸಂಖ್ಯೆ ಎಷ್ಟು? ನಿರೀಕ್ಷೆಗೂ ಮೀರಿ ಜನರು ಜಮಾವಣೆಗೊಂಡಿದ್ದರೂ ಪ್ರವೇಶದ್ವಾರದ ಮುಂದೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸದಿರುವುದಕ್ಕೆ ಕಾರಣವೇನು? ಎಂಬುದು ಸೇರಿದಂತೆ ತನಿಖಾಧಿಕಾರಿಗಳು ಕೇಳಿದ ಹತ್ತಾರು ಪ್ರಶ್ನೆಗಳಿಗೆ ದಾಖಲೆ ಸಮೇತ ದಯಾನಂದ ಹೇಳಿಕೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.ಕಾಲ್ತುಳಿತ ವೇಳೆ ಸ್ಥಳದಿಂದ ವರದಿ ಮಾಡಿದ್ದ ಎಲೆಕ್ಟ್ರಾನಿಕ್ ಹಾಗೂ ಡಿಜಿಟಲ್ ಮಾಧ್ಯಮ ಹಾಗೂ ಮುದ್ರಣ ಮಾಧ್ಯಮಗಳ ಪ್ರತಿನಿಧಿಗಳಿಗೆ ಹಾಗೂ ಸಾರ್ವಜನಿಕರಿಗೆ ಶುಕ್ರವಾರ ಬಂದು ಹೇಳಿಕೆ ದಾಖಲಿಸುವಂತೆ ಆಹ್ವಾನಿಸಿದ್ದಾರೆ ಎಂದು ತಿಳಿದುಬಂದಿದೆ.

ಮುಂದಿನ ವಾರ ವರದಿ ಸಲ್ಲಿಕೆ?: ತನಿಖಾ ವರದಿ ನೀಡಲು ಸರಕಾರ ನೀಡಿದ್ದ 15 ದಿನಗಳ ಗಡುವು ವಿಸ್ತರಣೆಗೆ ಅನುಮತಿ ಪಡೆದುಕೊಂಡಿದ್ದ ತನಿಖಾಧಿಕಾರಿ ಜಗದೀಶ್ ಮುಂದಿನ ವಾರಕ್ಕೆ ವರದಿ ನೀಡಲು ಸಿದ್ಧತೆ ನಡೆಸುತ್ತಿದ್ದಾರೆ. ವಿಚಾರಣೆ ಕೊನೆಯ ಭಾಗವಾಗಿ ಶುಕ್ರವಾರ ಸಾರ್ವಜನಿಕರ ವಿಡಿಯೋ ಹೇಳಿಕೆ ದಾಖಲಿಸಿಕೊಳ್ಳಲಿದ್ದಾರೆ. ದುರಂತಕ್ಕೆ ಸಂಬಂಧಿಸಿದಂತೆ ಸಿಸಿಟಿವಿ ದೃಶ್ಯಾವಳಿ ವಶಕ್ಕೆ ಪಡೆದು ಪರಾಮರ್ಶೆ ನಡೆಸಲಾಗಿದೆ. ಆರ್‌ಸಿಬಿ, ಡಿಎನ್‌ಎ ಹಾಗೂ ಕೆಎಸ್‌ಸಿಎ ಮುಖ್ಯಸ್ಥರು ಹಾಗೂ ಸಿಬ್ಬಂದಿಯಯ ವಿಚಾರಣೆ ನಡೆದಿದೆ. ವಿಜಯೋತ್ಸವ ದಿನದಂದು ಬಂದೋಬಸ್ತ್ ಕರ್ತವ್ಯದಲ್ಲಿದ್ದ ಹಿರಿಯ ಕಾನೂನು ಸುವ್ಯವಸ್ಥೆ ಪೊಲೀಸರು ಹಾಗೂ ಸಂಚಾರ ಪೊಲೀಸರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

30ರಂದು ಕಾವೇರಿಗೆ ಸಿಎಂ ಸಿದ್ದರಾಮಯ್ಯ ಬಾಗಿನ

ಬೆಂಗಳೂರು: ಸ್ವಾತಂತ್ರ್ಯ ಬಳಿಕ ಇದೇ ಮೊದಲ ಬಾರಿಗೆ ಜೂನ್‌ನಲ್ಲಿಯೇ ಭರ್ತಿಯಾಗಿರುವ ಕೃಷ್ಣರಾಜ ಸಾಗರ ಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಬಾಗಿನ ಅರ್ಪಿಸಲಿದ್ದಾರೆ.

ಕಾವೇರಿ ನದಿ ಪಾತ್ರದಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಉತ್ತಮ ಪ್ರಮಾಣದಲ್ಲಿ ಆಗಿರುವುದರಿಂದ ಜೂನ್‌ನಲ್ಲಿಯೇ ಕೆಆರ್‌ಎಸ್ ಭರ್ತಿಯಾಗಿದೆ. ಆದ್ದರಿಂದ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬಾಗಿನ ಅರ್ಪಿಸಲಿದ್ದಾರೆ.

1941ರ ಬಳಿಕ ಇದೇ ಮೊದಲ ಬಾರಿಗೆ ಜೂನ್ ತಿಂಗಳಲ್ಲೇ ಜಲಾಶಯದಲ್ಲಿ ನೀರಿನ ಮಟ್ಟ 124 ಅಡಿ ತಲುಪಿದೆ. ಸಾಮಾನ್ಯವಾಗಿ ಜುಲೈ ತಿಂಗಳಾಂತ್ಯ ಅಥವಾ ಆಗಸ್ಟ್‌ನಲ್ಲಿ ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಲಾಗುತ್ತದೆ. ಆದರೆ, ಈ ಬಾರಿ ಉತ್ತಮ ಮುಂಗಾರು ಮಳೆಯಾಗುತ್ತಿದ್ದು, ಜಲಾಶಯ ಜೂನ್‌ನಲ್ಲಿಯೇ ಭರ್ತಿಯಾಗಿದೆ. 1941 ಜೂನ್ 21ರಲ್ಲಿ 121.45 ಅಡಿ ನೀರು ತುಂಬಿತ್ತು. ಇದೀಗ ನೀರಿನ ಮಟ್ಟ 124 ಅಡಿ ತಲುಪಿದೆ.

ಸಿನಿಮೀಯ ರೀತಿಯಲ್ಲಿ ಉದ್ಯಮಿಯಿಂದ 2 ಕೋಟಿ ದರೋಡೆ

ಬೆಂಗಳೂರು: ಹಾಡಹಗಲೇ ಸಿನಿಮೀಯ ಮಾದರಿಯಲ್ಲಿ ಎರಡು ಕೋಟಿ ರೂಪಾಯಿ ದರೋಡೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ.

ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯ ಎಂ.ಎಸ್. ಪಾಳ್ಯದಲ್ಲಿ ಘಟನೆ ನಡೆದಿದ್ದು, ಹಣ ಕಳೆದುಕೊಂಡ ಉದ್ಯಮಿ ಶ್ರೀಹರ್ಷ ವಿ. ಅವರು ನೀಡಿರುವ ದೂರಿನ ಅನ್ವಯ ವಿದ್ಯಾರಣ್ಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಂಗೇರಿ ಮೂಲದ ಶ್ರೀಹರ್ಷ ತಮ್ಮ ಉದ್ಯಮಕ್ಕೆ ಅಗತ್ಯವಿರುವ ಯಂತ್ರ ವೊಂದನ್ನು ಜರ್ಮನಿಯಿಂದ ಆಮದು ಮಾಡಿಕೊಳ್ಳಬೇಕಿದ್ದುದರಿಂದ 2 ಕೋಟಿ ರು. ಹಣವನ್ನು ಯುಎಸ್ಡಿಟಿಗೆ ಕನ್ವರ್ಟ್ ಮಾಡಿಸಿಕೊಳ್ಳಬೇಕಿತ್ತು.

ಈ ಸಂದರ್ಭದಲ್ಲಿ ತನ್ನ ಸ್ನೇಹಿತರೊಬ್ಬರ ಮೂಲಕ ಶ್ರೀಹರ್ಷ ಅವರಿಗೆ ಬೆಂಜಮಿನ್ ಹರ್ಷ ಎಂಬಾತನ ಪರಿಚಯವಾಗಿತ್ತು. ಯುಎಸ್‌ಡಿಟಿಗೆ ಹಣ ಕನ್ವರ್ಟ್ ಮಾಡಿಸುವ ಸಲುವಾಗಿ ಚರ್ಚಿಸಿದಾಗ ಎಂ.ಎಸ್. ಪಾಳ್ಯದಲ್ಲಿರುವ ಎ.ಕೆ. ಎಂಟರ್‌ಪ್ರೈಸಸ್ ಬಳಿ ಬರುವಂತೆ ಬೆಂಜಮಿನ್ ಹರ್ಷ ಸೂಚಿಸಿದ್ದ. ಅದರಂತೆ ಜೂನ್ 25ರಂದು ಮಧ್ಯಾಹ್ನ 3 ಗಂಟೆಗೆ ಎಂ.ಎಸ್.ಪಾಳ್ಯದ ಎ.ಕೆ. ಎಂಟರ್‌ಪ್ರೈಸಸ್‌ನಲ್ಲಿ ಬೆಂಜಮಿನ್ ಹರ್ಷ ಹಾಗೂ ಶ್ರೀಹರ್ಷ ಭೇಟಿಯಾಗಿದ್ದರು ಎಂದು ದೂರಿನಲ್ಲಿ ವಿವರಿಸಲಾಗಿದೆ.

ಶ್ರೀಹರ್ಷ, ಬೆಂಜಮಿನ್ ಮತ್ತು ಆತನ ಇಬ್ಬರು ಸ್ನೇಹಿತರು 2 ಕೋಟಿ ರು. ಹಣ ಎಣಿಕೆ ಮಾಡುತ್ತಿದ್ದಾಗ ಏಕಾಏಕಿ ಅಂಗಡಿಗೆ ನುಗ್ಗಿದ್ದ 6-7 ಜನರು ಚಾಕುವಿನಿಂದ ಶ್ರೀಹರ್ಷ ಅವರ ಮೇಲೆ ಹಲ್ಲೆಗೈದಿದ್ದಾರೆ. ಬಳಿಕ ಕತ್ತಿಗೆ ಚಾಕು ಇಟ್ಟು ಬೆಂಜಮಿನ್ ಹರ್ಷ, ಶ್ರೀಹರ್ಷ ಮತ್ತು ಅವರ ಸ್ನೇಹಿತರನ್ನು ರೂಮ್‌ನಲ್ಲಿ ಕೂಡಿ ಹಾಕಿ, 2 ಕೋಟಿ ರು. ಹಣವನ್ನು ಚೀಲಕ್ಕೆ ತುಂಬಿಕೊಂಡು ಪರಾರಿಯಾಗಿದ್ದಾರೆ.

ಕೊನೆಗೆ ಕಷ್ಟಪಟ್ಟು ರೂಮ್ ಬಾಗಿಲು ಹಾಗೂ ಶಟರ್ ತೆರೆದಾಗ ಬೆಂಜಮಿನ್ ಮತ್ತು ಅವರ ಸ್ನೇಹಿತರು ಸಹ ದಿಢೀರನೇ ಸ್ಥಳದಿಂದ ಕಾಲ್ಕಿತ್ತಿದ್ದಾರೆ ಎಂದು ಶ್ರೀಹರ್ಷ ದೂರಿದ್ದಾರೆ.

ವಿದ್ಯಾರಣ್ಯಪುರ ಠಾಣೆಯಲ್ಲಿ ಕೇಸ್ ದಾಖಲು

ಸದ್ಯ ಶ್ರೀಹರ್ಷ ನೀಡಿರುವ ದೂರಿನ ಅನ್ವಯ ಅಪರಿಚಿತ ಆಸಾಮಿಗಳು, ಬೆಂಜಮಿನ್ ಹರ್ಷ ಮತ್ತು ಅವರ ಸ್ನೇಹಿತರ ವಿರುದ್ಧ ವಿದ್ಯಾರಣ್ಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಂಜಮಿನ್ ಹರ್ಷ ಮತ್ತು ಆತನ ಸ್ನೇಹಿತರನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬದಲಾದ ಮೂರು ವಿಚಾರಣೆಗಳ ಆಯಾಮ | ಆರ್‌ಸಿಬಿ ಅವಾಂತರದ ಶಂಕೆ | ವರದಿ ಸಲ್ಲಿಕೆ ಶೀಘ್ರ

ಡಿಎನ್‌ಎ ಎಡವಿದ್ದೇ ಕಾಲ್ತುಳಿತ ದುರಂತಕ್ಕೆ ಕಾರಣ?

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ದೇಶವೇ ಬೆಚ್ಚಿ ಬಿದ್ದು ಕಂಬನಿ ಮಿಡಿದಿದ್ದ 11 ಮಂದಿ ಬಲಿಯಾದ ಐಪಿಎಲ್ ಸಂಭ್ರಮಾಚರಣೆ ದುರಂತ ಜನಮಾನಸದಿಂದ ಮಾಸಿ ಹೋಗುತ್ತಿದೆ ಎನ್ನುವಾಗಲೇ ವಿವಿಧ ತನಿಖಾ ಸಂಸ್ಥೆಗಳ ಆಯಾಮ ಬದಲಾಗುತ್ತಿದೆ.

ಒಂದು ದುರಂತ-ನಾಲ್ಕು ವಿಚಾರಣೆಗಳು ಎನ್ನುವಂತಾಗಿದ್ದು, ಒಂದನ್ನು ಬಿಟ್ಟು ಮೂರು ವಿಚಾರಣೆಗಳ ಆಯಾಮ ಈಗ ಡಿಎನ್‌ಎ ಮತ್ತು ಆರ್‌ಸಿಬಿ ಕಡೆ ತಿರುಗಿದೆ ಎಂದು ಗೊತ್ತಾಗಿದೆ. ದುರಂತಕ್ಕೆ ಪೂರ್ವ ಸಿದ್ಧತೆಗಳ ಕೊರತೆಯ ಜತೆಗೆ ತಪ್ಪು ಮಾಹಿತಿಗಳನ್ನು ಹರಿಯಬಿಟ್ಟಿದ್ದು ಕಾರಣ ಇರಬಹುದೇ ಎನ್ನುವ ಅಂಶಗಳನ್ನು ಮುಂದಿಟ್ಟು ತನಿಖೆಗಳನ್ನು ನಡೆಸಲಾಗುತ್ತಿದೆ. ಈ ನಿಟ್ಟಿನಲ್ಲಿ ಐಪಿಎಲ್ ಇವೆಂಟ್ ನಿರ್ವಹಿಸುವ ಮತ್ತು ಅದರ ಟಿಕೇಟ್, ಪಾಸ್ ವ್ಯವಹಾರ ನಿರ್ವಹಿಸುವ ಡಿಎನ್‌ಎ ಸಂಸ್ಥೆಯ ಕಡೆಗೆ ತನಿಖಾ ಸಂಸ್ಥೆಗಳು ಹೆಚ್ಚು ಗಮನ ನೀಡಿವೆ ಎನ್ನಲಾಗಿದೆ. ಹಾಗೆಯೇ ಈ ಸಂಭ್ರಮಾಚರಣೆಯನ್ನು ತನ್ನ ವ್ಯವಹಾರಕ್ಕೆ ಬಳಸಿಕೊಳ್ಳುವ ಉಮೇದಿನಲ್ಲಿ ಗೊಂದಲ ಮಾಹಿತಿಗಳನ್ನು ಹರಿಯ ಬಿಟ್ಟು ದುರಂತಕ್ಕೆ ದಾರಿ ಮಾಡಿತೇ ಎನ್ನುವ ಶಂಕೆಗಳೊಡನೆ ತನಿಖಾ ಸಂಸ್ಥೆಗಳು ಮುನ್ನಡೆಯುತ್ತಿವೆ.

ಇದರ ಜತೆಗೆ ಐಪಿಎಲ್ ಕ್ರಿಕೆಟ್ ನಡೆಸುವ ಆರ್‌ಸಿಬಿ ಸಂಭ್ರಮಾಚರಣೆ ಸಿದ್ಧತೆಗಳನ್ನು ಸರಕಾರದ ಜತೆ ಸಮಾಲೋಚಿಸಿ ಖಾತರಿ ಮಾಡಿಕೊಂಡು, ಸರಕಾರದ ಅನುಮೋದನೆಗಳನ್ನು ಪರಿಗಣಿಸಿದೆ ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿಯನ್ನು ಹರಿಬಿಟ್ಟಿದ್ದು ದುರಂತಕ್ಕೆ ಕಾರಣವಾಗಿದೆಯೇ ಎನ್ನುವ ಪ್ರಶ್ನೆ ಮುಂದಿಟ್ಟು ತೀವ್ರ ತನಿಖೆ ನಡೆಸುತ್ತಿವೆ. ಸದ್ಯ ಮ್ಯಾಜಿಸ್ಟೀರಿಯಲ್ ವಿಚಾರಣೆ ನಡೆಸುತ್ತಿರುವ ಬೆಂಗಳೂರು ಜಿಲ್ಲಾಧಿಕಾರಿಗಳು ಹಾಗೂ ನ್ಯಾ. ಜಾನ್ ಮೈಕೆಲ್ ಕುನ್ಹ ನೇತೃತ್ವದ ತನಿಖಾ ಸಮಿತಿ ತ್ವರಿತಗತಿಯಲ್ಲಿ ವರದಿ ಸಲ್ಲಿಸಲು ಯತ್ನಿಸುತ್ತಿವೆ. ಹಾಗೆಯೇ ಸಿಐಡಿ ವಿಶೇಷ ತನಿಖಾ ದಳದ ಎಸ್.ಪಿ.ಶುಭನ್ವಿತಾ, ಡಿವೈಎಸ್‌ಪಿಗಳಾದ ಗೌತಮ್, ಪುರುಷೋತ್ತಮ್ ನೇತೃತ್ವದ ತಂಡ ತನಿಖೆಯಲ್ಲಿ ಈಗಾಗಲೇ ಬಹುದೂರ ಕ್ರಮಿಸಿದೆ.

ಡಿಎನ್‌ಎ ಎದೆ ಢವಢವ

ರಾಜ್ಯ ಕಂಡ ಧೀಮಂತ ರಾಜಕೀಯ ದಂತಕತೆಯ ಕುಟುಂಬಕ್ಕೆ ಸೇರಿದ ವೆಂಕಟವರ್ಧನ್ ಅವರಿಗೆ ಸೇರಿದೆ ಎನ್ನಲಾಗುವ ಡಿಎನ್‌ಎ ಸಂಸ್ಥೆಯ ಕಾರ್ಯ ವೈಖರಿ ಶಂಕಿಸಿ ತನಿಖಾ ಸಂಸ್ಥೆಗಳು ವೇಗವಾಗಿ ಮುನ್ನುಗ್ಗುತ್ತಿವೆ. ಕಾಲ್ತುಳಿತ ದುರಂತಕ್ಕೆ ಕಾರಣವಿರಬಹುದು ಎಂದು ಆರೋಪಿಸಿ ಡಿಎನ್‌ಎ ಸಂಸ್ಥೆಯ ಮಾರ್ಕೆಟಿಂಗ್ ಮುಖ್ಯಸ್ಥ ಸುನಿಲ್ ಮ್ಯಾಥ್ಯು ಹಾಗೂ ಟಿಕೆಟ್ ಮುಖ್ಯಸ್ಥ ಸುಮಂತ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಅಂದರೆ ಕ್ರಿಕೆಟ್‌ನ ಪಂದ್ಯಾವಳಿಗಳನ್ನು ನಡೆಸಿ ವ್ಯವಹಾರ ನಡೆಸಿದ್ದ ಡಿಎನ್‌ಎ ಸಂಭ್ರಮಾಚರಣೆಗೂ ಟಿಕೆಟ್ ನಿಗದಿ ಮಾಡಬೇಕೆಂದು ನಿರ್ಧರಿಸಿತ್ತು. ನಂತರ ಪಾಸ್ ವ್ಯವಸ್ಥೆ ಮಾಡುವ ನಿರ್ಧಾರಗಳನ್ನು ಪ್ರಕಟಿಸಿ, ನಂತರ ಎಲ್ಲರಿಗೂ ಉಚಿತ ಎನ್ನುವ ಮಾಹಿತಿ ಯನ್ನು ತನ್ನ ವೆಬ್ ಸೈಟ್, ತಂತ್ರಾಂಶಗಳು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹರಿಯ ಬಿಟ್ಟದ್ದರಿಂದ ಲಕ್ಷಾಂತರ ಮಂದಿ ವಿಜಯೋತ್ಸವಕ್ಕೆ ಪ್ರವಾಹದಂತೆ ಬರುವಂತಾಗಿತ್ತು ಎನ್ನುವ ಅಭಿಪ್ರಾಯಗಳು ಸಮಿತಿ ಮುಂದೆ ವ್ಯಕ್ತವಾಗಿವೆ ಎನ್ನಲಾಗಿದೆ.

ಆರ್‌ಸಿಬಿ ಮಾಡಿದ ಎಡವಟ್ಟು

ಈಗಾಗಲೇ ವಿಚಾರಣೆ ಎದುರಿಸುತ್ತಿರುವ ಆರ್‌ಸಿಬಿಯ ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ಹಾಗೂ ಸಿಇಒ ರಾಜೇಶ್ ಮೆನನ್ ಅವರ ನಿರ್ಧಾರಗಳು ದುರಂತಕ್ಕೆ ಕಾರಣ ಇರಬಹುದು ಎನ್ನುವ ಅಂಶಗಳನ್ನು ಪರಿಶೀಲಿಸಲಾಗುತ್ತಿದೆ. ಸಂಭ್ರಮಾಚರಣೆ ಬಗ್ಗೆ ಸರಕಾರದ ಅಧಿಕೃತ ನಿರ್ಧಾರಗಳು ಮತ್ತು ಅನುಮೋದನೆಗಳನ್ನು ಪರಿಶೀಲಿಸದೆ, ದೇಶದಲ್ಲೇ ಗರಿಷ್ಠ ಫಾಲೋವರ್ಸ್ ಹೊಂದಿರುವ ಆರ್ ಸಿಬಿಯ ಟ್ವಿಟರ್‌ಗಳಲ್ಲಿ ಸಂಭ್ರಮಾಚರಣೆ ಪ್ರಕಟಿಸಿದ್ದು ಕಾರಣವಾಗಿರಬಹುದೇ ಎನ್ನುವ ಪ್ರಶ್ನೆಗಳು ಸಮಿತಿಗಳಿಗೆ ಹರಿದು ಬರುತ್ತಿವೆ ಎಂದು ಮೂಲಗಳು ತಿಳಿಸಿವೆ, ಜತೆಗೆ ಕ್ರೀಡಾಂಗಣದ ಗೇಟ್‌ಗಳನ್ನು ಮುಚ್ಚಿ ಸಕಾಲಕ್ಕೆ ಸರಿಯಾಗಿ ಕ್ರಮಕೈಗೊಳ್ಳುವಲ್ಲಿ ಕೆಎಸ್‌ಸಿಎ ವಿಫಲ ವಾಗಿತ್ತೇ ಎನ್ನುವ ಪ್ರಶ್ನೆಗಳು ಕೆಎಸ್‌ಸಿಎ ಕಾರ್ಯದರ್ಶಿ ಶಂಕರ್ ಮತ್ತು ಖಜಾಂಚಿ ಜಯರಾಮ್ ಅವರಿಗೆ ಎದುರಾಗುತ್ತಿವೆ ಎನ್ನಲಾಗಿದೆ.

ಈ ಮೂರು ವಿಚಾರಣಾ ಸಮಿತಿಗಳೂ ಇನ್ನೊಂದು ತಿಂಗಳ ಅವಧಿಯಲ್ಲಿ ಸರಕಾರಕ್ಕೆ ವರದಿ ಸಲ್ಲಿಸುವ ಸಾಧ್ಯತೆ ಇದ್ದು, ಸದ್ಯದ ಮಾಹಿತಿ ಪ್ರಕಾರ ಎಲ್ಲಾ ಸಮಿತಿಗಳ ದಿಕ್ಕು ಡಿಎನ್‌ಎ ಮತ್ತು ಆರ್‌ಸಿಬಿ ಕಡೆ ಸಾಗುತ್ತಿದೆ ಎಂದು ತಿಳಿದುಬಂದಿದೆ.

ಇದರ ಮಧ್ಯೆ, ದುರಂತ ನಡೆಯುತ್ತಿದ್ದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಹೈಕೋರ್ಟ್, ಈಗಾಗಲೇ ಎರಡು ವಿಚಾರಣೆ ನಡೆಸಿದೆ. ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್ ಮತ್ತು ಸಿ.ಎನ್. ಜೋಷಿ ಅವರ ವಿಭಾಗೀಯ ಪೀಠ ದಿಂದ ಪ್ರಕಟವಾಗುವ ತೀರ್ಪಿನ ಅಂಶಗಳ ಬಗ್ಗೆ ಬರೀ ಡಿಎನ್‌ಎ, ಆರ್‌ಸಿಬಿ ಮಾತ್ರವಲ್ಲದೆ ಸರಕಾರದ ಕೆಲವು ಅಧಿಕಾರಿಗಳಿಗೆ ಕೊಂಚ ನಡುಕ ಶುರುವಾಗಿದೆ ಎನ್ನಲಾಗಿದೆ.

ಬಿಇಎಸ್‌ಎಸ್ ಉತ್ಪಾದನಾ ಘಟಕ ಉದ್ಘಾಟನೆ

ದೇಶದಲ್ಲಿ ವಿದ್ಯುತ್ ಸಂಗ್ರಹ ಯೋಜನೆಗೆ 5.44 ಲಕ್ಷ ಕೋಟಿ ಹೂಡಿಕೆ: ಪ್ರಲ್ಹಾದ ಜೋಶಿ

ಬೆಂಗಳೂರು: ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತ ಮಹತ್ವದ ಮೈಲಿಗಲ್ಲು ಸಾಧಿಸುತ್ತಿದ್ದು, ಸೋಲಾರ್-ಬ್ಯಾಟರಿ ವಿದ್ಯುತ್ ಸಂಗ್ರಹ ವ್ಯವಸ್ಥೆ (ಸ್ಟೋರೇಜ್ ಸಿಸ್ಟಮ್) ಕೇಂದ್ರ ಪ್ರಾಮುಖ್ಯತೆ ನೀಡುತ್ತಿದೆ ಎಂದು ಹೊಸ ಮತ್ತು ನವೀಕರಿಸಬಹುದಾದ ಇಂಧನ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಬೆಂಗಳೂರಿನಲ್ಲಿ ಶುಕ್ರವಾರ, ಅತ್ಯಾಧುನಿಕ ಬಿಎಸ್‌ಎಸ್ ಉತ್ಪಾದನಾ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತ ಬಹುದೊಡ್ಡ ಹೆಜ್ಜೆಯಿಟ್ಟಿದ್ದು, ಈಗಾಗಲೇ 230 ಮೆಗಾವ್ಯಾಟ್ ಉತ್ಪಾದನಾ ಹಂತ ದಾಟಿದೆ.

ಗಾಳಿ ಇಲ್ಲದಿರುವಾಗ ಪವನ ವಿದ್ಯುತ್ ಲಭ್ಯವಿರುವುದಿಲ್ಲ. ವಿದ್ಯುತ್ ಬೇಡಿಕೆ ಇದ್ದಾಗ ಗಾಳಿ ಇರುವುದಿಲ್ಲ. ಸೂರ್ಯನ ಪ್ರಖರವಿದ್ದಾಗ ಹಗಲು ಹೆಚ್ಚು ಸೋಲಾರ್ ಶಕ್ತಿ ಉತ್ಪಾದನೆ ಆಗುತ್ತದೆ ಆದರೆ, ಹಗಲು ವಿದ್ಯುತ್ ಬೇಡಿಕೆ ಕಡಿಮೆ ಇರುತ್ತದೆ. ಹೀಗೆ ವಿದ್ಯುತ್ ಉತ್ಪಾದನೆ ಇಲ್ಲದಿರುವ ವೇಳೆ ಬೇಡಿಕೆ ಸರಿದೂಗಿಸಲು ಸರಕಾರ ವಿದ್ಯುತ್ ಸಂಗ್ರಹ ಯೋಜನೆಗೆ ಆದ್ಯತೆ ನೀಡುತ್ತಿದೆ ಎಂದರು.

ವಿದ್ಯುತ್ ಸಂಗ್ರಹಕ್ಕೆ ಆದ್ಯತೆ: ನವೀಕರಿಸಬಹುದಾದ ಇಂಧನ ವಲಯದಲ್ಲಿ ವಿದ್ಯುತ್ ಸ್ಟೋರೇಜ್ ನಮಗೆ ಬಹು ದೊಡ್ಡ ಸವಾಲಾಗಿ ಪರಿಣಮಿಸಿದ್ದರಿಂದ ಸೋಲಾರ್-ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ ಅಳವಡಿಸಲು ಕೇಂದ್ರ ಸರಕಾರ ತೀರ್ಮಾನಿಸಿದೆ.

ಸೂರ್ಯ-ಗಾಳಿ ಇಲ್ಲದ ವೇಳೆ ವಿದ್ಯುತ್ ಪಂಪ್ ಸ್ಟೋರೇಜ್ ವಿದ್ಯುತ್‌ಗೆ ಗಮನ ಹರಿಸಿದ್ದೇವೆ. ಹಗಲು ಹೊತ್ತು ಸೋಲಾರ್‌ನಿಂದ ನೀರು ಮೇಲೆತ್ತಿ, ರಾತ್ರಿ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಲಾಗುತ್ತಿದೆ. 2030ರ ವೇಳೆಗೆ ದೇಶದಲ್ಲಿ ಕನಿಷ್ಠ 50 ಮೆಗಾವ್ಯಾಟ್ ವಿದ್ಯುತ್ ಸಂಗ್ರಹ ಯೋಜನೆ ಹಾಕಿಕೊಂಡಿದ್ದು, ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರವು ಆರಂಭದಲ್ಲಿ 3.70 ಲಕ್ಷ ಕೋಟಿ ನೀಡಿದ್ದು, ಇದೀಗ 5.44 ಲಕ್ಷ ಕೋಟಿ ಒದಗಿಸಿದೆ ಎಂದರು.

ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗುವತ್ತ ದಾಪುಗಾಲಿಟ್ಟ ಭಾರತದಲ್ಲಿ ವಿದ್ಯುತ್ ಬೇಡಿಕೆ ಸಹ ಹೆಚ್ಚಿದೆ, ಅಂತೆಯೇ ವಿದ್ಯುತ್ ಉತ್ಪಾದನೆಯಲ್ಲಿ ಭಾರತ ಪ್ರಗತಿ ಸಾಧಿಸಿದೆ. ಹತ್ತು ವರ್ಷದ ಹಿಂದೆ 240 ಮೆಗಾವ್ಯಾಟ್ ಇದ್ದ ವಿದ್ಯುತ್ ಉತ್ಪಾದನೆ ಈಗ 440 ಮೆಗಾವ್ಯಾಟ್‌ಗೂ ಹೆಚ್ಚು ಉತ್ಪಾದನೆ ಕಾಣುತ್ತಿದೆ.



ಭವಿಷ್ಯದಲ್ಲಿ ಇದನ್ನು ಮತ್ತಷ್ಟು ವೃದ್ಧಿಸಲಾಗುತ್ತದೆ. ಬೆಂಗಳೂರು ಸಮೀಪದ ಬಿಡದಿಯಲ್ಲಿ 5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕ ಆರಂಭಿಸಿದ್ದು, ಕರ್ನಾಟಕಕ್ಕೆ ಇದು ದೊಡ್ಡ ಕೊಡುಗೆಯಾಗಲಿದೆ. ಭಾರತ 2030ರ ವೇಳೆಗೆ 500 ಗಿಗಾವ್ಯಾಟ್ ಸಾಧಿಸುವ ಗುರಿ ಹೊಂದಿದ್ದು, ಈ ನಿಟ್ಟಿನಲ್ಲಿ ಕರ್ನಾಟಕದ ಕೊಡುಗೆ ಸಹ ಗಮನಾರ್ಹವಾಗಿದೆ. ಸುಸ್ಥಿರ ಇಂಧನ ಭವಿಷ್ಯಕ್ಕೆ ದಾರಿ ಮಾಡಿಕೊಡುತ್ತಿದೆ ಎಂದರು.

ರಾಜ್ಯದ ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಹಾಗೂ ಹಿರಿಯ ಅಧಿಕಾರಿಗಳು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಮಾನವನ ಕ್ರೂರತ್ವಕ್ಕೆ ಬಲಿಯಾದ ರಾಷ್ಟ್ರೀಯ ಪ್ರಾಣಿ

ಹುಲಿಯ ಮೇವಿಗೆ ವಿಷವಿಕ್ಕಿದ್ದೇಕೆ?

ಹುಲಿ ಅರಣ್ಯದ ರಾಜ, ಶಕ್ತಿಯ ಸಂಕೇತ, ಧೈರ್ಯದ ಧ್ವನಿ. ಇದಕ್ಕಿಂತಲೂ ಹೆಚ್ಚಾಗಿ, ಹುಲಿ ಪ್ರಕೃತಿಯ ಸಮತೋಲನವನ್ನು ಕಾಯುವ ಒಂದು ಜೀವಂತ ತಂತ್ರಜಾಲದ ಮುಖ್ಯ ಭಾಗ. ಪ್ರಕೃತಿಯ ಆರೋಗ್ಯ, ಅರಣ್ಯಗಳ ಆಯಸ್ಸು ಮತ್ತು ನದಿಗಳ ಹರಿವು ಇವೆಲ್ಲವುಗಳಿಗೂ ಹುಲಿಗಳಿಗೂ ನೇರವಾದ ಸಂಬಂಧ ಹೊಂದಿದೆ. ಅಂತಹ ಪ್ರಾಮುಖ್ಯತೆ ಇರುವ ಹುಲಿಗಳನ್ನು ಚಾಮರಾಜನಗರ ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವಲಯದಲ್ಲಿ ಸಾಯಿಸಿರುವ ಘಟನೆ ಇಡೀ ನಾಡೇ ತಲೆತಗ್ಗಿಸುವಂತೆ ಮಾಡಿದೆ. ಮಲೆ ಮಹದೇಶ್ವರರ ವಾಹನವೆಂದೇ ಪೂಜಿಸುವ ಹುಲಿಯನ್ನು ಬೆಟ್ಟದ ಸನ್ನಿಧಿಯಲ್ಲೇ ಹುಲಿಗಳಿಗೆ ವಿಷ ಹಾಕಿ ಸಾಯಿಸಿರುವುದು ಮನುಷ್ಯನ ಕ್ರೂರತೆಗೆ ಸಾಕ್ಷಿ. 'ಹುಲಿ ಸತ್ತರೆ ಅಡವಿ ಅಳುತ್ತದೆ, ಅಡವಿ ಅತ್ತರೆ ನಾಡೇ ಅಳುತ್ತದೆ' ಎಂಬ ಮಾತು ಹುಲಿಯ ಅಸ್ತಿತ್ವದ ಪ್ರಾಮುಖ್ಯತೆ ತೋರುತ್ತದೆ. ಹಾಗಾದರೆ ಭಾರತದಲ್ಲಿ ಹುಲಿಗಳ ಪ್ರಾಮುಖ್ಯತೆ ಏನು? ಅವುಗಳ ಸಂಖ್ಯೆ ಎಲ್ಲೆಲ್ಲಿ? ಎಷ್ಟೆಷ್ಟಿದೆ? ಎಂಬ ಬಗ್ಗೆ ನೋಡೋಣ.

ಚಂದ್ರಶೇಖರ್ ಚೌಗಲಾ

'ಹುಲಿ'-ಶಕ್ತಿ, ಗರ್ವ ಮತ್ತು ಧೈರ್ಯದ ಪ್ರತೀಕ. ಭಾರತದ ರಾಷ್ಟ್ರಪ್ರಾಣಿ। ವಿಶ್ವ ಪರಿಸರದ ನೆಲೆಗಟ್ಟಿನಲ್ಲಿ ಮುಖ್ಯವಾದ ಪ್ರಾಣಿಯೂ ಹೌದು. ಆದರೆ, 19ನೇ ಶತಮಾನದಿಂದೀಚೆಗೆ ಕುಸಿಯುತ್ತಾ ಸಾಗಿದ ಹುಲಿ ಸಂತತಿ ಇತ್ತೀಚಿನ ಜಾಗತಿಕ ಸಂರಕ್ಷಣೆ ಕ್ರಮಗಳ ಬಳಿಕ ನಿಧಾನವಾಗಿ ಏರಿಕೆ ಕಾಣುತ್ತಿದೆ. ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್ (ಐಯುಸಿಎನ್) ಪ್ರಕಾರ, 20ನೇ ಶತಮಾನದಲ್ಲಿ ವಿಶ್ವದಲ್ಲಿ ಸುಮಾರು 1,00,000 ಹುಲಿಗಳು ಇದ್ದವು. ಆದರೆ, ಇಂದು ಈ ಸಂಖ್ಯೆ 5,000 ರಿಂದ 6,000ರೊಳಗೆ ಕುಸಿದಿದೆ. ಹುಲಿಯ 9 ಪ್ರಭೇದಗಳಲ್ಲಿ ಈಗ ಕೇವಲ 6 ಪ್ರಭೇದದ ಹುಲಿಗಳು ಮಾತ್ರ ಉಳಿದಿವೆ. ಬಾಲಿ ಹುಲಿ, ಜಾವಾ ಹುಲಿ ಮತ್ತು ಕ್ಯಾಸ್ಪಿಯನ್ ಹುಲಿ ಈಗ ನಾಶವಾಗಿದೆ. ಭಾರತವು ವಿಶ್ವದ ಅತಿದೊಡ್ಡ ಹುಲಿಗಳ ಸಂಖ್ಯೆ ಹೊಂದಿರುವ ದೇಶವಾಗಿದ್ದು, 2022ರ ಹುಲಿ ಗಣತಿ ಪ್ರಕಾರ 3,682 ಹುಲಿಗಳಿವೆ. ಇದು ವಿಶ್ವದ ಒಟ್ಟು ಹುಲಿಗಳ ಸಂಖ್ಯೆಯ ಶೇ.75ಕ್ಕೂ ಹೆಚ್ಚು.

ಭಾರತ ಹುಲಿಗಳಿಗೆ ನೆಲೆಬೀಡು

ಭಾರತದಲ್ಲಿ ಹುಲಿ ಸಂರಕ್ಷಣಾ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಬಳಿಕ ಹುಲಿಗಳ ಸಂಖ್ಯೆ ದುಪ್ಪಟ್ಟಾಗಿದೆ. 2006ರಲ್ಲಿ 1411ರಷ್ಟಿದ್ದ ಹುಲಿಗಳ ಸಂಖ್ಯೆ ಈಗ 3682ಕ್ಕೆ ಹೆಚ್ಚಳವಾಗಿರುವುದು ಸಂತೋಷದ ವಿಷಯ. ದೇಶದ ಶಿವಾಲಿಕ್ ಪ್ರದೇಶದಲ್ಲಿ ವ್ಯಾಘ್ರ ಸಂತತಿಯಲ್ಲಿ ಹೆಚ್ಚಳವಾಗಿರುವುದು ಇದಕ್ಕೆ ಕಾರಣ. ಇಷ್ಟಾದರೂ ಕಳ್ಳಬೇಟೆ, ವನ್ಯಜೀವಿ ಸಂಘರ್ಷದ ಕಾರಣಗಳಿಂದ ಆಗಾಗ ಹುಲಿಗಳ ಸಾವಿನ ವರದಿಗಳು ಬರುತ್ತಲೇ ಇವೆ. 2022ರ ಅಖಿಲ ಭಾರತ ಹುಲಿ ಗಣತಿ ಪ್ರಕಾರ ಮಧ್ಯಪ್ರದೇಶ ರಾಜ್ಯದಲ್ಲಿ ಅತ್ಯಧಿಕ ಹುಲಿಗಳಿವೆ. ಕರ್ನಾಟಕ ಮತ್ತು ಉತ್ತರಾಖಂಡ ರಾಜ್ಯಗಳು ನಂತರದ ಸ್ಥಾನದಲ್ಲಿವೆ. ದೇಶದ ಶಿವಾಲಿಕ್ ಪ್ರದೇಶದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡು ಬಂದಿದೆ. ಅಂಕಿ ಅಂಶಗಳ ಪ್ರಕಾರ, 2006ರಲ್ಲಿ ದೇಶದಲ್ಲಿನ ಹುಲಿಗಳ ಸಂಖ್ಯೆ 1,411 ಆಗಿತ್ತು. 2010ರ ಗಣತಿಯಲ್ಲಿ 1,706 ಆಗಿದೆ. 2014ರ ದತ್ತಾಂಶಗಳ ಪ್ರಕಾರ 2,226 ಆಗಿದ್ದರೆ 2018ರಲ್ಲಿ 2,967ಕ್ಕೆ ಏರಿಕೆಯಾಗಿದೆ. 2022ರಲ್ಲಿ ನಡೆಸಿದ್ದ ಗಣತಿಯಲ್ಲಿ 3,682 ಹುಲಿಗಳಿವೆ.

ಹುಲಿಗಳ ಸಾವಿಗೆ ಪ್ರಮುಖ ಕಾರಣಗಳು

- ಅಭಿವೃದ್ಧಿ ಯೋಜನೆಗಳು, ಕೃಷಿಭೂಮಿಯ ವಿಸ್ತರಣೆ ಕಾರಣಗಳಿಂದ ಹುಲಿಗಳು ನೈಸರ್ಗಿಕ ವಾಸಸ್ಥಾನವನ್ನು ಕಳೆದುಕೊಳ್ಳುತ್ತಿದ್ದು, ಮಾನವನ ವಾಸಸ್ಥಾನದತ್ತ ನುಗ್ಗುತ್ತಿವೆ.
- ಹುಲಿಗಳ ಚರ್ಮ, ಎಲುಬು, ಹಲ್ಲು ಔಷಧೀಯ ಮೌಲ್ಯ ಹೊಂದಿದೆ ಎಂದು ನಂಬಲಾಗುತ್ತದೆ. ಪರಿಣಾಮವಾಗಿ ಹುಲಿಗಳ ಕಳ್ಳ ಬೇಟೆ ಜಾಲ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯುತ್ತಿದೆ.
- ಮನುಷ್ಯ ಮತ್ತು ಹುಲಿಗಳ ನಡುವೆ ಭೌಗೋಳಿಕ ಅಂತರ ಕಡಿಮೆಯಾದಂತೆ ಸಂಘರ್ಷಗಳು ಹೆಚ್ಚಾಗುತ್ತಿವೆ. ಆಹಾರಕ್ಕಾಗಿ ಗ್ರಾಮಾಂತರ ಪ್ರದೇಶಕ್ಕೆ ನುಗ್ಗಿದ ಹುಲಿಗಳನ್ನು ಸ್ಥಳೀಯರು ಕೊಲ್ಲುತ್ತಿದ್ದಾರೆ.
- ಹುಲಿಗಳು ಕೂಡ ವೈರಸ್‌ಗಳಿಗೆ ತುತ್ತಾಗಿ ಸಾಯುತ್ತವೆ. ಉದಾಹರಣೆಗೆ, ಕ್ಯಾನೈನ್ ಡಿಸ್ಟೆಂಪರ್ ವೈರಸ್ (ಇಕ್ಷ್ವ) ಎಂಬುದು ಅನೇಕ ಹುಲಿಗಳ ಸಾವಿಗೆ ಕಾರಣವಾಗಿದೆ.

ದೇಶದಲ್ಲಿ ಹುಲಿಗಳ ಸಂಖ್ಯೆ



ರಾಜ್ಯದಲ್ಲಿ ಹೆಚ್ಚಳ



ಯಾವ ಉದ್ಯಾನದಲ್ಲಿ ಎಷ್ಟು ಹುಲಿ?



ರಾಜ್ಯವಾರು ಹುಲಿಗಳ ಸಂಖ್ಯೆ

ರಾಜ್ಯ	ಸಂಖ್ಯೆ
ಬಿಹಾರ	54
ಉತ್ತರಾಖಂಡ	560
ಉತ್ತರ ಪ್ರದೇಶ	205
ಆಂಧ್ರಪ್ರದೇಶ	65
ತೆಲಂಗಾಣ	21
ಛತ್ತೀಸಗಢ	17
ಜಾರ್ಖಂಡ್	1
ಮಧ್ಯಪ್ರದೇಶ	785
ಮಹಾರಾಷ್ಟ್ರ	444
ಒಡಿಶಾ	20
ರಾಜಸ್ಥಾನ	88
ಗೋವಾ	5
ಕರ್ನಾಟಕ	563
ಕೇರಳ	213
ತಮಿಳುನಾಡು	306
ಅರುಣಾಚಲ ಪ್ರದೇಶ	9
ಅಸ್ಸಾಂ	227
ಮಿಜೊರಾಂ	0
ಮೇಘಾಲಯ	0
ಪಶ್ಚಿಮ ಬಂಗಾಳ	2
ಈಶಾನ್ಯ ರಾಜ್ಯಗಳು ಬ್ರಹ್ಮಪುತ್ರ	236
ಸುಂದರಬನ	101

ರಾಜ್ಯದಲ್ಲಿವೆ 563 ಹುಲಿಗಳು

2022ರ ಹುಲಿ ಗಣತಿ ಪ್ರಕಾರ ರಾಜ್ಯದಲ್ಲಿ 563 ಹುಲಿಗಳಿವೆ. ಈ ಪೈಕಿ 393 ಹುಲಿಗಳು ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿವೆ ಎಂದು ರಾಜ್ಯದ ನಾಗರಹೊಳೆ, ಬಂಡೀಪುರ, ಭದ್ರಾ, ಬಿಳಿಗಿರಿ ರಂಗನಾಥ ಸ್ವಾಮಿ ದೇವಸ್ಥಾನ (ಬಿಆರ್‌ಟಿ) ಮತ್ತು ಕಾಳಿ (ದಾಂಡೇಲಿ-ಅಣಶಿ) ಅಭಯಾರಣ್ಯದಲ್ಲಿ 2023ರ ನವೆಂಬರ್ ಮತ್ತು 2024ರ ಫೆಬ್ರವರಿ ಮಧ್ಯೆ ನಡೆಸಿದ ಸಮೀಕ್ಷಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವರ್ಷದಿಂದ ವರ್ಷಕ್ಕೆ ಹುಲಿಗಳ ಸಂಖ್ಯೆ ಕಡಿಮೆ

2014ರಿಂದ ಹುಲಿ ಸಮೀಕ್ಷೆ ಮಾಡಲಾಗುತ್ತಿದ್ದು, ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಅವುಗಳ ಸಂಖ್ಯೆ ಏರಿಕೆಯಾಗಿದೆ. 2019ರಲ್ಲಿ 290 ಇದ್ದ ಹುಲಿಗಳ ಸಂಖ್ಯೆ 2010ರಲ್ಲಿ 300, 2014ರಲ್ಲಿ 406, 2018ರಲ್ಲಿ 524 ಇದ್ದು 2022ರಲ್ಲಿ 563ಕ್ಕೆ ಏರಿಕೆ ಕಂಡು ಬಂದಿದೆ. ಆದರೆ 2018ರಿಂದ 2022ರ ನಡುವೆ ಏರಿಕೆ ಪ್ರಮಾಣ ಅತ್ಯಲ್ಪ ಎನ್ನುವುದು ಗಮನಾರ್ಹ. ಈ ಮಧ್ಯೆ ಮೂರನೇ ಸ್ಥಾನದಲ್ಲಿದ್ದ ಉತ್ತರಾಖಂಡದಂತಹ ರಾಜ್ಯವು ಕರ್ನಾಟಕದ ಸಮೀಪಕ್ಕೆ ಬಂದು ನಿಂತಿದೆ.

4 ವರ್ಷಗಳಿಗೊಮ್ಮೆ ಹುಲಿ ಗಣತಿ

ಭಾರತದಲ್ಲಿ ನಾಲ್ಕು ವರ್ಷಗಳಿಗೊಮ್ಮೆ ಹುಲಿ ಗಣತಿ ನಡೆಸಲಾಗುತ್ತಿದೆ. ದೇಶಾದ್ಯಂತ ಈಗಾಗಲೇ ಐದು ಆವೃತ್ತಿಗಳಲ್ಲಿ ಹುಲಿ ಗಣತಿ ನಡೆದಿದೆ ನಾಲ್ಕು ವರ್ಷದ ಹಿಂದೆ ಅಂದರೆ 2022ರಲ್ಲಿ ಭಾರತಾದ್ಯಂತ ಹುಲಿ ಗಣತಿ ನಡೆಸಲಾಗಿತ್ತು. 2022ರ ಗಣತಿಯಲ್ಲಿ 3,682 ಹುಲಿಗಳಿರುವುದು ಪತ್ತೆಯಾಗಿತ್ತು. ಆರನೇ ಆವೃತ್ತಿಯ ಹುಲಿ ಗಣತಿ ಮುಂದಿನ ವರ್ಷ ನಡೆಯಲಿದೆ, ಹುಲಿ ಗಣತಿ ನಡೆಯುವ ವರ್ಷದ ಮುನ್ನಾ ವರ್ಷ ಅರಣ್ಯ ಇಲಾಖೆ ಅಧಿಕಾರಿಗಳು. ಸಿಬ್ಬಂದಿ, ಸ್ವಯಂ ಸೇವಾ ಸಂಘಟನೆ ಪ್ರಮುಖರು, ಸ್ವಯಂ ಸೇವಕರಿಗೆ ತರಬೇತಿ ನೀಡಲಾಗುತ್ತದೆ. ಅದು ಸದ್ಯದಲ್ಲೇ ಎಲ್ಲ ರಾಜ್ಯಗಳಲ್ಲಿ ಶುರುವಾಗಲಿದೆ.

ಹುಲಿ ಸಾವಿಗೆ ತಡೆ

2010ರಲ್ಲಿ ಜಾಗತಿಕವಾಗಿ ಹುಲಿಗಳ ಸಂಖ್ಯೆ ಸುಮಾರು 3,200 ಇದ್ದದ್ದು 2024ರಲ್ಲಿ ಸುಮಾರು 5,500ಕ್ಕೆ ಏರಿಕೆಯಾಗಿದೆ ಎಂದು ವಿಶ್ವ ವನ್ಯಜೀವಿ ನಿಧಿ (ಡಬ್ಲ್ಯುಡಬ್ಲ್ಯುಎಫ್) ತಿಳಿಸಿದೆ. ಚೀನಾ, ರಷ್ಯಾ, ಭಾರತ ಮತ್ತು ನೇಪಾಳ ಮುಂತಾದ ದೇಶಗಳಲ್ಲಿ ಕೂಡ ಹುಲಿಗಳ ಸಂಖ್ಯೆ ದ್ವಿಗುಣಗೊಂಡಿದೆ ಅದು ಹೇಳಿದೆ. ಜಾಗತಿಕ ಮಟ್ಟದಲ್ಲಿ ಬಿಗಿ ಸಂರಕ್ಷಣೆ ಕ್ರಮಗಳಿಂದ ಹುಲಿಗಳ ಸಾವಿನ ಸಂಖ್ಯೆಯಲ್ಲಿ ಇಳಿಕೆ ಕಂಡು ಬಂದಿದೆ. ಇದರಿಂದ ಕಳೆದ ದಶಕದಲ್ಲಿ ಹುಲಿಗಳ ಸಂಖ್ಯೆ ಏರಿಕೆಯಾಗಿದೆ. ಚೀನಾದಲ್ಲಿ ಕಾಡು ಹುಲಿಗಳ ಆವಾಸಸ್ಥಾನಗಳನ್ನು ಪರಿಣಾಮಕಾರಿಯಾಗಿ ಪುನಃಸ್ಥಾಪಿಸಲಾಗಿದೆ ಮತ್ತು ಸುಧಾರಿಸಲಾಗಿದೆ. ಇದು ಕಾಡು ಹುಲಿಗಳ ಸಂಖ್ಯೆಯಲ್ಲಿ ಕ್ರಮೇಣ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಡಬ್ಲ್ಯುಡಬ್ಲ್ಯುಎಫ್ ತಿಳಿಸಿದೆ.

ಹುಲಿಯ ಪ್ರಾಮುಖ್ಯತೆ

ಹುಲಿ ಪ್ರಕೃತಿಯ ಸಮತೋಲನ ಕಾಯುವ ಅತ್ಯಂತ ಪ್ರಮುಖ ಪ್ರಾಣಿ. ಇದು ಅರಣ್ಯದ ಶೃಂಖಲಾ ಶಿಖರ ಮೃಗವಾಗಿದ್ದು, ಆಹಾರ ಸರಪಳಿಯ ತುದಿಯಲ್ಲಿ ಇರುತ್ತದೆ. ಹುಲಿ ಇದ್ದರೆ ಅದು ಜಿಂಕೆ, ಕಾಡೆಮ್ಮೆ ಮುಂತಾದ ಹುಲ್ಲು ತಿನ್ನುವ ಪ್ರಾಣಿಗಳನ್ನು ನಿಯಂತ್ರಿಸುತ್ತದೆ. ಇವು ನಿಯಂತ್ರಣದಲ್ಲಿದ್ದರೆ ಮಾತ್ರ ಅರಣ್ಯದ ಹಸಿರು ಉಳಿಯುತ್ತದೆ. ಈ ಮೂಲಕ ಹುಲಿ ನೇರವಾಗಿ ಅರಣ್ಯ ಸಂರಕ್ಷಣೆಗೆ ಕಾರಣವಾಗುತ್ತದೆ. ಒಟ್ಟಾರೆ ಹುಲಿ ಅರಣ್ಯದ ಆರೋಗ್ಯವನ್ನು ಪ್ರತಿಬಿಂಬಿಸುವ ಸೂಚಕ. ಹುಲಿ ಉಳಿದರೆ ಅಡವಿಯ ಜೀವಜಾಲವೂ ಉಳಿಯುತ್ತದೆ. ಅರಣ್ಯ ಉಳಿದರೆ ನದಿಗಳು ಹರಿಯುತ್ತವೆ, ಮಳೆ ಸಮತೋಲನದಲ್ಲಿರುತ್ತದೆ, ಜೈವವೈವಿಧ್ಯತೆ ಕಾಪಾಡಲ್ಪಡುತ್ತದೆ. ಹೀಗಾಗಿ ಹುಲಿಯೆಂದರೆ ಕೇವಲ ಒಂದು ಪ್ರಾಣಿ ಅಲ್ಲ, ಅದು ಪ್ರಕೃತಿಯ ಜೀವಂತ ಸಂಕೇತ.

ಟಾಪ್ 10 ರಾಜ್ಯಗಳು

ಈ ಹಿಂದೆ ಹುಲಿ ಮತ್ತು ಆನೆಗಳ ಸಂತತಿಯಲ್ಲಿ ಕರ್ನಾಟಕವೇ ಪ್ರಥಮ ಸ್ಥಾನದಲ್ಲಿತ್ತು. ಆದರೆ ಕಳೆದ ಎರಡು ಬಾರಿಯ ಜನಗಣತಿಯಲ್ಲಿ ದೇಶದಲ್ಲೇ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ರಾಜ್ಯಗಳ ಪೈಕಿ ಮಧ್ಯಪ್ರದೇಶ ಅಗ್ರ ಸ್ಥಾನದಲ್ಲಿದೆ. ಇಲ್ಲಿನ ವಿಸ್ತಾರವಾದ ಕಾಡುಗಳು ಹುಲಿಗಳ ವಾಸಕ್ಕೆ ಯೋಗ್ಯವಾಗಿದ್ದು, ಇಲ್ಲಿ ಒಟ್ಟು 785 ಹುಲಿಗಳಿವೆ. ಎರಡನೇ ಸ್ಥಾನದಲ್ಲಿ ಕರ್ನಾಟಕ ಇದ್ದು, ಒಟ್ಟು 563 ಹುಲಿಗಳಿವೆ. ಇಲ್ಲಿನ ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಹುಲಿಗಳಿಗೆ ವಾಸಯೋಗ್ಯ ಸ್ಥಾನವಾಗಿವೆ. ಉತ್ತರಾಖಂಡ ಮೂರನೇ ಸ್ಥಾನದಲ್ಲಿದ್ದರೆ, ನಾಲ್ಕನೇ ಸ್ಥಾನದಲ್ಲಿ ಮಹಾರಾಷ್ಟ್ರ, ಐದನೇ ಸ್ಥಾನದಲ್ಲಿ ತಮಿಳುನಾಡು, ಆರನೇ ಸ್ಥಾನದಲ್ಲಿ ಕೇರಳ, 7ನೇ ಸ್ಥಾನದಲ್ಲಿ ಅಸ್ಸಾಂ, 8ನೇ ಸ್ಥಾನದಲ್ಲಿ ರಾಜಸ್ಥಾನ, 9ನೇ ಸ್ಥಾನದಲ್ಲಿ ಒಡಿಶಾ, 10ನೇ ಸ್ಥಾನದಲ್ಲಿ ಛತ್ತೀಸಗಢ ಇದೆ.

▸ ಗಡಿ ನಗರದಲ್ಲಿ ಅಪರಾಧಗಳ ಸರಣಿ ▸ ಹಳಿ ತಪ್ಪಿದೆಯೇ ಕಾನೂನು ಸುವ್ಯವಸ್ಥೆ?
▸ ಚಾಕು ಇರಿತ ನಿಯಂತ್ರಣಕ್ಕೆ ಸ್ಕ್ವಾಡ್ ▸ ತಡೆಯಲಾಗಿಲ್ಲ ಡ್ರಗ್ಸ್ ದಂಧೆ ಹಾವಳಿ

ಕುಂದಾ ನಗರಿಗೆ ಡ್ರಗ್ಸ್ ದಂಧೆ ಕಳಂಕ

ಜಿಲ್ಲಾ ನೋಟ

ವಿನಾಯಕ ಮಠಪತಿ, ಬೆಳಗಾವಿ

ಕಳೆದ ಕೆಲ ತಿಂಗಳಿನಿಂದ ಬೆಳಗಾವಿ ನಗರದಲ್ಲಿ ಅಪರಾಧ ಕೃತ್ಯಗಳು ಎಗ್ಗಿಲ್ಲದೆ ಸಾಗಿವೆ. ಅತ್ಯಾಚಾರ, ಕೊಲೆ, ಸುಲಿಗೆ ಸೇರಿದಂತೆ ಕ್ಷುಲ್ಲಕ ಕಾರಣಕ್ಕೂ ಪ್ರಾಣ ತಗೆಯುವ ಮಟ್ಟಿಗೆ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಹದಗೆಟ್ಟ ಕಾನೂನು ಸುವ್ಯವಸ್ಥೆ ಸರಿದಾರಿಗೆ ತರಲು ಹಿಂದಿನ ಬೆಳಗಾವಿ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಅವರನ್ನು ಎತ್ತಂಗಡಿ ಮಾಡಿ ಗೃಹ ಇಲಾಖೆ ಆದೇಶ ಹೊರಡಿಸಿತ್ತು.

ಸರಣಿ ಅತ್ಯಾಚಾರ: ನಿರಂತರ ಅಪರಾಧ ಕೃತ್ಯಗಳಿಂದ ನಗರ ಪ್ರದೇಶದ ಜನ ಭಯದಿಂದ ಜೀವನ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಸರಣಿ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತಾಗಿತ್ತು. ಸದ್ಯ ನಗರ ಪೊಲೀಸ್ ಆಯುಕ್ತರಾಗಿ

ಭೂಷಣ ಗುಲಾಬರಾವ್ ಬೊರಸೆ ಅವರು ಅಧಿಕಾರ ಸ್ವೀಕರಿಸಿದ ನಂತರ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಕಷ್ಟು ಬದಲಾವಣೆ ತಂದಿದ್ದು ಜನ ನೆಮ್ಮದಿ ನಿಟ್ಟುಸಿರು ಬಿಡುವಂತಾಗಿದೆ.

ಚಾಕು ಇರಿತಕ್ಕೆ ಬ್ರೇಕ್: ಬೆಳಗಾವಿ ನಗರ ಪ್ರದೇಶದಲ್ಲಿ ಅಪ್ರಾಪ್ತರಿಂದ ಹಿಡಿದು ಪುಂಡರಿಗೆ ಕಾನೂನಿನ ಭಯ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಾರಕಾಸ್ತ್ರ ಹಿಡಿದು ಎಲ್ಲೆಂದರಲ್ಲಿ ಹಲ್ಲೆ ಮಾಡುವ ಪ್ರಕರಣಗಳು ಹೆಚ್ಚಾಗಿದ್ದವು. ಇದಕ್ಕೆಲ್ಲ ನೂತನ ಪೊಲೀಸ್ ಆಯುಕ್ತರು ಒಂದು ಹಂತದ ಬ್ರೇಕ್ ಹಾಕಿದ್ದಾರೆ. ಇರಿತ ನಿಯಂತ್ರಣ ತಂಡ (ಆಂಟಿ ಸ್ಟಾಬಿಂಗ್ ಸ್ಕ್ವಾಡ್) ರಚಿಸಿದ್ದು, ಅನುಮಾನ ಕಂಡುಬಂದಲ್ಲಿ ಅಂತಹ ವ್ಯಕ್ತಿಗಳ ಕಂಪ್ಲೀಟ್ ಪರಿಶೀಲನೆ ನಡೆದಿದೆ. ಈಗಾಗಲೇ ಈ ದಳ ನಗರದಾದ್ಯಂತ ಕಾರ್ಯಾಚರಣೆ ನಡೆಸಿದ್ದು, ಅಪರಾಧ ಕೃತ್ಯಗಳು ಕಂಟ್ರೋಲ್‌ಗೆ ಬಂದಿವೆ.

ಸ್ಕ್ವಾಡ್ ಹದ್ದಿನಕಣ್ಣು: ಬೆಳಗಾವಿ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 12 ಪೊಲೀಸ್ ಠಾಣೆಗಳಿದ್ದು, ಪ್ರತಿ ಪೊಲೀಸ್ ಠಾಣೆಯಲ್ಲಿ ಒಂದೊಂದು ಇರಿತ ನಿಯಂತ್ರಣ ತಂಡ ರಚಿಸಲಾಗಿದೆ. ಈ ತಂಡದಲ್ಲಿ ಆರು ಸಿಬ್ಬಂದಿ ಇರಲಿದ್ದು, ಅವರು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಮಾರುಕಟ್ಟೆ ಪ್ರದೇಶ, ಶಾಲಾ-ಕಾಲೇಜು ಸೇರಿ ಜನರಿರುವ ಪ್ರದೇಶಗಳಲ್ಲಿ ಸಂಶಯಾಸ್ಪದವಾಗಿ ಓಡಾಡುವವರನ್ನು ತಪಾಸಣೆ ನಡೆಸಲಿದ್ದಾರೆ. ಅಲ್ಲದೇ ವಾಹನಗಳನ್ನೂ ಪರೀಕ್ಷಿಸಲಿದ್ದಾರೆ.

ಪುಂಡಾಟಕ್ಕೆ ಕೇಸ್ ಪಕ್ಕಾ: ಮದ್ಯ ಸೇರಿದಂತೆ ಮಾದಕ ವಸ್ತು ಸೇವಿಸಿ ನಗರ ಪ್ರದೇಶದಲ್ಲಿ ಪುಂಡಾಟ ಮೆರೆದರೆ ಕಾನೂನು ರೀತಿಯಲ್ಲಿ ಪೊಲೀಸರು ಕ್ರಮಕ್ಕೆ ಮುಂದಾಗಲಿದ್ದಾರೆ. ಪುಂಡಾಟ ಮೆರೆಯುವವರ ವೀಡಿಯೋ ದಾಖಲೆ ಸಮೇತ ಪ್ರಕರಣ ದಾಖಲಿಸಿಕೊಂಡು ಕ್ರಮಕ್ಕೆ ಮುಂದಾಗುತ್ತೇವೆ ಎಂದು ನಗರ ಪೊಲೀಸ್ ಆಯುಕ್ತರು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಮುಜುಗರದ ಪ್ರಕರಣ: ಕಳೆದ ವರ್ಷದಿಂದ ಬೆಳಗಾವಿ ನಗರದಲ್ಲಿ ಸಂಭವಿಸಿದ ಕೆಲ ಬೆಳವಣಿಗೆಗಳಿಂದ ಸ್ವತಃ ಮುಖ್ಯಮಂತ್ರಿಗಳೇ ಮುಜುಗರ ಅನುಭವಿಸುವಂತಾಗಿದೆ. ಕಳೆದ ಚಳಿಗಾಲ ಅಧಿವೇಶನ ಸಂದರ್ಭ ದಲ್ಲಿ ನಡೆದಿದ್ದ ಸಿ.ಟಿ ರವಿ ಪ್ರಕರಣ ಹಾಗೂ ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಭಾಷಣ ವೇಳೆ ಉಂಟಾದ ಗಲಾಟೆ ಪ್ರಕರಣದಿಂದ ಸರಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಹಿರಿಯ ಅಧಿಕಾರಿಗಳು ಮಾಡಿದ್ದ ಎಡವಟ್ಟಿನ ನಿರ್ಧಾರದಿಂದ ಸರಕಾರಕ್ಕೆ ಸಾಕಷ್ಟು ಮುಜುಗರವಾಗಿತ್ತು. ಇದೇ ಕಾರಣಕ್ಕೆ ಸರಕಾರ ಬೆಳಗಾವಿ ನಗರ ಪೊಲೀಸ್ ಆಯುಕ್ತರನ್ನು ಎತ್ತಂಗಡಿ ಮಾಡಿತು.

ಕುರಾನ್ ಸುಟ್ಟ ಪ್ರಕರಣ: ಬೆಳಗಾವಿ ತಾಲೂಕಿನ ಸಂತಿಬಸ್ತವಾಡ ಗ್ರಾಮದ ಮಸೀದಿಯಲ್ಲಿ ಕುರಾನ್ ಕದ್ದೊಯ್ದು ಪಕ್ಕದ ಜಮೀನಿನಲ್ಲಿ ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಯಾವ ಹಂತಕ್ಕೆ ಬಂದು ನಿಂತಿದೆ ಎಂಬುದು ಅಸ್ಪಷ್ಟ. ಸರಕಾರ ಈ ಪ್ರಕರಣದ ತನಿಖೆಯನ್ನು ಸಿಐಡಿ ಹೆಗಲಿಗೆ ನೀಡಿದ್ದರೂ ತಪ್ಪಿತಸ್ಥರನ್ನು ಹುಡುಕಿ ಶಿಕ್ಷೆ ನೀಡಲು ಯಾಕಿಷ್ಟು ವಿಳಂಬ ಎಂಬುದು ಸಾರ್ವಜನಿಕರ ಪ್ರಶ್ನೆ. ಈ ಪ್ರಕರಣದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ದ್ವಂದ್ವ ನಿಲುವು ಸ್ಪಷ್ಟವಾಗಿ ಗೋಚರಿಸಿದರೂ ಸತ್ಯಾಸತ್ಯತೆ ಹೊರಬರುತ್ತಿಲ್ಲ ಏಕೆ ಎಂಬುದು ಸ್ಪಷ್ಟವಾಗುತ್ತಿಲ್ಲ.

ಡ್ರಗ್ಸ್ ಕಂಟ್ರೋಲ್ ಕತೆ: ಬೆಳಗಾವಿ ಮಹಾನಗರದಲ್ಲಿ ಮಾದಕ ವಸ್ತುಗಳ ಸಾಗಣೆ ಹಾಗೂ ಸೇವನೆ ತಡೆಗಟ್ಟುವಲ್ಲಿ ನಗರದ ಪೊಲೀಸರು ವಿಫಲರಾಗಿದ್ದಾರೆ ಎಂದು ಬೆಳಗಾವಿಯ ಜನತೆ ಆರೋಪಿಸುತ್ತಿದ್ದಾರೆ. ಅಪ್ರಾಪ್ತ ವಯಸ್ಕರಲ್ಲಿ ಮಾದಕ ವಸ್ತುಗಳ ಸೇವನೆ ಜೋರಾಗಿದ್ದು ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ನಗರದಲ್ಲಿ ಹೆಚ್ಚುತ್ತಿರುವ ಈ ಡ್ರಗ್ಸ್ ದಂಧೆ ಹಾವಳಿ, ಈ ಡ್ರಗ್ಸ್ ವ್ಯಸನಿಗಳಾ ಗುತ್ತಿರುವವರನ್ನು ನಿಯಂತ್ರಿಸದೇ ಹೋದರೇ ಅಪರಾಧ ಕೃತ್ಯಗಳನ್ನು ತಡೆಗಟ್ಟುವುದು ಕಷ್ಟಸಾಧ್ಯ. ಹಾಗಾಗಿ ಬೆಳಗಾವಿ ಜಿಲ್ಲಾ ಪೊಲೀಸ್ ಇಲಾಖೆ ಈ ಮಾದಕ ವಸ್ತುಗಳ ಲೋಕದ ಬಗ್ಗೆ ನಿರಂತರ ಹದ್ದಿನ ಕಣ್ಣಿಡಬೇಕೆಂದು ನಾಗರಿಕರು ಹೇಳುತ್ತಾರೆ. ಹಾಗೇ ಒತ್ತಾಯಿಸುತ್ತಾರೆ ಕೂಡ ಈ ಕುಂದಾ ನಗರಿಯ ಜನತೆ.

▸ ಎನ್‌ಸಿಆರ್‌ಟಿಸಿಯಿಂದ ಪ್ರಸ್ತಾವನೆ ▸ ನಾಲ್ಕು ಕಾರಿಡಾರ್‌ಗಳಿಗೆ ಯೋಜನೆ
▸ ಶೀಘ್ರ ಡಿಪಿಆರ್ ಸಲ್ಲಿಸಲು ಸಿದ್ಧತೆ ▸ ಮೆಟ್ರೋಗಿಂತ ಭಿನ್ನ 'ನಮೋ ಭಾರತ್'

ರಾಜಧಾನಿಗಿನ್ನು ಜಿಲ್ಲಾ ಕೇಂದ್ರ ಹತ್ತಿರ

ಜಿಲ್ಲಾ ನೋಟ

ಕೆ.ಎಸ್.ಮಂಜುನಾಥ ರಾವ್, ಕೋಲಾರ

ಕೋಲಾರ ಜಿಲ್ಲಾ ಕೇಂದ್ರದಿಂದ ರಾಜಧಾನಿ ಬೆಂಗಳೂರಿಗೆ ನೇರ ರೈಲ್ವೆ ಸಂಪರ್ಕದ ದಶಕಗಳ ಬೇಡಿಕೆಯನ್ನು ಈಡೇರಿಸಲು ರಾಷ್ಟ್ರೀಯ ರಾಜಧಾನಿ ಪ್ರದೇಶ ಸಾರಿಗೆ ನಿಗಮ ಮುಂದಾಗಿದೆ. ದೆಹಲಿ, ಹರಿಯಾಣ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ರಾಜ್ಯಗಳ ಜಂಟಿ ಉದ್ಯಮ ಕಂಪನಿಯಾಗಿರುವ ಎನ್‌ಸಿಆರ್‌ಟಿಸಿಯು ಇದೀಗ ಕರ್ನಾಟಕದ ರಾಜಧಾನಿ ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳನ್ನು ಸಂಪರ್ಕಿಸುವ ವೇಗದ ರೈಲುಗಳನ್ನು ಅಳವಡಿಸಲು ಯೋಜನೆ ರೂಪಿಸಿದ್ದು, ಪ್ರಸ್ತಾಪನೆಯನ್ನು ತನ್ನ ವೆಬ್ ಸೈಟ್‌ನಲ್ಲಿ ಪ್ರಕಟಿಸಿದೆ.

ಹೊಸ ವಿನ್ಯಾಸದ ರೈಲು: ಆಧುನಿಕತೆಗೆ ತಕ್ಕಂತೆ ವೇಗದ ಸುರಕ್ಷಿತ ಅರಾಮದಾಯಕ ಹಾಗೂ ವಿಶ್ವಾಸಾರ್ಹ ಮಾದರಿಯಲ್ಲಿ ಹೊಸ ವಿನ್ಯಾಸದ ನಮೋ ಭಾರತ್ ರೈಲುಗಳ ಸೌಲಭ್ಯವನ್ನು ಕಲ್ಪಿಸುವ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸುವುದು ಎನ್‌ಸಿಆರ್‌ಟಿಸಿ ಮುಖ್ಯ ಉದ್ದೇಶವಾಗಿದೆ.

ನಮೋ ಭಾರತ್ ಮೆಟ್ರೋಗಿಂತ ಭಿನ್ನವಾಗಿದೆ. ಏಕೆಂದರೆ ಇದು ಕಡಿಮೆ ನಿಲ್ದಾಣಗಳು ಮತ್ತು ಹೆಚ್ಚಿನ ವೇಗದಲ್ಲಿ ತುಲನಾತ್ಮಕವಾಗಿ ಹೆಚ್ಚು ದೂರ ಪ್ರಯಾಣಿಸಲು ಬಯಸುವ ಪ್ರಯಾಣಿಕರ ನಿರೀಕ್ಷೆಗಳನ್ನು ಪೂರೈಸುತ್ತದೆ. ಸಂಪ್ರದಾಯಿಕ ರೈಲಿಗಿಂತಲೂ ಇದು ಭಿನ್ನವಾಗಿದ್ದು, ಪ್ರಾದೇಶಿಕ ಪ್ರಯಾಣವನ್ನು ಮೀಸಲಾದ ಮಾರ್ಗದಲ್ಲಿ ಹೆಚ್ಚಿನ ವೇಗದಲ್ಲಿ ಹೆಚ್ಚಿನ ಆವರ್ತನದಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತದೆ.

ಎಲ್ಲೆಲ್ಲಿ ನಮೋ ಭಾರತ್: ನಮೋ ಭಾರತ್ ರೈಲನ್ನು 180 ಕಿಮೀ ವೇಗದಲ್ಲಿ ಸಂಚರಿಸುವಂತೆ ವಿನ್ಯಾಸಗೊಳಿಸಲಾಗುತ್ತದೆ. ಕಾರ್ಯಾಚರಣೆಯ ವೇಗ 160 ಕಿ.ಮೀಗಳಾಗಿರುತ್ತದೆ. ಸರಾಸರಿ ವೇಗ 85 ರಿಂದ 90 ಕಿ.ಮೀ ಆಗಿರುತ್ತದೆ. ನಮೋ ಭಾರತ್ ಹಂತ 1ರ ಅಡಿಯಲ್ಲಿ ಕಾರಿಡಾರ್‌ಗಳನ್ನು ದೆಹಲಿ - ಗಾಜಿಯಾಬಾದ್-ಮೀರತ್ ಕಾರಿಡಾರ್, ದೆಹಲಿ-ಗುರುಗ್ರಾಮ್, ಎಸ್‌ಎನ್‌ಬಿ - ಅಲ್ವಾರ್ ಕಾರಿಡಾರ್, ದೆಹಲಿ-ಪಾಣಿಪತ್ - ಕರ್ನಾಲ್ ಕಾರಿಡಾರ್ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇದಲ್ಲದೆ ದೆಹಲಿ ಸುತ್ತಮುತ್ತಲಿನ ಮತ್ತಷ್ಟು ನಗರಗಳಿಗೆ ಸಂಪರ್ಕ ಕಲ್ಪಿಸುವ 2032 ನೇ ಯೋಜನೆಯನ್ನು ಗುರಿಯಾಗಿಸಿಕೊಂಡು ಎನ್‌ಸಿಆರ್‌ಟಿಸಿ ಮುಂದಾಗಿದೆ.

ನಾಲ್ಕು ದಿಕ್ಕಿಗೆ ನಾಕು ರೈಲು: ರಾಷ್ಟ್ರ ರಾಜಧಾನಿ ದೆಹಲಿಯ ನಂತರ ಬೆಂಗಳೂರಿನತ್ತ ದೃಷ್ಟಿ ಹರಿಸಿರುವ ಎನ್‌ಸಿಆರ್‌ಟಿಸಿ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರಿನಿಂದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕಾರಿಡಾರ್‌ಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಿದೆ. ಈ ಕುರಿತು ತನ್ನ ವೆಬ್‌ಸೈಟ್‌ನಲ್ಲಿ ಪ್ರಸ್ತಾವನೆಯನ್ನು ಪ್ರಕಟಿಸಿರುವ ಎನ್‌ಸಿಆರ್‌ಟಿಸಿಯು ಬೆಂಗಳೂರು-ಹೊಸಕೋಟೆ-ಕೋಲಾರ ನಡುವಿನ 65 ಕಿ.ಮೀ, ಸುಮಾರು 85 ವೇಗದಲ್ಲಿ 46 ನಿಮಿಷಗಳ ಅಂದಾಜು ಪ್ರಯಾಣ, ಬೆಂಗಳೂರು ಮೈಸೂರು ನಡುವಿನ 145 ಕಿ.ಮೀ, 102 ನಿಮಿಷಗಳ ಪ್ರಯಾಣ, ಬೆಂಗಳೂರು- ತುಮಕೂರು 60 ಕಿ.ಮೀ ಸುಮಾರು 42 ನಿಮಿಷ ಪ್ರಯಾಣ ಮತ್ತು ಬೆಂಗಳೂರು- ತಮಿಳುನಾಡಿನ ಹೊಸೂರು - ಕೃಷ್ಣಗಿರಿ - ಧರ್ಮಪುರಿ 138 ಕಿ.ಮೀ ಸುಮಾರು 97 ನಿಮಿಷಗಳ ಪ್ರಯಾಣ ಅಂದಾಜಿಸಲಾಗಿದೆ.

45 ನಿಮಿಷಕ್ಕೆ 100 ಕಿ.ಮೀ: ವಿಶ್ವದರ್ಜೆಯ ನಮೋ ಭಾರತ್ ರೈಲುಗಳು ರಾಜಧಾನಿಯಿಂದ ಸುತ್ತಮುತ್ತಲಿನ ಜಿಲ್ಲಾ ಕೇಂದ್ರಗಳನ್ನು ವೇಗವಾಗಿ ಸಂಪರ್ಕಿಸುತ್ತವೆ. ಈ ಮೂಲಕ ಸುರಕ್ಷಿತ ಹಾಗೂ ವೇಗದ ಪ್ರಯಾಣವನ್ನು ಪುರಸ್ಕರಿಸುತ್ತದೆ. ಪ್ರತಿ 15 ನಿಮಿಷಕ್ಕೊಮ್ಮೆ ಮೆಟ್ರೋ ಮಾದರಿಯಲ್ಲಿ ನಿಯಮಿತವಾಗಿ ಆವರ್ತನ ಸ್ಥಿತಿಯಲ್ಲಿ ಸಂಚರಿಸುತ್ತದೆ. ತಡೆರಹಿತವಾಗಿ ಪ್ರತಿ 45 ರಿಂದ 50 ನಿಮಿಷಗಳಿಗೆ 100 ಕಿ.ಮೀ ಪ್ರಯಾಣವನ್ನು ಕ್ರಮಿಸುತ್ತದೆ. ಮಾರ್ಗದ ನಗರ ಮತ್ತು ಪಟ್ಟಣಗಳ ಎಲ್ಲಾ ವರ್ಗದ ಪ್ರಯಾಣಿಕರ ಅಗತ್ಯಗಳನ್ನು ಪೂರೈಸುವಂತೆ ಪ್ರಯಾಣ ದರವನ್ನು ಸೌಲಭ್ಯಗಳನ್ನು ವಿನ್ಯಾಸಗೊಳಿಸಲಾಗುತ್ತದೆ. ಹಾಲಿ ಇರುವ ರೈಲ್ವೆ ನಿಲ್ದಾಣಗಳು, ಮೆಟ್ರೋ ನಿಲ್ದಾಣಗಳು, ವಿಮಾನ ನಿಲ್ದಾಣಗಳನ್ನು ಜೋಡಿಸುವ ತಡೆರಹಿತ ಬಹು ಮಾದರಿ ಏಕೀಕರಣ ಪ್ರಯಾಣ ವ್ಯವಸ್ಥೆಯನ್ನು ಎನ್‌ಸಿಆರ್‌ಟಿಸಿ ಖಚಿತಪಡಿಸುತ್ತದೆ.

ರಾಜ್ಯಕ್ಕೆ ಆಹ್ವಾನ: ರಾಜ್ಯದಲ್ಲಿ ಬೆಂಗಳೂರು ಕೇಂದ್ರವಾಗಿಟ್ಟುಕೊಂಡು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಕಾರಿಡಾರ್ ಹಮ್ಮಿಕೊಳ್ಳುವ ಕುರಿತು ಎನ್‌ಸಿಆರ್‌ಟಿಸಿ ರಾಜ್ಯ ಸರಕಾರಕ್ಕೆ ಪ್ರಸ್ತಾಪನೆ ಸಲ್ಲಿಸಿದೆ. ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳಲ್ಲಿರುವ ಕೈಗಾರಿಕಾ ಪ್ರದೇಶಗಳ ಪೂರ್ಣ ಲಾಭವನ್ನು ವಿಳಂಬಿತ ಸಾರಿಗೆ ಸಂಪರ್ಕದಿಂದ ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳಲಾಗುತ್ತಿಲ್ಲ, ಆದ್ದರಿಂದ ಎನ್‌ಸಿಆರ್‌ಟಿಸಿ ಈ ಸಮಸ್ಯೆಗೆ ವರದಾನವಾಗಲಿದೆ ಎಂದು ರಾಜ್ಯಕ್ಕೆ ಎನ್‌ಸಿಆರ್‌ಟಿಸಿ ಮನವರಿಕೆ ಮಾಡಿಕೊಟ್ಟಿದೆ.

ಸಕಾರಾತ್ಮಕ ಸ್ಪಂದನ: ಈಗಾಗಲೇ ದೆಹಲಿ ಸುತ್ತಮುತ್ತ 2023 ರಿಂದ ಸಂಚರಿಸುತ್ತಿರುವ ನಮೋ ಭಾರತ್ ರೈಲ್ವೆ ಕಾರ್ಯಾಚರಣೆಯನ್ನು ಅಧ್ಯಯನ ಮಾಡುವಂತೆ ಎನ್‌ಸಿಆರ್‌ಟಿಸಿ ರಾಜ್ಯದ ಅಧಿಕಾರಿಗಳಿಗೆ ಆಹ್ವಾನ ನೀಡಿದೆ. ರಾಜ್ಯ ಸರಕಾರ ಎನ್‌ಸಿಆರ್‌ಟಿಸಿ ಆಹ್ವಾನವನ್ನು ಸಕಾರಾತ್ಮಕವಾಗಿ ಸ್ಪಂದಿಸಿದರೆ, ಶೀಘ್ರವೇ ಡಿಪಿಆರ್ ಸಿದ್ಧವಾಗಲಿದೆ. ಪ್ರತಿ ಕಿ.ಮೀ ಸೆಮಿ ಹೈಸ್ಪೀಡ್ ರೈಲುಗಳ ಅನುಷ್ಠಾನಕ್ಕೆ 300 ರಿಂದ 350 ಕೋಟಿ ವೆಚ್ಚವಾಗಲಿದೆಯೆನ್ನಲಾಗುತ್ತಿದೆ. ಕರ್ನಾಟಕದ ನಾಲ್ಕು ಕಾರಿಡಾರ್ ಯೋಜನೆಗಳಿಗೆ ವೆಚ್ಚವಾಗುವ ಹಣವನ್ನು ಶೇ.60 ರಷ್ಟು ಬಹು ಸಂಸ್ಥೆಗಳಿಂದ, ಶೇ.20 ಕೇಂದ್ರ ಸರಕಾರ ಹಾಗೂ ಶೇ.20 ರಾಜ್ಯ ಸರಕಾರ ಭರಿಸಲು ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

ಕೋಲಾರಕ್ಕೆ ವರದಾನ: ಕೋಲಾರದಿಂದ ಬೆಂಗಳೂರಿಗೆ ನೇರ ರೈಲ್ವೆ ಸಂಪರ್ಕದ ಕನಸು ಈ ಯೋಜನೆಯಿಂದ ನನಸಾಗಲಿದೆಯೆಂದು ಹೇಳಲಾಗುತ್ತಿದೆ. ಏಕೆಂದರೆ, ಬೆಂಗಳೂರು ಕಡಪಾ ನಡುವಿನ ರೈಲ್ವೆ ಮಾರ್ಗ ವಿಸ್ತರಣೆಯು ಕೋಲಾರ, ಮುಳಬಾಗಿಲು ಮೂಲಕ ಹಾದು ಹೋಗಬೇಕಾಗಿದ್ದು ವಿಳಂಬಗತಿಯಲ್ಲಿ ನನೆಗುದಿಗೆ ಬಿದ್ದಿದೆ. ಈಗಾಗಲೇ ಚೆನ್ನೈ ಮತ್ತು ಮೈಸೂರು ನಡುವಿನ ಹೈಸ್ಪೀಡ್ ಬುಲೆಟ್ ರೈಲು ಮಾರ್ಗದ ಪ್ರಸ್ತಾಪನೆ ಅನುಷ್ಠಾನ ಹಂತದಲ್ಲಿದೆ.

ಕೋಲಾರ ಬಂಗಾರಪೇಟೆ ಸಮೀಪದ ಹುದುಕುಳದಲ್ಲಿ ನಿಲ್ದಾಣ ಮಾಡುವ ಉದ್ದೇಶವೂ ಇದೆ. ಕೋಲಾರಕ್ಕೆ ಬೆಂಗಳೂರಿನ ಮೆಟ್ರೋ ವಿಸ್ತರಿಸಬೇಕು ಎಂಬ ಬೇಡಿಕೆ ಇರುವಾಗಲೇ ನಮೋಭಾರತ್ ರೈಲು ತಾನಾಗಿಯೇ ರಾಜ್ಯ ಸರಕಾರಕ್ಕೆ ಪ್ರಸ್ತಾಪನೆ ಸಲ್ಲಿಸಿ ಬೆಂಗಳೂರು - ಕೋಲಾರ ನಡುವೆ ನಮೋ ಭಾರತ್ ರೈಲು ಸಂಚರಿಸಲು ಕೋರಿರುವುದು ಮುಂದಿನ ವರ್ಷಗಳಲ್ಲಿ ಕೋಲಾರ ಜಿಲ್ಲೆ ಜನತೆಗೆ, ಅವರ ದೈನಂದಿನ ಅಗತ್ಯಗಳಿಗೆ, ವಹಿವಾಟುಗಳಿಗೆ ವರದಾನವಾಗಲಿದೆಯೆಂದು ಹೇಳಲಾಗುತ್ತಿದೆ.

ಅನುದಿನವೂ ವಿರಾಮಕ್ಕೆ ಒಂದು ನೆಪ
ಆರಾಮ
ವಿಶ್ವವಾಣಿ
@vishwavaninews
ಬೆಂಗಳೂರು
28-06-2025 ಶನಿವಾರ

ಚಿತ್ತವಿಹಾರ

ಅಸಂಪ್ರದಾಯವೂ ಆಗಿರೋಣ

● ಮಹಾದೇವ ಬಸರಕೋಡ

ಬದುಕಿನ ಬಹುತೇಕ ಸಂದರ್ಭದಲ್ಲಿ ನಾವು ಸಾಮಾಜಿಕ ಒತ್ತಡಗಳಿಗೆ ಬಾಗಿಬಿಡುತ್ತೇವೆ. ಬೇರೆಯವರು ನಮ್ಮ ಕುರಿತಾಗಿ ಏನನ್ನು ಯೋಚಿಸುತ್ತಾರೆಯೋ ಎಂಬ ಭಯ ನಮ್ಮನ್ನು ಬಂಧಿಸಿ ನಿಂತಲ್ಲಿಯೇ ನಿಂತು ಬಿಡುತ್ತೇವೆ. ಭಯ, ಸಂಕೋಚ ನಮ್ಮನ್ನು ಎದ್ದು ನಿಲ್ಲದಂತೆ ಗಟ್ಟಿಯಾಗಿ ಹಿಡಿದು ಬಿಡುತ್ತದೆ. ಹೃದಯದ ಮಾತು ಮತ್ತೆ ಮತ್ತೆ ಅಪ್ಪಳಿಸುತ್ತಿದ್ದರೂ ಅದರತ್ತ ನಿರ್ಲಕ್ಷ್ಯವನ್ನು ತೋರುತ್ತೇವೆ. ಆಚರಣೆಗೆ ವಿರುದ್ಧವಾದ ದಾರಿಯಲ್ಲಿ ಸಾಗಲು, ಒಂದಷ್ಟು ಅಸಂಪ್ರದಾಯವಾಗಲು ಮನಸ್ಸು ಒಪ್ಪಿಗೆಯನ್ನು ನೀಡಲು ಹಿಂದೇಟು ಹಾಕುತ್ತದೆ. ಶಿಷ್ಟಾಚಾರದ ನೆಪದಲ್ಲಿ, ಸೌಜನ್ಯವೆನ್ನುವ ಸೆರಗಿನಲ್ಲಿ ಬಹುತೇಕ ಬಾರಿ ಸುಮ್ಮನಾಗಿ ಬಿಡುತ್ತೇವೆ. ಇದು ನಮ್ಮ ಹಿನ್ನಡೆಗೆ ಕಾರಣವಾಗುತ್ತದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಮಹಾಭಾರತದ ಕಥೆಯಲ್ಲಿ ಶಕುನಿಯ ಕುತಂತ್ರಕ್ಕೆ ಒಳಗಾಗಿ ಪಾಂಡವರು ಪಟ್ಟ ಕಷ್ಟ ನಷ್ಟ ಅವಮಾನ ಅಷ್ಟಿಷ್ಟಲ್ಲ. ಪಾಂಡವರನ್ನು ಪಗಡೆಯಾಡಲು ದುರ್ಯೋಧನನ ಮೂಲಕ ಆಹ್ವಾನಿಸುತ್ತಾನೆ. ಶಕುನಿ ಬಹಳಷ್ಟು ಉಪಾಯದಿಂದ ರೂಪಿಸಿದ ಕುತಂತ್ರದ ಆಟದಲ್ಲಿ ಪಾಂಡವರಿಗೆ ಸೋಲು ಉಂಟಾಗುತ್ತಲೇ ಹೋಗುತ್ತದೆ. ಹಣ, ವಸ್ತ್ರ ಒಡವೆ, ರಾಜ್ಯ ಸೇರಿದಂತೆ ಎಲ್ಲವನ್ನೂ ಸೋಲುತ್ತ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ಪಾಂಡವರು ಎಲ್ಲವನ್ನೂ ಸೋತು ಹೋದ ಮೇಲೆ ಅಲ್ಲಿಂದ ಎದ್ದು ಹೋಗಿದ್ದರೆ, ದ್ರೌಪದಿಯನ್ನು ಪಣಕ್ಕಿಡುವ ಪ್ರಮೇಯವೇ ಬರುತ್ತಿರಲಿಲ್ಲ. ಸಂಪ್ರದಾಯವನ್ನು ಮೀರುವ ಧೈರ್ಯ ತೋರದೆ ದ್ರೌಪದಿಯನ್ನೂ ಪಣಕ್ಕಿಟ್ಟು ಸೋಲುತ್ತಾರೆ. ದ್ರೌಪದಿಯನ್ನು ರಾಜಸಭೆಗೆ ಎಳೆದು ತರುತ್ತಾರೆ. ಅವಳ ವಸ್ತ್ರಾಪಹರಣಕ್ಕೆ ದುಶ್ಯಾಸನ ಮುಂದಾಗುತ್ತಾನೆ. ಭೀಷ್ಮ, ದ್ರೋಣ, ಧೃತರಾಷ್ಟ್ರ ಸೇರಿದಂತೆ ಅಲ್ಲಿದ್ದ ಹಿರಿಯರು ಕೂಡ ರಾಜಸಭೆಯ ಶಿಷ್ಟಾಚಾರ ಎಂಬ ಸಂಪ್ರದಾಯದ ನೆಪದಲ್ಲಿ ಎಂದು ಸುಮ್ಮನಾಗುತ್ತಾರೆ. ಅವರಲ್ಲಿ ಯಾರಾದರೂ ಒಂದಷ್ಟು ಸಂಪ್ರದಾಯವೆಂಬ ಎಲ್ಲೆಯನ್ನು ಮೀರಿ ನಿಂತಿದ್ದರೆ ಅಲ್ಲಿ ನಡೆಯುತ್ತಿದ್ದ ಅನ್ಯಾಯವನ್ನು ಖಂಡಿಸಿದ್ದರೆ, ದ್ರೌಪದಿಯ ವಸ್ತ್ರಾಪಹರಣವಾಗುತ್ತಿರಲಿಲ್ಲ. ಕುರುಕ್ಷೇತ್ರದ ಯುದ್ಧವೂ ಸಂಭವಿಸುತ್ತಿರಲಿಲ್ಲ. ರಾಜಸಭೆಯ ರೀತಿ-ನೀತಿ ನಿಯಮಗಳ ಉಲ್ಲಂಘನೆ ಸಂಪ್ರದಾಯವಲ್ಲ ಎನ್ನುವ ಅಸಂಗತಿ ನಂಬಿಕೆ ಎಲ್ಲ ರಾದ್ಧಾಂತಕ್ಕೂ, ಅವಘಡಕ್ಕೂ ಕಾರಣವಾಗಿತ್ತು.

ರೂಸೋ ಅವರ ಮಾತಿನಂತೆ ಕೆಲವು ಬಾರಿ ಆಚರಣೆಗೆ ವಿರುದ್ಧವಾದ ದಾರಿಯನ್ನು ನಾವು ಕೆಲವೊಮ್ಮೆ ತೆಗೆದುಕೊಳ್ಳುವ ಧೈರ್ಯ ತೋರಿದರೆ ಅದು ಯಾವಾಗಲೂ ಅತ್ಯುತ್ತಮವಾದ ಪ್ರತಿಫಲ ನೀಡುತ್ತದೆ ಎಂಬುದು ಒಪ್ಪಿತ ಸಂಗತಿಯಾಗಿದೆ. ನಮ್ಮ ಹೃದಯದ ಮಾತುಗಳಿಗೆ ಕೆಲವು ಬಾರಿ ಕಿವಿಯಾದಾಗ ಸಕಾರಾತ್ಮಕ ಸಂಗತಿಗಳು ಘಟಿಸುತ್ತವೆ. ನಮ್ಮ ಅನನ್ಯತೆಯನ್ನು ತೊರೆದು ಒಂದಷ್ಟು ಆಚೆ ನಿಲ್ಲುವುದನ್ನು ರೂಢಿಸಿಕೊಳ್ಳಬೇಕು. ಗುಂಪಿನಲ್ಲಿ ಗೋವಿಂದ ಎನ್ನುವ ನಡೆ ನಮ್ಮನ್ನು ಅಧೋಗತಿಗೆ ತಳ್ಳಿಬಿಡುತ್ತದೆ. ಮನಸ್ಸು ಬೇಡವೆಂದರೂ ಎದೆಯ ದನಿಯನ್ನು ಅನುಸರಿಸಬೇಕು. ಪರಿಮಿತಿಗಳ ನಡುವೆಯೂ ನಮ್ಮತನದ ವೈಶಿಷ್ಟ್ಯಗಳನ್ನು ಬೆಳೆಸಿಕೊಳ್ಳುತ್ತ, ಅವುಗಳನ್ನು ವ್ಯಕ್ತಗೊಳಿಸಬೇಕು. ಯಾವುದೋ ಸೆಳೆಗಳಿಗೆ ಸಿಲುಕಿ ನಿಃಸಹಾಯಕರಾಗಿ ನಿಲ್ಲದೇ ಪರಿಶುದ್ಧ ಭಾವದಿಂದ ಪರಿಸ್ಥಿತಿಯನ್ನು ತೂಗಿನೋಡಬೇಕು. ನಮಗೊದಗಿಬಂದ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕು. ನಮಗೆ ನಾವೆ ಮುಖಾಮುಖಿಯಾಗಬೇಕು.

ನಿದ್ದೆ ಕೆಟ್ಟರೆ ಆರೋಗ್ಯ ಕೆಟ್ಟಂತೆ!

ನೈಸರ್ಗಿಕವಾಗಿ ಬರುವ ನಿದ್ದೆಯು, ಶರೀರಕ್ಕೆ ನವ ಚೇತನವನ್ನು ನೀಡುತ್ತದೆ. ಘಾಸಿಗೊಳಗಾದ ಭಾಗಗಳು ವಾಸಿಯಾಗಲು ದೇಹಕ್ಕೆ ನಿದ್ರೆ ಅವಶ್ಯಕ. ಆದರೆ, ಈಚಿನ ದಿನಗಳಲ್ಲಿ ನಿದ್ರೆ ಮಾಡುವ ಅವಧಿ ಕಡಿಮೆಯಾಗುತ್ತಿದೆ! ಇದರಿಂದಾಗುತ್ತಿರುವ, ಆಗಲಿರುವ ಅನಾಹುತಗಳು ಅನೇಕ.

● ಬಸವರಾಜ ಶಿವಪ್ಪ ಗಿರಗಾಂವಿ

ನಮ್ಮ ದೇಹಕ್ಕೆ ಶಕ್ತಿಯನ್ನು ನೀಡುವ, ಚೇತನವನ್ನು ಮರುಪೂರೈಸುವ ನಿದ್ದೆಯು ಒಂದು ಅದ್ಭುತ. ದಣಿವಿಲ್ಲದೆ ಹಗಲಿನಲ್ಲಿ ದುಡಿದ ಜೀವಕ್ಕೆ ಪ್ರಶಾಂತವಾಗಿ ವಿಶ್ರಾಂತಿ ಪಡೆಯಲು ಅಂದರೆ ಗುಣಮಟ್ಟದ ನಿದ್ರೆಯನ್ನು ಅನುಭವಿಸಲು ಹಗಲಿನಷ್ಟೆ ರಾತ್ರಿಯನ್ನು ಪ್ರಕೃತಿ ನೀಡಿದೆ. ಇದು ವೈಜ್ಞಾನಿಕವಾಗಿಯು ಒಪ್ಪಿಕೊಳ್ಳಬೇಕಾದ ವಿಷಯವಾಗಿದೆ. ಶಿಸ್ತುಬದ್ಧ ಬದುಕನ್ನು ಕಟ್ಟಿಕೊಳ್ಳಲು ಶರೀರಕ್ಕೆ ಕೆಲಸ ಎಷ್ಟು ಮುಖ್ಯವೋ ಅಷ್ಟೆ ಪ್ರಮಾಣದ ವಿಶ್ರಾಂತಿ ಅಂದರೆ ನಿದ್ರೆಯು ಸಹ ಅವಶ್ಯಕವಾಗಿದೆ. ಹಗಲಿನ ಕೆಲಸ ಮತ್ತು ರಾತ್ರಿಯ ವಿಶ್ರಾಂತಿಗಳಲ್ಲಿ ವ್ಯತ್ಯಾಸವಾದರೆ ಶಾರೀರಿಕ ಮತ್ತು ಮಾನಸಿಕ ನೆಮ್ಮದಿಯು ಹಾಳಾಗುತ್ತದೆ. ಬಹುತೇಕವಾಗಿ ಇದರ ಅನುಭವವು ಪ್ರತಿಯೊಬ್ಬರಿಗೆ ಉಂಟಾಗಿರುತ್ತದೆ. ಆಯಾ ವಯಸ್ಸಿಗೆ ತಕ್ಕಂತೆ ಕೆಲಸ ನಿರ್ವಹಿಸುವುದು ಹಾಗೂ ವಿಶ್ರಾಂತಿ ಪಡೆಯುವುದು ನೈಸರ್ಗಿಕವಾದ ಆರೋಗ್ಯಕರ ಬೆಳವಣಿಗೆಯಾಗಿದೆ.

ಇಂತಹ ನೈಸರ್ಗಿಕ ವಿಧಾನದಲ್ಲಿ ಅತ್ಯಲ್ಪ ಪ್ರಮಾಣದ ಬದಲಾವಣೆಯಾದರೆ ಆರೋಗ್ಯವು ಸರಿಹೊಂದಬಹುದು, ಆದರೆ ಅತಿಯಾಗಿ ಈ ನೈಸರ್ಗಿಕ ವಿಧಾನಕ್ಕೆ ವಿರುದ್ಧವಾಗಿ ಮಾನವ ಸೇರಿದಂತೆ ಯಾವುದೆ ಜೀವಸಂಕುಲವು ವರ್ತಿಸಿದರೆ ಆರೋಗ್ಯ ಹಾಳಾಗುವುದರಲ್ಲಿ ಎರಡು ಮಾತಿಲ್ಲ. ನಿಸರ್ಗದ ನಿಯಮಗಳನ್ನು ಮೀರಿ ಬಹುಕಾಲ ಬದುಕುವವರು ಭೂಮಂಡಲದಲ್ಲಿ ಯಾರು ಇಲ್ಲ. ಪ್ರಕೃತಿಯ ವಿರುದ್ಧ ಯಾವುದೆ ಕೆಲಸಗಳು ನಡೆದರು ಅವು ಕ್ಷಣಿಕ ಸುಖಕಾರಿಯಾಗಿರುತ್ತವೆ ಮತ್ತು ಭವಿಷ್ಯದಲ್ಲಿ ಹಾನಿಯೆ ಹೆಚ್ಚಾಗುವುದು ನಿಸ್ಸಂಶಯ. ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ಹಗಲಿನಲ್ಲಿಯ ನಿದ್ದೆಯು ಮತ್ತು ರಾತ್ರಿಯಲ್ಲಿಯ ಕೆಲಸಗಳು ಸೋಮಾರಿತನಕ್ಕೆ ಸಮಾನವಾಗಿದೆ. ಆದ್ದರಿಂದ ಯಾವುದೆ ಕ್ರಿಯೆಗಳು ನೈಸರ್ಗಿಕವಾಗಿಯೆ ಮುಂದುವರೆಯಬೇಕು. ಅಂದಾಗ ಮಾತ್ರ ಮಾನಸಿಕ ಮತ್ತು ಶಾರೀರಿಕ ಸ್ವಾಸ್ಥವು ಪ್ರಾಪ್ತಿಯಾಗುತ್ತದೆ. ಪ್ರಸ್ತುತ ಸಂಪತ್ತಿಗಾಗಿ ಆರೋಗ್ಯವನ್ನು ಲೆಕ್ಕಿಸದೆ ಮುನ್ನುಗ್ಗುವ ಪ್ರವೃತ್ತಿಯು ಹೆಚ್ಚಾಗುತ್ತಿದೆ. ಆರೋಗ್ಯವನ್ನು ಲೆಕ್ಕಿಸದೆ ದುಡ್ಡು ಸಂಗ್ರಹಿಸುವುದು ನಂತರ ಸಂಗ್ರಹಿಸಿದ ದುಡ್ಡನ್ನು ಆರೋಗ್ಯಕ್ಕಾಗಿ ವ್ಯಯಿಸುವುದು ಇಂದು ಸಾಮಾನ್ಯವಾಗಿದೆ.

ಹಿಂದಿನ ತಲೆಮಾರಿನ ನೆಮ್ಮದಿಯ ನಿದ್ದೆ

ಹಿಂದೆ ನಮ್ಮ ಪೂರ್ವಜರು ವಿದ್ಯುತ್ ಬೆಳಕಿಲ್ಲದ ಸಮಯದಲ್ಲಿ ಬೆಳಕಾಗುವುದರೊಂದಿಗೆ ತಮ್ಮ ಮೂಲಭೂತ ಕರ್ಮಾಧಿಗಳನ್ನು ಮುಗಿಸಿಕೊಂಡು ಕೃಷಿ ಕಾಯಕದಲ್ಲಿ ಮಗ್ನರಾಗುತ್ತಿದ್ದರು. ಹಾಗೆಯೆ ಕತ್ತಲಾಗುವುದರೊಂದಿಗೆ ತಮ್ಮ ಊಟೋಪಚಾರವನ್ನು ಮುಗಿಸಿಕೊಂಡು ನಿದ್ರೆಗೆ ಜಾರುತ್ತಿದ್ದರು. ಇಂದಿನಂತೆ ಅಂದು ನಿದ್ರೆಗಾಗಿ ಯಾವುದೆ ಗಾದಿ ಮತ್ತು ಮಂಚದ ಅವಶ್ಯಕತೆಯಿರಲಿಲ್ಲ. ನೆಲದ ಮೇಲೆಯೇ ಒಂದು ತೆಳುವಾದ ಹಾಸಿಗೆಯೊಂದಿಗೆ ಗುಣಮಟ್ಟದ ಹಾಗೂ ಗಾಢವಾದ ನಿದ್ದೆಯನ್ನು ಮಾಡುತ್ತಿದ್ದರು. ಕಾರಣ ಹಗಲಿನಲ್ಲಿ ವಿಶ್ರಾಂತಿಯಿಲ್ಲದೆ ಮೈಮುರಿದು ದುಡಿದ ಜೀವಕ್ಕೆ ನಿದ್ರೆಯು ತಡ ಮಾಡುತ್ತಿರಲಿಲ್ಲ. ಹೀಗೆ ದಿನಾಲು ಮಾತ್ರೆಗಳಿಲ್ಲದೆ ಸರಾಸರಿ 9 ಗಂಟೆಗಳ ಕಾಲ ಗುಣಮಟ್ಟದ ನಿದ್ರೆಯನ್ನು ಮಾಡುತ್ತಿದ್ದರು. ಅಂದಿನ ಬಹುತೇಕ ಜನತೆಯು ಚಟಗಳ ದಾಸರಾಗಿರಲಿಲ್ಲ ಮತ್ತು ಇದ್ದುದರಲ್ಲಿಯೆ ತೃಪ್ತಿಯಾಗಿ ಅತಿಯಾಸೆ ಪಡದೆ ಆರೋಗ್ಯವಂತ ಬದುಕನ್ನು ಕಟ್ಟಿಕೊಂಡಿದ್ದರು.

ಹಗಲು ಕಾಯಕ ರಾತ್ರಿ ವಿಶ್ರಾಂತಿಯಂತಹ ನೈಸರ್ಗಿಕ ಪದ್ಧತಿಯು ಅಂದು ಕೇವಲ ಮನುಕುಲ ಮಾತ್ರವಲ್ಲದೆ ಸಮಸ್ತ ಪ್ರಾಣಿ, ಪಕ್ಷಿ ಮತ್ತು ಕೀಟಗಳಂತಹ ಜೀವಸಂಕುಲದಲ್ಲಿಯು ಕಡ್ಡಾಯವಾಗಿತ್ತು. ಅಂದು ನಾಳಿಗಾಗಿ ಕೂಡಿಡುವ ಪ್ರವೃತ್ತಿಯಿರಲಿಲ್ಲ, ಕೇವಲ ಅಂದಿನ ಮತ್ತು ಆ ಕ್ಷಣದ ಬದುಕಿಗಾಗಿ ಮಾತ್ರ ದುಡಿಯಲಾಗುತ್ತಿತ್ತು. ನಾಳಿನ ಕುರಿತು ಚಿಂತಿಸುತ್ತಿರಲಿಲ್ಲ. ಆದರೆ ಅಂದಿನ ನೈಸರ್ಗಿಕ ಪದ್ಧತಿಯು ಇಂದಿನ ಮನುಕುಲದಿಂದ ಮಾಯವಾಗಿದೆಯಲ್ಲದೆ ಇನ್ನುಳಿದ ಜೀವಸಂಕುಲದಲ್ಲಿ ಮಾತ್ರ ಉಳಿದಿರುವ ಪರಿಣಾಮ ಅದು ಆರೋಗ್ಯಕರವಾಗಿದೆ. ಇದರಿಂದಾಗಿ ಮನುಕುಲದಲ್ಲಿ ಮಾತ್ರ ನಿದ್ದೆಯ ಪ್ರಮಾಣವು ಕಡಿಮೆಯಾಗಿ ಅನಾರೋಗ್ಯವು ಹೆಚ್ಚಾಗುತ್ತಿದೆ.

ನಿದ್ದೆಯ ಅಭಾವ?

ಇಂದಿನ ಜಗತ್ತು ತಂತ್ರಜ್ಞಾನದಲ್ಲಿ ಸಾಕಷ್ಟು ಮುಂದುವರೆಯುತ್ತಿದೆ. ಆದರೆ ಆರೋಗ್ಯವು ಹದಗೆಡುತ್ತಿರುವುದು ಸಾಮಾನ್ಯವಾಗಿದೆ. ಇಂದು ಹೈ-ಟೆಕ್ ವೈದ್ಯಕೀಯ ಸೇವೆಗಳು ಹೇರಳವಾಗಿದ್ದರು ಹಿಂದಿನ ಕಾಲದಲ್ಲಿದ್ದ ಆರೋಗ್ಯವು ಲಭಿಸುತ್ತಿಲ್ಲ. ಸಂಪತ್ತು ಸಂಗ್ರಹಿಸುವ ಭರದಲ್ಲಿ ಅತಿಯಾದ ಚಿಂತೆ ಮತ್ತು ಒತ್ತಡಗಳನ್ನು ಎದುರಿಸಲಾಗುತ್ತಿದೆ. ಸಮಯಾನುಸಾರ ಹೊಟ್ಟೆತುಂಬ ಊಟ ಮತ್ತು ಮೈತುಂಬ ಕೆಲಸವಿಲ್ಲದ ಪರಿಣಾಮ ಕಣ್ತುಂಬ ನಿದ್ದೆಯು ಮಾಯವಾಗಿದೆ. ನಿದ್ರೆಗಾಗಿ ದಿನಾಲು ಮಾತ್ರೆ ತೆಗೆದುಕೊಳ್ಳುವುದು ಮತ್ತು ಸಮಯದ ಪರಿವಿಲ್ಲದೆ ಮದ್ಯಪಾನ ಹಾಗೂ ಧೂಮಪಾನಗಳಂತಹ ದುಶ್ಚಟಗಳಿಗೆ ಬಲಿಯಾಗುವುದು ಹೆಚ್ಚಾಗುತ್ತಿದೆ.

ಇವೆಲ್ಲ ಬೆಳವಣಿಗೆಗಳಿಂದ ಹಗಲಿನಲ್ಲಿ ಮಾಡಬೇಕಾದ ಕೆಲಸಗಳನ್ನು ರಾತ್ರಿ ಮಾಡುವುದು ರಾತ್ರಿಯಲ್ಲಿ ಮಾಡಬೇಕಾದ ವಿಶ್ರಾಂತಿ ಅಂದರೆ ನಿದ್ದೆಯನ್ನು ಹಗಲಿನಲ್ಲಿ ಮಾಡುತ್ತಿರುವುದರಿಂದ ನೈಸರ್ಗಿಕವಾಗಿ ದೊರೆಯಬೇಕಾದ ಆರೋಗ್ಯವು ಪ್ರಾಪ್ತವಾಗುತ್ತಿಲ್ಲ ಎಂಬುದನ್ನು ಪ್ರತಿಯೊಬ್ಬರು ಗಂಭೀರವಾಗಿ ಅರಿಯಬೇಕಾಗಿದೆ. ರಾತ್ರಿಯಲ್ಲಿ ಗುಣಮಟ್ಟದ ನಿದ್ದೆಯನ್ನು ಪಡೆಯಲು ಹಗಲಿನಲ್ಲಿ ದೈಹಿಕ ದುಡಿಮೆಯು ಅವಶ್ಯವಾಗಿರಬೇಕು.

ಹಗಲಿನಲ್ಲಿ ವಯಸ್ಸಿಗೆ ತಕ್ಕಂತಹ ದೈಹಿಕ ಶ್ರಮವಿದ್ದರೆ, ಎಂತಹ ಚಿಂತೆ ಹಾಗೂ ಒತ್ತಡಗಳಿದ್ದರು ರಾತ್ರಿಯಲ್ಲಿ ಗುಣಮಟ್ಟದ ನಿದ್ದೆಯು ಪ್ರಾಪ್ತವಾಗುತ್ತಿದೆ. ನಿದ್ದೆಯ ಕೊರತೆಯಾದಲ್ಲಿ ಅನಾರೋಗ್ಯದ ಪ್ರಮಾಣವು ಹೆಚ್ಚುತ್ತದೆ. ಆದ್ದರಿಂದ ಅನವಶ್ಯಕ ಒತ್ತಡಗಳನ್ನು ಬಿಟ್ಟು ಹಗಲಿನಲ್ಲಿ ದೈಹಿಕ ಶ್ರಮದೊಂದಿಗೆ ರಾತ್ರಿಯ ಸುಖ ನಿದ್ರೆಯನ್ನು ನಿರಂತರವಾಗಿ ಅನುಭವಿಸಿ ಉತ್ತಮ ಆರೋಗ್ಯವನ್ನು ಪಡೆಯಬೇಕು.

ಇದರ ಕೊರತೆ ಆಗಬಾರದು!

ಪ್ರತಿದಿನ ಸುಮಾರು 7ರಿಂದ 8 ಗಂಟೆಗಳ ನಿದ್ದೆ ಅಗತ್ಯ ಎಂದು ತಜ್ಞರು ಹೇಳಿದ್ದಾರೆ; ನಿದ್ದೆಯ ಕೊರತೆ ಅನುಭವಿಸುತ್ತಿರುವವರಿಗೆ ಈ ಕುರಿತು ಎಚ್ಚರಿಕೆಯನ್ನೂ ನೀಡಿದ್ದಾರೆ. ಆದರೆ, ಆಧುನಿಕ ಮಾನವನು, ತನ್ನ ಧಾವಂತದ ಬದುಕಿನಲ್ಲಿ, ಹೆಚ್ಚು ಸಂಪತ್ತು, ಸವಲತ್ತುಗಳನ್ನು ಗಳಿಸುವ ಉತ್ಸಾಹದಲ್ಲಿ, ನಿದ್ದೆಯ ಅವಧಿಯನ್ನು ಕಡಿಮೆಮಾಡುತ್ತಿದ್ದಾನೆ. ಇದರಿಂದಾಗಿ, ದೈಹಿಕ ಸಮಸ್ಯೆಗಳು ಉಂಟಾಗುತ್ತಿವೆ; ಜತೆಗೆ, ಈ ಶತಮಾನದ ಸವಲತ್ತುಗಳಾದ ರೀಲ್ಸ್, ಅಂತರ್ಜಾಲ ಮೊದಲಾದವು ನೆಮ್ಮದಿಯ ನಿದ್ದೆಗೆ ಭಂಗ ತರುತ್ತಿದೆ. ಇಂದಿನ ಯುವಜನರು, ತಡರಾತ್ರಿಯಲ್ಲಿ ಮೊಬೈಲ್ ನೋಡುತ್ತಾ, ನಿದ್ದೆಗೆಡುವುದು ತೀರಾ ಸಾಮಾನ್ಯ ಎನಿಸಿದೆ. ನೆಮ್ಮದಿಯ ನಿದ್ದೆ ಇಲ್ಲದ ದಿನಚರಿಯು, ಯಶಸ್ಸನ್ನು ಕೆಲವು ಬಾರಿ ನೀಡಿದರೂ, ಆರೋಗ್ಯವನ್ನು ನೀಡಲಾರದು! ಇದಕ್ಕೆ ಪರಿಹಾರ? ತಜ್ಞರು ಅದಾಗಲೇ ನೀಡಿರುವ ಸಲಹೆಯಂತೆ, ಪ್ರತಿ ದಿನ ಕನಿಷ್ಠ ನಿದ್ದೆಯನ್ನು ಮಾಡಲೇಬೇಕು!

ಸುಳ್ಳುಪ್ಪಿನಕಾಯಿ ಗೊತ್ತೇ?

● ಕೆ.ಶ್ರೀನಿವಾಸರಾವ್ ಹರಪನಹಳ್ಳಿ

ಮಾವಿನಕಾಯಿ ಉಪ್ಪಿನಕಾಯಿ ಗೊತ್ತು. ಲಿಂಬೆಕಾಯಿ, ಹೆರಳೆಕಾಯಿ, ಮಿಡಿಮಾವು, ಹಾಗಲಕಾಯಿ, ತರಕಾರಿ, ಮಿಕ್ಸೆಡ್ ಉಪ್ಪಿನಕಾಯಿ ಗೊತ್ತು. ಇದಾವುದು ಸುಳ್ಳುಪ್ಪಿನಕಾಯಿ ಅಂತ ಹುಬ್ಬೇರಿಸಬೇಡಿ. ವಿಚಿತ್ರವೆಂದರೆ ಇದು ಖಾರವಿಲ್ಲದ ಹುಳಿಯಿಲ್ಲದ , ಆಕಾರವಿಲ್ಲದ, ತಿನ್ನಲಾಗದ ಮುಖ್ಯವಾಗಿ ಕಣ್ಣಿಗೆ ಕಾಣದ ಉಪ್ಪಿನಕಾಯಿ!

ನಾವು ಬಾಲ್ಯದಲ್ಲಿ ಒಂದು, ಎರಡನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲ. ಸಂಜೆ ಶಾಲೆ ಮುಗಿದ ನಂತರ ಜೂಟ್ ಆಟ, ಐಸ್ ಪೈಸ್ ಆಡುವಾಗ ಕೆಲವರು ನಮಗಿಂತ ಚಿಕ್ಕವರು ನಮ್ಮೊಂದಿಗೆ ಆಟಕ್ಕೆ ಸೇರಲು ಬರುತ್ತಿದ್ದರು. ಬೇಡವೆಂದರೆ ಕೇಳುತ್ತಿರಲಿಲ್ಲ.ಅಕ್ಕಪಕ್ಕದ ಮನೆಯ ಅವರ ಪೋಷಕರುಅವನನ್ನೂ ಆಟಕ್ಕೆ ಸೇರಿಕೊಳ್ಳಿರೋ, ಪಾಪ, ಸಣ್ಣವನು.. ಎಂದು ಹಕ್ಕೊತ್ತಾಯ ಮಾಡುತ್ತಿದ್ದರು. ಅಮ್ಮನೂ ಅಹುದಹುದೆನುತ್ತಿದ್ದಳು.

ನಮಗೆ ಉಭಯ ಸಂಕಟ. ಸೇರಿಸಿಕೊಂಡರೆ ಅವನಿನ್ನೂ ಚಿಕ್ಕವನು.ಆಡಲು ಬಾರದು. ನಮ್ಮ ಆಟವೂ ಹಾಳಾಗುತ್ತದೆ. ಸೇರಿಸಿಕೊಳ್ಳದೇ ಇರೋಣವೆಂದರೆ ಆಗಾಗ ಅವರ ಮನೆಗಳಲ್ಲಿ ಅವರಮ್ಮ ಕೊಡುತ್ತಿದ್ದ ಉಂಡೆ, ಚಕ್ಕುಲಿ, ಕೋಡುಬಳೆಗಳ ಆಮಿಷ ! ಸೇರಿಸಿಕೊಳ್ಳದಿದ್ದರೆ ಅದಕ್ಕೆ ಸಂಚಕಾರ ಹಾಗಾಗಿ ಅನಿವಾರ್ಯವಾಗಿ ಸೇರಿಸಿಕೊಂಡು ಅವನಿಗೆ 'ಸುಳ್ಳುಪ್ಪಿನಕಾಯಿ' ಎಂದು ನಾಮಕರಣ ಮಾಡುತ್ತಿದ್ದೆವು.

ಇದರ ಪ್ರಕಾರ ಅವನು ಔಟಾದರೂ ಔಟಲ್ಲ. ಅವನು ನಮ್ಮನ್ನು ಔಟ್ ಮಾಡಿದರೂ ಅದು ಇನ್ ವ್ಯಾಲಿಡ್! ಒಟ್ಟಾರೆ ಅವನು ಆಟಕ್ಕುಂಟು ಲೆಕ್ಕಕ್ಕಿಲ್ಲ. ಅರ್ಥಾತ್ ಅವನಿಗೆ ಆಟ ಆಡಿದಂತೆಯೂ ಆಯಿತು, ನಮಗೆ ಅವರ ಮನೆ ಉಂಡೆ, ಕೋಡುಬಳೆ, ಗ್ಯಾರಂಟಿಯೂ ಆಯಿತು!

ಈ ಒಪ್ಪಂದ ಹಲವು ರೀತಿ ಪ್ರಯೋಜನಕಾರಿ. ಉದಾಹರಣೆಗೆ ಎರಡು ಪಂಗಡಗಳು ಕಬಡ್ಡಿ ಆಡುವಾಗ ಒಂದೆಡೆಯ ಒಬ್ಬ ಔಟಾದನೆನ್ನಿ. ತಕ್ಷಣ ಅವನು ಏಯ್, ನಾನು ಸುಳ್ಳುಪ್ಪಿನಕಾಯಿ .... ಎಂದರಾಯಿತು.ಅವನು ಔಟೇ ಅಲ್ಲ. ಬಹಳಷ್ಟು ಆಟಗಳಲ್ಲಿ ಹಿಂದುಳಿದವರಿಗೆ ಇದೊಂದು ಬ್ರಹ್ಮಾಸ್ತ್ರವಾಗಿತ್ತು.ಇದೇ ಮಾದರಿಯ ಇನ್ನೊಂದು ರಕ್ಷಣಾತ್ಮಕ ಪದ ಎಂದರೆ 'ಥೂಡಿ'.

ಆಟ ಆಡುವಾಗ ಇನ್ನೇನು ನಮ್ಮನ್ನು ಮುಟ್ಟಿ ನಾವು ಔಟಾಗುವುದು ಗ್ಯಾರಂಟಿ ಎಂದಾಗ ಈ ದಿವ್ಯಾಸ್ತ್ರ 'ಥೂಡಿ' ಎಂದು ಜೋರಾಗಿ ಹೇಳಿದರೆ ಅವನು ನಮ್ಮನ್ನು ಮುಟ್ಟಿ ಔಟ್ ಮಾಡುವಂತಿಲ್ಲ. ಔಟ್ ಮಾಡಬೇಕಾದವ ಏದುಸಿರು ಬಿಡುವುದು ಖಂಡಿತ!

ಇಂತಹ ಕುತೂಹಲಕಾರಿ ಪದಬಳಕೆಗಳು ನಿಮ್ಮೂರಲ್ಲೂ ಇರಬಹುದು! ಅಲ್ಲವೆ?

ಚುಟುಕು (ಹನಿ ಮಳೆ)

ಸರಳ ವಿವಾಹ

ಸರಳ ವಿವಾಹವೇ ಬೇಕು
ಮಗಳನು ಕೊಟ್ಟರೆ ಸಾಕು
ಎಂದ ಆ ವರಮಹಾಶಯ
ಮದುವೆಯ ಮುನ್ನಾದಿನ
ಹಿಡಿದ ಒಂದು ಬಿಗಿ ಪಟ್ಟು
ಕಾರು ಸೈಟು ಬಂಗಲೆ ಪಟ್ಟಿ
ಬೇಡಿಕೆಯನು ಮುಂದಿಟ್ಟ!

● ಆದಿತ್ಯ ಹೆಬ್ಬಾರ್ ಹರಪನಹಳ್ಳಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಖಾರವಾದ ರೂಪ (3)
3. ಮೈಸೂರಿಗೆ ಹೆಸರು ಕೊಟ್ಟವ (3)
5. ಮಂದಿಯೊಂದಿಗೆ ಬಂದಿರುವ ತಂದೆ (3)
7. ದೊಡ್ಡದಾದ ಕೆರೆ (3)
9. ವಾದ ಮಂಡನೆ (4)
11. ಇದೊಂದು ಬಗೆಯ ವೀಣೆ (4)
13. ಕಡೆಗೆ ಸಿಕ್ಕಿತು ಸಾಲ (2)
14. ಅಭಿನಯಕಾರ (2)
15. ಹೂವಿನ ರಸ (4)
17. ಹೋಲಿಕೆಯಿಲ್ಲದ (4)
18. ಮಾಡಿದ ಕೆಲಸಕ್ಕೆ ಸಿಕ್ಕಿದ ಪಗಾರ (3)
19. ಹೊಗಳುವುದಲ್ಲ, ದೂಷಿಸು (3)
21. ಇನ್ನೊಂದು ಸೊಕ್ಕು (3)
22. ಉದ್ದೇಶ ಅಥವಾ ನೆಪ (3)

ಮೇಲಿಂದ ಕೆಳಕ್ಕೆ

1. ಅಂಗೈಯಲ್ಲಿನ ನೀರನ್ನು ಮಂತ್ರದ ಜತೆ ಸೇವನೆ (4)
2. ಸಿರಿವಂತ ಹಸು (2)
4. ನಿಯಮ (3)
6. ಕಲ್ಲು ಬೀಸುವ ಸಾಧನ (3)
8. ವಿಷ್ಣುವಿನ ವಾಹನ (3)
10. ವಿಧಿ ಬರಹ ಬರೆದಿರುವ ಹಣೆ (3)
12. ಇವನು ಬರಿಯ ನೋಡುಗ (3)
13. ಅರ್ಧಚಂದ್ರಾಕೃತಿಯ ರಚನೆ (3)
14. ತಿರುಗಿ ಬಂದಿರುವ ಮನ್ಮಥ (3)
15. ಪ್ರೀತಿ, ವಾತ್ಸಲ್ಯಕ್ಕೆ ಮತ್ತೊಂದು ಹೆಸರು (3)
16. ದೊಡ್ಡ ತಟ್ಟೆ ಹಣದ ನಡುವೆ ಇದೆ (4)
17. ನಿರ್ದಿಷ್ಟ ಸಮಯ (3)
20. ಇದಕ್ಕಾಗಿ ಯುದ್ಧ ನಡೆದೀತು! (2)

ಸರಿಯುತ್ತರಗಳು

[illegible]

ನವಗುಂಜರದ ಭಕ್ತಿ ಸಾರ

ನವಗುಂಜರ ಕಥೆ ಮಹಾಭಾರತದ ಅಧ್ಯಾಯಗಳಲ್ಲಿ ನೇರವಾಗಿ ಕಾಣಿಸುವುದಿಲ್ಲ, ಆದರೆ ಇದು ಮಹಾಭಾರತದ ಒಂದು ಪುರಾಣಪ್ರಸಿದ್ಧ ಉಪಕಥೆ, ವಿಶೇಷವಾಗಿ ಒಡಿಯಾ ಮತ್ತು ಕನ್ನಡ ಸಂಸ್ಕೃತಿಗಳಲ್ಲಿ ಬಹಳ ಪ್ರಚಲಿತವಾಗಿದೆ. ಭಕ್ತಿಯಿಂದ ದೇವರ ದರ್ಶನವನ್ನು ಹೇಗೆ ಪಡೆಯಬಹುದು ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

ನವಗುಂಜರ ಎಂದರೇನು?

ನವಗುಂಜರ ಎಂಬುದು ಅನೇಕ ಪ್ರಾಣಿಗಳ ಅಂಗಾಂಗಗಳಿಂದ ಕೂಡಿದ ಒಂದು ಅದ್ಭುತ ರೂಪ. ''ನವ'' ಅಂದರೆ ಒಂಬತ್ತು ಮತ್ತು ''ಗುಂಜರ'' ಅಂದರೆ ಪಶು/ಪ್ರಾಣಿ.

ನವ ಗುಂಜರದ ಆಕಾರದಲ್ಲಿ ತಲೆಯು ಕೋಳಿಯ ಒಂದು ತಂಗಳಿ ಆನೆ ಒಂದು ತಂಗಳಿ ಹಸು ಒಂದು ತಂಗಳಿ ವೃಶ್ಚಿಕ ಕತ್ತೆ ಅಥವಾ ಸಿಂಹದ ಅಂಗ ಹಕ್ಕಿಯ ಮೇಲ್ದೋಳು ಮನುಷ್ಯನ ಕೈ, ಅದರಲ್ಲಿ ತ್ರಿಶೂಲ ಅಥವಾ ಹೂವಿನ ತೆನೆ, ಹಾವುಗಳ ಶಿರೋಪರಿ, ಇಡೀ ರೂಪವು ಭಯಾನಕವೂ ಜೊತೆ ಜೊತೆಗೆ ಅದ್ಭುತವೂ ಆಗಿರುವುದು ವಿಶೇಷ.

ನವಗುಂಜರ ಕಥೆ ಸಾರಾಂಶ

ಕಥೆಯ ಪ್ರಕಾರ, ಪಾಂಡವರಲ್ಲಿ ಧರ್ಮರಾಜನು (ಯುಧಿಷ್ಠಿರ) ವನವಾಸದಲ್ಲಿದ್ದಾಗ, ಅರ್ಜುನನು ಪರಮೇಶ್ವರನ ದರ್ಶನಕ್ಕಾಗಿ ತಪಸ್ಸು ಮಾಡುತ್ತಿದ್ದನು. ಈ ಸಂದರ್ಭದಲ್ಲಿಯೇ, ಅರ್ಜುನನು ತಪಸ್ಸಿನಲ್ಲಿ ಲೀನವಾಗಿರುವಾಗ, ಅವನಿಗೆ ನವಗುಂಜರ ರೂಪದಲ್ಲಿ ಹರಿಯು (ವಿಷ್ಣು ಅಥವಾ ಶಿವ) ದರ್ಶನ ನೀಡುತ್ತಾನೆ. ಈ ವಿಚಿತ್ರ ರೂಪವನ್ನು ನೋಡಿ ಅರ್ಜುನನು ಅಚ್ಚರಿಗೊಳ್ಳುತ್ತಾನೆ ಮತ್ತು ಗಬ್ಬಾಗಿಯೇ ಧನುಸ್ಸನ್ನು ಎತ್ತಿ ಶಸ್ತ್ರ ಹಿಡಿಯುತ್ತಾನೆ. ಆದರೆ, ಆಗ ಅವನಿಗೆ ಈ ರೂಪದಲ್ಲಿ ಭಗವಂತನ ದರ್ಶನವಾಗುತ್ತಿದೆ ಎಂಬ ಅರಿವು ಬರುತ್ತದೆ. ಆಗ ಅರ್ಜುನನು ಭಕ್ತಿಯಿಂದ ಶಸ್ತ್ರವನ್ನು ಕಳಸಿ ಭಗವಂತನಿಗೆ ನಮನ ಮಾಡುತ್ತಾನೆ. ನವಗುಂಜರ ಎಂಬ ಈ ರೂಪವು ಸೃಷ್ಟಿಯಲ್ಲಿ ಎಲ್ಲರೂ ದೇವರ ಅಂಶವಾಗಿದ್ದಾರೆ ಎಂಬ ತತ್ತ್ವವನ್ನು ತೋರಿಸುತ್ತದೆ. ದೇವರು ಎಲ್ಲರೂ ಆಗಿದ್ದಾನೆ ಹಸುವಿನಲ್ಲಿ, ಹಕ್ಕಿಯಲ್ಲಿ, ಹಾವುಗಳಲ್ಲಿ, ಮನುಷ್ಯನಲ್ಲಿ, ಪ್ರತಿ ರೂಪದಲ್ಲೂ, ಭಗವಂತನ ರೂಪ ನಿರ್ವಚನಾತೀತ, ಅಪಾರ, ಅಪರೂಪ ಎಂಬುದೇ ಕಥೆಯ ಭಾವಾರ್ಥ.

ಈ ಕಥೆ ಒಡಿಶಾ ರಾಜ್ಯದ ಪಟಚಿತ್ರ ಶೈಲಿಯ ಚಿತ್ರಕಲೆಯಲ್ಲೂ ಬಹಳ ಪ್ರಸಿದ್ಧವಾಗಿದೆ. ಪುರಾಣದ ಕಥೆಗಳಲ್ಲಿ ಇದು ''ಜಗನ್ನಾಥ''ನ ಅವತಾರ ರೂಪವಾಗಿದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಇಂದಿನ ದಿನಗಳಲ್ಲಿ ಮನುಷ್ಯನ ಪ್ರಾಣಕ್ಕೆ ಬೆಲೆ ಇಲ್ಲದಿರುವುದಾಗ, ಪಶು ಪಕ್ಷಿಗಳ ಮಾತಂತೂ ಹೇಳುವುದೇ ಬೇಡ. ಗೋವು ನಮ್ಮ ಭಾರತದಲ್ಲಿ ಪೂಜಾರ್ಹವಾದುದು. ಅದನ್ನು ರಕ್ಷಿಸಬೇಕು ಕೊಲ್ಲಬಾರದು ಎಂದು ಸರ್ಕಾರ ಆಜ್ಞೆ ಮಾಡಿದ್ದರೂ ಸಹ, ಕದ್ದು ಗೋವುಗಳನ್ನು ಸಾಗಿಸುವ ಅವುಗಳನ್ನ ಕಸಾಯಿ ಖಾನೆಗೆ ಮಾರುವ ಅನೇಕ ರಾಕ್ಷಸ ರೂಪ ಮನುಷ್ಯರನ್ನ ನಾವು ನೋಡುತ್ತೇವೆ.

ಬೀದಿ ನಾಯಿಗಳನ್ನು ಹಿಂಸೆ ಮಾಡಿ ವಿಕೃತ ಸುಖವನ್ನು ಅನುಭವಿಸುವ ಮನುಷ್ಯರ ನಡುವಳಿಕೆಗಳು ಕೂಡ ನಮಗೆ ಕಾಣಸಿಗುತ್ತವೆ. ತಮ್ಮ ವಿಕೃತ ಸಂತೋಷಕ್ಕಾಗಿ ಪ್ರಾಣಿ ಪಕ್ಷಿಗಳನ್ನ ಕೂಡಿಟ್ಟು, ಅವುಗಳಿಗೆ ಹಿಂಸೆ ಕೊಟ್ಟು ಆನಂದಿಸುವ ಅನೇಕ ದುರುಳರು ನಮ್ಮ ಮಧ್ಯೆ ಇದ್ದಾರೆ. ಆದ್ದರಿಂದಲೇ ನಮ್ಮ ಮಕ್ಕಳಿಗೆ ಚಿಕ್ಕವರಾಗಿದ್ದಾಗಿನಿಂದಲೇ, ಪ್ರತಿಯೊಂದು ಪ್ರಾಣಿ ಪಕ್ಷಿ ಪ್ರಕೃತಿ ಎಲ್ಲವನ್ನು ಗೌರವಿಸುವ ಗುಣವನ್ನು ಕಲಿಸಬೇಕು. ಪ್ರಾಣಿ ಪಕ್ಷಿಗಳಾದರೆ ಹಸಿವಿಗಾಗಿ ತಿನ್ನುತ್ತವೆ. ಆದರೆ ಹಸಿವಿಲ್ಲದಿದ್ದರೂ, ಚಟಕ್ಕಾಗಿ ತಿನ್ನುವ ಹಿಂಸೆ ಮಾಡುವ ಪ್ರಕೃತಿ ಕೇವಲ ಮನುಷ್ಯರದ್ದು.

ಎಲ್ಲಾ ಪ್ರಾಣಿಗಳಿಗಿಂತ ವಿಕಸಿತವಾದ ಮೆದುಳು ಮನುಷ್ಯನಿಗೆ ಇದ್ದರೂ ತಪ್ಪು ಸರಿ ಧರ್ಮ ಕರ್ಮಗಳ ವಿವೇಚನೆಯನ್ನು ದೇವರು ನೀಡಿದ್ದರೂ ಸಹ ಎಲ್ಲಾ ಪ್ರಾಣಿಗಳಿಗಿಂತ ಹೀನಾಯವಾಗಿ ಬೇಟೆಯಾಡುವ, ಕೊಲ್ಲುವ ಮತ್ತೊಬ್ಬರಿಗೆ ಹಿಂಸೆ ಕೊಡುವ ಕೆಟ್ಟ ಸಂಸ್ಕಾರ ಮನುಷ್ಯನದ್ದು.

ಇನ್ನಾದರೂ ಇಂತಹದ್ದನ್ನು ಕಂಡಾಗ ಅದನ್ನು ಖಂಡಿಸಿ ಅವರಿಗೆ ಸರಿಯಾದ ಬುದ್ಧಿ ಕಲಿಸುವ ಕೆಲಸವನ್ನು ಮಾಡೋಣ. ಮುಂದಿನ ಜನಾಂಗವಾದರೂ ಪ್ರೀತಿ, ಪ್ರೇಮ ಸಹನೆ, ಕರುಣೆ ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡು ಪ್ರಕೃತಿ ಪ್ರಾಣಿಗಳ ಜೊತೆ ಸೌಹಾರ್ದತೆಯಿಂದ ಬದುಕುವ ಸಂಸ್ಕಾರ ಬಳಸಿಕೊಳ್ಳಲಿ.

ಮಾನವನಲ್ಲಿರುವ ಸ್ವಾರ್ಥ!

ವನ್ಯಮೃಗಗಳ ನಡುವೆ ಗೋವು ಬಂದೇನಹುದು
ಪಣ್ಯವೀಧಿಯಲಿ ತಾತ್ತ್ವಿಕನಿಗೇನಹುದು
ಅನ್ಯಾಯದುನ್ಮತ್ತ ಕೋಲಾಹಲದ ಲೋಕ
ಪುಣ್ಯವನು ಚಿಂತಿಪುದೆ - ಮಂಕುತಿಮ್ಮ॥

ವನ್ಯಮೃಗಗಳ ನಡುವೆ ಒಂದು ಗೋವು ಬಂದರೆ ಆ ಗೋವಿನ ಕಥೆ ಏನಾಗಬಹುದು? ಆ ವನ್ಯ ಮೃಗಗಳು ಆ ಗೋವನ್ನು ಬೇಟೆಯಾಡಿ ಮುಗಿಸಿಬಿಡುತ್ತವೆ. ವ್ಯಾಪಾರಿಗಳೇ ತುಂಬಿರುವ ಬೀದಿಯಲ್ಲಿ ತಾತ್ವಿಕನು ಹೋಗಿ ಬರೀ ತಾತ್ವಿಕತನದ ಕಥೆಯನ್ನೋ, ಮಾತುಗಳನ್ನೋ ಆಡಿದರೆ ಅಂತಹುವುಗಳನ್ನು ವ್ಯಾಪಾರಿಗಳಾದರೂ ಕೇಳುತ್ತಾರೆಯೇ? ಈ ಜಗತ್ತಿನಲ್ಲಿ ಅನ್ಯಾಯವೆಂಬುದು ಉನ್ಮತ್ತತೆಯಲ್ಲಿ ತೇಲುತ್ತಾ ಕೋಲಾಹಲವನ್ನೇ ಸೃಷ್ಟಿಸುತ್ತಿರುವ ಈ ದಿನಮಾನಕಾಲದಲ್ಲಿ ಪುಣ್ಯದ ಬಗ್ಗೆ ಚಿಂತನೆ ಮಾಡುವವರಾದರೂ ಯಾರು?

ಮಾನವನ ಹೃದಯಾಂತರಾಳದಲ್ಲಿ ಸ್ವಾರ್ಥವು ಬಹುರೂಪಿಯಾಗಿಯೇ ಇರುತ್ತದೆ. ಈತನು ಅರಿಷಡ್ವರ್ಗಗಳ ದಾಸನಾಗಿ, ಅವುಗಳ ಆಣತಿಯಂತೆಯೇ ತನ್ನ ಜೀವನ ಕಳೆಯುತ್ತಲಿದ್ದಾನೆ. ಅದೂ ಬೇಕು, ಇದೂ ಬೇಕು, ಮತ್ತೊಂದೂ ಬೇಕೆಂಬ ಆಸೆಗಳ ಊಟೆಯಲ್ಲಿಯೇ ತಾನು ಜೀವಿಸುತ್ತಾ ಇದ್ದಾನೆ. ಆ ಮನದಲ್ಲಿನ ಕೆಲವು ಆಸೆಗಳ ಪೂರೈಕೆಗಾಗಿ ಯಾವ ಹಂತಕ್ಕಾದರೂ, ಯಾವ ಹೀನ ಕೆಲಸಕ್ಕಾದರೂ ಕೈ ಹಾಕಿ ತನ್ನ ಸ್ವಾರ್ಥ ಸಿದ್ಧಿಗಾಗಿ ಪಣತೊಟ್ಟು ಪಡೆಯಲೇಬೇಕೆಂಬ ಹುಚ್ಚುತನ ಇವನಲ್ಲಿ ಮೈದುಂಬಿಕೊಂಡಿದ್ದಾಗ ಈತನಲ್ಲಿ ಅನ್ಯಾಯ, ಅಪ್ರಮಾಣಿಕತೆ, ಸುಳ್ಳುಗಳ ಬಲೆಗಳನ್ನು ಹೆಣೆದುಕೊಂಡು ಈತನು ಜೀವನ ಮಾಡುವ ಈ ಕಾಲಘಟ್ಟದಲ್ಲಿ ಉತ್ತಮರು, ಪರೋಪಕಾರಿಗಳೂ, ನಿಸ್ವಾರ್ಥಿಗಳು, ಪ್ರಾಮಾಣಿಕರು, ಸದ್ವಿನಯವಂತರು ಸಿಗುವುದೇ ದುರ್ಲಭವಾಗಿದೆ. ಹೆಚ್ಚಿನವರು ಹೇಗಾದರೂ ಸರಿ ನಾನು ಹಣ ಮಾಡಬೇಕು, ಅಂತಸ್ತು ಹೊಂದಬೇಕು, ಅಧಿಕಾರ ಹಿಡಯಲೇಬೇಕು, ಈ ಜಗತ್ತೇ ನನ್ನ ಕಾಲಬುಡದಲ್ಲಿ ವಶವಾಗಿರಬೇಕು ಎನ್ನುವ ಮನಸ್ಥಿತಿಯವರಲ್ಲಿ ಉತ್ತಮ ಗುಣಗಳನ್ನು ಹೊಂದಿರುವ ಮನುಷ್ಯರು ಸಿಗುವುದೇ ಅಪರೂಪ. ಒಂದು ವೇಳೆ ಅಂತಹ ಸದ್ಗುಣ ಸಂಪನ್ನ ವ್ಯಕ್ತಿಗಳು ಈ ಅನ್ಯಾಯಕಾರರ ನಡುವೆ ಸಿಕ್ಕಲ್ಲಿ ಬದುಕುವುದಾದರೂ ಹೇಗೆ? ಎಂಬ ಪ್ರಶ್ನೆ ಮೂಡುತ್ತದೆ. ಈ ಬಗ್ಗೆ ಈ ಕಗ್ಗದಲ್ಲಿ ಎರಡು ಒಳ್ಳೆಯ ಉಪಮೆಗಳನ್ನು ನೀಡಿದ್ದಾರೆ.

ಅವಾವುವೆಂದರೆ 'ವನ್ಯಮೃಗಗಳ ನಡುವೆ ಗೋವೇನು ಬಂದಿಹುದು?' ಎಂದು. ಕಾಡು ಮೃಗಗಳೇ ತುಂಬಿಕೊಂಡಿರುವಲ್ಲಿ ಸಾಧುವಾದ ಒಂದು ಗೋವು ಬಂದರೆ ಆ ಕಾಡು ಮೃಗಗಳು ಈ ಸಾಧುವಾದ ಗೋವನ್ನು ಬೇಟೆಯಾಡದೇ ಬಿಡುತ್ತವೆಯೇ? ಹಾಗೆಯೇ ಬರೀ ವ್ಯಾಪಾರದ ಲೆಕ್ಕ ಹಾಕುತ್ತಾ ವ್ಯಾಪಾರ ಮಾಡುತ್ತಿರುವ ವರ್ತಕರೇ ತುಂಬಿಕೊಂಡ ಪಣ್ಯವೀಥಿ (ಹಣ ಮಾಡುವ ಸ್ಥಳ) ಯಲ್ಲಿ ಒಬ್ಬ ತಾತ್ವಿಕನು ಬಂದು ತತ್ವಗಳ ಕುರಿತು ನೀತಿ ಪಾಠ ಉಪದೇಶ ಮಾಡಿದರೆ ವ್ಯಾಪಾರಸ್ಥರು ಆತನ ಸಾತ್ವಿಕ ನುಡಿಗಳನ್ನು ಕೇಳಲು ಇಚ್ಛೆ ಪಡುತ್ತಾರೆಯೇ? ಇಲ್ಲ. ಈ ಜಗತ್ತಿನಲ್ಲಿ ಈ ಮಾನವ ಜೀವಿಯು ಸ್ವಾರ್ಥದ ದಾಸನಾಗಿ, ತನಗೆ ಬೇಕಾದುದನ್ನು ಪಡೆಯಲು ಅನ್ಯಾಯವೆಸಗುತ್ತಾ, ಅನ್ಯಾಯದ ಉನ್ಮತ್ತತೆಯಲ್ಲಿ ತೇಲುತ್ತಿರುವಾಗ ಪುಣ್ಯದ ಬಗ್ಗೆ, ಸಾತ್ವಿಕತನದ ಬಗ್ಗೆ, ಪರೋಪಕಾರದ ಬಗ್ಗೆ, ಅರಿವಿನ ಬಗ್ಗೆ, ಸಹಾಯದ ಬಗ್ಗೆ ಚಿಂತನೆಯಾದರೂ ಯಾರು ಮಾಡುತ್ತಾರೆ ಎಂದು ಈ ಕಗ್ಗದಲ್ಲಿ ಕಳವಳವನ್ನು ವ್ಯಕ್ತ ಪಡಿಸಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ತ್ರಿಕೋನ ಸರಣಿಗೆ ಕಿವೀಸ್ ತಂಡ ಪ್ರಕಟ

ಆಕ್ಲೆಂಡ್: ಮುಂದಿನ ತಿಂಗಳು ಜಿಂಬಾಬ್ವೆಯಲ್ಲಿ ನಡೆಯಲಿರುವ ತ್ರಿಕೋನ ಟಿ20 ಸರಣಿಗೆ ನ್ಯೂಜಿಲ್ಯಾಂಡ್ 15 ಆಟಗಾರರ ತಂಡವನ್ನು ಪ್ರಕಟಿಸಿದೆ. ತಂಡದಲ್ಲಿ ಹಲವು ಅಚ್ಚರಿಯ ಆಯ್ಕೆಗಳು ಕಂಡುಬಂದಿದೆ. ಮಿಚೆಲ್ ಸ್ಯಾಂಟ್ನರ್ ತಂಡವನ್ನು

ಮುನ್ನಡೆಸಲಿದ್ದು, ವೈಯಕ್ತಿಕ ಕಾರಣಗಳಿಂದ ಕೇನ್ ವಿಲಿಯಮ್ಸನ್ ಮತ್ತು ಕೈಲ್ ಜೇಮಿಸನ್ ಅಲಭ್ಯರಾಗಿದ್ದಾರೆ. ಗುರುವಾರವಷ್ಟೇ ದಕ್ಷಿಣ ಆಫ್ರಿಕಾ ತನ್ನ ತಂಡವನ್ನು ಪ್ರಕಟಿಸಿತ್ತು, ಇದೀಗ ಕಿವೀಸ್ ಕೂಡ ತನ್ನ ತಂಡವನ್ನು ಅಂತಿಮಗೊಳಿಸಿದೆ, ಅತಿಥೇಯ ಜಿಂಬಾಬ್ವೆ ಇನ್ನಷ್ಟೇ ತಂಡ ಪ್ರಕಟಿಸಬೇಕಿದೆ. ಪಾದದ ಶಸ್ತ್ರಚಿಕಿತ್ಸೆಯ ನಂತರ ಆಡಮ್ ಮಿಲ್ನೆ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಅನ್‌ಕ್ಯಾಪ್ಡ್ ಆಟಗಾರ ಬೆವೊನ್ ಜೇಕಬ್ಸ್ ಮತ್ತೊಮ್ಮೆ ರಾಷ್ಟ್ರೀಯ ತಂಡ ದಲ್ಲಿ ಸ್ಥಾನ ಪಡೆದಿದ್ದು, ಈ ಸರಣಿಯಲ್ಲಿ ಅವರು ಪದಾರ್ಪಣೆ ಮಾಡುವ ವಿಶ್ವಾಸದಲ್ಲಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಶ್ರೀಲಂಕಾ ವಿರುದ್ಧದ ಟಿ20 ಸರಣಿಗೆ ತಂಡದಲ್ಲಿ ಸ್ಥಾನ ಪಡೆದರೂ ಆಡುವ ಅವಕಾಶ ಸಿಕ್ಕಿರಲಿಲ್ಲ. ದಿ ಹಂಡ್ರೆಡ್ ಟೂರ್ನಿಯಲ್ಲಿ ಲಂಡನ್ ಸ್ಪಿರಿಟ್ ತಂಡವನ್ನು ಪ್ರತಿನಿಧಿಸಲು ಸಿದ್ಧರಾಗಿರುವ ವಿಲಿಯಮ್ಸನ್ ಈ ಪ್ರವಾಸದಿಂದ ಹೊರಗುಳಿದಿದ್ದಾರೆ. ಲಾಕಿ ಫರ್ಗುಸನ್ ವಿಶ್ರಾಂತಿ ಪಡೆದಿದ್ದು, ಕೈಲ್ ಜೇಮಿಸನ್ ಅಲಭ್ಯರಾಗಿದ್ದಾರೆ. ಡೆವೋನ್ ಕಾನ್ವೆಯನ್ನು ಆಯ್ಕೆ ಪರಿಗಣಿಸಲಾಗಿಲ್ಲ.

ನ್ಯೂಜಿಲೆಂಡ್ ತಂಡ: ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ಮೈಕೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಜಾಕೋಬ್ ಡಫಿ, ಜ್ಯಾಕ್ ಫೌಲ್ಕ್ಸ್, ಮ್ಯಾಟ್ ಹೆನ್ರಿ, ಬೆವೊನ್ ಜಾಕೋಬ್, ಆಡಮ್ ಮಿಲ್ನೆ, ಡ್ಯಾರಿಲ್ ಮಿಚೆಲ್, ವಿಲ್ ಒ'ರೂರ್ಕ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಟಿಮ್ ಸೀಫರ್ಟ್, ಇಶ್ ಸೋಧಿ.

ರೊನಾಲ್ಡೊಗೆ ದಾಖಲೆ ಸಂಭಾವನೆ

ಸೌದಿ ಪ್ರೊ ಲೀಗ್ ಅಲ್-ನಾಸರ್ ಕ್ಲಬ್ ಜತೆ 2 ಸಾವಿರ ಕೋಟಿ ಗುತ್ತಿಗೆ ಒಪ್ಪಂದ

ದೆಹಲಿ: ಪೋರ್ಚುಗಲ್ ಫುಟ್ಬಾಲ್ ಸೂಪರ್ ಸ್ಟಾರ್ ಕ್ರಿಸ್ಟಿಯಾನೋ ರೊನಾಲ್ಡೊ ಸೌದಿ ಫುಟ್ಬಾಲ್ ಕ್ಲಬ್ ಅಲ್-ನಾಸರ್ ಜೊತೆಗಿನ ತಮ್ಮ ಒಪ್ಪಂದವನ್ನು ನವೀಕರಿಸಿದ್ದು, 2 ಸಾವಿರ ಕೋಟಿ ರು.ಗಳ ಸಂಭಾವನೆ ಒಪ್ಪಂದ ಫುಟ್ಬಾಲ್ ಲೋಕದ ಹೊಸ ದಾಖಲೆಯಾಗಿದೆ.

ಸದ್ಯ ಕ್ರಿಸ್ಟಿಯಾನೋ ರೊನಾಲ್ಡೊ ಸೌದಿ ಕ್ಲಬ್ ಜೊತೆ ಒಪ್ಪಂದ ಹೊಂದಿದ್ದು, ಈ ಒಪ್ಪಂದ ಜೂನ್‌ನಲ್ಲಿ ಕೊನೆಗೊಳ್ಳಲಿದೆ. ರೊನೊಲ್ಡೊ ಮುಂದಿನ ನಡೆ ಏನು ಎಂಬ ಬಗ್ಗೆ ಪ್ರಶ್ನೆಗಳು ಆರಂಭ ವಾಗಿದ್ದವು. ಈಗ ಇದಕ್ಕೆಲ್ಲಾ ಉತ್ತರ ಸಿಕ್ಕಿದೆ.

ಕ್ರಿಸ್ಟಿಯಾನೊ ರೊನಾಲ್ಡೊ 2022ರಲ್ಲಿ ಸೌದಿ ಪ್ರೊ ಲೀಗ್‌ನಲ್ಲಿ ಅಲ್-ನಾಸರ್ ಕ್ಲಬ್ ಸೇರಿಕೊಂಡಿದ್ದರು. ಈ ಒಪ್ಪಂದವು ಇದೇ ತಿಂಗಳು ಅಂತ್ಯವಾಗುತ್ತಿತ್ತು. ಇದೀಗ ರೊನಾಲ್ಡೊ ಅಲ್-ನಾಸರ್ ಕ್ಲಬ್‌ನೊಂದಿಗೆ ಹೊಸ ಒಪ್ಪಂದಕ್ಕೆ ಸಹಿ ಹಾಕಿದ್ದು, ಈ ಮೂಲಕ ಯುರೋಪಿಯನ್ ಕ್ಲಬ್‌ಗಳತ್ತ ಮುಖ ಮಾಡುತ್ತಾರೆ ಎಂಬ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ. ತಮ್ಮ ಒಪ್ಪಂದದ ಬಗ್ಗೆ ರೊನಾಲ್ಡೊ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದು, " ಹೊಸ ಅಧ್ಯಾಯ ಆರಂಭವಾಗಿದೆ. ಅದೇ ಉತ್ಸಾಹ, ಕನಸು, ಒಟ್ಟಿಗೆ ಇತಿಹಾಸ ನಿರ್ಮಿಸೋಣ" ಎಂದು ರೊನಾಲ್ಡೊ ಹೇಳಿಕೊಂಡಿದ್ದಾರೆ. ಇವರ ಈ ಹೊಸ ಒಪ್ಪಂದವು 2027 ರವರೆಗೆ ವಿಸ್ತರಣೆ ಆಗಿದೆ ಎಂದು ಅಲ್ ನಾಸರ್ ಕ್ಲಬ್ ತಿಳಿಸಿದೆ.

2 ಸಾವಿರ ಕೋಟಿ ರೂ ಸಂಭಾವನೆ: ಅಲ್ ನಾಸರ್ ಕ್ಲಬ್ ಜೊತೆ ಹೊಸ ಒಪ್ಪಂದದ ಪ್ರಕಾರ ರೊನಾಲ್ಡೊ ವಾರ್ಷಿಕ 178 ಮಿಲಿಯನ್ ಪೌಂಡ್ (ಪ್ರತಿ ವರ್ಷ ಸುಮಾರು 2 ಸಾವಿರ ಕೋಟಿ ರೂ.) ಸಂಭವಾನೆ ಪಡೆಯಲಿದ್ದಾರೆ. ಇದರ ಹೊರತಾಗಿಯೂ ರೊನಾಲ್ಡೊ ಅವರಿಗೆ ಬೇರೆ ಭತ್ಯೆಗಳು ಸಹ ಸಿಗಲಿವೆ.

ಒಂದು ವೇಳೆ ಇವರು ಪ್ರತಿನಿಧಿಸುವ ತಂಡ ಗೆದ್ದರೆ, ಪ್ರತ್ಯೇಕವಾಗಿ 80 ಲಕ್ಷ ಪೌಂಡ್ ನೀಡಲಾಗುತ್ತದೆ ಎನ್ನಲಾಗಿದೆ. ಅಲ್ಲದೆ ಒಪ್ಪಂದದ ಪೂರ್ವಭಾವಿಯಾಗಿ ಕ್ರಿಸ್ಟಿಯಾನೊ 2.45 ಕೋಟಿ ಪೌಂಡ್ ಪಡೆದಿದ್ದಾರೆ. ಇದಲ್ಲದೆ ಅವರ ಪ್ರಯಾಣಕ್ಕೆ ಒಂದು ಖಾಸಗಿ ಜೆಟ್ ಅನ್ನು ಕೂಡ ನೀಡಲಾಗುತ್ತಿದೆ ಎಂದು ಹೇಳಲಾಗಿದೆ.

ರೊನಾಲ್ಡೊಗೆ ಸಿಕ್ಕಿದ್ದೇನು?

ಟಾಕ್‌ಸ್ಪೋರ್ಟ್ ವರದಿ ಪ್ರಕಾರ, ರೊನಾಲ್ಡೊ ಮುಂದಿನ ಎರಡು ವರ್ಷಗಳಲ್ಲಿ ವರ್ಷಕ್ಕೆ 178 ಮಿಲಿಯನ್ ಪೌಂಡ್‌ಗಳನ್ನು (ಸುಮಾರು 400 ಮಿಲಿಯನ್ ಯುರೋಗಳು ಅಥವಾ 2000 ಕೋಟಿ ರು.) ಗಳಿಸಲಿದ್ದಾರೆ. ಇದಲ್ಲದೆ ಈ ಮಹತ್ವದ ಒಪ್ಪಂದವು ಈ ಕೆಳಗಿನವುಗಳನ್ನು ಸಹ ಒಳಗೊಂಡಿದೆ:

- **2.45 ಕೋಟಿ ಪೌಂಡ್ ಮುಂಗಡ ಹಣ (ಎರಡನೇ ವರ್ಷದಲ್ಲಿ 3.8 ಕೋಟಿ ಪೌಂಡ್‌ಗೆ ಹೆಚ್ಚಳ)**
- **ಅಲ್ ನಸರ್ ಸೌದಿ ಪ್ರೊ ಲೀಗ್ ಗೆದ್ದರೆ 8 ಮಿಲಿಯನ್ ಬೋನಸ್**
- **ಅಲ್ ನಸರ್ ಏಷ್ಯನ್ ಚಾಂಪಿಯನ್ಸ್ ಲೀಗ್ ಗೆದ್ದರೆ 5 ಮಿಲಿಯನ್ ಬೋನಸ್**
- **ಗೋಲ್ಡನ್ ಬೂಟ್ ಗೆದ್ದರೆ 4 ಮಿಲಿಯನ್ ಬೋನಸ್**
- **ಅಲ್ ನಸರ್ ನ ಶೇ.15% ಮಾಲೀಕತ್ವ (3.3 ಕೋಟಿ ಪೌಂಡ್ ಅಂದಾಜು)**
- **ಪ್ರತಿ ಗೋಲಿಗೆ 80 ಸಾವಿರ ಬೋನಸ್ (ಎರಡನೇ ವರ್ಷದಲ್ಲಿ 20% ಹೆಚ್ಚಳ)**
- **ಪ್ರತಿ ಸಹಾಯಕ್ಕೆ 40 ಸಾವಿರ ಬೋನಸ್ (ಎರಡನೇ ವರ್ಷದಲ್ಲಿ 20% ಹೆಚ್ಚಳ)**
- **60 ಮಿಲಿಯನ್ ಮೌಲ್ಯದ ಪ್ರಾಯೋಜಕತ್ವದ ಒಪ್ಪಂದಗಳ ಭರವಸೆ**
- **4 ಮಿಲಿಯನ್ ಮೌಲ್ಯದ ಖಾಸಗಿ ಜೆಟ್ ವೆಚ್ಚಗಳು ಕೂಡ ಸೇರಿದೆ.**

ಅಶ್ವಿನ್-ಶಿವಂ ದುಬೆಗೆ ಗೇಟ್‌ಪಾಸ್ ಸಂಭವ

ಸ್ಯಾಮ್ಸನ್‌ಗೆ ಸಿಎಸ್‌ಕೆ ಗಾಳ

ಚೆನ್ನೈ: ಐಪಿಎಲ್ 2025ನೇ ಆವೃತ್ತಿಯಲ್ಲಿ ಕಳಪೆ ಪ್ರದರ್ಶನದಿಂದಾಗಿ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದ ಚೆನ್ನೈ ಸೂಪರ್ ಕಿಂಗ್ಸ್ ಇದೀಗ ತಂಡದಲ್ಲಿ ಮಹತ್ತರ ಬದಲಾವಣೆಗೆ ಮುಂದಾಗಿದೆ. ಐಪಿಎಲ್ 2026 ಕ್ಕೂ ಮೊದಲು ರವಿಚಂದ್ರನ್ ಅಶ್ವಿನ್ ಮತ್ತು ಶಿವಂ ದುಬೆ ಅವರನ್ನು ಸಂಜು ಸ್ಯಾಮ್ಸನ್ ಬದಲಿಗೆ ರಾಜಸ್ಥಾನ್ ರಾಯಲ್ಸ್ ಜೊತೆಗೆ ವಿನಿಮಯ ಮಾಡಿಕೊಳ್ಳುವ ಸಾಧ್ಯತೆಯಿದೆ.

ಈ ತಿಂಗಳ ಆರಂಭದಲ್ಲಿ, ಕೇರಳದ ವಿಕೆಟ್ ಕೀಪರ್ ಬ್ಯಾಟರ್‌ನ ಏಜೆಂಟ್ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಇಖಓ ಪೋಸ್ಟ್ ಲೈಕ್ ಮಾಡಿದ್ದಾರೆ. ಅದು ಸ್ಯಾಮ್ಸನ್ ಚೆನ್ನೈ ಸೂಪರ್ ಕಿಂಗ್ಸ್ ಸೇರುವ ಸಾಧ್ಯತೆಯ ಬಗ್ಗೆ ಸುಳಿವು ನೀಡಿದೆ. ಇದೀಗ, ಇನ್ನೊಬ್ಬ ವ್ಯಕ್ತಿ ಕೂಡ ಈ ನಡೆ ಸಂಭವಿಸಬಹುದು ಎಂದು ಸೂಚಿಸಿ ದ್ದಾರೆ. ಆದರೆ, ಒಪ್ಪಂದ ಕಾರ್ಯರೂಪಕ್ಕೆ ಬರಲು ಸಿಎಸ್‌ಕೆ ತನ್ನ ಇಬ್ಬರು ಸ್ಟಾರ್ ಆಟಗಾರ ರನ್ನು ವಿನಿಮಯ ಮಾಡಿಕೊಳ್ಳಬೇಕಾಗಬಹುದು.

ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ, ಆರ್.ಅಶ್ವಿನ್ ಜೊತೆ ನಿಕಟ ಸಂಬಂಧ ಹೊಂದಿರುವ ಪ್ರಸನ್ನ ಅಘೋರಾಮ್ ಅವರು ರಾಜಸ್ಥಾನ್ ರಾಯಲ್ಸ್ ಮತ್ತು ಸಿಎಸ್‌ಕೆ ನಡುವೆ ವ್ಯಾಪಾರ ಮಾತುಕತೆಗಳು ಪ್ರಾರಂಭವಾಗಿವೆ ಎಂದು ಹೇಳಿದ್ದಾರೆ. ಸಿಎಸ್‌ಕೆ ಆಫ್ ಸ್ಪಿನ್ನರ್ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟ್ಸಮನ್ ಬದಲಿಗೆ ಟಾಪ್ ಆರ್ಡರ್ ಬ್ಯಾಟ್ಸ್‌ಮನ್ ಅನ್ನು ತಂಡಕ್ಕೆ ಕರೆತರುವ ಗುರಿಯನ್ನು ಹೊಂದಿದೆ ಎಂದು ಹೇಳಿದ್ದಾರೆ.

ಪ್ರಸನ್ನ ಉಲ್ಲೇಖಿಸಿರುವ ಭಾರತದ ಆಫ್ ಸ್ಪಿನ್ನರ್ ಆರ್ ಅಶ್ವಿನ್. ಐಪಿಎಲ್ 2025ರ ಮೆಗಾ ಹರಾಜಿನಲ್ಲಿ ಖರೀದಿಸಲಾದ ಅವರು 10 ವರ್ಷಗಳ ನಂತರ ಸಿಎಸ್‌ಕೆಗೆ ಮರಳಿದ್ದಾರೆ.

ಅಶ್ವಿನ್ ಆಡಿದ 9 ಪಂದ್ಯಗಳಲ್ಲಿ ಕೇವಲ 7 ವಿಕೆಟ್ ಪಡೆದು ನಿರಾಶೆ ಮೂಡಿಸಿದ್ದಾರೆ.

ಮಧ್ಯಮ ಕ್ರಮಾಂಕದ ಎಡಗೈ ಬ್ಯಾಟ್ಸ್‌ಮನ್ ಬಗ್ಗೆ ಹೇಳುವುದಾದರೆ, ಅದು ಬಹುಶಃ ಶಿವಂ ದುಬೆ ಆಗಿರಬಹುದು. ಅವರು ಐಪಿಎಲ್‌ನಲ್ಲಿ ಸಿಎಸ್‌ಕೆಯ ಭವಿಷ್ಯದ ತಾರೆಯಾಗಿ ಹೊರಹೊಮ್ಮಿದ್ದಾರೆ. ದುಬೆ ಐಪಿಎಲ್ 2025 ರಲ್ಲಿ 14 ಪಂದ್ಯಗಳಿಂದ 32.45 ಸರಾಸರಿಯೊಂದಿಗೆ 357 ರನ್ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎಡಗೈ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ರವೀಂದ್ರ ಜಡೇಜಾ ಕೂಡ ಆಗಿರಬಹುದು. ಆದರೆ, ಅದು ದುಬೆ ಆಗಿರುವ ಸಾಧ್ಯತೆ ಹೆಚ್ಚಿದೆ. ಮುಖ್ಯವಾಗಿ ಜಡೇಜಾ ಇಷ್ಟು ವರ್ಷಗಳಲ್ಲಿ ಆಲ್‌ರೌಂಡರ್ ಪಾತ್ರವನ್ನು ನಿರ್ವಹಿಸಿದ್ದಾರೆ. ದುಬೆ ಕೇವಲ ಬ್ಯಾಟ್ಸ್‌ಮನ್ ಆಗಿ ಆಡಿದ್ದಾರೆ.

ಈ ಮಧ್ಯೆ, ಸಂಜು 2025ರಲ್ಲಿ ಆರ್‌ಆರ್ ಪರ ಸಂಪೂರ್ಣ ಆವೃತ್ತಿಯಲ್ಲಿ ಆಡಲಿಲ್ಲ. ರಿಯಾನ್ ಪರಾಗ್ ಅವರು ಏಳು ಪಂದ್ಯಗಳಲ್ಲಿ ನಾಯಕನಾಗಿದ್ದರು. ಅವುಗಳಲ್ಲಿ ಕೆಲವು ಪಂದ್ಯಗಳಲ್ಲಿ ಕೀಪರ್ ಬ್ಯಾಟರ್ ಗಾಯದಿಂದ ಬಳಲುತ್ತಿದ್ದರು. ಇದಲ್ಲದೆ, ಸ್ಯಾಮ್ಸನ್ ಮತ್ತು ದ್ರಾವಿಡ್ ನಡುವೆ ಬಿರುಕು ಉಂಟಾಗಿದ್ದು, ಅದು ಮುಂದಿನ ಆವೃತ್ತಿಯಲ್ಲಿ ತಂಡಗಳನ್ನು ಬದಲಾಯಿಸಲು ಒತ್ತಾಯಿಸಬಹುದು ಎಂದು ವರದಿಗಳು ಹೇಳಿವೆ.

ಕುಲ್‌ದೀಪ್ ಪರ ಮೈಕೆಲ್ ಕ್ಲಾರ್ಕ್ ಬ್ಯಾಟಿಂಗ್

ದೆಹಲಿ: ಇಂಗ್ಲೆಂಡ್ ವಿರುದ್ಧ ಟೆಸ್ಟ್ ಸರಣಿಯ ಇನ್ನುಳಿದ ಪಂದ್ಯಗಳಲ್ಲಿ ಭಾರತ ತಂಡದ ಪ್ಲೇಯಿಂಗ್ ಇಲೆವೆನ್‌ನಲ್ಲಿ ಚೈನಾಮನ್ ಸ್ಪಿನ್ನರ್ ಕುಲ್‌ದೀಪ್ ಯಾದವ್‌ಗೆ ಅವಕಾಶ ನೀಡಬೇಕೆಂದು ಆಸ್ಟ್ರೇಲಿಯಾ ಮಾಜಿ ನಾಯಕ ಮೈಕಲ್ ಕ್ಲಾರ್ಕ್ ಸಲಹೆ ನೀಡಿದ್ದಾರೆ. ವಿಕೆಟ್ ಪಡೆದು ಪಂದ್ಯದ ಫಲಿತಾಂಶ ಬದಲಾಯಿಸುವ ಸಾಮರ್ಥ್ಯ ಹೊಂದಿರುವ ಬೌಲರ್ ಅನ್ನು ಬೆಂಚ್ ಕಾಯಿಸುವುದು ಬುದ್ಧಿಹೀನ ಕೆಲಸವೆಂದು ಅವರು ಟೀಕಿಸಿದ್ದಾರೆ.

ಇಂಗ್ಲೆಂಡ್ ವಿರುದ್ಧ ಲೀಡ್ಸ್‌ನಲ್ಲಿ ನಡೆದಿದ್ದ ಮೊದಲನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡದಲ್ಲಿ ಸ್ಪಿನ್ನರ್ ಆಗಿ ರವೀಂದ್ರ ಜಡೇಜಾ ಒಬ್ಬರೇ ಸ್ಥಾನ ಪಡೆದಿದ್ದರು. ಆದರೆ ಎರಡು ಇನಿಂಗ್ಸ್‌ಗಳಿಂದ ಕೇವಲ ಒಂದು ವಿಕೆಟ್ ಪಡೆದಿದ್ದರು. ಆದ್ದರಿಂದ ಇಂಗ್ಲೆಂಡ್ 371 ರನ್ ಗುರಿಯನ್ನು ಸುಲಭವಾಗಿ ತಲುಪಿ 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತ್ತು. ಇಂಗ್ಲೆಂಡ್ ಹಾಗೂ ಭಾರತ ನಡುವಿನ ಟೆಸ್ಟ್ ಸರಣಿಯ ನಿಮಿತ್ತ ಪಾಡ್‌ಕಾಸ್ಟ್‌ವೊಂದರಲ್ಲಿ ಮಾತನಾಡಿದ ಮೈಕಲ್ ಕ್ಲಾರ್ಕ್, ಉಳಿದ ಪಂದ್ಯಗಳಲ್ಲಿ ಕುಲ್‌ದೀಪ್ ಯಾದವ್‌ಗೆ ಸ್ಥಾನ ನೀಡಬೇಕು ಎಂದು ಸಲಹೆ ನೀಡಿದ್ದಾರೆ. ಪಂದ್ಯದ ಸೋಲಿಗೆ ನಾನು ವೈಯಕ್ತಿಕವಾಗಿ ಯಾವುದೇ ಬೌಲರ್ ಅನ್ನು ಗುರಿ ಮಾಡುವುದಿಲ್ಲ. ಆದರೆ ತಂಡದಲ್ಲಿ ಕುಲ್‌ದೀಪ್ ಯಾದವ್ ಇರಬೇಕಿತ್ತು ಎಂಬುದು ನನ್ನ ಅನಿಸಿಕೆ. ಆತನನ್ನು ತಂಡದಿಂದ ಹೊರಗಿಡುವುದು ನಿಜಕ್ಕೂ ಬುದ್ಧಿಹೀನ ಸಂಗತಿಯಾಗಿದೆ. ಟೆಸ್ಟ್ ಕ್ರಿಕೆಟ್‌ನಲ್ಲೂ ತಮ್ಮ ಪರಿಣಾಮವಾಗಿ ಬೌಲಿಂಗ್ ಪ್ರದರ್ಶನದಿಂದ ವಿಕೆಟ್ ಪಡೆಯುವ ಸಾಮರ್ಥ್ಯವನ್ನು ಅವರು ಹೊಂದಿದ್ದಾರೆ ಎಂದು ವಿಶ್ವಕಪ್ ವಿಜೇತ ನಾಯಕ ಕ್ಲಾರ್ಕ್ ಹೇಳಿದ್ದಾರೆ.

ಹೆಚ್ಚುವರಿ ಸ್ಪಿನ್ನರ್‌ಗೆ ಸ್ಥಾನ ನೀಡಿ: ಭಾರತ ತಂಡ ಇತ್ತೀಚಿನ ದಿನಗಳಲ್ಲಿ ಹೆಚ್ಚುವರಿ ಬ್ಯಾಟರ್ ಆಯ್ಕೆಗೆ ಒತ್ತು ನೀಡುವ ಮೂಲಕ ಬ್ಯಾಟಿಂಗ್ ಸಾಮರ್ಥ್ಯ ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸುತ್ತಿದೆ. ಆ ಮೂಲಕ ಒಬ್ಬ ಹೆಚ್ಚುವರಿ ಸ್ಪಿನ್ನರ್‌ಗೆ ತಂಡದಲ್ಲಿ ಜಾಗ ನೀಡುವ ಸಮಸ್ಯೆ ತೆಗೆದುಕೊಳ್ಳುತ್ತಿಲ್ಲ. ಆದರೆ ಇಂಗ್ಲೆಂಡ್ ವಿರುದ್ಧ ಪಂದ್ಯ ಗೆಲ್ಲಬೇಕೆಂದದರೆ 20 ವಿಕೆಟ್ ಪಡೆಯುವುದು ಮುಖ್ಯವಾಗುತ್ತದೆ ಎಂದು ಕ್ಲಾರ್ಕ್ ಹೇಳಿದ್ದಾರೆ. ಇದೇ ವೇಳೆ ಮೊದಲ ಪಂದ್ಯದಲ್ಲಿ ೨ ಇನಿಂಗ್ಸ್ ಸಾಧನೆ ಮಾಡಿದ ಯಾರ್ಕರ್ ಸ್ಪೆಷಲಿಸ್ಟ್ ಜಸ್‌ಪ್ರೀತ್ ಬುಮ್ರಾ ಅವರನ್ನು ಕ್ಲಾರ್ಕ್ ಶ್ಲಾಘಿಸಿದ್ದಾರೆ. ಬುಮ್ರಾ ವಿಶ್ವಶ್ರೇಷ್ಠ ಬೌಲರ್ ಆಗಿದ್ದು, ಆತನಲ್ಲಿ ವಿಕೆಟ್ ಪಡೆಯುವ ಸಾಮರ್ಥ್ಯವಿದೆ. ಆದರೆ ಅದೇ ಸಮಯದಲ್ಲಿ ತಂಡದಲ್ಲಿರುವ ಇತರ ಮೂವರು ವೇಗಿಗಳಿಂದಲೂ ಉತ್ತಮ ಬೌಲಿಂಗ್ ಪ್ರದರ್ಶನ ಮೂಡಿಬರಬೇಕು ಎಂದು ಮೈಕಲ್ ಕ್ಲಾರ್ಕ್ ಸಲಹೆ ನೀಡಿದ್ದಾರೆ.

ಮೊನಚಿಲ್ಲದ ಬೌಲಿಂಗ್: ಮೊಹಮ್ಮದ್ ಶಮಿ ಟೀಕೆ

ಲೀಡ್ಸ್: ಇಲ್ಲಿನ ಹೆಡಿಂಗ್ಲೆಯಲ್ಲಿ ನಡೆದಿದ್ದ ಮೊದಲನೇ ಟೆಸ್ಟ್ ಪಂದ್ಯದ ಬೌಲಿಂಗ್ ಪ್ರದರ್ಶನವನ್ನು ಅನುಭವಿ ವೇಗಿ ಮೊಹಮ್ಮದ್ ಶಮಿ ಕಟುವಾಗಿ ಟೀಕಿಸಿದ್ದಾರೆ. ಪಂದ್ಯದಲ್ಲಿ ಜಸ್‌ಪ್ರೀತ್ ಬುಮ್ರಾಗೆ ಇತರೆ ಬೌಲರ್‌ಗಳು ಸಾಥ್ ನೀಡಿದ್ದರೆ ಪಂದ್ಯವನ್ನು ಗೆಲ್ಲಬಹುದಿತ್ತು ಎಂದು ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಪಂದ್ಯದಲ್ಲಿ ಜಸ್‌ಪ್ರೀತ್ ಬುಮ್ರಾ ಬಿಟ್ಟು ಇನ್ನುಳಿದ ಬೌಲರ್‌ಗಳು 4.5ರ ಸರಾಸರಿಗಿಂತಲೂ ಹೆಚ್ಚು ರನ್ ಬಿಟ್ಟುಕೊಟ್ಟಿದ್ದರಿಂದ ಇಂಗ್ಲೆಂಡ್ ಐದು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿದೆ ಎಂದು ಹೇಳಿದ್ದಾರೆ. ಆದ್ದರಿಂದ ಇನ್ನುಳಿದ ಪಂದ್ಯಗಳಲ್ಲಿ ಬೌಲರ್‌ಗಳು ಬುಮ್ರಾ ಅವರಿಂದ ಸಲಹೆ ಪಡೆಯಬೇಕು ಎಂದು ಶಮಿ ಹೇಳಿದ್ದಾರೆ.

ತಮ್ಮ ಅಧಿಕೃತ ಯುಟ್ಯೂಬ್ ಚಾನೆಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಮೊದಲ ಟೆಸ್ಟ್ ಸೋಲಿನ ಕುರಿತು ಮೊಹಮ್ಮದ್ ಶಮಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ತಂಡದ ಇತರೆ

ಬೌಲರ್‌ಗಳು ಬುಮ್ರಾಗೆ ಉತ್ತಮ ಬೆಂಬಲ ನೀಡಿದ್ದರೆ, ಆಗ ಭಾರತ ತಂಡ ಪಂದ್ಯವನ್ನು ಸುಲಭವಾಗಿ ಗೆಲ್ಲಬಹುದಿತ್ತು. ಹಾಗಾಗಿ ಬೌಲಿಂಗ್ ವಿಭಾಗದಲ್ಲಿ ಹೆಚ್ಚು ಶ್ರಮವಹಿಸಿ ಅಭ್ಯಾಸ ಮಾಡಬೇಕು ಎಂದು ಅನುಭವಿ ವೇಗಿ ಶಮಿ ಹೇಳಿದ್ದಾರೆ.

ಸೂಕ್ಷ್ಮ ಸಂವೇದನೆಯ ಸಂಕಥನ

ಪರಿಸರ ಮಾನವನಿಗೆ ಮುಖ್ಯ, ಕಾಡಿಲ್ಲದೆ ನಾವು ಇರಲೂ ಸಾಧ್ಯವೇ ಇಲ್ಲ, ಇಂತಹ ಸೂಕ್ಷ್ಮ ಸಂವೇಧನಕಥೆಯನ್ನು ತಿಮ್ಮನ ಮೊಟ್ಟೆಗಳು ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಕಾಡು ಮತ್ತು ನಾಡಿನ ನಂಟನ್ನು ಇಲ್ಲಿ ಮನಮುಟ್ಟುವಂತೆ ಹೇಳಲಾಗಿದೆ.

ತಿಮ್ಮ ಸರಿಯಾದ ನೆಲೆಯಿಲ್ಲದೆ, ಉಳುವೆ ಮಾಡಲು ನೆಲವೂ ಇಲ್ಲದೆ, ಜೀವನ ಕಟ್ಟಿಕೊಡಲು ಅಲೆದಾಡುವಾತ, ಪತ್ನಿ ಮಕ್ಕಳೊಂದಿಗೆ ಕಾಡಂಚಿನಲ್ಲಿಯೇ ಅವನ ವಾಸ. ಪಶ್ಚಿಮ ಘಟ್ಟದ ದಟ್ಟ ಕಾನನ ನೂರಾರು ಜೀವಿಗಳಿಗೆ ಆವಾಸ. ಕಾಡಂಚಿನಲ್ಲಿ ವಾಸಿಸುತ್ತಾ ತಲೆತಲಾಂತರಗಳಿಂದಲೂ ಕಾಡಿನ ಜತೆಗೆ

ಚಿತ್ರ : ತಿಮ್ಮನ ಮೊಟ್ಟೆಗಳು, ನಿರ್ದೇಶನ : ರಕ್ಷಿತ್ ತೀರ್ಥಹಳ್ಳಿ
ನಿರ್ಮಾಣ : ಆದರ್ಶ ಐಯ್ಯಂಗಾರ್
ತಾರಾಗಣ : ಕೇಶವ್ ಗುತ್ತಳಿಕೆ, ಶೃಂಗೇರಿ ರಾಮಣ್ಣ, ಆಶಿಕಾ, ಪ್ರಗತಿ, ಸುಚೇಂದ್ರ ಪ್ರಸಾದ್, ರಘು ರಾಮನಕೊಪ್ಪ ಮುಂತಾದವರು, ರೇಟಿಂಗ್ : ★★★

ಅಲ್ಲಿನ ಪ್ರಕೃತಿ ಸಂರಕ್ಷಣೆ ಮಾಡಿಕೊಂಡು ಬಂದಿರುವ ಹಿರಿಯರು ನಾಗಬನ, ದೇವರ ಬನ ನಿರ್ಮಿಸಿ ಕಾಡಿನ ಜತೆಗೆ ಸರ್ಪಗಳನ್ನು ಕಾಪಾಡಿಕೊಂಡು ಬಂದಿರುತ್ತಾರೆ. ಹೀಗಿರುವಾಗಲೇ ಆ ಕಾಡಿನಲ್ಲಿ ಕಾಳಿಂಗ ಸರ್ಪದ ಅಧ್ಯಯನಕ್ಕೆ ಉರಗ ತಜ್ಞರ ತಂಡ ಬರುತ್ತದೆ. ಕಾಳಿಂಗದ ಆವಾಸ, ಅದು ಮೊಟ್ಟೆ ಇಡುವ ಪ್ರದೇಶ, ಅದರ ಸಂರಕ್ಷಣೆಯ ಬಗ್ಗೆ ಅಧ್ಯಯನ ಮಾಡಲು ಧಾವಿಸುತ್ತಾರೆ. ಕಾಡಿನ ಬಗ್ಗೆ ತಿಳಿಯದ ಉರಗ ತಜ್ಞರು, ಕಾಳಿಂಗನನ್ನು ಹುಡುಕಲು ತಿಮ್ಮನ ಸಹಾಯ ಕೋರುತ್ತಾರೆ. ನಗರದಿಂದ ಬಂದವರಿಗೆ ಸಹಾಯ ಮಾಡಿದರೆ ನನಗೆ ಲಾಭವಾಗಬಹುದು ಚಿಕ್ಕ ಸೂರಾದರೂ ಪಡೆಯಬಹುದು ಎಂಬ ಆಸೆಯಿಂದ ತಿಮ್ಮ ಉರಗ ತಜ್ಞರಿಗೆ ಸಹಾಯ ಮಾಡಲು ಸಮ್ಮತಿಸುತ್ತಾನೆ. ಆ ಊರಿನ ಹಿರಿಯ ವೆಂಕಟಯ್ಯ, ಕಾಡು ನಮ್ಮ ದೈವದ ಸಂಕೇತ ಯಾರು ಕಾನನದೊಳಗೆ ಪ್ರವೇಶ ಮಾಡದಂತೆ ಎಚ್ಚರಿಕೆ ನೀಡುತ್ತಾನೆ. ಈ ಎಚ್ಚರಿಕೆ ಧಿಕ್ಕರಿಸಿದ, ಉರಗ ತಜ್ಞರು ತಿಮ್ಮನ ನೆರವಿನಿಂದ ಕಾಡಿನೊಳಗೆ ಪ್ರವೇಶಿಸುತ್ತದೆ. ಆಗ ಅಲ್ಲಿ ಅಚ್ಚರಿ ಘಟನೆಗಳು ನಡೆಯುತ್ತವೆ. ಅದು ಏನು ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು.

ನಿರ್ದೇಶಕ ರಕ್ಷಿತ್ ತೀರ್ಥಹಳ್ಳಿ ಇಂದು ಎಲ್ಲರೂ ಅರಿಯಲೇಬೇಕಾದ ಸೂಕ್ಷ್ಮ ಸಂವೇದನೆಯ ಅಂಶಗಳನ್ನು ಕಲೆಹಾಕಿ ಕಥೆ ಹೆಣೆದು ಅದನ್ನು ಮುಟ್ಟುವಂತೆ ತೆರೆಗೆ ತಂದಿದ್ದಾರೆ. ತಿಮ್ಮ, ಉರಗ ತಜ್ಞರ ಪಾತ್ರಗಳ ಮೂಲಕ ಕಾಡಿನ ಮೇಲೆ ಜನರ ಹಸ್ತಕ್ಷೇಪವಾದರೆ ಹೇಗೆ ಕಾಡು ನಾಶವಾಗುತ್ತದೆ, ಅಲ್ಲಿನ ಪ್ರಾಣಿಗಳು ಸಂಕಷ್ಟಕ್ಕೆ ಸಿಲುಕುತ್ತವೆ, ಕಾಡಿನ ನಾಶದಿಂದ ನಾಡಿನ ಮೇಲಾಗುತ್ತಿರುವ ಪರಿಣಾಮಗಳೇನು ಚಿತ್ರದಲ್ಲಿ ಹೇಳಲಾಗಿದೆ. ತಿಮ್ಮನ ಪಾತ್ರದಲ್ಲಿ ಕೇಶವ್ ಗುತ್ತಳಿಕೆ ಅಮೋಘ ಅಭಿನಯ ತೋರಿದ್ದಾರೆ. ವೆಂಟಯ್ಯನಾಗಿ ಶೃಂಗೇರಿ ರಾಮಣ್ಣ ಮೆಚ್ಚುಗೆಯಾಗುತ್ತಾರೆ, ಉರಗ ತಜ್ಞರಾಗಿ ಸುಚೇಂದ್ರ ಪ್ರಸಾದ್ ತಮ್ಮ ಪಾತ್ರಕ್ಕೆ ಜೀವತುಂಬಿದ್ದಾರೆ. ಮಲೆನಾಡಿನ ಸುಂದರ ಪರಿಸರದಲ್ಲಿ ತಿಮ್ಮನ ಮೊಟ್ಟೆಗಳು ಚಿತ್ರೀಕರಣವಾಗಿದ್ದು, ಅಲ್ಲಿನ ನಿಸರ್ಗದ ಸೊಬಗು ಮನಸೂರೆಗೊಳ್ಳುತ್ತದೆ. ಒಟ್ಟಾರೆ ತಿಮ್ಮನ ಮೊಟ್ಟೆಗಳು ಮನೆಮಂದಿ ಎಲ್ಲಾ ಕುಳಿತು ನೋಡುವ ಸಿನಿಮಾವಾಗಿದೆ.

ವಿಟಾಕೀಸ್

ಲಕ್ಷ್ಯ ಸೆಳೆದ ಹಾಡುಗಳು

ಬಹುತೇಕ ಉತ್ತರ ಕರ್ನಾಟಕದ ಪ್ರತಿಭೆಗಳೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಲಕ್ಷ್ಯ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ತೊಂಬತ್ತರ ದಶಕದಲ್ಲಿ ಉತ್ತರ ಕರ್ನಾಟಕದಲ್ಲಿ ನಡೆದ ನೈಜ ಘಟನೆಯನ್ನು ಸ್ಫೂರ್ತಿಯಾಗಿಟ್ಟುಕೊಂಡು ಲಕ್ಷ್ಯ ಚಿತ್ರ ಸಿದ್ಧವಾಗಿದೆ. ಅರ್ಜುನ ಪಿ. ಡೊಣೂರ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಲಕ್ಷ್ಯ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಬಿಡುಗಡೆಯಾಗಿವೆ.

ಕನ್ನಡದಲ್ಲಿ ಲಕ್ಷ್ಯ ಎಂದರೆ, ಗಮನ ಕೊಡುವುದು ಎಂಬ ಅರ್ಥವಿದೆ. ಇದು ಮಕ್ಕಳ ಲಕ್ಷ್ಯದ ಕುರಿತು ಮಾಡಲಾದ ಚಿತ್ರ. ಮಕ್ಕಳು ಯಾವ ವಿಷಯಕ್ಕೆ ಲಕ್ಷ್ಯ ಕೊಡುತ್ತಾರೆ, ಅದರಿಂದ ಏನಾಗುತ್ತದೆ ಎಂಬುದೇ ಈ ಚಿತ್ರದ ಕಥಾಹಂದರ. ಸಂಪೂರ್ಣ ಉತ್ತರ ಕರ್ನಾಟಕದ ಸೊಗಡಿನಲ್ಲಿಯೇ ಸಂಭಾಷಣೆ ಮೂಡಿಬಂದಿದೆ. ಅಲ್ಲಿನ ಕಲಾವಿದರೆ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಚಿತ್ರದಲ್ಲಿ ಮೂರು ಹಾಡುಗಳಿದ್ದು, ಡಾ. ದೊಡ್ಡರಂಗೇಗೌಡ, ಶಂಕರ ಪಾಗೋಜಿ, ಶಿವಾನಂದ ಭೂಶಿ ಸಾಹಿತ್ಯ ರಚಿಸಿದ್ದು, ಆರವ್ ರಿಶಿಕ್ ಸಂಗೀತ ಸಂಯೋಜಿಸಿದ್ದಾರೆ. ಅನಿರುದ್ಧ ಶಾಸ್ತ್ರಿ, ಮದ್ವೇಶ್ ಭಾರದ್ವಾಜ್, ಚೇತನ್ ನಾಯಕ್ ಗೀತೆಗಳಿಗೆ ದನಿಯಾಗಿದ್ದಾರೆ. ಸಂಗಮೇಶ ಉಪಾಸೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಉಳಿದಂತೆ ಉತ್ತರ ಕರ್ನಾಟಕ ಭಾಗದ ಬಾಲ ಕಲಾವಿದರು ಚಿತ್ರದಲ್ಲಿ ನಟಿಸಿದ್ದಾರೆ. ಉತ್ತರ ಕರ್ನಾಟಕದ ಬಾಗಲಕೋಟೆ, ಕೂಡಲ ಸಂಗಮ ಸುತ್ತಮುತ್ತ ಚಿತ್ರೀಕರಣ ನಡೆಯಲಾಗಿದೆ. ಲಕ್ಷ್ಯ ಆಗಸ್ಟ್‌ನಲ್ಲಿ ತೆರೆಗೆ ಬರಲಿದೆ.

ಲಕ್ಷ್ಯ ಉತ್ತರ ಕರ್ನಾಟಕ ಸೊಗಡಿನ ಮಕ್ಕಳ ಚಿತ್ರವಾದರೂ, ಇದರಲ್ಲಿ ಒಂದಷ್ಟು ಗಂಭೀರ ಸಾಮಾಜಿಕ ವಿಷಯಗಳನ್ನು ಹೇಳಿದ್ದೇವೆ. ಮನರಂಜನೆಯ ಜತೆಗೆ ಸಾಮಾಜಿಕ ವಿಷಯಗಳು ಅಡಗಿವೆ. ಮಕ್ಕಳನ್ನು ಮುಖ್ಯಪಾತ್ರವಾಗಿಟ್ಟುಕೊಂಡು ಮನಮುಟ್ಟುವ ಕಥೆಯೊಂದನ್ನು ಈ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇವೆ.

- ಅರ್ಜುನ ಪಿ. ಡೊಣೂರ ನಿರ್ದೇಶಕ

ಬಿಲ್ಲ ರಂಗ ಭಾಷನ ಜತೆ ಸಾಯಿಕುಮಾರ್

ವಿಕ್ರಾಂತ್ ರೋಣ ಸಿನಿಮಾದ ಬಳಿಕ ಕಿಚ್ಚ ಸುದೀಪ್ ಹಾಗೂ ಅನೂಪ್ ಭಂಡಾರಿ ಕಾಂಬಿನೇಷನ್‌ನಲ್ಲಿ ಬಿಲ್ಲ ರಂಗ ಭಾಷ ಚಿತ್ರದ ಮೂಡಿಬರುತ್ತಿದೆ. ಈ ಸಿನಿಮಾ ಆರಂಭದಿಂದಲೂ ಸಾಕಷ್ಟು ಕುತೂಹಲ ಮೂಡಿಸಿದೆ. ಥ್ರಿಲ್ಲಿಂಗ್ ಸ್ಟೋರಿಯ ಜತೆಗೆ ಆ್ಯಕ್ಷನ್ ಕೂಡ ಬೆರೆತಿದೆ. ಚಿತ್ರದ ಶೀರ್ಷಿಕೆಯಂತೆ ಈ ಸಿನಿಮಾದಲ್ಲಿ ಸುದೀಪ್ ಅವರು ಮೂರು ವಿಭಿನ್ನ ಲುಕ್‌ನಲ್ಲಿ ಮಿಂಚಲಿದ್ದಾರೆ. ಅದಕ್ಕೆ ಭರ್ಜರಿ ತಯಾರಿ ನಡೆಸಿದ್ದಾರೆ. ಈ ಚಿತ್ರಕ್ಕಾಗಿ ಬೆಂಗಳೂರು ಹಾಗೂ ಹೈದರಾಬಾದ್‌ನಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದೆ. ಸುದೀಪ್ ಅವರನ್ನು ಹೊರತುಪಡಿಸಿ ಬೇರೆ ಇನ್ನಾರು ಚಿತ್ರದಲ್ಲಿ ನಟಿಸಲಿದ್ದಾರೆ ಎಂಬುದನ್ನು ಚಿತ್ರತಂಡ ಎಲ್ಲಿಯೂ ಗುಟ್ಟುಬಿಟ್ಟುಕೊಟ್ಟಿಲ್ಲ. ಈಗ ಈ ಚಿತ್ರತಂಡಕ್ಕೆ ಬಹುಭಾಷ ನಟ

ಸಾಯಿಕುಮಾರ್ ಸೇರ್ಪಡೆಯಾಗಿದ್ದು, ಸಾಯಿಕುಮರ್ ಈ ಸಿನಿಮಾದಲ್ಲಿ ಪವರ್ ಫುಲ್ ರೋಲ್ ನಿರ್ವಹಿಸಲಿದ್ದಾರೆ. ಅನೂಪ್ ಭಂಡಾರಿ ನಿರ್ದೇಶನದಲ್ಲಿ ಮೂಡಿಬಂದ ರಂಗಿತರಂಗದಲ್ಲಿ ಸಾಯಿಕುಮಾರ್ ಅದ್ಭುತವಾಗಿ ನಟಿಸಿದ್ದರು. ಕಥೆಗೆ ತಿರುವು ನೀಡುವ ಪಾತ್ರ ಅವರದ್ದಾಗಿತ್ತು. ಬಳಿಕ ವಿಕ್ರಾಂತ್ ರೋಣ ಚಿತ್ರದಲ್ಲಿಯೂ ಸಾಯಿಕುಮಾರ್ ನಟಿಸಬೇಕಿತ್ತು, ಕಾರಣಾಂತರಗಳಿಂದ ಆ ಸಿನಿಮಾದಲ್ಲಿ ಅಭಿನಯಿಸಲು ಸಾಧ್ಯವಾಗಿರಲಿಲ್ಲ. ಈಗ ಬಿಲ್ಲ ರಂಗ ಭಾಷ ಸಿನಿಮಾದಲ್ಲಿ ಮತ್ತೆ ಅನೂಪ್ ಜತೆಯಾಗುತ್ತಿದ್ದಾರೆ. ಉಳಿದಂತೆ ಪರಭಾಷಾ ದಿಗ್ಗಜ ಕಲಾವಿದರೂ ಕೂಡ ಸಿನಿಮಾದಲ್ಲಿ ನಟಿಸಲಿದ್ದಾರೆ, ಇದು ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆಯಾಗಲಿದೆ.

ಶೂಟಿಂಗ್ ಮುಗಿಸಿದ ಫೀನಿಕ್ಸ್

ಕನ್ನಡ ಚಿತ್ರರಂಗಕ್ಕೆ ಹಲವು ಸೂಪರ್ ಹಿಟ್ ಚಿತ್ರಗಳನ್ನು ನೀಡಿರುವ ನಿರ್ದೇಶಕ ಓಂಪ್ರಕಾಶ್ ರಾವ್ ಈಗ

ಮಹಿಳಾ ಪ್ರಧಾನ ಕಥೆಯ ಫೀನಿಕ್ಸ್ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದು ಓಂ ಪ್ರಕಾಶ್ ರಾವ್ ನಿರ್ದೇಶನದ ನಲವತ್ತೊಂಬತ್ತನೇ ಚಿತ್ರವಾಗಿದೆ. ಓಂಪ್ರಕಾಶ್ ಅವರೆ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಟೈಟಲ್‌ನಲ್ಲಿ ಕುತೂಹಲ ಮೂಡಿಸಿರುವ ಫೀನಿಕ್ಸ್ ಚಿತ್ರದಲ್ಲಿ ನಿಮಿಕಾ ರತ್ನಾಕರ್, ಭಾಸ್ಕರ್ ಶೆಟ್ಟಿ, ಕೃತಿಕಾ ಲೋಬೊ, ಎಸ್ತರ್ ನರೋನಾ, ರಂಗಾಯಣ ರಘು, ಅವಿನಾಶ್, ಚಿತ್ರಾ ಶೆಣೈ, ಶ್ರೀಧರ್, ಪ್ರಸನ್ನ, ವಿನೋದ್ ಕಿನ್ನಿ, ಮೇಘನಾ ಎಸ್ ಕೆ ಮುಂತಾದವರು ಮುಂತಾದವರು ಅಭಿನಯಿಸಿದ್ದಾರೆ.

ಶ್ರೀಗುರು ಚಿತ್ರಾಲಯ ಲಾಂಛನದಲ್ಲಿ ತ್ರಿಶಾ ಪ್ರಕಾಶ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಬೆಂಗಳೂರು, ಮೈಸೂರು, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಹಾಗೂ ಉತ್ತರ ಕರ್ನಾಟಕದ ಹಲವು ಕಡೆ ಚಿತ್ರೀಕರಣ ನಡೆಸಲಾಗಿದೆ. ಚಿತ್ರೀಕರಣ ಮುಗಿಸಿರುವ ಫೀನಿಕ್ಸ್ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದೆ. ಬಹು ದಿನಗಳ ನಂತರ ಓಂಪ್ರಕಾಶ್ ರಾವ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಫೀನಿಕ್ಸ್ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆ ಇದೆ. ಇದು ಮಹಿಳಾ ಪ್ರಧಾನ ಸಿನಿಮಾವಾದರೂ ಮೈನವಿರೇಳಿಸುವ ಸಾಹಸ ಸನ್ನಿವೇಶಗಳಿದ್ದು, ರವಿವರ್ಮ ಸಾಹಸ ನಿರ್ದೇಶನ ಮಾಡಿದ್ದಾರೆ. ರವಿಕುಮಾರ್ ಛಾಯಾಗ್ರಹಣ, ಲಕ್ಷ್ಮಣ್ ರೆಡ್ಡಿ ಸಂಕಲನ ಫೀನಿಕ್ಸ್ ಚಿತ್ರಕ್ಕಿದೆ.